ಸಮಗ್ರ ಕುಟುಂಬಕ್ಕೆ ಸಮೃದ್ಧ ಸಾಪ್ತಾಹಿಕ * ಜೂನ್ 11, 2026 ₹25

ತರಂಗ

ಶೈಕ್ಷಣಿಕ ಸಾಲ

ಉನ್ನತ ವ್ಯಾಸಂಗಕ್ಕೆ ಭರವಸೆಯ ಬಲ

ಸಿದ್ಧರಾಮಯ್ಯ ನಿರ್ಗಮನ

ಹೊಸ ಮುಖ್ಯಮಂತ್ರಿಯೆದುರು ಸಾಲು ಸಾಲು ಸವಾಲು

JnanaSudha

Units of Ajekar Padma Gopal Education Trust

KARKALA | UDUPI | MANIPAL

Congratulations

JEE-Main - 2026 B.Tech - Final

10 Students secured 99.9055199 to 99.0090928 Total Percentile

Kanishk S Amin
99.9055199

Sohan Giriraddi
99.8254499

Nishan N Salian
99.7084244

Medhansh N B
99.6766462

Anirudh R Udupa
99.6130095

Tushar A Shetty
99.5087645

N S Vivek
99.3942563

Tejas Nayak
99.2313099

Manoj M
99.0897721

Aniketh R Udupa
99.0090928

JEE-Main - 2026 B.Arch and B.Plan. Final

14 Students secured 99.9297304 to 99.0491854 Total Percentile

Pranav M U
99.9297304 AIR 25
B.Plan

Ashwin V Shetty
99.9297304 AIR 27
B.Plan
99.599116 AIR 311
B.Arch

Nishan
99.8525917 AIR 123
B.Arch

Anirudh R Udupa
99.7009541 AIR 110
B.Plan
99.1045499
B.Arch

Ishanth Patil G M
99.6629800 AIR 122
B.Plan

B.Plan & B.Arch Maths 100 Percentile

Kanishk S Amin
99.6501804 AIR 279
B.Arch
99.5464418 AIR 158
B.Plan

N S Vivek
99.3739619
B.Plan
AIR 214

Praval P Shetty
99.3164665
B.Plan
AIR 248

Rishith Raj
99.2701855
B.Arch

B.Plan Maths 100 Percentile

Vidwath V Kamath
99.2642521 AIR 255
B.Plan

Samartha K L
99.2206465
B.Plan
AIR 274

Sampath Prabhu
99.1503769
B.Plan
AIR 286

Shodhan R Hegde
99.1218493
B.Plan
AIR 302

Kedar Manoj Raikar
99.0491854
B.Arch

II PUC Annual Examination 2026



Vaishnavi Kulkarni



Aarnavi

Chaithrika Chowdary L



Ashwin V Shetty

II PUC RESULT STATISTICS 2026

966 Students Appeared | **100%** Result | **80** Students secured **99.50%** to **98%** | **59** Students secured Top **10** Ranks in the state

889 Students secured Distinctions (**92.02%** Distinctions **7.98%** First class)

100 out of 100	5 Subjects	4 Subjects	3 Subjects	2 Subjects	1 Subject	TOTAL
	5	13	63	133	290	820

Karkala JnanaSudha
Ganit Nagar, Karkala Ph: 82778 20101

Udupi JnanaSudha
Naagabana Campus, Udupi Ph: 82778 20909

Manipal JnanaSudha
Vidya Nagar, Manipal Ph: 86861 90505

Ajekar JnanaSudha
Padma Nagar, Ajekar Ph: 70484 80707

KNOWLEDGE RESEARCH VALUES



ಮೂಡುಬಿದಿರೆಯ ಮಹಾಚೇತನ ಆಳ್ವಾಸ್ ಸಾಮ್ರಾಜ್ಯದ ಅಪ್ರತಿಮ ಸಾರಥಿ

ಮೂಡುಬಿದಿರೆ ಹಾಗೂ ಮಿಜಾರು ಪ್ರದೇಶವನ್ನು ರಾಷ್ಟ್ರೀಯಮತ್ತುಅಂತಾರಾಷ್ಟ್ರೀಯಮಟ್ಟದಲ್ಲಿ ಎದ್ದು ಕಾಣಿಸುವಂತೆ ಮಾಡಿದ ಕೀರ್ತಿ ಬಹುವಿಧ ಕೃಷಿಕ, ಸಾಧಕ, ಶೈಕ್ಷಣಿಕ ಕನಸುಗಾರ,ಸಾಂಸ್ಕೃತಿಕ ರಾಯಭಾರಿ, ಪ್ರತಿಭಾನ್ವಿತ ಮೌನ ಸಾಧಕ ಡಾ. ಮಿಜಾರು ಗುತ್ತು ಮೋಹನ ಆಳ್ವ ಅವರಿಗೆ ಸಲ್ಲುತ್ತದೆ. ಆರೋಗ್ಯ, ಶಿಕ್ಷಣ, ಕ್ರೀಡೆ, ಸಾಹಿತ್ಯ ಹಾಗೂ ಸಾಂಸ್ಕೃತಿಕ ರಂಗಗಳಲ್ಲಿ ತಮ್ಮ ಸೃಜನಶೀಲ ಯೋಚನೆ ಮತ್ತು ವಿಶಿಷ್ಟ ಯೋಜನೆಗಳ ಮೂಲಕ ಅವರು ಜಗತ್ತಿಗೆ ಹೊಸತನದ ದಾರಿಯನ್ನು ಪರಿಚಯಿಸಿದವರು. ಸರ್ವರನ್ನೂ ಪ್ರೀತಿಯಿಂದ ಗೆಲ್ಲುವ ಅಜಾತಶತ್ರು ಹಾಗೂ ಸಜ್ಜನರಾಗಿರುವ ಇವರು, ಪ್ರವರ್ಧಮಾನಕ್ಕೆ ಬರುತ್ತಿರುವ ಯುವ ಮನಸ್ಸುಗಳ ಪಾಲಿಗೆ ನಿತ್ಯ ಚೇತೋಹಾರಿ ಸ್ಫೂರ್ತಿಯಾಗಿದ್ದಾರೆ.

2026ರ ಮೇ 31ರಂದು ತಮ್ಮ ಬದುಕಿನ 74 ವಸಂತಗಳನ್ನು ಪೂರೈಸಿ, 75ನೇ ವರ್ಷದ ಮೈಲಿಗಲ್ಲಿನ ಹೆಬ್ಬಾಗಿಲಿಗೆ ಬಲಗಾಲಿನ ಪಾದ ಊರುವ ಸಂಭ್ರಮದ ಸುಸಂದರ್ಭದಲ್ಲಿ, ಬರಡು ನಾಡಾಗಿದ್ದ ಮೂಡುಬಿದಿರೆಯನ್ನು ಸಾಂಸ್ಕೃತಿಕ ನಗರಿಯಾಗಿಸಿದ, ಜೈನಕಾಶಿಯಿಂದ ವಿದ್ಯಾಕಾಶಿವರೆಗೆ ಕೊಂಡೊಯ್ದ ಡಾ. ಆಳ್ವರ ಸಾರ್ಥಕ ಜೀವನದ ಸಿದ್ಧಿ-ಸಾಧನೆಗಳ ಪಕ್ಷಿನೋಟವನ್ನು ಸಂಕ್ಷಿಪ್ತವಾಗಿ ದಾಖಲಿಸುವ ಸಣ್ಣದೊಂದು ಪ್ರಯತ್ನ ಇಲ್ಲಿದೆ.

ಅವನೊಬ್ಬ ಪ್ರತಿಭಾವಂತ ವಿದ್ಯಾರ್ಥಿ. ಧೀಂಕಿಟ ತರಿಕಿಟ ಎಂದು ಪ್ರಬುದ್ಧ ಯಕ್ಷಗಾನ ವೇಷಧಾರಿಯಾಗಿ ರಂಗಸ್ಥಳದಲ್ಲಿ ಹೆಜ್ಜೆ ಹಾಕಬಲ್ಲ. ಹತ್ತನೆಯ ತರಗತಿಯಲ್ಲಿ ಅವನಿಗೆ ಪ್ರತಿಶತಕ್ಕೆ ಸಮೀಪವಾಗಿ ಅಂಕಗಳೂ ಇವೆ. ಆದರೆ ಮುಂದಿನ ಶಿಕ್ಷಣದ ವೆಚ್ಚಕ್ಕೆ ಹಣ ಹೊಂದಿಸಲಾಗದಷ್ಟು ಬಡತನ ಕಾಡುತ್ತಿದೆ. ಯಾವುದಾದರೂ ಗ್ಯಾರೇಜಿನಲ್ಲಿ ಸಹಾಯಕನಾಗಿ ಕೆಲಸ ಮಾಡಲು ಯೋಚಿಸುತ್ತಾನೆ. ಈ ವಿಷಯ ತಿಳಿದು ಕರುಣಾಳುವೊಬ್ಬರು ಅವನ ಮನೆಗೇ ಬರುತ್ತಾರೆ. ನಮ್ಮದೇ ಶಿಕ್ಷಣ ಸಂಸ್ಥೆಯಿದೆ. ಒಂದು ರೂಪಾಯಿ ಶುಲ್ಕವನ್ನೂ ಕೊಡದೆ ನೀನು ಆಲ್ಲಿ ಪದವಿಯ ತನಕ ಓದು. ನಿನ್ನಂತಹ ಪ್ರತಿಭಾವಂತ ನಮಗೆ ಬೇಕು ಎಂದು ಜೊತೆಗೇ ಕರೆದೊಯ್ಯುತ್ತಾರೆ.

ಇನ್ನೊಬ್ಬಳು ಉತ್ತಮ ಕ್ರೀಡಾಪಟು. ವಿದೇಶದಲ್ಲಿ ನಡೆಯುವ ಪಂದ್ಯಾವಳಿಯಲ್ಲಿ ಸಾಧನೆ ಮೆರೆಯಲು ಅವಳಿಗೆ ಅವಕಾಶ ಬಂದಿದೆ. ಆದರೆ ಪ್ರಯಾಣದ ವೆಚ್ಚಕ್ಕೆ ಹಣವಿಲ್ಲ. ಬಾಯ್ತುಂಬ ಹೊಗಳಿದ ಮಂದಿಗೆ ಬರವಿಲ್ಲ. ಆದರೆ ಹಣದ ನೆರವು ನೀಡಿದವರಿಲ್ಲ. ಈ ಪ್ರತಿಭಾವಂತೆಯ ಮನೆಗೆ ತೆರಳಿದ ಅದೇ ಕರುಣಾಳು ಅವಳಿಗೆ ವಿದೇಶ ಪ್ರಯಾಣಕ್ಕೆ ಸಾಕಾಗುವಷ್ಟು ಹಣ ನೀಡುತ್ತಾರೆ. ವಿದೇಶದ ಪಂದ್ಯಾವಳಿಯಲ್ಲಿ ಚಿನ್ನದ ಪದಕ ಗಳಿಸಿ ಭಾರತದ ಕೀರ್ತಿಧ್ವಜವನ್ನು ಎತ್ತಿ ಹಿಡಿದು ಊರಿಗೆ ಮರಳಿದ ಅವಳು ಮೊದಲು ಹೋಗಿ ನಮಸ್ಕರಿಸಿದ್ದು ಗುಡಿಯ ದೇವರಿಗೆ ಅಲ್ಲ. ತನ್ನ ಸಾಧನೆಗೆ ನೆರವಾದ ಆ ಕರುಣಾ ಸಮುದ್ರನ ಬಳಿಗೆ!

ಕಷ್ಟಕ್ಕೆ ಸಿಲುಕಿಗೊಂಡ ವ್ಯಕ್ತಿಯಾಗಲಿ, ಸಮಾಜವಾಗಲಿ ಕಂಡರೆ ಅವರ ಮನಸ್ಸು ಆರ್ದ್ರವಾಗುತ್ತದೆ. ಆ ಕಾರಣದಿಂದ ತಂದೆ ತಾಯಿಯರನ್ನು ಕಳೆದುಕೊಂಡು ಅನಾಥರಾದ ಮಕ್ಕಳನ್ನು ಸಾಕಿ ಸಲಹಿ ಸಮಾಜಕ್ಕೆ ನೀಡಿದ್ದಾರೆ. ತಾಯಿಯ ಅಗಲಿಕೆಯಿಂದ ತಬ್ಬಲಿಯಾದ, 2026ರಲ್ಲಿ ನಡೆದ ಪದವಿಪೂರ್ವ ಅಂತಿಮ ಪರೀಕ್ಷೆಯಲ್ಲಿ 600 ಅಂಕಗಳನ್ನು ಪಡೆದ ದಿಶಾ ಮತ್ತು ಅವಳ ತಂಗಿ ಈಗ ಇವರ ಸುಪರ್ದಿಯಲ್ಲಿದ್ದಾರೆ. ಈಗಾಗಲೇ ಅವರ ಹೆಸರಿನಲ್ಲಿ 15 ಲಕ್ಷ ರೂಪಾಯಿಗಳನ್ನು ಠೇವಣಿ ಇಟ್ಟಿದ್ದಾರೆ. ಸಹೋದರಿಯರಿಬ್ಬರೂ ಕಲಿಯುವಲ್ಲಿವರೆಗೆ ಕಲಿಸುವ ಮತ್ತು ಅವರಿಗಾಗಿ ಮನೆಯೊಂದನ್ನು ನಿರ್ಮಿಸಿಕೊಡುವ ಯೋಚನೆಯೂ ಇವರಲ್ಲಿದೆ.

ಹಾಗಾದರೆ, ಯಾರು ಇಂತಹ ಕರುಣಾಳು? ಅವರೊಬ್ಬ ವೈದ್ಯೋ ನಾರಾಯಣೋ ಹರಿಃ ಎನಿಸಿಕೊಂಡ ವೈದ್ಯರು. ರೋಗಿಯ ದೇಹಕ್ಕೆ ಅಗತ್ಯವಾದ ಚುಚ್ಚುಮದ್ದು ನೀಡುವಾಗ ಯಾವ ದಯೆಯನ್ನೂ ತೋರಲಾರರು. ಆದರೆ ಕಲೆಯ ಮಾತು ಬಂದಾಗ ನೆರವಿನ ಮಹಾಪೂರವನ್ನೇ ಹರಿಸಿ ಹತ್ತು ಹಲವರ ಬದುಕಿನ ಮುರಳಿಯಲ್ಲಿ ಮೋಹನರಾಗ ನುಡಿಸಿದ ಸ್ವತಃ ಓರ್ವ ಅಪ್ರತಿಮ ಕಲಾವಿದರು. ಯಾರವರು ಎಂದರೆ ಎಲ್ಲರಿಗೂ ಪರಿಚಿತ ಹೆಸರು ಮಿಜಾರುಗುತ್ತು ಡಾ। ಎಂ. ಮೋಹನ ಆಳ್ವರು.

ಮೂಡುಬಿದಿರೆಯ ಶೋಭಾವನದ ನಿತ್ಯ ಹರಿದ್ವರ್ಣದ ವೃಕ್ಷಸಮೂಹದ ತಣ್ಣೆಲಳ ಮಡಿಲಲ್ಲಿ ಜಾನಪದದ ಗೆಜ್ಜೆಯ ಘಲ್ ಘಲ್ ನಾದ ಮೊಳಗಿದಾಗ, ಯಕ್ಷಗಾನದ ಚಂಡೆಯ ಅಬ್ಬರ ದಶದಿಕ್ಕುಗಳಲ್ಲಿ ಕಲಾ ಪ್ರೇಮಿಗಳ ಎದೆಗಡಲಿನಲ್ಲಿ ಚೈತನ್ಯದ ಚಿಲುಮೆಯನ್ನು ಬಡಿದೆಬ್ಬಿಸಿದಾಗ,

ಕ್ರೀಡಾಂಗಣದ ನೆಲದ ಧೂಳಿನಲ್ಲಿ ಹೊಸ ಇತಿಹಾಸದ ವ್ಯಾಖ್ಯೆ ದಾಖಲಿಸಲ್ಪಟ್ಟಾಗ, ಕೋಗಿಲೆಯ ಇನಿದನಿಯ ಇಂಚರವನ್ನೂ ಮರೆಮಾಚುವಂತೆ ಸಂಗೀತ ಸುಧೆಯ ಮೃದು ಮಧುರ ಅಲೆಗಳು ಸಾಂಸ್ಕೃತಿಕ ಲೋಕದಲ್ಲಿ ಸವಿಕಂಪನ ಮೂಡಿಸಿದಾಗ ... ಇವೆಲ್ಲದರ ರೋಚಕ ಸೃಷ್ಟಿಯ ಹಿನ್ನೆಲೆಯಲ್ಲಿ ವೈವಿಧ್ಯಮಯ ಕಲೆ, ಕ್ರೀಡೆಗಳ ಮಾಯಾಲೋಕದಲ್ಲಿ ಐಂದ್ರಜಾಲಿಕನಂತೆ ಕಂಗೊಳಿಸುವ ಏಕೈಕ ಧೀಮಂತ ಚೇತನ ಡಾ। ಎಂ. ಮೋಹನ ಆಳ್ವ!

ಇತಿಹಾಸವನ್ನು ಕೇವಲ ಓದುವವರು ಅನೇಕರಿದ್ದಾರೆ, ಆದರೆ ತಮ್ಮ ಕಾಯಕದ ಮೂಲಕ ಹೊಸ ಇತಿಹಾಸವನ್ನೇ ಸೃಷ್ಟಿಸುವವರು ಕೆಲವರು ಮಾತ್ರ. ಅಂತಹ ಅಪರೂಪದ ಇತಿಹಾಸ ಸೃಷ್ಟಿಕರ್ತರ ಸಾಲಿನ ಮುಂಚೂಣಿಯಲ್ಲಿ ಕಾಣುವ, ಕೇಳುವ, ಸಾಂಸ್ಕೃತಿಕ ರಂಗದ ಸರೋವರದ ಸ್ಫಟಿಕ ಜಲದ ತುಂಬ ತೇಲುವ ಒಂದೇ ಒಂದು ಹೆಸರು ಆಳ್ವರದ್ದು. ಒಂದೆಡೆ ವೃತ್ತಿಯಿಂದ ವೈದ್ಯ. ಇನ್ನೊಂದೆಡೆ ಶೈಕ್ಷಣಿಕ ಅವಕಾಶಗಳ ಹೆಬ್ಬಾಗಿಲನ್ನು ತೆರೆದು ಹಲವರ ಬದುಕಿನ ವೃತ್ತವನ್ನು ರೂಪಿಸಿದ ಫಲಗಾರ, ಇವೆಲ್ಲದರ ಹೊರಗೆ ನಿಂತು ನೋಡಿದರೆ ಹಲವು ಕಲೆಗಳನ್ನು ಸ್ವತಃ ತಿಳಿದು ಅಂತಹ ಕಲೆಗಳ ಹೆಮ್ಮರವಾಗಿ ಕಲಾ ಪ್ರದರ್ಶನಗಳಿಗೆ ಆಲದ ಮರದಂತೆ ನೆರಳಾದ ಶ್ರೇಷ್ಠ ಕಲಾಪೋಷಕ.

ಸಾಮಾನ್ಯವಾಗಿ ಒಬ್ಬ ವೈದ್ಯ ರೋಗ ವಾಸಿ ಮಾಡಬಹುದು, ಒಬ್ಬ ಶಿಕ್ಷಕ ಪಾಠ ಮಾಡಬಹುದು, ಒಬ್ಬ ಪ್ರಕೃತಿ ಪ್ರೇಮಿ ಗಿಡ ನೆಡಬಹುದು. ಒಬ್ಬ ರಂಗಕರ್ಮಿ ಪ್ರದರ್ಶನ ನೀಡಬಹುದು. ಕಲಾವಿದ ರಂಗವನ್ನು ಆವರಿಸಬಹುದು. ಆದರೆ, ಇವೆಲ್ಲವನ್ನೂ ಒಬ್ಬನೇ ವ್ಯಕ್ತಿ ತನ್ನ ದೃಢ ಸಂಕಲ್ಪದ ಬಾಹುಗಳಲ್ಲಿ ಸದ್ದಿಲ್ಲದೆ ಮುನ್ನಡೆಸುತ್ತಾ, ಒಂದು ಇಡೀ ತಲೆಮಾರಿನ ಭವಿಷ್ಯವನ್ನೇ ಸಾಂಸ್ಕೃತಿಕವಾಗಿ ಮರುರೂಪಿಸಲು ಸಾಧ್ಯವೇ? ಈ ವಿಸ್ಮಯಕ್ಕೆ ದಕ್ಷಿಣ ಕನ್ನಡದ ಮಣ್ಣು ಹೆಮ್ಮೆಯಿಂದ ನೀಡುವ ಜೀವಂತ ಉತ್ತರವೇ ಆಳ್ವಾಸ್ ಸಂಸ್ಥೆಯ ಈ ಅಪ್ರತಿಮ ಶಿಲ್ಪಿ. ದುಂಡುಮುಖದಲ್ಲಿ ಸದಾ ಮೂಡಿರುವ ಮುಗುಳ್ನಗು, ನಿತ್ಯವೂ ಬಣ್ಣ ಬಣ್ಣದ ವಿಶಿಷ್ಟ ಉಡುಪು, ಮಗುವಿನಂತಹ ನಿಷ್ಕಲ್ಮಶ ನಗುವಿನ ಹಿಂದಿರುವ ನಿಷ್ಕಳಂಕಿತ ಮನಸು, ಮಾತಿನಲ್ಲಿ ಮಾರ್ಮಿಕ ಹಾಸ್ಯಪ್ರಜ್ಞೆ ಹಾಗೂ ಎದೆಯೊಳಗೆ ಕೋಟ್ಯಂತರ ಗ್ರಾಮೀಣ ಪ್ರತಿಭೆಗಳ ಕನಸುಗಳನ್ನು ನನಸಿನ ಗುರಿಯತ್ತ ಹೊತ್ತು ನಡೆಯುವ ಈ ಮಾಂತ್ರಿಕನ ವ್ಯಕ್ತಿತ್ವವೇ ಒಂದು ವಿಶಿಷ್ಟ ಕಾವ್ಯ.

ಕೇವಲ ಅಂಕ ಗಳಿಸುವುದಷ್ಟೇ ಶಿಕ್ಷಣವಲ್ಲ, ಸಂಸ್ಕೃತಿಯ ಬೇರುಗಳನ್ನು ಮರೆತ ಬದುಕು ಬದುಕೇ ಅಲ್ಲ ಎಂದು ಬಲವಾಗಿ ನಂಬಿದ ಈ ಅಪ್ರತಿಮ ಸಂಘಟನಾ ಚತುರ, ಮೂಡುಬಿದಿರೆ ಎಂಬ ಪುಟ್ಟ ಊರನ್ನು ಜಾಗತಿಕ ಸಾಂಸ್ಕೃತಿಕ ಭೂಪಟದಲ್ಲಿ ಉಜ್ವಲವಾಗಿ ಮಿನುಗುವಂತೆ ಮಾಡಿದವರು. ಕಲೆ, ಕ್ರೀಡೆ, ಕೃಷಿ, ಆಯುರ್ವೇದ ಹಾಗೂ ಶೈಕ್ಷಣಿಕ ಕ್ರಾಂತಿಯ ಸಾಧನೆಯ ಜೊತೆಜೊತೆಗೆ ಕರಾವಳಿಯ ಸಾಂಸ್ಕೃತಿಕ ಉತ್ಸವದ ತೇರನ್ನು ಜಗತ್ತಿನುದ್ದಕ್ಕೂ ಮುನ್ನಡೆಸುತ್ತಿರುವ, ದೇಶದ ಒಲಿಂಪಿಕ್ಸ್ ಗೆಲುವಿನ ಕನಸುಗಳಿಗೆ

ಸಾಂಸ್ಕೃತಿಕ ಕೊಡುಗೆ ಮತ್ತು 'ಆಳ್ವಾಸ್ ವಿರಾಸತ್'

ಡಾ। ಮೋಹನ ಆಳ್ವ ಎಂದರೆ ತಟ್ಟನೆ ನೆನಪಾಗುವುದು ಸಾಂಸ್ಕೃತಿಕ ಲೋಕ. ನಶಿಸಿ ಹೋಗುತ್ತಿರುವ ಭಾರತೀಯ ಶಾಸ್ತ್ರೀಯ ಕಲೆಗಳು, ಜಾನಪದ ಸಂಸ್ಕೃತಿ ಮತ್ತು ಯಕ್ಷಗಾನಕ್ಕೆ ಅವರು ನೀಡಿದ ಮರುಜೀವ ಹಿರಿದಾದದ್ದು. ಕಲೆಯನ್ನು ಉಳಿಸಬೇಕು ಎಂಬ ಕಾಳಜಿಯ ಫಲವಾಗಿ ಹೊಸ ಕಲಾವಿದರ ಗಡಣವೇ ಮರುಜೀವ ಪಡೆದಿದೆ.

ಜೀವಜಲವೆರೆಯುತ್ತಿರುವ ಡಾ। ಮೋಹನ ಆಳ್ವ ಅವರ ಬದುಕು ಒಂದು ತೆರೆದ ಮಹಾಗ್ರಂಥ. ಕಳೆದುಹೋಗುತ್ತಿದ್ದ ಕಲೆಗಳಿಗೆ ಜೀವ ತುಂಬಿ, ಬಡ ವಿದ್ಯಾರ್ಥಿಗಳಿಗೆ ಆಶಾಕಿರಣವಾದ ಈ ಯುಗಪುರುಷನ ವಿಭಿನ್ನ ವ್ಯಕ್ತಿತ್ವದ ಆಳ-ಅಗಲವನ್ನು ಪೂರ್ತಿ ಅರಿತವರಿಲ್ಲ ಅನಿಸುತ್ತದೆ.

ಬಾಲ್ಯ ಮತ್ತು ವ್ಯಕ್ತಿತ್ವದ ವಿಕಸನ

ಮೂಡುಬಿದಿರೆಗೆ ಸಮೀಪದ ಮಿಜಾರಿನಲ್ಲಿ ಜನಿಸಿದ ಮೋಹನ ಆಳ್ವರು ಬಾಲ್ಯದಿಂದಲೇ ತುಳುನಾಡಿನ ಮಣ್ಣಿನ ಸಂಸ್ಕೃತಿ, ಯಕ್ಷಗಾನ, ಕಂಬಳ ಮತ್ತು ಜಾನಪದ ಕಲೆಗಳ ಆಳವಾದ ಪ್ರಭಾವಕ್ಕೆ ಒಳಗಾದವರು. ಕಂಬಳ ಕ್ಷೇತ್ರದಲ್ಲಿ ದೊಡ್ಡ ಸಾಧಕರೆನಿಸಿದ ಮಿಜಾರು ಆನಂದ ಆಳ್ವರ ಪುತ್ರರಾದ ಮೋಹನ ಆಳ್ವರ ಕ್ರೀಡಾಭಿಮಾನದ ಹಿಂದೆ ತಂದೆಯ ನೆರಳೂ ಇರಬಹುದು. ಮೂಲತಃ ಆಯುರ್ವೇದ ವೈದ್ಯರಾದ ಇವರು, ಕೇವಲ ರೋಗಿಗಳಿಗೆ ಚಿಕಿತ್ಸೆ ನೀಡುವುದಕ್ಕಷ್ಟೇ ತಮ್ಮನ್ನು ಸೀಮಿತಗೊಳಿಸಿಕೊಂಡವರಲ್ಲ. ಬಾಲ್ಯದಿಂದಲೇ ಅವರಲ್ಲಿ ಸಮಾಜದ ಮುನ್ನಡೆಗೆ ಏನಾದರೂ ಮಾಡಬೇಕೆಂಬ ತೀವ್ರ ತುಡಿತವಿತ್ತು.

ಡಾ। ಮೋಹನ ಆಳ್ವ ಆಕರ್ಷಕ ವ್ಯಕ್ತಿತ್ವಕ್ಕೆ ಒಪ್ಪುವ ಇನ್ನೊಂದು ಹೆಸರು.. ಮುಖದಲ್ಲಿ ಸದಾ ಮಂದಹಾಸ ಬೀರುತ್ತಾ ಜನ ಮನದೊಳಗಿಳಿಯುವ ಅವರು, ಸಹಸ್ರಾರು ವಿದ್ಯಾರ್ಥಿಗಳಿಗೆ ಬದುಕಿನ ನೆಲೆ ತೋರುವ ತಂದೆ ಸಮಾನರಾಗಿ, ಉದಯೋನ್ಮುಖ ಕಲಾಪ್ರತಿಭೆಗಳಿಗೆ ಬೆನ್ನು ತಟ್ಟುವ ಆಪ್ತನಾಗಿ ಕಾಣಿಸುತ್ತಾರೆ. ಅವರದು ಶಿಸ್ತು ಮತ್ತು ಕರುಣೆಯ ಅದ್ಭುತ ಸಮ್ಮಿಶ್ರಣ. ಎಂತಹ ಕಠಿನ ಸಂದರ್ಭದಲ್ಲೂ ಧೃತಿಗೆಡದೆ, ಸಾವಿರಾರು ಜನರನ್ನು ತನ್ನ ಒಟ್ಟಿಗೆ ಮುನ್ನಡೆಸುವ ಅವರಲ್ಲಿರುವ ನಾಯಕತ್ವದ ಅನುಕರಣೀಯ ಗುಣ ಮತ್ತು ಸಂಘಟನಾ ಚಾತುರ್ಯ ಬೆರಗುಗೊಳಿಸುವಂತದ್ದು.

ವಿಭಿನ್ನ ವ್ಯಕ್ತಿತ್ವ ಮತ್ತು ಅದ್ಭುತ ಹಾಸ್ಯಪ್ರಜ್ಞೆ

ಡಾ। ಮೋಹನ ಆಳ್ವರ ವ್ಯಕ್ತಿತ್ವದ ಮತ್ತೊಂದು ವಿಶಿಷ್ಟ ಆಯಾಮವೆಂದರೆ ಅವರ ಮಾತುಗಳಲ್ಲಿ ಸುಳಿದಾಡುವ ಹಾಸ್ಯಪ್ರಜ್ಞೆ. ಮೇಲ್ನೋಟಕ್ಕೆ ಗಂಭೀರವಾಗಿ, ಕಟ್ಟುನಿಟ್ಟಿನ ಶಿಸ್ತಿನ ಸಿಪಾಯಿಯಂತೆ ಕಾಣುವ ಆಳ್ವರ ಅಂತರಂಗದಲ್ಲಿ ಒಬ್ಬ ರಸಿಕ ಮತ್ತು ಹಾಸ್ಯಪ್ರವೃತ್ತಿಯ ಮನುಷ್ಯನಿದ್ದಾನೆ. ಅವರ ದೊಗಲೆ ಪ್ಯಾಂಟಿನಲ್ಲಿ, ಜುಬ್ಬಾದೊಳಗೆ ಸಾವಿರ ಸಾವಿರ ನಗೆ ಚಟಾಕಿಗಳಿವೆ. ಮಕ್ಕಳಿಗಾಗಿ ಕೊಡಲು ಚಾಕಲೇಟುಗಳೂ ಇವೆ. ಅಪಾರ ಸ್ನೇಹಿತ ಬಳಗದಲ್ಲಿ ಸಾಮಾನ್ಯ ಜನರೂ ಇದ್ದಾರೆ. ಎಲ್ಲರಲ್ಲೂ ನಗುಮೊಗದ ಸ್ನೇಹ ಲಾಲಿತ್ಯವೇ ಅವರ ಒಡನಾಡಿ.

ಅವರು ವೇದಿಕೆಯ ಮೇಲೆ ಭಾಷಣಕ್ಕೆ ನಿಂತರೆಂದರೆ ಆಲ್ಲಿ ನಗುವಿನ ಅಲೆ ಏಳುತ್ತದೆ. ತಮ್ಮ ದಿನನಿತ್ಯದ ಅನುಭವಗಳು, ವಿದ್ಯಾರ್ಥಿಗಳೊಂದಿಗಿನ ಒಡನಾಟ, ರಾಜಕಾರಣಿಗಳ ನಡವಳಿಕೆಗಳನ್ನು ಅತ್ಯಂತ ಮಾರ್ಮಿಕವಾಗಿ, ಯಾರಿಗೂ ನೋವಾಗದಂತೆ ಹಾಸ್ಯದ ಲೇಪನ ಮಾಡಿ ಪ್ರಸ್ತುತಪಡಿಸುವ ಕಲೆ ಅವರಿಗೆ ಕರತಲಾಮಲಕ, ಎಂತಹದೇ ಉದ್ವಿಗ್ನ ವಾತಾವರಣವನ್ನೂ ಒಂದು ಪುಟ್ಟ ನಗೆಹನಿಯ ಅಥವಾ ಒಗಟಿನ ಮೂಲಕ ತಿಳಿಗೊಳಿಸುವ ಚಾತುರ್ಯ ಅವರಲ್ಲಿದೆ. ಕಲೆ ಮತ್ತು ಕಲಾವಿದರನ್ನು ಗಾಢವಾಗಿ ಪ್ರೀತಿಸುವ ಹೃದಯ ವೈಶಾಲ್ಯದ ಜೊತೆಗೆ ಅವರ ಸರಳ ಮತ್ತು ಹಾಸ್ಯಪ್ರಿಯ ವ್ಯಕ್ತಿತ್ವವೇ ಅವರನ್ನು ಎಲ್ಲ ವರ್ಗದ ಜನರಿಗೂ ಹತ್ತಿರವಾಗಿಸಿದೆ.

ಆಳ್ವಾಸ್ ವಿರಾಸತ್

ಇದು ಕೇವಲ ಕಲೆಗಳ ಪ್ರದರ್ಶನ ಕಾರ್ಯಕ್ರಮವಲ್ಲ, ಅದೊಂದು ಸಾಂಸ್ಕೃತಿಕ ಮೆರವಣಿಗೆ. ಪ್ರತಿವರ್ಷ ಮೂಡುಬಿದಿರೆಯಲ್ಲಿ ನಡೆಯುವ ಈ ರಾಷ್ಟ್ರೀಯ ಸಾಂಸ್ಕೃತಿಕ ಉತ್ಸವದಲ್ಲಿ ದೇಶದ ಮೂಲೆ ಮೂಲೆಗಳಿಂದ ಪ್ರಸಿದ್ಧ ಸಂಗೀತಗಾರರು, ನೃತ್ಯಪಟುಗಳು, ಚಿತ್ರಕಲಾವಿದರು ಭಾಗವಹಿಸುತ್ತಾರೆ. ಲಕ್ಷಾಂತರ ಕಲಾಪ್ರೇಮಿಗಳು ಒಂದೇ ಸೂರಿನಡಿ ಕುಳಿತು ಕಲೆಯ ಆಸ್ವಾದನೆ ಮಾಡುತ್ತಾರೆ. ತಾವು ಎಂದಿಗೂ ಈ ಕಲಾವಿದನನ್ನು ಕಾಣಲಾರೆವು. ಅವರ ಪ್ರದರ್ಶನ ನೋಡಲಾರೆವು ಎಂದುಕೊಂಡವರಿಗೂ ವಿರಾಸತ್ ಮೂಲಕ ಅಂತಹ ಕಲಾವಿದರನ್ನು ಕಾಣುವ, ಅವರ ಪ್ರದರ್ಶನವನ್ನು ಕಣ್ತುಂಬಿಕೊಳ್ಳುವ

ಅವಕಾಶ ಒದಗಿದ್ದು ಮರೆಯಲಾಗದ ಸಂಗತಿ.

ಆಳ್ವಾಸ್ ನುಡಿಸಿರಿ

ಕನ್ನಡ ಭಾಷೆ, ಸಾಹಿತ್ಯ ಮತ್ತು ಸಂಸ್ಕೃತಿಯ ರಕ್ಷಣೆಗಾಗಿ ಆಳ್ವರು ಆರಂಭಿಸಿದ 'ನುಡಿಸಿರಿ' ನಾಡಿನ ಅತಿದೊಡ್ಡ ಸಾಹಿತ್ಯಿಕ ಸಮಾವೇಶಗಳಲ್ಲೊಂದು ಎಂಬ ಪೆರ್ಮೆಗೆ ಪಾತ್ರವಾಗಿದೆ. ನಾಡಿನ ಹಿರಿಯ ಸಾಹಿತಿಗಳ ನೇತೃತ್ವದಲ್ಲಿ ನಡೆಯುವ ಈ ಸಮ್ಮೇಳನ ಕನ್ನಡದ ಮನಸ್ಸುಗಳನ್ನು ಒಂದುಗೂಡಿಸುವ ಮಹತ್ಕಾರ್ಯ ಮಾಡುತ್ತಿದೆ.

ವಿದ್ಯಾರ್ಥಿಗಳಿಗೆ ಸಾಂಸ್ಕೃತಿಕ ದತ್ತು ಯೋಜನೆ

ಕಲೆ ಮತ್ತು ನೃತ್ಯದಲ್ಲಿ ಆಸಕ್ತಿಯಿರುವ ದೇಶದ ವಿವಿಧ ರಾಜ್ಯಗಳ (ಮಣಿಪುರ, ಅಸ್ಸಾಂ, ಕೇರಳ ಸೇರಿದಂತೆ) ಬಡ ವಿದ್ಯಾರ್ಥಿಗಳನ್ನು ಆಳ್ವಾಸ್ ಸಂಸ್ಥೆಗೆ ಕರೆತಂದು, ಅವರಿಗೆ ಉಚಿತ ಶಿಕ್ಷಣ ನೀಡುವುದರ ಜೊತೆಗೆ ಸಾಂಸ್ಕೃತಿಕ ತರಬೇತಿಯನ್ನು ನೀಡಲಾಗುತ್ತದೆ. ಇವರಿಂದ ರೂಪುಗೊಂಡ 'ಆಳ್ವಾಸ್ ಸಾಂಸ್ಕೃತಿಕ ವೈಭವ' ತಂಡವು ದೇಶ ವಿದೇಶಗಳಲ್ಲಿ ಪ್ರದರ್ಶನ ನೀಡಿ ಪ್ರಶಂಸೆ ಗಳಿಸಿದೆ.

ಶೈಕ್ಷಣಿಕ ಕ್ರಾಂತಿ: ಆಳ್ವಾಸ್ ಶಿಕ್ಷಣ ಪ್ರತಿಷ್ಠಾನ

ಒಂದು ಕಾಲದಲ್ಲಿ ಉನ್ನತ ಶಿಕ್ಷಣಕ್ಕಾಗಿ ಮಂಗಳೂರು ಅಥವಾ ಬೆಂಗಳೂರನ್ನು ಆಶ್ರಯಿಸಬೇಕಾಗಿದ್ದ ಕರಾವಳಿಯ ಗ್ರಾಮೀಣ ಭಾಗದ ವಿದ್ಯಾರ್ಥಿಗಳಿಗೆ ಮೂಡುಬಿದಿರೆಯಲ್ಲೇ ಅಂತರರಾಷ್ಟ್ರೀಯ ಮಟ್ಟದ ಶಿಕ್ಷಣ ಸಿಗುವಂತೆ ಮಾಡಿದ್ದು ಆಳ್ವಾಸ್ ಶಿಕ್ಷಣ ಪ್ರತಿಷ್ಠಾನ. ಆರಂಭದಲ್ಲಿ ಸಣ್ಣ ಮಟ್ಟದಲ್ಲಿ ಕಾರ್ಯಾಚರಣೆ ಕೈಗೊಂಡ ಈ ಸಂಸ್ಥೆ, ಇಂದು ಕೆ.ಜಿ.ಯಿಂದ ಹಿಡಿದು ಪಿಎಚ್.ಡಿ ವರೆಗೆ, ಫಾರ್ಮಾಮೆಡಿಕಲ್, ಇಂಜಿನಿಯರಿಂಗ್, ಮ್ಯಾನೇಜ್‌ಮೆಂಟ್, ಕಲೆ, ವಿಜ್ಞಾನ ಸೇರಿದಂತೆ ಹತ್ತಾರು ಕಾಲೇಜುಗಳನ್ನು ಒಳಗೊಂಡ ಬೃಹತ್ ಶೈಕ್ಷಣಿಕ ಸಾಮ್ರಾಜ್ಯವಾಗಿ ಬೆಳೆದಿದೆ. ಜೈನಕಾಶಿಯೆನಿಸಿದ್ದ ಮೂಡಬಿದಿರೆಯನ್ನು ವಿದ್ಯಾಕಾಶಿಯನ್ನಾಗಿ ಬದಲಾಯಿಸಿದೆ. ಇಲ್ಲಿ ಕೇವಲ ಅಂಕ ಗಳಿಸುವುದಷ್ಟೇ ಶಿಕ್ಷಣವಲ್ಲ, ಬದಲಿಗೆ ವಿದ್ಯಾರ್ಥಿಯ ಸರ್ವತೋಮುಖ ಅಭಿವೃದ್ಧಿಗೆ ಒತ್ತು ನೀಡಲಾಗುತ್ತದೆ. ಕಲೆ ಮತ್ತು ಕ್ರೀಡೆಯಲ್ಲಿ ಸಾಧನೆ ಮಾಡಿದ ಸಾವಿರಾರು ವಿದ್ಯಾರ್ಥಿಗಳಿಗೆ ಇಲ್ಲಿ ಉಚಿತ ಶಿಕ್ಷಣ ಹಾಗೂ ವಸತಿ ಸೌಲಭ್ಯ ಕಲ್ಪಿಸಲಾಗಿದೆ. ಇಂದು ಆಳ್ವಾಸ್ ಸಂಸ್ಥೆಯ ವಿದ್ಯಾರ್ಥಿಗಳು ರ್‍ಯಾಂಕ್ ಪಟ್ಟಿಯಲ್ಲಿ ಮುಂಚೂಣಿಯಲ್ಲಿರುವುದನ್ನು ನಾವು ಕಾಣಬಹುದು.

ಕ್ರೀಡಾ ಲೋಕಕ್ಕೆ ಬೆಂಬಲ ಮತ್ತು ಒಲಿಂಪಿಕ್ಸ್ ಕನಸು

ಭಾರತದಲ್ಲಿ ಕ್ರೀಡೆಗೆ ಕ್ರಿಕೆಟ್ ಹೊರತುಪಡಿಸಿ ಬೇರೆ ಆಟಗಳಿಗೆ ಸೂಕ್ತ ಪ್ರೋತ್ಸಾಹ ಸಿಗುತ್ತಿಲ್ಲ ಎಂಬ ಬಹು ಕಾಲದ ಕೊರಗನ್ನು ನೀಗಿಸಲು ಆಳ್ವರು ಕ್ರೀಡಾ ದತ್ತು ಯೋಜನೆಯನ್ನು ಜಾರಿಗೆ ತಂದರು. ಗ್ರಾಮೀಣ ಭಾಗದ, ಬಡತನದಲ್ಲಿರುವ ಓಟಗಾರರು, ಕಬಡ್ಡಿ, ಖೋ-ಖೋ, ಆಥ್ಲೆಟಿಕ್ಸ್ ಪಟುಗಳನ್ನು ಗುರುತಿಸಿ, ಅವರಿಗೆ ಆಳ್ವಾಸ್ ಸಂಸ್ಥೆಯಲ್ಲಿ ಉಚಿತ ಊಟ, ವಸತಿ, ಶಿಕ್ಷಣದ ಜತೆಗೆ ಅಂತಾರಾಷ್ಟ್ರೀಯ ಮಟ್ಟದ ತರಬೇತಿ ಮತ್ತು ಆಟವಾಡಲು ವಿಶಾಲವಾದ ಮೈದಾನದ ಸೌಲಭ್ಯಗಳನ್ನು ನೀಡಿದ್ದಾರೆ. ಆಳ್ವಾಸ್ ಸಂಸ್ಥೆಯಿಂದ ತರಬೇತಿ ಪಡೆದ ಅಗಣಿತ ಕ್ರೀಡಾಪಟುಗಳು ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಟ್ಟದಲ್ಲಿ ಚಿನ್ನದ ಪದಕಗಳನ್ನು ಬೇಟೆಯಾಡಿದ್ದಾರೆ. ಆಶ್ವಿನಿ ಅಕ್ಕುಂಜೆ ಮೊದಲಾದ ಸಾಧಕ ಕ್ರೀಡಾಪಟುಗಳಿಗೆ ಅವರು ನೀಡಿದ ನೆರವು ಅನನ್ಯವಾದುದು,

ಅಮೋಘವಾದುದು.

ಒಲಿಂಪಿಕ್ಸ್ ಮತ್ತು ಏಷ್ಯನ್ ಗೇಮ್ಸ್‌ನಲ್ಲಿ ಭಾರತವನ್ನು ಪ್ರತಿನಿಧಿಸಿದ ಎಷ್ಟೋ ಕ್ರೀಡಾಪಟುಗಳು ಆಳ್ವಾಸ್ ಗರಡಿಯಲ್ಲಿ ಪಳಗಿದವರಾಗಿದ್ದಾರೆ. ಇವೆಲ್ಲದರ ಜತೆಗೆ ಕರಾವಳಿಯ ಸಾಂಪ್ರದಾಯಿಕ ಕ್ರೀಡೆಯಾದ ಕಂಬಳಕ್ಕೆ ಹೊಸ ಆಯಾಮ ನೀಡಿ, ಯುವಕರು ಕಂಬಳದಲ್ಲಿ ತೊಡಗಿಸಿಕೊಳ್ಳಲು ಆಳ್ವರ ಪ್ರೋತ್ಸಾಹ ಬಹು ದೊಡ್ಡದಾಗಿದೆ.

ವೈದ್ಯಕೀಯ ಕ್ಷೇತ್ರದ ಕೊಡುಗೆ: ಆಯುರ್ವೇದದ ಪುನರುತ್ಥಾನ

ಮೂಲತಃ ಬಿ.ಎ.ಎಂ.ಎಸ್ ವೈದ್ಯರಾಗಿರುವ ಡಾ। ಮೋಹನ ಆಳ್ವರಿಗೆ ಭಾರತೀಯ ಮೂಲ ವೈದ್ಯಕೀಯ ಪದ್ಧತಿಯಾದ ಆಯುರ್ವೇದದ ಮೇಲೆ ಅಪಾರ ಗೌರವವಿದೆ. ಆಧುನಿಕ ವೈದ್ಯಕೀಯ ಯುಗದಲ್ಲೂ ಆಯುರ್ವೇದಕ್ಕೆ ಜಾಗತಿಕ ಮನ್ನಣೆ ಸಿಗಬೇಕೆಂದು ಅವರು ಆಳ್ವಾಸ್ ಆಯುರ್ವೇದ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಯನ್ನು ಸ್ಥಾಪಿಸಿದರು. ಇಲ್ಲಿ ಅತ್ಯಂತ ಕಡಿಮೆ ವೆಚ್ಚದಲ್ಲಿ, ಕೆಲವು ವಿಶೇಷ ಸಂದರ್ಭಗಳಲ್ಲಿ ಪೂರ್ಣ ಉಚಿತವಾಗಿ ಬಡ ರೋಗಿಗಳಿಗೆ ಆಯುರ್ವೇದ ಹಾಗೂ ಪ್ರಕೃತಿ ಚಿಕಿತ್ಸೆಯನ್ನು ನೀಡಲಾಗುತ್ತದೆ. ಸಾಂಪ್ರದಾಯಿಕ ವೈದ್ಯ ಪದ್ಧತಿಯನ್ನು ಸಂಶೋಧನೆಯೊಂದಿಗೆ ಸಂಯೋಜಿಸಿ, ಇಂದಿನ ತಲೆಮಾರಿಗೆ ತಲುಪಿಸುವಲ್ಲಿ ಆಳ್ವರ ಪಾತ್ರ ದೊಡ್ಡದಾಗಿದೆ. ಆರೋಗ್ಯ ಶಿಬಿರಗಳ ಮೂಲಕ ಗ್ರಾಮೀಣ ಜನರಲ್ಲಿ ಆರೋಗ್ಯ ಜಾಗೃತಿ ಮೂಡಿಸುವ ಕೆಲಸವನ್ನು ಅವರು ನಿರಂತರವಾಗಿ ಮಾಡುತ್ತಾ ಬಂದಿದ್ದಾರೆ.

ಕೃಷಿ ಮತ್ತು ಪರಿಸರ ಪ್ರೇಮ

ಡಾ। ಮೋಹನ ಆಳ್ವರವರದ್ದು ಕೇವಲ ಕಾಂಕ್ರೀಟ್ ಕಟ್ಟಡಗಳನ್ನು ಕಟ್ಟುವ ಮನಃಸ್ಥಿತಿಯಲ್ಲ, ಪ್ರಕೃತಿಯನ್ನು ಆರಾಧಿಸುವ ಹಸಿರು ಮನಸ್ಸು. ಆಳ್ವಾಸ್ ಸಂಸ್ಥೆಯ ಆವರಣಕ್ಕೆ ಭೇಟಿ ನೀಡಿದರೆ ಆಲ್ಲಿನ ಸಂಪನ್ನ ಹಸಿರು, ವಿಭಿನ್ನ ಬಗೆಯ ಗಿಡಮೂಲಿಕೆಗಳು ನಮಗೆ ಪರಿಸರ ಪ್ರೇಮವನ್ನು ಬೋಧಿಸುತ್ತವೆ. ಶೋಭಾವನ (ಗಿಡಮೂಲಿಕೆ ವನ): ಮೂಡುಬಿದಿರೆಯ ಮಿಜಾರಿನಲ್ಲಿರುವ 'ಶೋಭಾವನ' ಎಂಬ ಅಪರೂಪದ ಗಿಡಮೂಲಿಕೆ ವನವನ್ನು ಆಳ್ವರು ಪೋಷಿಸುತ್ತಿದ್ದಾರೆ. ಇಲ್ಲಿ ಸಾವಿರಾರು ಜಾತಿಯ ಅಪರೂಪದ ಔಷಧೀಯ ಸಸ್ಯಗಳನ್ನು ಬೆಳೆಸಲಾಗಿದೆ. ಇದು ಕೇವಲ ಪ್ರವಾಸಿ ತಾಣವಲ್ಲ, ಆಯುರ್ವೇದ ವಿದ್ಯಾರ್ಥಿಗಳಿಗೆ ಮತ್ತು ಸಂಶೋಧಕರಿಗೆ ಒಂದು ಸಜೀವ ಜ್ಞಾನದ ಭಂಡಾರವನ್ನು ತೆರೆದಿಡುವ ಅಪರೂಪದ ಹೊನ್ನಿನ ಗಣಿಯಾಗಿದೆ.

ಕೃಷಿ ಸಿರಿ

ಕೃಷಿಯಿಂದ ಯುವ ಪೀಳಿಗೆ ದೂರವಾಗುತ್ತಿರುವ ಈ ಕಾಲದಲ್ಲಿ, ವಿದ್ಯಾರ್ಥಿಗಳಿಗೆ ಕೃಷಿಯ ಮಹತ್ವವನ್ನು ತಿಳಿಸಲು ಕೃಷಿ ಮೇಳಗಳನ್ನು ಆಯೋಜಿಸುತ್ತಾರೆ. ಕರಾವಳಿಯ ಸಾಂಪ್ರದಾಯಿಕ ಭತ್ತದ ಬೇಸಾಯ, ಹೈನುಗಾರಿಕೆ ಹಾಗೂ ಸಾವಯವ ಕೃಷಿಗೆ ತಮ್ಮ ಸಂಸ್ಥೆಯ ಮೂಲಕ ಬೆಂಬಲ ನೀಡುತ್ತಿದ್ದಾರೆ.

ಆಳ್ವರ ನಿರಂತರ, ನಿಸ್ವಾರ್ಥ ಸಮಾಜಸೇವೆಯ ವಿಸ್ತಾರವನ್ನು ಗುರುತಿಸಿ ಅನೇಕ ಗೌರವಗಳು ಮೋಹನ ಆಳ್ವರನ್ನು ಹುಡುಕಿಕೊಂಡು ಬಂದಿವೆ. ಆದರೆ, ಆಳ್ವರ ಪ್ರಕಾರ ''ಸಂಸ್ಥೆಯಲ್ಲಿ ಕಲಿತು ಹೋದ ವಿದ್ಯಾರ್ಥಿಗಳು ಸಮಾಜದಲ್ಲಿ ಒಳ್ಳೆಯ ಪ್ರಜೆಗಳಾಗಿ ಬದುಕುತ್ತಿರುವುದೇ ನನಗೆ ಸಿಕ್ಕ ಅತಿ ದೊಡ್ಡ ಪ್ರಶಸ್ತಿ''. ಈ ಕಾರಣದಿಂದ

ಒಂದು ಪುಟ್ಟ ಬೀಜ ಹೆಮ್ಮರವಾಗಿ ಬೆಳೆದು ಸಹಸ್ರಾರು ಹಕ್ಕಿಗಳಿಗೆ ಆಸರೆಯಾಗುವಂತೆ, ಮೂಡುಬಿದಿರೆಯ ಮಣ್ಣಿನಲ್ಲಿ ಮೊಳಕೆಯೊಡೆದ ಡಾ। ಎಂ. ಮೋಹನ ಆಳ್ವ ಎಂಬ ಮಹಾಚೇತನ ಇಂದು ಕೋಟ್ಯಂತರ ಬದುಕುಗಳಿಗೆ ಬೆಳಕಾಗುವ ಸಾಂಸ್ಕೃತಿಕ ಕಲ್ಪವೃಕ್ಷವಾಗಿ ಬೆಳೆದು ನಿಂತಿದೆ. ಕೇವಲ ವೈದ್ಯಕೀಯ ವೃತ್ತಿಗೋ ಅಥವಾ ವೈಯಕ್ತಿಕ ಯಶಸ್ಸಿಗೋ ತಮ್ಮನ್ನು ಸೀಮಿತಗೊಳಿಸಿಕೊಳ್ಳದೆ, ಇಡೀ ಸಮಾಜದ ಮುನ್ನಡೆಗಾಗಿ ತಮ್ಮ ಜೀವನವನ್ನೇ ಸವೆಸುತ್ತಿರುವ ಅವರ ಕಾಯಕ ಯೋಗ ನಿಜಕ್ಕೂ ಅನನ್ಯ. ಅವರು ಕಟ್ಟಿದ ಶೈಕ್ಷಣಿಕ ಸಾಮ್ರಾಜ್ಯದಲ್ಲಿ ಅಕ್ಷರ ಕಲಿತವರು, ಅವರ ಸಾಂಸ್ಕೃತಿಕ ವೇದಿಕೆಯಲ್ಲಿ ಕಲೆಗೆ ಜೀವ ತುಂಬಿದವರು ಹಾಗೂ ಅವರ ಕ್ರೀಡಾಗರಡಿಯಲ್ಲಿ ಪಳಗಿ ದೇಶದ ಕೀರ್ತಿ ಧ್ವಜವನ್ನು ಎತ್ತಿ ಹಿಡಿದವರು ಹೀಗೆ ಪ್ರತಿಯೊಬ್ಬರ ಬದುಕಿನಲ್ಲೂ ಆಳ್ವರ ಪ್ರೀತಿಯ ನೆರವಿನ ಅಚ್ಚಳಿಯದ ಹಸ್ತಾಕ್ಷರವಿದೆ. ಬದಲಾಗುತ್ತಿರುವ ಆಧುನಿಕ ಜಗತ್ತಿನ ಕಾಂಕ್ರೀಟ್ ಕಾಡಿನ ಮಧ್ಯೆಯೂ ನಮ್ಮತನವನ್ನು, ಕೃಷಿಯನ್ನು, ಕಲೆಗಳನ್ನು ಹೇಗೆ ಉಳಿಸಿಕೊಳ್ಳಬಹುದು ಎಂಬುದನ್ನು ಇಡೀ ಜಗತ್ತಿಗೆ ಮಾದರಿಯಾಗಿ ತೋರಿಸಿಕೊಟ್ಟ ಕರಾವಳಿಯ ಸಾಂಸ್ಕೃತಿಕ ರಾಯಭಾರಿ ಇವರು. ಕಠಿಣ ಶಿಸ್ತಿನ ನಡುವೆಯೂ ಹರಿಯುವ ಅವರ ಸಹಜ ಹಾಸ್ಯಪ್ರಜ್ಞೆ ಮತ್ತು ಎಲ್ಲರನ್ನೂ ಒಪ್ಪಿಕೊಳ್ಳುವ ಸರಳತೆ ಅವರ ವ್ಯಕ್ತಿತ್ವವನ್ನು ಜನಸಾಮಾನ್ಯರ ಹೃದಯದಲ್ಲಿ ಆರಾಧ್ಯ ಸ್ಥಾನದಲ್ಲಿರಿಸಿದೆ. 'ನನ್ನ ವಿದ್ಯಾರ್ಥಿಗಳು ಜಾಗತಿಕ ಮಟ್ಟದಲ್ಲಿ ಸತ್ಪಜೆಗಳಾಗಿ ಮಿಂಚುವುದೇ ನನಗೆ ಸಿಗುವ ಅತ್ಯುನ್ನತ ಸಮಾಧಾನ' ಎಂದು ನಂಬಿರುವ ಆಳ್ವರವರ ದೃಷ್ಟಿ ಸದಾ ಭವಿಷ್ಯದ ಸಾಧನೆಯ ಮುನ್ನೋಟದತ್ತ, ಒಲಿಂಪಿಕ್ಸ್‌ನ ಚಿನ್ನದ ಪದಕದತ್ತ ಹಾಗೂ ಕನ್ನಡದ ಸಾಂಸ್ಕೃತಿಕ ವಿಜಯದತ್ತ ಕೇಂದ್ರೀಕೃತವಾಗಿದೆ.

ದೃಢ ಸಂಕಲ್ಪ ಮತ್ತು ನಿಃಸ್ವಾರ್ಥ ಸೇವಾಮನೋಭಾವವಿದ್ದರೆ ಒಂದು ಇಡೀ ಪ್ರಾಂತ್ಯದ ಚಿತ್ರಣವನ್ನೇ ಬದಲಾಯಿಸಬಹುದು ಎಂಬುದಕ್ಕೆ ಡಾ। ವಿದ್ಯಾನಗರವೆಂಬ ಸ್ವರ್ಗವನ್ನು ಧರೆಗಿಳಿಸಿದ ಮೋಹನ ಆಳ್ವ ಅವರೇ ಈ ಕಾಲದ ಪ್ರತ್ಯಕ್ಷ ಸಾಕ್ಷಿ. ಕಲೆ, ಕ್ರೀಡೆ, ಕೃಷಿ ಮತ್ತು ವಿದ್ಯೆಯ ಈ 'ತ್ರಿವೇಣಿ ಸಂಗಮ'ವನ್ನು ಉಸಿರಾಡುತ್ತಿರುವ ಅವರ ಸಾಂಸ್ಕೃತಿಕ ತೇರು ಹೀಗೆಯೇ ಯುಗಯುಗಾಂತರಗಳ ಕಾಲ ನಿರಂತರವಾಗಿ ಸಾಗಲಿ.

ಕುರಿತೋದದೆಯಂ ಕಾವ್ಯ ಪರಿಣತಮತಿಗಳ್ ಎಂಬಂತೆ ಆಳ್ವರು ಪ್ರಯೋಗಶೀಲ ಪರಿಣತಮತಿ. ಪ್ರತಿಯೊಂದೂ ಕಾರ್ಯವೂ ಅದು ಬೃಹತ್ ಆಗಬೇಕು, ಮಹತ್ ಆಗಬೇಕೆಂದು ಬಯಸುವ ವೈವಿಧ್ಯವನ್ನೇ ಹಂಬಲಿಸುವವ ಕನಸುಗಾರ.

●1975ರಲ್ಲಿ ಉಡುಪಿಯಲ್ಲಿ ಆಯುರ್ವೇದ ಕಾಲೇಜು ವಿದ್ಯಾರ್ಥಿಯಾಗಿದ್ದಾಗಲೇ ಆಂತರ್ ಕಾಲೇಜು ಸಾಂಸ್ಕೃತಿಕ ಸ್ಪರ್ಧೆಗಳಲ್ಲಿ 150ಕ್ಕಿಂತ ಅಧಿಕ ಪಾರಿತೋಷಕಗಳನ್ನು ಪಡೆದಿದ್ದರು. ಆಳ್ವರ ಕಲ್ಪನೆಯ ಮೂಸೆಯಲ್ಲಿ ಸೃಷ್ಟಿಯಾದ ಬೇಟೆಗಾರರ ನೃತ್ಯ, ಶಿವತಾಂಡವ ನೃತ್ಯ ಆಗಲೇ ಪ್ರಸಿದ್ಧವಾಗಿತ್ತು.

●ಆರಂಭದ ದಿನಗಳಲ್ಲಿ ಗೋವರ್ಧನ ಹೊಸಮನಿ ಅವರ ಎಚ್ಚಮನಾಯಕ, ಸಂಜೀವ ದಂಡಕೇರಿಯವರ ಬಯ್ಯಮಲ್ಲಿಗೆ ನಾಟಕಗಳಲ್ಲಿ ಆಳ್ವರು ಅಭಿನಯಿಸಿದ್ದರು. ಕಾಲೇಜು ವಿದ್ಯಾರ್ಥಿಯಾಗಿದ್ದಾಗ ಅವರು ನಟಿಸಿದ್ದ ರಂಗ ಕರ್ಮಿ ಬಿ. ಆರ್. ನಾಗೇಶ್ ನಿರ್ದೇಶನದ ಗುಮ್ಮನೆಲ್ಲಿಹ ತೋರಮ್ಮ, ಪೊಲೀಸರಿದ್ದಾರೆ ಎಚ್ಚರಿಕೆ ನಾಟಕಗಳು ರಾಷ್ಟ್ರಮಟ್ಟದ ಅಂತರ್ ವಿವಿ ಸ್ಪರ್ಧೆಯಲ್ಲಿ ಬಹುಮಾನ ಗಳಿಸಿದ್ದವು. ಹಾಗಿದ್ದರೂ ಆಳ್ವರು ರ್‍ಯಾಂಕ್ ವಿಜೇತ ವಿದ್ಯಾರ್ಥಿ! ಉದ್ಯಾವರ ಮಾಧವಾಚಾರ್ಯರ ಅಂಧಯುಗ, ಯುಯುತ್ಸು, ಜತೆಗೆ ತುಘಲಕ್, ಕಾಲಿಗುಲಾ ಮೊದಲಾದ 40ಕ್ಕೂ ಅಧಿಕ ನಾಟಕಗಳಲ್ಲಿ ಆಳ್ವರ ಪ್ರತಿಭೆ ಅನಾವರಣವಾಗಿದೆ.

●ಕಲೆ, ಕ್ರೀಡೆ ಎಂದು ಒಂದೇ ವರ್ಷದಲ್ಲಿ 125ಕ್ಕಿಂತ ಅಧಿಕ ಪ್ರಶಸ್ತಿಗಳನ್ನು ಪಡೆದ ಕಾರಣ, 1980ರಲ್ಲಿ ಇಂಗ್ಲೆಂಡಿನ ಆಕ್ಸ್ ಫರ್ಡ್ ವಿವಿಯಿಂದ ವಿಶ್ವದ ಅತ್ಯುತ್ತಮ ಪ್ರತಿಭಾನ್ವಿತ ತರುಣ ಪುರಸ್ಕಾರಕ್ಕೆ ಆಳ್ವರು ಭಾಜನರಾಗಿದ್ದರು.

●ತಂದೆ ಆನಂದ ಆಳ್ವರು ಆ ಕಾಲದಲ್ಲಿ ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯ ಮದ್ಯ ಪೂರೈಕೆ ಗುತ್ತಿಗೆ ಪಡೆದಿದ್ದರೂ ಮೋಹನ ಆಳ್ವರು ಈವರೆಗೆ ಮದ್ಯ ತುಟಿಗೆ ಸೋಕಿಸಿದವರಲ್ಲ. ಸಿಗರೇಟು ಸೇದಿದವರಲ್ಲ. ಆದರೆ ಬಣ್ಣ ಬಣ್ಣದ ಅಂಗಿ, ವಿಶಿಷ್ಟ ಪೋಷಾಕು, ಸದಭಿರುಚಿಯ ಜಿಹ್ವಾ ಚಾಪಲ್ಯ, ರುಚಿರುಚಿ ತಿನಿಸು, ಕಪಾಟಿನ ತುಂಬಾ ವಿವಿಧ ಪರಿಮಳದ ಸುಗಂಧ ದ್ರವ್ಯಗಳು ಇವರ ದೌರ್ಬಲ್ಯಗಳು!

●ಕನ್ನಡ ಮಾಧ್ಯಮದ ಉಳಿಯುವಿಕೆಗೆ ಪುಂಖಾನುಪುಂಖ ಹೇಳಿಕೆ ಕೊಡುವ ಬದಲು ಮೌನವಾಗಿ ಪ್ರತಿವರ್ಷ 600 ಪ್ರತಿಭಾವಂತ ವಿದ್ಯಾರ್ಥಿಗಳಿಗೆ 6 ರಿಂದ 10ನೇ ತರಗತಿವರೆಗೆ ಉಚಿತ ಶಿಕ್ಷಣ ನೀಡುತ್ತಾರೆ. ಲೆಕ್ಕ ಹಾಕಿದರೆ ಇದಕ್ಕಾಗಿ ಹೊತ್ತುಕೊಳ್ಳುವ ವೆಚ್ಚದ ಮೊತ್ತ ಆರೂವರೆ ಕೋಟಿ ರೂಪಾಯಿಗಳು.

●ಮಿಜಾರಿನ ಶೋಭಾವನದ 150 ಎಕರೆ ಪ್ರದೇಶದಲ್ಲಿ 2 ಸಾವಿರ ವೈವಿಧ್ಯ ಗಿಡಗಳಿದ್ದು, ನಕ್ಷತ್ರ, ರಾಶಿ, ಗಣಪತಿ, ಶಿವ ಪಂಚಾಕ್ಷರಿ, ಅಶೋಕ, ನವಗ್ರಹ ಮೊದಲಾದ 58 ವನಗಳಿವೆ.

●ಮೂಡುಬಿದಿರೆಯ ವಿಜಯನಗರದ ಕೊಠಡಿಯಲ್ಲಿ 1980ರ ಮೇ 31ರಂದು ಜನ್ಮದಿನದಂದು ಆಳ್ವಾಸ್ ಆಯುರ್ವೇದ ಚಿಕಿತ್ಸಾಲಯ ಆರಂಭಿಸಿದ ಆಳ್ವರ ಮೊದಲ ದಿನದ ಗಳಿಕೆ 138 ರೂ. ಆದರ ಪಯಣ ಈಗ ಆನೆಯ ಹೆಜ್ಜೆಯಂತೆ ವಿಸ್ತೃತ, 150 ಹಾಸಿಗೆಗಳ ಆಳ್ವಾಸ್ ಹೆಲ್ತ್ ಸೆಂಟರ್, 100 ಹಾಸಿಗೆಗಳ ಡಾ। ನಾಗಪ್ಪ ಆಳ್ವ ಸ್ಮಾರಕ ಆಯುರ್ವೇದ ಆಸ್ಪತ್ರೆ, 50 ಹಾಸಿಗೆಗಳ ಆನಂದಮಯ ಆರೋಗ್ಯಧಾಮ ವ್ಯಾಧಿಗ್ರಸ್ಥರಿಗೆ ಆರೋಗ್ಯ ಭಾಗ್ಯ ಕಲ್ಪಿಸುತ್ತಿವೆ. ಮುಂದಿನ ದಿನಗಳಲ್ಲಿ ಆಳ್ವಾಸ್ ವೈದ್ಯಕೀಯ ಸಂಶೋಧನಾ ಕೇಂದ್ರದವರೆಗೆ ಅದರ ವ್ಯಾಪ್ತಿ ತಲುಪಿದೆ.

●1995ರಲ್ಲಿ ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಆರಂಭ. ಅದರ ನಡೆ ಪ್ರಾಥಮಿಕ, ಪ್ರೌಢ, ಪದವಿ ಪೂರ್ವ, ಪದವಿ, ವೈದ್ಯಕೀಯ, ಅರೆ ವೈದ್ಯಕೀಯ, ತಾಂತ್ರಿಕ ಮೊದಲಾದ 20 ಸಂಸ್ಥೆಗಳಿಗೆ ಬಂದು ತಲುಪಿದೆ. 22 ಸಾವಿರಕ್ಕಿಂತ ಹೆಚ್ಚಿನ ವಿದ್ಯಾರ್ಥಿಗಳು ಆಳ್ವ ಎಂಬ ಆಲದ ಮರದ ಕೆಳಗೆ ಸುಖೀ ಶಿಕ್ಷಣದ ನೆರಳು ಪಡೆಯುತ್ತಿದ್ದಾರೆ.

●1998ರ ಮೊದಲು ರಂಗಸಂಗಮ ಮೂಲಕ ಸಾಂಸ್ಕೃತಿಕ ಕಾರ್ಯಕ್ರಮ ಹಮ್ಮಿಕೊಳ್ಳುತ್ತಿದ್ದ ಆಳ್ವರು ಬಳಿಕ ತಮ್ಮದೇ ಆಳ್ವಾಸ್ ಸಂಸ್ಥೆಯ ಮೂಲಕ ಸಾಂಸ್ಕೃತಿಕ ಕಾರ್ಯಕ್ರಮಗಳ ಪ್ರದರ್ಶನ ಆರಂಭಿಸಿ ಅದಕ್ಕೊಂದು ವಿಹಂಗಮ ರೂಪ ನೀಡಿದರು.

●2004ರಲ್ಲಿ ವಿರಾಸತ್ ಆರಂಭ. ಭಾರತೀಯ ಕಲೆ, ಸಾಂಸ್ಕೃತಿಕ ವೈವಿಧ್ಯದ ಆಗರವಾಗಿ ಅದರ ಬೆಳವಣಿಗೆ ಈಗ ಎಲ್ಲರ ಕಣ್ಣಮುಂದೆ ಇದೆ.

●ತಮ್ಮದೇ ಶಿಕ್ಷಣ ಸಂಸ್ಥೆಗಳನ್ನು ಸಾಲ ಮಾಡಿ ನಡೆಸುತ್ತಿದ್ದರೂ ಮೂಡುಬಿದಿರೆ ಆಸುಪಾಸಿನ 17 ಶಾಲೆಗಳಿಗೆ ತಲಾ ಓರ್ವ ಅಧ್ಯಾಪಕನನ್ನು ಆಳ್ವಾಸ್ ಸಂಸ್ಥೆಯಿಂದ ನಿಯುಕ್ತಿಗೊಳಿಸಿ, ತಮ್ಮದೇ ಸಂಸ್ಥೆಗೆ ಖರೀದಿಸಿದ ಕಲಿಕಾ ಸಾಮಗ್ರಿಗಳನ್ನು ಸರಕಾರಿ ಶಾಲೆಗಳಿಗೆ ಹಂಚುವುದು ಮೋಹನ ಆಳ್ವರ ಬದುಕಿನ ಪರಿ. ಆದೂ ಪ್ರಚಾರವಿಲ್ಲದೇ!

●1980ರ ದಶಕದಲ್ಲಿ ಗುಡ್ಡಗಾಡು, ಹಳ್ಳಿ ಪ್ರದೇಶವಾಗಿದ್ದ ಮೂಡುಬಿದಿರೆ



ಸುತ್ತಲಿನ ಜನಕ್ಕೆ ಹಾವು ಕಡಿತವಾದರೆ ಮಂಗಳೂರಿನ ಕಂಕನಾಡಿ ಆಸ್ಪತ್ರೆಗೆ ಚಿಕಿತ್ಸೆಗೆ ಹೋಗಬೇಕಾದ ಅನಿವಾರ್ಯ ಸ್ಥಿತಿ ಇತ್ತು. ಸರಿಯಾದ ವಾಹನ ಸೌಕರ್ಯ ಇಲ್ಲದ ಕಾರಣ ಹಾಗೆ ಹೋಗಿ ಬದುಕುಳಿದವರ ಸಂಖ್ಯೆ ಕಡಿಮೆ ಇತ್ತು. ಹಾವು ಕಡಿತಕ್ಕೆ ಚಿಕಿತ್ಸೆ 1984ರಿಂದ ಆಳ್ವರ ಚಿಕಿತ್ಸಾ ಕೇಂದ್ರದಲ್ಲಿ ಆರಂಭವಾಗಿ 2000ನೇ ಇಸವಿ ಹೊತ್ತಿಗೆ ಚಿಕಿತ್ಸೆ ಪಡೆದವರು 6021 ಮಂದಿ.

●ಎಚ್ ಐ ವಿ ಬಾಧಿತರು ಸಮಾಜಕ್ಕೆ ಹೆದರಿ ದೂರ ಉಳಿಯಬಾರದು, ಬದುಕುವ ಪ್ರಯತ್ನಕ್ಕೆ ತಿಲಾಂಜಲಿ ನೀಡಬಾರದು ಎಂದು 23 ವರ್ಷಗಳ ಹಿಂದೆಯೇ ತಮ್ಮ ಕ್ಲಿನಿಕ್‌ನಲ್ಲಿ ದುಬಾರಿ ಔಷಧಗಳನ್ನು ಉಚಿತವಾಗಿ ನೀಡಲು ಆಳ್ವರು ಆರಂಭಿಸಿದ್ದರು. ಆಳ್ವಾಸ್ ಸಂಜೀವಿನಿ ಫಾರ್ ಪಾಸಿಟಿವ್ ಪೀಪಲ್ ಮೂಲಕ ಇಂದಿಗೂ ಈ ಚಿಕಿತ್ಸೆ ನಡೆಯುತ್ತಿದೆ.

●ಇಂದು ಆಳ್ವರು ಮೂಡುಬಿದಿರೆಗೆ ಸೀಮಿತರಲ್ಲ. ದೇಶದ ಎಲ್ಲೇ ಸಂಕಷ್ಟವಾದರೂ ಸ್ಪಂದಿಸುತ್ತಾರೆ. 2001ರಲ್ಲಿ ಗುಜರಾತ್‌ನ ಭುಜ್‌ನಲ್ಲಿ ಭೂಕಂಪವಾದಾಗ ಆಳ್ವಾಸ್‌ನ ವೈದ್ಯರು, ವಿದ್ಯಾರ್ಥಿಗಳ ತಂಡ 15 ದಿನಗಳ ಕಾಲ ಅಲ್ಲಿನ ಮೈದಾನದಲ್ಲಿ ತಾತ್ಕಾಲಿಕ ವೈದ್ಯಕೀಯ ಘಟಕ ತೆರೆದು 350ಕ್ಕೂ ಅಧಿಕ ಮಂದಿಗೆ ಚಿಕಿತ್ಸೆ ನೀಡಿತ್ತು. 2009ರಲ್ಲಿ ಗದಗ ಜಿಲ್ಲೆಯ ಬೋಪಾಳಪುರದಲ್ಲಿ ಪ್ರವಾಹ ಬಂದು ಬದುಕು ನೀರುಪಾಲಾದಾಗ ಎರಡೂವರೆ ಎಕರೆ ಭೂಮಿ ಖರೀದಿಸಿ ಆಳ್ವರು 25 ಕುಟುಂಬಗಳಿಗೆ ಸ್ವಂತ ಖರ್ಚಿನಲ್ಲಿ ಮನೆ ನಿರ್ಮಿಸಿ ಕೊಟ್ಟಿದ್ದರು. 2018-19ರಲ್ಲಿ ಕೊಡಗು, ಕೇರಳದಲ್ಲಿ ನೆರೆ ಹಾನಿ ಸಂಭವಿಸಿದಾಗ 200 ಕುಟುಂಬಗಳಿಗೆ ಹೊಸ ಬದುಕು ಕಟ್ಟಿಕೊಳ್ಳಲು ಧನಸಹಾಯ ಮಾಡಿದ್ದರು. 2019ರಲ್ಲಿ ಕೋಲಾರದಲ್ಲಿ ವಿಷಪ್ರಸಾದ ಸೇವನೆ ಮಾಡಿ ತೊಂದರೆಗೆ ಒಳಗಾದ ಕುಟುಂಬಗಳಿಗೆ ಆರ್ಥಿಕ ನೆರವು ನೀಡಿದ್ದರು. 2019ರಲ್ಲಿ ಕಾಶ್ಮೀರದ ಪುಲ್ವಾಮಾದಲ್ಲಿ ನಡೆದ ಉಗ್ರರ ದಾಳಿಯಲ್ಲಿ ಹುತಾತ್ಮರಾದ ವೀರಯೋಧರ ಕುಟುಂಬಗಳಿಗೆ ಸಾಂತ್ವನಧನ ನೀಡಿದ್ದರು. 2019-20ರಲ್ಲಿ ಮುಖ್ಯಮಂತ್ರಿ ಪರಿಹಾರನಿಧಿಗೆ ಪ್ರವಾಹಸಂತ್ರಸ್ತರಿಗಾಗಿ ಕೊಡುಗೆ ನೀಡಿದ್ದರು.

●ಆಳ್ವಾಸ್ ಸಂಸ್ಥೆ ಕಳೆದ ಆರು ವರ್ಷಗಳಲ್ಲಿ ಒಟ್ಟು 3,098 ಕ್ರೀಡಾಪಟುಗಳಿಗೆ ತರಬೇತಿ ನೀಡಿದೆ. ಅಥ್ಲೆಟಿಕ್ಸ್‌ನ 23 ವಿಭಿನ್ನ ವಿಭಾಗಗಳು ಹಾಗೂ ವಾಲಿಬಾಲ್, ಕಬಡ್ಡಿ, ಖೋ-ಖೋ, ವೇಟ್ ಲಿಫ್ಟಿಂಗ್ ಸೇರಿದಂತೆ 15 ಕ್ಕೂ ಹೆಚ್ಚು ವಿವಿಧ ಆಟಗಳಿಗಾಗಿ ಇಲ್ಲಿ ವಿದ್ಯಾರ್ಥಿಗಳನ್ನು ದತ್ತು ಪಡೆದು ಪೋಷಿಸಲಾಗುತ್ತಿದೆ. ಇದಕ್ಕಾಗಿ ಸಂಸ್ಥೆಯು 35 ನುರಿತ ಅಥ್ಲೆಟಿಕ್ಸ್ ತರಬೇತುದಾರರನ್ನು ನಿಯೋಜಿಸಿದೆ. ಕ್ರೀಡೆಯ ಉತ್ತೇಜನಕ್ಕಾಗಿ ಆಳ್ವಾಸ್ ಸಂಸ್ಥೆಯು ಕಳೆದ ಆರು ವರ್ಷಗಳಲ್ಲಿ 29,38,16,850 ರೂಪಾಯಿಗಳನ್ನು ಕ್ರೀಡಾ ದತ್ತು ಯೋಜನೆ ಮೂಲಕ ವಿನಿಯೋಗಿಸಿದೆ.

●6ನೇ ತರಗತಿಯಿಂದ 10ನೇ ತರಗತಿವರೆಗಿನ ಕನ್ನಡ ಮಾಧ್ಯಮ ಶಾಲೆಯು ಶೂನ್ಯ ಶುಲ್ಕ ಆಂದರೆ ಸಂಪೂರ್ಣ ಉಚಿತವಾಗಿ ನಡೆಯುತ್ತಿದ್ದು, ಇದಕ್ಕಾಗಿ ವಾರ್ಷಿಕ ರೂ. 8 ಕೋಟಿ ವಿನಿಯೋಗವಾಗುತ್ತಿದೆ. ಈ ಶಾಲೆಯ ಪ್ರವೇಶ ಪರೀಕ್ಷೆಯನ್ನು ಬರೆಯುವವರ ಸಂಖ್ಯೆ ಪ್ರತೀವರ್ಷ 20,000ಕ್ಕಿಂತ ಹೆಚ್ಚಿದ್ದು 2026ರಲ್ಲಿ 23,000 ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದಾರೆ.

●ಉಚಿತ ಶಿಕ್ಷಣದ ಕೊಡುಗೆ ಪ್ರಾರಂಭವಾಗಿ ನಿರಂತರ ಮುಂದುವರಿದು ಇಂದು ವಾರ್ಷಿಕವಾಗಿ ರೂ.60 ರಿಂದ 75 ಕೋಟಿಗಳ ಬೃಹತ್ ಮೊತ್ತ ವಿನಿಯೋಗವಾಗುತ್ತಿದೆ.

●ದತ್ತು ಸ್ವೀಕಾರ ಆಂಗವಾಗಿ ಕ್ರೀಡೆ, ಸಾಂಸ್ಕೃತಿಕ ವಿಭಾಗ, ಬುದ್ಧಿಮಾಂದ್ಯ ವಿದ್ಯಾರ್ಥಿಗಳು, ದಿವ್ಯಾಂಗ ವಿದ್ಯಾರ್ಥಿಗಳು, ಪರಿಶಿಷ್ಟ ಜಾತಿಯ ಕೊರಗ, ಸಿದ್ದಿ, ಕುಡುಬಿ, ಮಲೆಕುಡಿಯ, ಜೇನುಕುರುಬ, ಸೋಲಿಗ, ಹಕ್ಕಿಪಿಕ್ಕಿಗಳೆಂಬ 07 ಗುಂಪುಗಳ ವಿದ್ಯಾರ್ಥಿಗಳನ್ನು ದತ್ತುಸ್ವೀಕಾರಕ್ಕೆ ಅವಕಾಶವಿದೆ.

●06 ವಿಭಾಗಗಳಲ್ಲಿ ವಿವಿಧ ದತ್ತು ಸ್ವೀಕಾರ ಯೋಜನೆಯಲ್ಲಿ ವಾರ್ಷಿಕ 3 ಸಾವಿರ ವಿದ್ಯಾರ್ಥಿಗಳಿಗೆ ಅದರ ಸಂಪೂರ್ಣ ಲಾಭ ಸಿಗುತ್ತಿದೆ.

●ಸಂಸ್ಕೃತಿ, ಕಲೆಗಳಿಗೆ ಸಮಾನ ಪ್ರಾಶಸ್ತ್ಯ ನೀಡುವ ಡಾ। ಆಳ್ವರ ಕಚೇರಿ, ಸಂಸ್ಥೆಗಳು ಭಿನ್ನವಾಗುವುದೇ ಅಲ್ಲಿರುವ ಶಾಸ್ತ್ರೀಯ, ಧಾರ್ಮಿಕ, ಜಾನಪದ ಕಲೆಗಳ ವಸ್ತು ಮತ್ತು ಚಿತ್ರಗಳಿಂದ. ಸುಮಾರು 10 ಕೋಟಿ ರೂಪಾಯಿ ಮೌಲ್ಯಕ್ಕೂ ಮಿಗಿಲಾದ ವಸ್ತು ಸಂಗ್ರಹಾಲಯ ಇಲ್ಲಿದೆ.

●ಸಾಂಸ್ಕೃತಿಕ ಮನಸ್ಸು ಕಾಲೇಜು ಕ್ಯಾಂಪಸ್ಸಿಗೆ ಮಾತ್ರ ಸೀಮಿತವಾಗದೆ ಸಮಾಜಕ್ಕೂ ಅದರ ಲಾಭ ದೊರೆಯಬೇಕೆಂಬ ಅಭಿಲಾಷೆಯಿಂದ ಕಾರ್ಯಾರಂಭ ಮಾಡಿದ್ದೇ 'ಆಳ್ವಾಸ್ ಸಾಂಸ್ಕೃತಿಕ ವೈಭವ'. ಇಂದು ರಾಜ್ಯದ ಜಿಲ್ಲಾ ಕೇಂದ್ರಗಳಲ್ಲಿ 80ಕ್ಕಿಂತ ಹೆಚ್ಚು ನುಡಿಸಿರಿ ಘಟಕಗಳ ಮೂಲಕ ಸಾಂಸ್ಕೃತಿಕ ವೈಭವವು ನಿರಂತರವಾಗಿ ನಡೆಯುತ್ತಿದೆ.

ಡಾ। ಎಂ. ಮೋಹನ ಆಳ್ವ ಅವರ ಸಾಂಸ್ಕೃತಿಕ ಮತ್ತು ಶೈಕ್ಷಣಿಕ ಸಾಧನೆಯನ್ನು ಕಂಡು ನಾಡಿನ ಪ್ರಮುಖ ಗಣ್ಯರು, ಸಾಹಿತಿಗಳು ಹಾಗೂ ಕ್ರೀಡಾಪಟುಗಳು ಆಡಿರುವ

ಪ್ರಶಂಸನಾ ನುಡಿಗಳು

ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಸಾಹಿತಿ ಡಾ. ಚಂದ್ರಶೇಖರ ಕಂಬಾರ

ಮೂಡುಬಿದಿರೆಯಲ್ಲಿ ಮೋಹನ ಆಳ್ವರು ಮಾಡುತ್ತಿರುವ ಕೆಲಸ ಕೇವಲ ಒಂದು ಶಿಕ್ಷಣ ಸಂಸ್ಥೆಯ ನಿರ್ವಹಣೆಯಲ್ಲ; ಅದೊಂದು ಸಾಂಸ್ಕೃತಿಕ ತಪಸ್ಸು. ಸರಕಾರಗಳು ಮಾಡಲಾಗದ ಸಾಂಸ್ಕೃತಿಕ ಜಾಗೃತಿಯ ಕೆಲಸವನ್ನು ಒಬ್ಬ ವ್ಯಕ್ತಿಯಾಗಿ ಆಳ್ವರು ಮಾಡಿ ತೋರಿಸಿದ್ದಾರೆ. ಕನ್ನಡದ ಬೇರುಗಳನ್ನು ಇಂದಿನ ತಲೆಮಾರಿಗೆ ದಾಟಿಸುತ್ತಿರುವ ಅವರು ಆಧುನಿಕ ಕಾಲದ ಭಗೀರಥ.

ರಾಷ್ಟ್ರಕವಿ ಪ್ರಶಸ್ತಿ ಪುರಸ್ಕೃತ ಜಿ. ಎಸ್. ಶಿವರುದ್ರಪ್ಪ:

ಆಳ್ವಾಸ್ ನುಡಿಸಿರಿ ಮತ್ತು ವಿರಾಸತ್ ಗೆ ಬಂದಾಗ ನನಗೆ ಕನ್ನಡದ ನಿಜವಾದ ಶಕ್ತಿ ಏನೆಂಬುದು ಮನವರಿಕೆಯಾಯಿತು. ಕಲೆ ಮತ್ತು ಸಾಹಿತ್ಯವನ್ನು ಇಷ್ಟೊಂದು ಭವ್ಯವಾಗಿ, ಶಿಸ್ತುಬದ್ಧವಾಗಿ ಜನಸಾಮಾನ್ಯರಿಗೆ ತಲುಪಿಸುವ ಆಳ್ವರ ಸಂಘಟನಾ ಚತುರತೆ ಇಡೀ ದೇಶಕ್ಕೆ ಮಾದರಿ.

ಧರ್ಮಸ್ಥಳದ ಧರ್ಮಾಧಿಕಾರಿ ಡಾ. ಡಿ. ವೀರೇಂದ್ರ ಹೆಗ್ಗಡೆ

ಕರಾವಳಿ ಕರ್ನಾಟಕದ ಶೈಕ್ಷಣಿಕ ಹಾಗೂ ಸಾಂಸ್ಕೃತಿಕ ಇತಿಹಾಸದಲ್ಲಿ ಡಾ। ಮೋಹನ ಆಳ್ವ ಅವರ ಕೊಡುಗೆ ಅನನ್ಯವಾದದ್ದು. ಅವರಲ್ಲಿರುವ ಕರಾರುವಕ್ಕಾದ ಶಿಸ್ತು, ಕಲೆಗಳ ಮೇಲಿನ ಅತಿಶಯ ಪ್ರೀತಿ ಮತ್ತು ಸಮಾಜಮುಖಿ ಚಿಂತನೆಗಳು ಯುವ ಪೀಳಿಗೆಗೆ ಸದಾ ಪ್ರೇರಣಾದಾಯಿ.

ಸಿನಿಮಾ ನಿರ್ದೇಶಕ ನಾಗತಿಹಳ್ಳಿ ಚಂದ್ರಶೇಖರ್

ಮೋಹನ ಆಳ್ವ ಹಾಗೂ ನನ್ನ ಸ್ನೇಹ ಬಹುಕಾಲದ್ದು. ಮುಕ್ಕಾಗದ್ದು. ರಕ್ತಸಂಬಂಧಗಳಿಗಿಂತ ಭಾವಸಂಬಂಧಗಳನ್ನು ನೆಚ್ಚುವ ನನಗೆ ಅವರು ಒಡಹುಟ್ಟದ ಸಹೋದರ!

ಅಂತಾರಾಷ್ಟ್ರೀಯ ಅಥ್ಲೀಟ್ ಹಾಗೂ ಒಲಿಂಪಿಯನ್ ಅಶ್ವಿನಿ ಅಕ್ಕುಂಜೆ

ಕ್ರೀಡಾಪಟುಗಳಿಗೆ ಆಳ್ವಾಸ್ ಸಂಸ್ಥೆ ನೀಡಿರುವ ಬೆಂಬಲ ಅಪ್ರತಿಮವಾದದ್ದು. ಆಳ್ವ ಸರ್ ನಮಗೆ ಕೇವಲ ಆರ್ಥಿಕ ಮತ್ತು ಶೈಕ್ಷಣಿಕ ನೆರವು ನೀಡಲಿಲ್ಲ, ಬದಲಿಗೆ ಅಂತಾರಾಷ್ಟ್ರೀಯ ಮಟ್ಟದಲ್ಲಿ ಭಾರತದ ಧ್ವಜವನ್ನು ಎತ್ತಿಹಿಡಿಯುವ ಆತ್ಮವಿಶ್ವಾಸ ತುಂಬಿದರು. ದೇಶದ ಒಲಿಂಪಿಕ್ಸ್ ಕನಸಿಗೆ ಹೆಗಲು ಕೊಟ್ಟ ಕ್ರೀಡಾ ಪೋಷಕರು ಆವರು.

ರಮೇಶ್ ಅರವಿಂದ್, ನಟ, ನಿರ್ದೇಶಕ

ಜೀವನದ ಏರುಪೇರು ಎದುರಿಸುವುದಕ್ಕೆ ಸಾಂಸ್ಕೃತಿಕ ಸಂಗತಿಗಳು ನೆರವಾಗುವುದು. ಅದನ್ನು ಅರಿತ ಆಳ್ವರು ಆಳ್ವಾಸ್ ನಲ್ಲಿ ಕಲೆ, ಸಂಸ್ಕೃತಿ, ಕಲಾವಿದರಿಗೆ ವಿಶೇಷ ಪ್ರಾಧಾನ್ಯ ನೀಡಿದ್ದಾರೆ.

ಶ್ರೇಯಾ ಘೋಷಾಲ್, ಖ್ಯಾತ ಗಾಯಕಿ

ಆಳ್ವರದ್ದು ಮೇಧಾವಿ ವ್ಯಕ್ತಿತ್ವ. ಶಿಕ್ಷಣ ಕ್ರಾಂತಿ ಜತೆಗೆ ಸಾಂಸ್ಕೃತಿಕ ಕಾರ್ಯದಿಂದ ಸಮಾಜದಲ್ಲಿ ಬಹಳ ದೊಡ್ಡ ಸ್ಥಾನ ಹೊಂದಿದ್ದಾರೆ.



ಮೂಡುಬಿದಿರೆಯ ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಸಂಸ್ಥಾಪಕ ಅಧ್ಯಕ್ಷ ಡಾ। ಎಂ. ಮೋಹನ ಆಳ್ವರು, ಕೃಷಿಕ ಕುಟುಂಬದವರಾದ ಮೂಡುಬಿದಿರೆಯ ಮಿಜಾರಿನ ಆನಂದ ಆಳ್ವ ಸುಂದರಿ ಅವರಿಗೆ (ಇವರ ಗೌರವಾರ್ಥವಾಗಿಯೇ ಮೂಡುಬಿದಿರೆಯ ಆಳ್ವಾಸ್ ಕ್ಯಾಂಪಸ್‌ಗೆ 'ಶ್ರೀಮತಿ ಸುಂದರಿ ಆನಂದ ಆಳ್ವ ಆವರಣ' ಎಂದು ಹೆಸರಿಡಲಾಗಿದೆ) ದಕ್ಷಿಣ ಕನ್ನಡ ಜಿಲ್ಲೆಯ ಮಿಜಾರಿನಲ್ಲಿ 1952 ಮೇ 31 ರಂದು ಜನಿಸಿದರು. ಡಾ। ಆಳ್ವರ ಧರ್ಮಪತ್ನಿ ದಿ। ಶೋಭಾ ಆಳ್ವ, ಇವರಿಗೆ ಎಂ. ವಿವೇಕ್ ಆಳ್ವ ಡಾ। ವಿನಯ್ ಆಳ್ವ ಪುತ್ರರು. ಇವರು ಕೂಡ ತಂದೆಯ ಜತೆ ಸಂಸ್ಥೆಯ ಜವಾಬ್ದಾರಿಗಳನ್ನು ಹಂಚಿಕೊಂಡಿದ್ದಾರೆ. ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಅಡಿಯಲ್ಲಿ ಪ್ರಾಥಮಿಕ ಶಾಲೆಯಿಂದ ಹಿಡಿದು ವೈದ್ಯಕೀಯ, ಎಂಜಿನಿಯರಿಂಗ್, ಕಲೆ, ವಾಣಿಜ್ಯ ಹೀಗೆ ವಿವಿಧ ವಿಭಾಗಗಳ ಒಟ್ಟು 21ಕ್ಕೂ ಹೆಚ್ಚು ಶಿಕ್ಷಣ ಸಂಸ್ಥೆಗಳು, 23 ಸಾವಿರಕ್ಕೂ ಅಧಿಕ ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ.

ಲಕ್ಷ್ಮೀ ಮಚ್ಚಿನ

SRI DHARMASTHALA MANJUNATHESHWARA COLLEGE OF NATUROPATHY & YOGIC SCIENCES & HOSPITAL

UJIRE - 574240, KARNATAKA
(MANAGED BY SDM EDUCATIONAL SOCIETY (R.) UJIRE)
Affiliated to Rajiv Gandhi University of Health Sciences, Bengaluru, Karnataka
Recognized as Center for Excellence in Research in Naturopathy & Yoga by Ministry of AYUSH, GOI

PRESIDENT: DR. D. VEERENDRA HEGGADE

ADMISSIONS OPEN

- **Bachelor of Naturopathy & Yogic Sciences (BNYS)-5½ yrs**
- **MD in Naturopathy & Yogic Sciences -3 yrs**
- **Ph.D. in Naturopathy & Yogic Sciences**

HIGHLIGHTS

- Well-equipped laboratories for pre-clinical studies
- Highly qualified, dedicated and experienced faculty
- Research Center with advanced equipment and spacious digital classrooms
- Well-established library
- Separate hostel facilities for boys and girls

PH: 7760751291, 9448252696, 08256-236188 | Email: sdmcnys@gmail.com Website: www.sdmbnys.in

SDM YOGA & NATURE CURE HOSPITAL

SHANTHIVANA, DHARMASTHALA (Accredited by NABH)

A 350-bed hospital with advanced Naturopathy treatments and a full-equipped laboratory. Accommodation options include Villas, Deluxe Rooms, Cottages (AC & Non-AC), Special Cottages, Kuteeras and Special & General Wards.

PH: 9902116277, 9483798277 | Email: shanthivana@shridharmasthala.org Website: www.naturecure.org.in

SDM YOGA & NATURE CURE HOSPITAL

SOWKHYAVANA, PAREEKA, UDUPI (Accredited by NABH)

Spread across 18 acres, it is a 350-bed hospital offering Cottages, Deluxe Rooms, Special Rooms, General Wards and modern Naturopathy Treatment amenities.

PH: 9945801594, 9483932325 | Email: pareeka@shridharmasthala.org Website: naturecurepareeka.com

SDM INSTITUTE OF NATUROPATHY & YOGIC SCIECES, KSHEMAVANA, BENGALURU



Spread across 22 acres of land, it accommodates 400 Guests and has 86 Special Rooms, 30 Deluxe Suites, 16 Cottages and 16 Nests.

PH: 080-47645555, 7625043800, 7625043802
Email: info@kshemavana.com | Website: www.kshemavana.com

ತರಂಗ

•ಸಂಪುಟ 44 •ಸಂಚಿಕೆ 24
ಜೂನ್ 11, 2026

ಪ್ರಕಾಶಕರು
ಡಾ।। ಟಿ. ಸತೀಶ್ ಯು. ಪೈ

ವ್ಯವಸ್ಥಾಪಕ ಸಂಪಾದಕರು
ಡಾ।। ಸಂಧ್ಯಾ ಎಸ್. ಪೈ

ಸಂಪಾದಕರು
ಡಾ। ಯು. ಬಿ. ರಾಜಲಕ್ಷ್ಮೀ

ಸಂಪಾದಕೀಯ ವಿಭಾಗ
ಜಯರಾಮ ಕಾರಂತ
ರೇವತಿ
ಸವಿತಾ ಎನ್. ಹೊಳ್ಳ

ವಿನ್ಯಾಸ ಮತ್ತು ಕಲೆ
ಜೇಮ್ಸ್‌ವಾಜ್
ಸುಬ್ರಹ್ಮಣ್ಯ ಯಾದವ್
ಬಿ. ಗಜೇಂದ್ರ ಆಚಾರ್ಯ

ವಿಳಾಸ
ಮಣಿಪಾಲ ಕಚೇರಿ
'ಉದಯವಾಣಿ' ಕಟ್ಟಡ
ಮಣಿಪಾಲ - 576 104
ಫೋನ್ : (0820) 2205000-4275000
E-mail: taranga@manipalpress.com

ಮುಂಬಯಿ ಕಚೇರಿ
616, ದಲ್‌ಮಾಲ್ ಟವರ್ಸ್
ನರಿಮನ್ ಪಾಯಿಂಟ್
ಮುಂಬಯಿ - 400 021
ಫೋನ್ : (022) 22845248
ಫ್ಯಾಕ್ಸ್: (022) 22851764

ಇಂಟರ್‌ನೆಟ್
http://www.tarangaonline.com

ಮುದ್ರಕರು
ಬಿ. ನರಹರಿ
ಮಣಿಪಾಲ ಟೆಕ್ನಾಲಜೀಸ್ ಲಿಮಿಟೆಡ್
ಹಳೆ ಫಾರ್ಮಸಿ ಕಾಲೇಜು ಕಟ್ಟಡ
ಮಣಿಪಾಲ - 576 104

ತರಂಗಾಂತರಂಗ

ಲೇಖನಗಳು

26 ಶೈಕ್ಷಣಿಕ ಸಾಲ –ಉನ್ನತ ವ್ಯಾಸಂಗಕ್ಕೆ ಭರವಸೆಯ ಬಲ ★ ಎನ್. ಅನಂತನಾಗ್

19 ಸಿದ್ಧರಾಮಯ್ಯ ನಿರ್ಗಮನ
ಹೊಸ ಮುಖ್ಯಮಂತ್ರಿಯೆದುರು ಸಾಲು ಸಾಲು ಸವಾಲು ★ ಆರ್.ಟಿ. ವಿಟ್ಠಲಮೂರ್ತಿ

40 ಟಾಪ್ ಟೆನ್ ಸರಣಿ
ಸಾಂಪ್ರದಾಯಿಕ ಸೊಬಗಿನ ಸುರಸುಂದರ ಉಡುಗೆಗಳು ★ ಚಿನ್ಮಯ್

48 'ಎವರೆಸ್ಟ್ ಮ್ಯಾನ್' ಕಾಮಿ ರೀಟಾ ಶೆರ್ಪಾ
ಅಸಾಮಾನ್ಯ ಸಾಧನೆ ★ ಬಾಲಾಜಿ

54 ಪಿತ್ತಕಲ್ಲು :ಏನು ಕಾರಣ? ಹೇಗೆ ನಿಯಂತ್ರಣ ★ ಡಾ. ಸಿ. ಜಿ. ಕೇಶವಮೂರ್ತಿ

ಕಥೆಗಳು

33 ವಾಂಛೆ ★ ವಿಲಾಸ ನಾ. ಹುದ್ದಾರ

50 ಕೂಪ ಮಂಡೂಕ ★ ಗಾಯತ್ರಿ

ಹಾಸ್ಯ

46 ಬೋರ್ಡ್ ರೀಡಿಂಗ್ ★ಸುಮಾ ರಮೇಶ್

ಧಾರಾವಾಹಿ

16 ಛತ್ರಪತಿ ಶಿವಾಜಿ :ವೀರಗಾಥೆ-24 ★ ತುಕಾರಾಮ್ ಜಿ. ಎಸ್.

22 ನಿಗೂಢ ಲಕೋಟೆ! -10 ★ ಎಸ್.ಜಿ. ಶಿವಶಂಕರ್

56 ಮುಗಿಯದ ಮೌನ -13 ★ ಡಾ. ಆರತಿ ವೆಂಕಟೇಶ್

ಶಬ್ದಶಿಲ್ಪ **25** ಚಿಣ್ಣರ ಲೋಕ **36** ರಾಷ್ಟ್ರರಾಜಕೀಯ **53**
ಭವಿಷ್ಯದರ್ಪಣ **60** ಸೌಖ್ಯ ಸಂವಾದ **62**

ಮುಖಪುಟ ವಿನ್ಯಾಸ : **ಜೇಮ್ಸ್‌ವಾಜ್**

('ತರಂಗ'ದಲ್ಲಿ ಪ್ರಕಟವಾಗುವ ಲೇಖನ, ವಿಚಾರಗಳು, ಕಥೆ - ಕಾದಂಬರಿಗಳಿಗೆಲ್ಲ ಲೇಖಕರೇ ಜವಾಬ್ದಾರರು. - ಸಂಪಾದಕರು)

11-6-2026

ಸಮಯ ಪಾಲನೆಯ ಕಿವಿಮಾತು

ಸರ್ ಎಂ. ವಿಶ್ವೇಶ್ವರಯ್ಯನವರಿಗೆ ಅತೀ ಎನ್ನುವಷ್ಟು ಸಮಯ ಪರಿಪಾಲನೆಯ ಶಿಸ್ತು ಇತ್ತು. ಅವರು ಯಾವುದೇ ಸಭೆ ಸಮಾರಂಭಗಳಿಗೆ, ಕಡೆಗೆ ತಮ್ಮ ಕಚೇರಿಗೆ ಹೋಗುವುದಿದ್ದರೂ ಸಮಯಕ್ಕೆ ಸರಿಯಾಗಿ ಹೋಗುತ್ತಿದ್ದರು. ಮಾತ್ರವಲ್ಲ, ಬೇರೆಯವರು ಇದನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು ಎಂದು ಬಯಸುತ್ತಿದ್ದರು. ಇದರ ಬಗ್ಗೆ ಹಲವು ಕಥೆಗಳಿವೆ.

ಅವರು ಪ್ರತೀವರ್ಷ ಆ ವರ್ಷದ ಇಂಟರ್ಮೀಡಿಯೇಟ್ ಪರೀಕ್ಷೆಯಲ್ಲಿ ಪ್ರಥಮ ರ್ಯಾಂಕ್ ಬಂದ ವಿದ್ಯಾರ್ಥಿಯನ್ನು ಊಟಕ್ಕೆ ಕರೆಯುತ್ತಿದ್ದರು. ಸರ್ ಎಂ. ವಿಶ್ವೇಶ್ವರಯ್ಯನವರ ಆಹ್ವಾನ ಎಂಬುದು ಆ ಕಾಲದಲ್ಲಿ ದೊಡ್ಡ ಗೌರವವಾಗಿತ್ತು. ತಮ್ಮ ಪಕ್ಕದಲ್ಲಿಯೇ ಕುಳ್ಳಿರಿಸಿಕೊಂಡು, ಉಪಚಾರ ಮಾಡಿ ತಿನ್ನಿಸುತ್ತಿದ್ದರು. ಆನಂತರ ಒಂದು ಕವರಿನಲ್ಲಿ ನೂರುರೂಪಾಯಿ ಉಡುಗೊರೆ ನೀಡುತ್ತಿದ್ದರು. ನೂರು ರೂಪಾಯಿ ಆ ಕಾಲದಲ್ಲಿ ದೊಡ್ಡ ಮೊತ್ತವಾಗಿತ್ತು. ಒಂದು ಪವನ್ನು ಎಂದರೆ, ಎಂಟುಗ್ರಾಂ ಚಿನ್ನಕ್ಕೆ ಅರುವತ್ತು ರೂಪಾಯಿ ಇದ್ದ ಕಾಲವಾಗಿತ್ತದು. ಇಂದು ಅದೇ ಪವನ್ನಿಗೆ ಒಂದು ಲಕ್ಷದ ಮೂವತ್ತು ಸಾವಿರ ರೂ. !

ಒಂದು ವರುಷ ಹೀಗೆ ರ್ಯಾಂಕ್ ಬಂದ ವಿದ್ಯಾರ್ಥಿಗೆ ಆಹ್ವಾನ ಹೋಯಿತು. "ನಿನಗೆ ರ್ಯಾಂಕ್ ಬಂದ ವಿಷಯ ತಿಳಿದು ಸಂತೋಷವಾಯಿತು. ನಾಳೆ ರಾತ್ರಿ ಎಂಟುಗಂಟೆಗೆ ಸರಿಯಾಗಿ ನನ್ನ ಮನೆಗೆ ಊಟಕ್ಕೆ ಬರಬೇಕು. ಒಟ್ಟಿಗೆ ಕುಳಿತು ಊಟ ಮಾಡೋಣ. ಕಾಯುತ್ತಿರುತ್ತೇನೆ. ಮುಂದಿನದು ಭೇಟಿಯಾದಾಗ" ಎಂದಿತ್ತು ಆಹ್ವಾನದಲ್ಲಿ. ಮಾರನೆಯ ದಿನ ಎಂಟು ಹೊಡೆಯುತ್ತಿರುವಾಗ ವಿಶ್ವೇಶ್ವರಯ್ಯನವರು ಕೋಣೆಯಿಂದ ಹೊರಗೆ ಬಂದರು. ಭೋಜನಶಾಲೆಯಲ್ಲಿ ಮೇಜಿನ ಮೇಲೆ ಎರಡು ಕುಡಿ ಎಲೆ ಹಾಕಿತ್ತು.

ವಿಶ್ವೇಶ್ವರಯ್ಯನವರು ತಮ್ಮ ಸ್ಥಾನದಲ್ಲಿ ಕುಳಿತು "ಹುಡುಗ ಬರಲಿಲ್ಲವೇನು?" ಎಂದರು. ಆಡುಗೆಯವ ತಲೆ ಅಲ್ಲಾಡಿಸಿ "ಇಲ್ಲ ಸ್ವಾಮೀ" ಎಂದ. "ಸರಿ, ನನಗೆ ಬಡಿಸು" ಎಂದರು. ಆಡುಗೆಯವ ಇವರಿಗೆ ಬಡಿಸಿದ, ಇವರು ಉಂಡರು. ಸರಿಯಾಗಿ ಎಂಟು ಹದಿನೈದು ಹೊಡೆಯುತ್ತಿರುವಂತೆ ಇವರು ಊಟ ಮುಗಿಸಿ ಕೈತೊಳೆಯಲು ಏಳುತ್ತಿರುವಂತೆ, ಹುಡುಗ ಒಳಗೆ ಬಂದ! ಹುಡುಗ ಅವರು ಉಂಡ ಎಲೆ ಮತ್ತು ಕೈತೊಳೆದುಕೊಳ್ಳುವುದನ್ನು ನೋಡಿದ. ಅವನ ಮುಖ ಕಳೆಗುಂದಿತು. ಅವನು ತೊದಲುತ್ತಾ ತಾನು ತಡವಾಗಿ ಬಂದ ಕಾರಣ ವಿವರಿಸತೊಡಗಿದಂತೆ "ಹೊತ್ತಾಗಿದೆ. ಮೊದಲು ಊಟಮಾಡು. ಹೋಗುವ ಮೊದಲು ನನ್ನನ್ನು ಕಂಡು ಹೋಗು" ಎಂದು ಹೇಳಿ ತಮ್ಮ ಅಭ್ಯಾಸದ ಕೋಣೆಗೆ ಹೊರಟು ಹೋದರು.

ಆಡುಗೆಯವ ಬಡಿಸಿದ. ಹುಡುಗ ಮುಜುಗರ ಪಡುತ್ತಾ ಹಿಂಜರಿಯುತ್ತ ಉಂಡ. ಆನಂತರ ವಿಶ್ವೇಶ್ವರಯ್ಯನವರನ್ನು ಕಾಣಲು ಹೋದ. ಅವರು ಮುಗುಳು ನಗುತ್ತಾ "ಹೊಟ್ಟೆ ತುಂಬಾ ಉಂಡಿಯೋ ಇಲ್ಲವೋ?" ಎಂದು ಕೇಳಿದರು. ಇವನಿಗೆ ಸ್ವಲ್ಪ ಸಮಾಧಾನವಾಯಿತು. ಇವರು ಕೋಪಗೊಂಡಿಲ್ಲ ಎಂಬುದೇ ಆ ಸಮಾಧಾನಕ್ಕೆ ಕಾರಣ! ಇವರು "ಸಂತೋಷ, ಈ ಕವರಿನಲ್ಲಿ ಎಪತ್ತೈದು ರೂಪಾಯಿಗಳಿವೆ. ರ್ಯಾಂಕ್ ಬಂದ ವಿದ್ಯಾರ್ಥಿಗೆ ನಾನು ಪ್ರತೀವರ್ಷ ಸಹಭೋಜನದೊಂದಿಗೆ ನೂರು ರೂಪಾಯಿಯನ್ನು ಬಹುಮಾನವಾಗಿ ನೀಡುವುದು ವಾಡಿಕೆ. ಆದರೆ ನೀನು ಹದಿನೈದು ನಿಮಿಷ ತಡಮಾಡಿ ಬಂದೆ. ಆದುದರಿಂದ ಇಪ್ಪತ್ತೈದು ರೂಪಾಯಿ ಕಡಿತವಾಗಿದೆ. ಮೂವತ್ತು ನಿಮಿಷವಾದರೆ ಐವತ್ತು. ತೀರಾ ತಡವಾದರೆ ಪೂರ್ತಿ ನೂರು ರೂಪಾಯಿ ಕಡಿತವಾಗುತ್ತದೆ" ಎಂದರು.

" ನಿನ್ನ ಬದುಕಿನ ಈ ಹಂತದಲ್ಲಿ ಓದಿನಲ್ಲಿ ಮುಂದಿರುವುದು ಅಗತ್ಯ. ಹಾಗೆಯೇ ಶಿಸ್ತು, ಸಮಯ ಪಾಲನೆಯನ್ನು ಅಳವಡಿಸಿಕೊಳ್ಳುವುದೂ ಅಷ್ಟೇ ಮುಖ್ಯ. ಸಮಯದ ಸದುಪಯೋಗದೊಂದಿಗೆ, ಬೇರೆಯವರ ಸಮಯಕ್ಕೂ ಬೆಲೆ ಇದೆ ಎಂಬುದನ್ನು ಅರ್ಥಮಾಡಿಕೊಳ್ಳಬೇಕು, ಮತ್ತೆ ಅದಕ್ಕೆ ಪ್ರಾಮುಖ್ಯತೆ ನೀಡಬೇಕು. ಯಾವ ಕಾರಣಕ್ಕೂ ಇದನ್ನು ಮರೆಯಬಾರದು, ಎಲ್ಲಿ ಹೋಗುವುದಿದ್ದರೂ ಐದು ನಿಮಿಷ ಮುಂಚಿತವಾಗಿ ಹೋಗುವುದೇ ಉತ್ತಮ " ಎಂದರು.

ಕಾಲ ಯಾರಿಗೂ ಯಾವ ಕಾರಣಕ್ಕೂ ಕಾಯುವುದಿಲ್ಲ. ಅದು ನಿರಂತರವಾಗಿ ಸಾಗುತ್ತಲೇ ಇರುತ್ತದೆ. ಯಾವ ಕಾರಣಕ್ಕೂ ಅದು ಮರಳಿ ಬರುವುದಿಲ್ಲ. ಆದುದರಿಂದ ನಮ್ಮ ಈ ಚಿಕ್ಕ ಜೀವಮಾನದ ಪ್ರತೀಕ್ಷಣವನ್ನು ಸದುಪಯೋಗಪಡಿಸಿಕೊಳ್ಳಬೇಕು! ಎನ್ನುತ್ತಾರೆ ನಮ್ಮ ಪ್ರಾಚೀನರು!

ಸಂಧ್ಯಾ ಪೈ

(ವ್ಯವಸ್ಥಾಪಕ ಸಂಪಾದಕರು)

ಭಯಾನಕ ಪ್ರತೀಕಾರ

ಅಧ್ಯಾಯ 24

❑ ತುಕಾರಾಮ್ ಜಿ. ಎಸ್.

ಶಹಾಜಿ ತೀರಿಕೊಂಡಾಗ ಜೀಜಾಬಾಯಿ ಸಹಗಮನ ಮಾಡಲು ನಿರ್ಧರಿಸಿದಳು. ಅವಳ ಆಗ್ರಹದ ಮೇಲೆ ರಾಯಗಢದಲ್ಲಿ ಚಿತೆ ತಯಾರಾಯಿತು. ಜೀಜಾಬಾಯಿ ಚಿತೆಯೇರಲು ತಯಾರಾದಳು. ಯಾರೇನು ಹೇಳಿದರೂ ತನ್ನ ನಿರ್ಧಾರ ಬದಲಿಸಲಿಲ್ಲ.

ಕೊನೆಯಲ್ಲಿ ಶಿವಾಜಿ ಅವಳ ಕಾಲಿಗೆ ಬಿದ್ದ. ''ಆಯಿ ಸಾಹೇಬ್, ನನ್ನ ಬುದ್ಧಿ ನೀನು, ಚೈತನ್ಯ ನೀನು, ಪ್ರೇರಣೆ ನೀನು. ನನ್ನ ಸ್ವರಾಜ್ಯದ ಮಾತೆ ನೀನು. ನೀನೇ ನಮ್ಮನ್ನು ಬಿಟ್ಟುಹೋದರೆ ನಮಗೆ ದಿಕ್ಕು ತೋರಿಸುವವರು ಯಾರು? ಪರಕೀಯರ ಪೈಶಾಚಿಕ ನೃತ್ಯದಲ್ಲಿ ನಮ್ಮವರು ಸಾಯುತ್ತಿದ್ದಾರೆ, ಅಸಂಖ್ಯ ತಾಯಂದಿರು ವಿಧವೆಯರಾಗುತ್ತಿದ್ದಾರೆ. ಇವರೆಲ್ಲರ ರಕ್ಷಣೆಗಾಗಿ ನನ್ನನ್ನು ಹೋರಾಟಕ್ಕೆ ಇಳಿಸಿದವಳು ನೀನು. ನೆಲ ಮತ್ತು ಧರ್ಮದ ರಕ್ಷಣೆಗಾಗಿ ಸ್ವರಾಜ್ಯ ಕಟ್ಟಲು ನನಗೆ ದೀಕ್ಷೆ ನೀಡಿದವಳು ನೀನು. ಈಗ ನೀನೇ ನನ್ನನ್ನು ಬಿಟ್ಟು ಹೋಗುತ್ತೀಯಾ? ನೀನಿಲ್ಲದೆ ಸ್ವರಾಜ್ಯ ಹೇಗೆ ಸಾಧ್ಯ ಅಮ್ಮ? ನಿನಗೆ ನನ್ನ ಆಣೆ, ನನ್ನ ಸ್ವರಾಜ್ಯದ ಆಣೆ. ಸ್ವರಾಜ್ಯ ಸ್ಥಾಪನೆಯಾಗುವ ತನಕ ನೀನು ನನ್ನ ಬೆಂಗಾವಲಾಗಿ ಇರಬೇಕು'' ಎಂದು ದುಂಬಾಲು ಬಿದ್ದ.

ಮಗ ಆಣೆ ಹಾಕಿದ ಕಾರಣ ಜೀಜಾಬಾಯಿಯ ನಿರ್ಧಾರ ಕೊನೆಗೂ ಸಡಿಲವಾಯಿತು. ''ಸರಿ ಮಗು. ಇನ್ನು ನನ್ನ ಬದುಕು ನಿನ್ನ ಸ್ವರಾಜ್ಯಕ್ಕಾಗಿ ಮೀಸಲು. ಅದಕ್ಕಾಗಿ ಜೀವ ಹಿಡಿದುಕೊಂಡಿರುತ್ತೇನೆ'' ಎಂದಳು.

ಶಹಾಜಿಯ ಅವಸಾನದ ಬಳಿಕ ಶಿವಾಜಿಯ ಸ್ಥಾನಮಾನ ಬದಲಾಯಿತು. ಅವನನ್ನು 'ರಾಜ' ಎಂದು ಕರೆಯಲಾಯಿತು. ಬಳಿಕ ಶಿವಾಜಿ ತನ್ನದೇ ಹೆಸರಿನಲ್ಲಿ ನಾಣ್ಯಗಳನ್ನು ಮುದ್ರಿಸಲು ಆರಂಭಿಸಿದ.

ಸೂರತ್‌ನ ಸೂರೆಯ ಸುದ್ದಿಯಿಂದ ಮೊದಲೇ ಕೆಂಡವಾಗಿದ್ದ ಔರಂಗಜೇಬ ಶಿವಾಜಿ ನಾಣ್ಯಗಳನ್ನು ಮುದ್ರಿಸಿದ ವರದಿ ಕೇಳಿ ಉರಿಯತೊಡಗಿದ. ''ನೀನು ಔರಂಗಾಬಾದ್‌ನಲ್ಲಿ ಕುಳಿತು ಏನು ಮಾಡುತ್ತಿದ್ದೀ? ಶಿವಾಜಿಯನ್ನು ಮಧ್ಯಭಾರತದಿಂದ ತೊಲಗಿಸಲು ತಯಾರಿ ಮಾಡು'' ಎಂದು ಮಗ ಶಾಹಜಾದಾ ಮುಅಜಮ್‌ಗೆ ಸಂದೇಶ ಕಳಿಸಿದ.

★ ★ ★

ಅಮ್ಮನಿಗೆ ಸ್ವರಾಜ್ಯದ ಆಣೆ ಕೊಟ್ಟು ಶಿವಾಜಿ ಸುಮ್ಮನಿರುವಂತಿರಲಿಲ್ಲ. ಅವನ ಸೇನೆ ದಿಗ್ವಿಜಯಕ್ಕೆ ತಯಾರಿ ಆರಂಭಿಸಿತು. ಸೂರತ್‌ನಿಂದ ತಂದ ಅಶ್ವಗಳು ಮತ್ತು ಅಗಾಧ ಸಂಪತ್ತು ಉಪಯೋಗಕ್ಕೆ ಬಂದವು.

ಅವನ ಸೇನೆಯಲ್ಲಿ ಮಾವಳಿ ವೀರರು ಮಾತ್ರವೇ ಅಲ್ಲ, ಭಿಲ್ಲ, ಗೊಂಡ, ಕೋಳಿ ಯೋಧರೂ ಸೇರಿಕೊಂಡಿದ್ದರು. ಈ ಪಡೆಯ ಪ್ರತಿಯೊಬ್ಬ ಸೈನಿಕನೂ ನಿಷ್ಠಾವಂತನಾಗಿದ್ದ ಶಿವಾಜಿಗಾಗಿ ಪ್ರಾಣ ಕೊಡಲು ತಯಾರಾಗಿದ್ದ.

ರಾಯಗಢದ ಮಗ್ಗುಲಲ್ಲೇ ಒಂದು ಮುಳ್ಳು ಚುಚ್ಚುತ್ತಿತ್ತು. ಅದನ್ನು ಮೊದಲು ನಿವಾರಿಸುವುದು ಅಗತ್ಯವಾಗಿತ್ತು. ಶಿವಾಜಿ ಅದರತ್ತ ಗಮನ ಹರಿಸಿದ.

ರಾಯಗಢಕ್ಕೆ ಸಮೀಪದ ಕೊಂಡಾಣ ಕೋಟೆಯ ಮೇಲೆ ಮೊಘಲ್ ಸರದಾರ ಜಸ್ವಂತ್‌ಸಿಂಗ್ 1663ರ ನವೆಂಬರ್‌ನಲ್ಲಿ ಮುತ್ತಿಗೆ ಹಾಕಿದ್ದ. ಆಗ ಅದನ್ನು ಎದುರಿಸಲು ಸಮಯ ಸೂಕ್ತವಾಗಿರಲಿಲ್ಲ. ಶಿವಾಜಿ ಅಲ್ಲಿಂದ ಕೇವಲ ಮೂರು ಕೋಸು ದೂರದಲ್ಲಿ ತನ್ನ ಸೇನೆಯನ್ನು ಸೂರತ್‌ಗೆ ಒಯ್ದಿದ್ದ. ಸೂರತ್ ಪಟ್ಟಣವನ್ನು ಕೊಳ್ಳೆ ಹೊಡೆದ ಬಳಿಕ ಬೇರೊಂದು ದಾರಿಯಲ್ಲಿ 1664, ಫೆಬ್ರವರಿ 5ರಂದು ರಾಯಗಢಕ್ಕೆ ಮರಳಿದ.

ಶಿವಾಜಿ ಕೊಂಡಾಣಕ್ಕೆ ಬೇಹುಗಾರರನ್ನು ಕಳಿಸಿದ. ಅವರು ಜಸ್ವಂತ್‌ಸಿಂಗ್‌ನ ಸೇನೆಯ ಸುತ್ತ ತಿರುಗಿ, ಅದರ ಬಲಾಬಲಗಳ ಬಗ್ಗೆ ರಾಯಗಢಕ್ಕೆ ವರದಿ ತಂದರು.

''ಕೊಂಡಾಣ ತಲೆ ಬಾಗುವುದಿಲ್ಲ, ಅದನ್ನು ಮುರಿಯಲು ಮೊಘಲ್ ಸೇನೆಗೆ ಸದ್ಯಕ್ಕೆ ಸಾಧ್ಯವಿಲ್ಲ'' ಎಂದು ಬೇಹುಗಾರರು ಹೇಳಿದರು. ''ಮೊಘಲರಿಗೆ ಒಂದಿಷ್ಟು ಚುರುಕು ಮುಟ್ಟಿಸಬೇಕು. ನೇತೋಜಿ ಪಾಲ್ಕರ್‌ನನ್ನು ಕಳಿಸಿ. ಅದರ ಬೆನ್ನಿಗೇ ನಮ್ಮ ಆಕ್ರಮಣ ತಯಾರಾಗಲಿ'' ಎಂದು ಶಿವಾಜಿ ಹೇಳಿದ.

ಈ ಸುದ್ದಿ ಜಸ್ವಂತ್‌ಸಿಂಗ್‌ಗೆ ತಿಳಿಯಿತು. ತಿಂಗಳುಗಟ್ಟಲೆ ಕಳೆದರೂ ಕೊಂಡಾಣ ಶರಣಾಗುವ ಲಕ್ಷಣ ಕಾಣಿಸಿರಲಿಲ್ಲ. ಇನ್ನೊಂದು ದಿಕ್ಕಿನಿಂದ ಶಿವಾಜಿಯ ಸೇನೆ ಬಂದರೆ, ಇನ್ನಷ್ಟು ತೊಂದರೆ ಎದುರಿಸಬೇಕಾದೀತು ಎಂದು ಜಸ್ವಂತ್‌ಸಿಂಗ್ ಯೋಚಿಸಿದ. ಶಿವಾಜಿ ಬರುವ ಮೊದಲೇ ಹೇಗಾದರೂ ಸೆಣಸಿ ಕೋಟೆಯನ್ನು ವಶಪಡಿಸಿಕೊಳ್ಳಬೇಕೆಂದು ಯೋಚಿಸಿ ತುರ್ತಾಗಿ ಕೋಟೆಯ ಮೇಲೆ 'ಸುಲ್ತಾನ್‌ಧಾವಾ' (ದೊಡ್ಡಪ್ರಮಾಣದ ನೇರ ದಾಳಿ) ಹೂಡಿದ.

ಅಷ್ಟರಲ್ಲಿ ನೇತೋಜಿಯ ಅಶ್ವಾರೋಹಿಗಳು ಅಲ್ಲಿಗೆ ತಲಪಿದ್ದರು.

ಜಸ್ವಂತ್‌ಸಿಂಗ್ ಎಲ್ಲ ಬಲವನ್ನು ಕೂಡಿಸಿ ಕೋಟೆಯ ಮೇಲೆ ಆಕ್ರಮಣ ಮಾಡಿದ. ಅದೇ ಸಮಯದಲ್ಲಿ ಅವನ ಹಿಂದೆ ಒಂದು ಅನಾಹುತ ನಡೆಯಿತು. ಕೋಟೆಯ ತಳದಲ್ಲಿ ಅವನ ಸೇನೆ ಪೇರಿಸಿದ್ದ ಮದ್ದುಗುಂಡುಗಳ ದಾಸ್ತಾನಿಗೆ ಬೆಂಕಿ ಬಿತ್ತು. ಮದ್ದುಗುಂಡುಗಳು ಭಾರೀ ಶಬ್ದದೊಡನೆ ಆಕಾಶದೆತ್ತರಕ್ಕೆ ಸಿಡಿಯತೊಡಗಿದವು. ಅದರ ಕಾವಲಿಗೆ ನಿಂತಿದ್ದ ನೂರಾರು ಸೈನಿಕರು ಸ್ಥಳದಲ್ಲೇ ಸುಟ್ಟು ಬಿದ್ದರು.

ಈ ಭಯಾನಕ ಹೊಡೆತಕ್ಕೆ ಮೊಘಲ್ ಸೈನಿಕರ ಜಂಘಾಬಲವೇ ಉಡುಗಿತು. ಅವರು ಕಂಗೆಟ್ಟು ನಿಂತಿರುವಾಗಲೇ ಕೋಟೆಯ ಮೇಲಿನಿಂದ ತೋಪುಗಳು ಸಿಡಿದವು. ತೋಪಿನ ಗುಂಡುಗಳು ಎರಗಿದ ಜಾಗದಲ್ಲಿ ಮೊಘಲ್ ಯೋಧರು ಮಿಡತೆಗಳಂತೆ ಸತ್ತು ಬಿದ್ದರು.

ಆಗಲೇ ಕೋಟೆಯ ಹೆಬ್ಬಾಗಿಲು ತೆರೆಯಿತು. ಕೋಟೆಯಿಂದ ಹೊರಬಿದ್ದ ಮರಾಠಾ ಸೈನಿಕರು ಜಸ್ವಂತ್‌ಸಿಂಗ್‌ನ ಸೇನೆಯ ಮೇಲೆ ಮುಗಿಬಿದ್ದರು. ಮೊದಲೇ ಕಂಗಾಲಾಗಿದ್ದ ಮೊಘಲ್ ಸೈನಿಕರಲ್ಲಿ ಮರಾಠರ ವೀರಾವೇಶದ ಆಕ್ರಮಣವನ್ನು ಎದುರಿಸುವ ಶಕ್ತಿ ಉಳಿದಿರಲಿಲ್ಲ. ಕೊಂಡಾಣ ಬೆಟ್ಟದ ಇಳಿಜಾರಿನಲ್ಲಿ ಮೊಘಲ್ ಸೈನಿಕರ ರಕ್ತದೋಕುಳಿ ಹರಿಯಿತು.

ಜಸ್ವಂತ್‌ಸಿಂಗ್ ಹೇಗೋ ಪ್ರಾಣ ಉಳಿಸಿಕೊಂಡು, ಉಳಿದುಳಿದ ಸೇನೆಯೊಡನೆ ಪರಾರಿಯಾದ. ಔರಂಗಾಬಾದ್‌ಗೆ ಹೋಗಿ ಸುಬೇದಾರ ಶಾಹಜಾದಾ ಮುಅಜಮ್‌ಗೆ ವರದಿ ಒಪ್ಪಿಸಿದ.

ಶಾಹಜಾದಾ ಮುಅಜಮ್‌ಗೆ ಸೂರತ್‌ನ ಸೂರೆಯ ಸುದ್ದಿ ಸಿಕ್ಕಿತು. ಆಗಲೂ ಅವನು ವಿಚಲಿತನಾಗಿರಲಿಲ್ಲ. ಜಸ್ವಂತ್‌ಸಿಂಗ್ ಕೊಂಡಾಣದ ಸೋಲಿನ ಬಗ್ಗೆ ವರದಿ ಒಪ್ಪಿಸಿದಾಗಲೂ ಮದ್ಯ ಹಿಡಿದಿದ್ದ ಅವನ ಕೈ ನಡುಗಲಿಲ್ಲ, ಅವನ ಕುಡಿತ, ನೃತ್ಯಗಳ ಮೋಜಿಗೆ ಯಾವ ತಡೆಯೂ ಬೀಳಲಿಲ್ಲ.

ಜಸ್ವಂತ್‌ಸಿಂಗ್‌ನ ಸೋಲಿನ ವರದಿ ದಿಲ್ಲಿಗೂ ತಲಪಿತು. ಔರಂಗಜೇಬನಿಗೆ ಒಂದರ ಹಿಂದೆ ಇನ್ನೊಂದರಂತೆ ಕೆಟ್ಟ ಸುದ್ದಿಗಳು. ಅವನು ಶಿವಾಜಿಯನ್ನು ಸದೆಬಡಿಯಲು ಏನಾದರೂ ಮಾಡಲೇಬೇಕಿತ್ತು. ಹೀಗಾಗಿ ಜೈಸಿಂಗ್‌ನನ್ನು ಕರೆಸಿದ.

ಮಧ್ಯಭಾರತದಲ್ಲೊಂದು ಉತ್ಪಾತ ನಡೆಯಲು ಕಾಲ ಸಮೀಪಿಸಿತ್ತು.

★ ★ ★

ಕೊಂಡಾಣದ ಕೋಟೆಯ ಮೇಲಿನ ಮುತ್ತಿಗೆಯಿಂದ ಬಿಡುಗಡೆಯಾಗುತ್ತಲೇ ಶಿವಾಜಿ ಅಲ್ಲಿಗೆ ಭೇಟಿ ನೀಡಿದ. ಕೊಂಡಾಣದಿಂದ ಅವನ ಗಮನ ಕೊಂಕಣದತ್ತ ಹರಿಯಿತು.

ಅಲ್ಲಿ ಆದಿಲ್‌ಶಾಹಿ ನೆಲೆಗಳ ಮೇಲೆ ದಾಳಿ ಮಾಡಲು ನೇತೋಜಿಯನ್ನು ಕಳಿಸಿದ. ಉತ್ತರಕ್ಕೆ ತಾನೇ ಸೇನೆಯನ್ನು ಒಯ್ದು, ಮೊಘಲರ ನೆಲೆಗಳ ಮೇಲೆ ಆಕ್ರಮಣ ಮಾಡಿದ.

ಬಿಜಾಪುರದ ಸುಲ್ತಾನ ಕೊಂಕಣದಲ್ಲಿ ಶಿವಾಜಿಯ ಜೈತ್ರಯಾತ್ರೆಯನ್ನು ತಡೆಯಲು ಸಿದ್ಧಿ ಅಜೀಜ್ ಖಾನ್ ಎಂಬ ಸರದಾರನನ್ನು ಸೇನೆಯೊಡನೆ ಕಳಿಸಿದ. ಇವನ ಸೇನೆ ಕುಡಾಲ್‌ನ ಸಮೀಪ ಒಂದೆಡೆ ತಂಗಿತ್ತು. ಸೈನಿಕರು ಅಲ್ಲಿನ ಹಳ್ಳಿಗರನ್ನು ಲೂಟಿ ಹೊಡೆದು ರಾತ್ರಿಯ ಔತಣ ನಡೆಸಿದರು. ಅಫ್ಜೀಜ್ ಖಾನ್ ಭೋಜನ ಮುಗಿಸಿ ಡೇರೆಯಲ್ಲಿ ಮಲಗಿದವನು ಮುಂಜಾನೆ ಮತ್ತೆ ಏಳಲಿಲ್ಲ.

ಸಿದ್ಧಿ ಅಫ್ಜೀಜ್‌ಗೆ ಶಿವಾಜಿಯ ಜನರು ವಿಷಪ್ರಾಶನ ಮಾಡಿದ್ದರು, ಅದಕ್ಕೇ ಸತ್ತುಹೋದ ಎಂದು ರಾಜಾಪುರದಲ್ಲಿ ಫ್ಯಾಕ್ಟರಿ ಕಟ್ಟಿಕೊಂಡಿದ್ದ ಆಂಗ್ಲರು ಸುದ್ದಿ ಹರಡಿದರು. ಈ ಸುದ್ದಿ ಬಿಜಾಪುರಕ್ಕೆ ತಲಪಿತು.

''ನೀವು ಇಷ್ಟೊಂದು ವೀರ ಸರದಾರರು ಇದ್ದೀರಿ. ಈ ಶಿವಾಜಿಯನ್ನು ಹಿಡಿಯುವ ಸಾಹಸಿ ನಿಮ್ಮಲ್ಲಿ ಯಾರೂ ಇಲ್ಲವೆ?'' ಎಂದು ಆದಿಲ್‌ಶಾ ಸಭೆಯಲ್ಲಿ ಕೇಳಿದ.

ಎಲ್ಲರೂ ಮುಖಮುಖ ನೋಡಿದರು. 'ಶಿವಾಜಿ ಮನುಷ್ಯನಲ್ಲ, ಪಿಶಾಚಿ' ಎಂದೇ ಸುದ್ದಿ ಹರಡಿತು. ಅಫ್ಜಲ್‌ಖಾನ್, ಶೈಸ್ತಾಖಾನ್‌ರಂಥ ಮಹಾವೀರರೇ ಶಿವಾಜಿಯ ಮುಂದೆ ಸೋತು ಹೋಗಿದ್ದರು.

ಅವನ ವಿರುದ್ಧ ಸೇನೆ ಒಯ್ಯುವ ಧೈರ್ಯ ಯಾವ ಸರದಾರನಿಗೂ ಇರಲಿಲ್ಲ.

ಆದಿಲ್‌ಶಾ ಬಂಗಾರದ ತಟ್ಟೆಯಲ್ಲಿ ರಣವೀಳ್ಯ ಇರಿಸಿ ಸಭಿಕರಿಗೆ ಆಹ್ವಾನ ನೀಡಿದ. ''ಈ ಕಾಫಿರ್‌ನ ಸೊಕ್ಕು ಅಡಗಿಸುವ ತಾಕತ್ತು ಯಾರಿಗಿದೆ ಹೇಳಿ? ಇದು ಧರ್ಮಕಾರ್ಯ. ಗೆದ್ದವರಿಗೆ ಶಿವಾಜಿಯ ಎಲ್ಲ ಜಾಗ ಜಾಗೀರಾಗಿ ಕೊಡುತ್ತೇನೆ, ಪ್ರಯತ್ನ ಮಾಡಿ. ಸತ್ತರೆ ನಿಮಗಾಗಿ ಜನ್ನತ್ ಕಾದಿರುತ್ತದೆ'' ಎಂದ.

ಖಿವಾಸ್‌ಖಾನ್ ಎಂಬ ಸರದಾರ ಮುಂದೆ ಬಂದು ವೀಳ್ಯ ಎತ್ತಿಕೊಂಡ.

ಆದಿಲ್‌ಶಾ ಅವನಿಗೆ ತನ್ನ ಪಟ್ಟದ ಕತ್ತಿಯನ್ನು ಕೊಟ್ಟು ಸನ್ಮಾನ ಮಾಡಿದ. ''ಬೇಗ ಹೋಗಿ, ಆ ಬೆಟ್ಟದ ಕೋತಿಯ ತಲೆ ಕತ್ತರಿಸಿ ತಾ'' ಎಂದ.

ಖಿವಾಸ್‌ಖಾನ್‌ನ ನೇತೃತ್ವದಲ್ಲಿ ಬಿಜಾಪುರದ ಸೇನೆ ತಯಾರಾಯಿತು. ಆದಿಲ್‌ಶಾನ ಆಣತಿಯ ಮೇಲೆ ಸಿದ್ಧಿ ಸರ್ವರ್, ಶೇಖ್ ಮೀರನ್ ಮುಂತಾದ ಸರದಾರರು ಈ ಸೇನೆಯೊಡನೆ ಸೇರಿಕೊಂಡರು. ಬಿಜಾಪುರದ ನಂಬಿಕೆಯ ಬಂಟ ಬಾಜಿ ಘೋರ್ಪಡೆ ಆಗ ಕರ್ನಾಟಕದಲ್ಲಿದ್ದ. ಅವನು ಕೂಡಲೇ ಬಂದು ಖಿವಾಸ್‌ಖಾನ್‌ನ ಸೇನೆ ಸೇರಿಕೊಳ್ಳಬೇಕು ಎಂದು ಆದಿಲ್‌ಶಾ ಓಲೆ ಕಳಿಸಿದ.

ಆದಿಲ್‌ಶಾನ ಆಣತಿಯಂತೆ ತಂಜಾವೂರಿನಿಂದ ಬಂದ ಒಬ್ಬ ಮರಾಠಾ ವೀರ ಕೂಡ ಇವರೆಲ್ಲರ ಜೊತೆಗೆ ಸೇರಿಕೊಂಡ. ಅವನೇ ಏಕೋಜಿ ರಾಜೇಭೋಂಸ್ಲೆ, ಶಿವಾಜಿಯ ತಮ್ಮ! ಆದರೆ ಖಿವಾಸ್ ಖಾನ್ ಅವನನ್ನು ತನ್ನ ಜೊತೆಗೆ ಸೇರಿಸಿಕೊಳ್ಳಲಿಲ್ಲ. ಯುದ್ಧದ ನಡುವೆ ಸೋದರರು ಒಂದಾಗಿ ಸೇರಿಕೊಂಡರೆ ತನಗೇ ಕುತ್ತು ಎಂದು ಅವನಿಗೆ ಭಯವಿತ್ತು.

ಖಿವಾಸ್‌ಖಾನ್ ಭಾರೀ ಅವಸರದಲ್ಲಿ ಕೊಂಕಣಕ್ಕೆ ದಂಡಯಾತ್ರೆ ಆರಂಭಿಸಿದ. ಶಿವಾಜಿಗೆ ಸುದ್ದಿ ತಿಳಿಯುವ ಮೊದಲೇ ಆಕ್ರಮಣ ಮಾಡಬೇಕು ಎಂಬುದು ಅವನ ಹುನ್ನಾರ. ಕುಡಾಲ್ ಬಳಿ ಬಾಜಿ ಘೋರ್ಪಡೆಯ ಸೇನೆ ಅವನ ಜೊತೆಗೆ ಸೇರಿಕೊಳ್ಳುತ್ತದೆ ಎಂದು ನಿರ್ಧರಿಸಲಾಗಿತ್ತು.

ಖಿವಾಸ್‌ಖಾನ್ ಬೆಳಗಾವಿ ದಾಟಿ ಸಹ್ಯಾದ್ರಿಯ ನಡುವೆ ಒಂದು ಗುಡ್ಡಗಾಡಿನ ಪ್ರದೇಶದಲ್ಲಿ ಡೇರೆ ಹೂಡಿದ. ಬಯಲು ಭೂಮಿಯಲ್ಲಿ ಡೇರೆ ಹಾಕುವ ಬದಲು ಗುಡ್ಡಗಾಡಿನಲ್ಲಿದ್ದರೆ ಸೇನೆ ಯಾರ ಕಣ್ಣಿಗೂ

ಬೀಳುವುದಿಲ್ಲ ಎಂಬುದು ಅವನ ಲೆಕ್ಕಾಚಾರವಾಗಿತ್ತು.

ಈ ಲೆಕ್ಕಾಚಾರವೇ ಅವನಿಗೆ ಮುಳುವಾಗಿತ್ತು.

ಅವನು ಎಷ್ಟು ಜಾಗರೂಕತೆಯಲ್ಲಿದ್ದರೂ ಶಿವಾಜಿಗೆ ಅದಾಗಲೇ ಖಿವಾಸ್‌ಖಾನ್‌ನ ಸೇನೆಯ ಸುದ್ದಿ ತಲಪಿತ್ತು. ಅವನನ್ನು ಸೇರಿಕೊಳ್ಳಲು ಬಾಜಿ ಘೋರ್ಪಡೆ ಬರುತ್ತಿರುವ ವಿಷಯವೂ ತಿಳಿಯಿತು.

ದಾರಿಯಲ್ಲಿ ಬಾಜಿ ಘೋರ್ಪಡೆ ತನ್ನ ಊರಿನಲ್ಲಿ ಒಂದು ದಿನ ತಂಗಲಿದ್ದಾನೆ ಎಂದು ಸುದ್ದಿ ಬಂತು. ಶಿವಾಜಿ ಮೊದಲ ಆಕ್ರಮಣವನ್ನು ಅಲ್ಲಿ ನಡೆಸಲು ನಿರ್ಧರಿಸಿದ.

ಶಿವಾಜಿಗೆ ಬಾಜಿ ಘೋರ್ಪಡೆಯ ಮೇಲೆ ಎಲ್ಲಿಲ್ಲದ ಹಗೆ ಇತ್ತು. ಅದಕ್ಕೊಂದು ಕಾರಣ ಇತ್ತು.

ಬಾಜಿ ಘೋರ್ಪಡೆ ಮೂಲತಃ ಶಿವಾಜಿ, ಶಹಾಜಿಯಂತೆ ಭೋಂಸ್ಲೆ ಕುಟುಂಬದವನು. ಬಿಜಾಪುರದ ಸುಲ್ತಾನ ಅವನಿಗೆ ಮುಧೋಳದ ಜಾಗೀರು ಕೊಟ್ಟಮೇಲೆ ತನ್ನ ಉಪನಾಮವನ್ನು ಘೋರ್ಪಡೆ ಎಂದು ಬದಲಾಯಿಸಿಕೊಂಡಿದ್ದ. ಬಿಜಾಪುರದ ಆಸ್ಥಾನದಲ್ಲಿ ಶಹಾಜಿಗೆ ಸಿಗುತ್ತಿದ್ದ ಗೌರವ ನೋಡಿ ಅವನಲ್ಲಿ ಅಸೂಯೆ ಬೆಳೆದಿತ್ತು. ಅವನು ಅಫ್ಜಲ್‌ಖಾನ್‌ನ ಜೊತೆಗೆ ಸೇರಿಕೊಂಡು ಶಹಾಜಿಯ ವಿರುದ್ಧ ಕತ್ತಿ ಮಸೆಯುತ್ತಿದ್ದ. ಏಳು ವರ್ಷಗಳ ಹಿಂದೆ ಮುಸ್ತಾಫಾಖಾನ್ ಎಂಬ ಸರದಾರನ ಜೊತೆಗೆ ಸೇರಿ ಶಹಾಜಿಯನ್ನು ಸೆರೆಹಿಡಿಯಲು ಹೋಗಿದ್ದ. ಜಿಂಜಿ ಎಂಬಲ್ಲಿ ಶಹಾಜಿಯನ್ನು ಒಂದು ಸಮಾರಂಭಕ್ಕೆ ಆಮಂತ್ರಿಸಿ ಮೋಸದಲ್ಲಿ ಬಂಧಿಸಿದ. ಬಳಿಕ ಶಹಾಜಿ ಕೆಲವು ವರ್ಷಗಳ ಕಾಲ ಬಿಜಾಪುರದಲ್ಲಿ ಕತ್ತಲು ಕೋಣೆಯಲ್ಲಿ ಸೆರೆಯಲ್ಲಿದ್ದ.

ಅಫ್ಜಲ್‌ಖಾನ್ ಮತ್ತು ಮುಸ್ತಾಫಾಖಾನ್ ಇಬ್ಬರೂ ಶಿವಾಜಿಯ ಕೈಯಲ್ಲಿ ಪರಲೋಕ ಸೇರಿದರು. ಈಗ ಉಳಿದದ್ದು ಬಾಜಿ ಘೋರ್ಪಡೆ ಮಾತ್ರ,

''ಕುಲದ್ರೋಹಿ ಘೋರ್ಪಡೆಗೆ ಶಾಸ್ತಿ ಮಾಡುವ ಹೊಣೆಗಾರಿಕೆ ನಿನ್ನದು'' ಎಂದು ಶಹಾಜಿ ಆ ಕಾಲದಲ್ಲಿ ಮಗನಿಗೆ ಹೇಳಿದ್ದ ತಂದೆಯ ಮಾತನ್ನು ಈಡೇರಿಸುತ್ತೇನೆಂದು ಶಿವಾಜಿ ಶಪಥ ಕೂಡ ಮಾಡಿದ್ದ. ಇದೀಗ ನೇಡು ತೀರಿಸುವ ಕಾಲ ಬಂದಿತ್ತು.

ಶಿವಾಜಿಯ ಅಶ್ವಾರೋಹಿ ದಂಡು ಶರವೇಗದಿಂದ ರಾಯಗಢದಿಂದ ದಕ್ಷಿಣಕ್ಕೆ ಸಾಗಿ ಕೊಲ್ಹಾಪುರದ ಮಾರ್ಗವಾಗಿ ಸಹ್ಯಾದ್ರಿಯ ಬೆಟ್ಟಗಳನ್ನು ಇಳಿದು ಮುಧೋಳ ತಲಪಿತು. ಬಾಜಿ ಘೋರ್ಪಡೆ ಆಗ ತಾನೇ ತನ್ನ ಜಾಗೀರಿಗೆ ಬಂದಿದ್ದ. ಅವನಿಗೆ ಖಿವಾಸ್‌ಖಾನ್‌ನ ಸೇನೆ ಸೇರಲು ಆಷ್ಟೇನೂ ಉತ್ಸಾಹ ಇರಲಿಲ್ಲ. ಎರಡು ದಿನ ಮುಧೋಳದಲ್ಲಿ ವಿಶ್ರಮಿಸಿ, ಅನಂತರ ಹೋದರೆ ಸಾಕು ಎಂದು ನಿರ್ಧರಿಸಿದ್ದ.

ಶಿವಾಜಿಯ ಆಕ್ರಮಣ ಅನಿರೀಕ್ಷಿತವಾಗಿತ್ತು. ಘೋರ್ಪಡೆಯ ಸೇನೆ ಯುದ್ಧಕ್ಕೆ ಸಜ್ಜಾಗಿರಲಿಲ್ಲ. ಮಾವಳಿ ಪಡೆಯ ಹೊಡೆತಕ್ಕೆ ತತ್ತರಿಸಿತು.

ಶಿವಾಜಿಯ ಹೆಸರು ಕೇಳಿಯೇ ಅರ್ಧ ಸೇನೆ ಕಾಲಿಗೆ ಬುದ್ಧಿ ಹೇಳಿತು. ಉಳಿದವರನ್ನು ಮಾವಳಿ ಸೇನೆ ಚೆಂಡಾಡಿಸಿತು. ಮುಧೋಳದ ಬೀದಿ, ಬಯಲುಗಳಲ್ಲಿ ಮಾರಣಹೋಮ ನಡೆಯಿತು.

ಶೌರ್ಯದಲ್ಲಿ ಬಾಜಿ ಘೋರ್ಪಡೆ ಕಡಿಮೆಯೇನೂ ಇರಲಿಲ್ಲ. ಒಬ್ಬನಿಗೇ ಹತ್ತಾರು ಜನರನ್ನು ಉರುಳಿಸುವ ತಾಕತ್ತು ಇತ್ತು. 'ಎಲ್ಲಿದ್ದಾನೆ ಶಿವಾಜಿ? ಈ ದಿನ ಅವನ ಹುಟ್ಟಡಗಿಸುತ್ತೇನೆ' ಎಂದು ಅಬ್ಬರಿಸುತ್ತ ತಿರುಗಾಡಿದ. ಅವನಿಗೆ ಎದುರಾದ ಮಾವಳಿಗಳೆಲ್ಲ ಕತ್ತರಿಸಿ ಬೀಳುತ್ತಿದ್ದರು.

ಶಿವಾಜಿ ಕೂಡ ಅವನನ್ನೇ ಹುಡುಕುತ್ತಿದ್ದ. ವಾಡಿಯ ಹೊರಗಿನ ಬೀದಿಯ ನಡುವೆ ಇಬ್ಬರೂ ಎದುರುಬದುರಾಗಿ ನಿಂತರು. ಒಬ್ಬರನ್ನೊಬ್ಬರು ದಿಟ್ಟಿಸಿ ಹ್ಞೂಂಕರಿಸಿದರು.

ಎರಡು ಗೂಳಿಗಳು ಒಂದರ ಮೇಲೊಂದು ನುಗ್ಗಲು ನೆಲ ಕೆರೆದಂತೆ ಅನಿಸಿತು. ಉಳಿದ ಸೈನಿಕರು ಯುದ್ಧ ನಿಲ್ಲಿಸಿ ಅವರಿಬ್ಬರನ್ನೇ ನೋಡುತ್ತ ನಿಂತರು.

ಆ ಕ್ಷಣದಲ್ಲಿ ಮುಧೋಳವೇ ಸ್ತಬ್ಧವಾಗಿತ್ತು.

ರಕ್ತದಲ್ಲಿ ತೊಯ್ದ ಘೋರ್ಪಡೆ ನರಪಿಶಾಚಿಯಂತೆ ಕಾಣಿಸುತ್ತಿದ್ದ. ಪಿಶಾಚಿಯಂತೆಯೇ ಕಿರುಚುತ್ತ ಶಿವಾಜಿಯತ್ತ ನುಗ್ಗಿದ. ಶಿವಾಜಿ ನಿಂತಲ್ಲಿಂದ ಕದಲಲಿಲ್ಲ. ಅವನ ಕೈಯಲ್ಲಿ ಭವಾನಿ ಖಡ್ಗ ಸಾಕ್ಷಾತ್ ಭವಾನಿಯೇ ಆದರಲ್ಲಿ ಆವೇಶವಾದಂತೆ ಅನ್ನಿಸುತ್ತಿತ್ತು.

ಘೋರ್ಪಡೆ ಶಿವಾಜಿಯ ಮೇಲೆ ಹೆಬ್ಬುಲಿಯಂತೆ ನೆಗೆದು ಬಿದ್ದ. ಕೊನೆಯ ಕ್ಷಣದಲ್ಲಿ ಭವಾನಿ ಮಿಂಚಿನಂತೆ ತಿರುಗಿತು. ಘೋರ್ಪಡೆಯ ಖಡ್ಗ ತುಂಡಾಗಿ ಬಿತ್ತು. ಅದೇ ಏಟಿಗೆ ಅವನ ಎದೆಯ ಕವಚ ಹರಿದು ಇಬ್ಭಾಗವಾಯಿತು.

ಘೋರ್ಪಡೆ ಬುಡಕಡಿದಂತೆ ನೆಲಕ್ಕೆ ಬಿದ್ದ. ಶಿವಾಜಿ ಅವನಿಗೆ ಸಾವರಿಸಿಕೊಳ್ಳುವ ಅವಕಾಶ ನೀಡಲಿಲ್ಲ. ಭವಾನಿಯ ಇನ್ನೊಂದು ಏಟು ಘೋರ್ಪಡೆಯನ್ನು ಯಮಲೋಕಕ್ಕೆ ಅಟ್ಟಿಸಿತು.

ಶಿವಾಜಿ ಆವೇಶದಲ್ಲಿ ಹ್ಞೂಂಕರಿಸಿದ. ಆ ಕ್ಷಣದಲ್ಲಿ ಅವನು ಪ್ರಳಯಕಾಲದ ರುದ್ರನಂತೆ ಕಾಣಿಸುತ್ತಿದ್ದ. ''ಹೋಗಿ, ಎಲ್ಲರನ್ನೂ ಕೊಚ್ಚಿ ಹಾಕಿ! ಈ ಪಾಪಿಯ ಸಂತಾನ ಉಳಿಯಬಾರದು. ಯಾರನ್ನೂ ಜೀವಂತ ಬಿಡಬೇಡಿ'' ಎಂದು ಅಬ್ಬರಿಸಿದ.

ಆ ದಿನ ಮುಧೋಳದಲ್ಲಿ ಶಿವಾಜಿಯ ತಾಂಡವ ನಡೆಯಿತು. ಬಾಜಿ ಘೋರ್ಪಡೆಯ ವಾಡೆ ಅಗ್ನಿಗೆ ಆಹುತಿ ಆಯಿತು. ಒಬ್ಬರೂ ಉಳಿಯದಂತೆ ಪೂರ್ತಿ ಪಟ್ಟಣವೇ ನೆಲಸಮವಾಯಿತು. ಶಿವಾಜಿ ತನ್ನ ತಂದೆಗೆ ಬಾಜಿ ಘೋರ್ಪಡೆಯ ರಕ್ತದಿಂದ ತರ್ಪಣ ನೀಡಿದ. ಅಲ್ಲಿಗೆ ಅವನು ತಂದೆಗೆ ಕೊಟ್ಟ ಶಪಥ ಈಡೇರಿತು.

ಆದರೆ ಘೋರ್ಪಡೆಯ ಸಂತಾನ ಮಾತ್ರ ಉಳಿದಿರಲಿಲ್ಲ. ಅವನ ಪತ್ನಿ ಮಾಲೋಜಿ ಮತ್ತು ಜೈಸಿಂಹ ಎಂಬ ಇಬ್ಬರು ಮಕ್ಕಳೊಡನೆ ತವರಿಗೆ ಹೋಗಿದ್ದಳು. ಹೀಗಾಗಿ ಅವರು ಬದುಕಿ ಉಳಿದರು.

ಶಿವಾಜಿ ತನ್ನ ಜೀವಮಾನದಲ್ಲೇ ಇಂಥ ಕ್ರೂರ ಹತ್ಯಾಕಾಂಡ ಬೇರೊಂದು ನಡೆಸಿರಲಿಲ್ಲ. ಅವನ ಆವೇಶ ಇಳಿದಾಗ ಮುಧೋಳ ಸ್ಮಶಾನವಾಗಿತ್ತು. ಘೋರ್ಪಡೆಯ ವಾಡಿ ಚಿತೆಯಂತೆ ಉರಿಯುತ್ತಿತ್ತು.



'ಸಿಕ್ ಸಿಕ್ಕ ಬೀದಿ, ಗಲ್ಲಿಗಳಲ್ಲಿ ಜಾಗಿಂಗ್ ಮಾಡೋ ಬದಲು ಸೀದಾ ಆಫೀಸ್‌ಗೆ ಓಡಿಕೊಂಡು ಹೋಗಿ ಪೆಟ್ರೋಲ್ ಉಳಿಸ್ರೀ...!'

ಮುಧೋಳದ ಸುತ್ತ ಹೊಗೆ ಏಳುತ್ತಿತ್ತು.

ಶಿವಾಜಿ ಹೊಗೆಯನ್ನೇ ನೋಡುತ್ತ ನಿಂತ. ಅವನ ಕಣ್ಣುಗಳು ಉರಿಯುತ್ತಿದ್ದವು. ಯೆಸಾಜಿ ಕಂಕ್, ಸಂಭಾಜಿ ಕಾವ್ಜಿ, ಮೋರೋಪಂತ್ ಪಿಂಗಳೆ ಅವನ ಸುತ್ತ ಮೌನವಾಗಿ ನಿಂತಿದ್ದರು. ಅವರು ಶಿವಾಜಿಯನ್ನು ಈ ರೂಪದಲ್ಲಿ ಹಿಂದೆಂದೂ ನೋಡಿರಲಿಲ್ಲ. ಅವರಲ್ಲಿ ಉಸಿರೆತ್ತುವ ಧೈರ್ಯ ಕೂಡ ಇರಲಿಲ್ಲ.

ಕೊನೆಯಲ್ಲಿ ಶಿವಾಜಿ ಬಾಯಿಬಿಟ್ಟ–

''ಅನಾಹುತ ಆಯಿತು, ಯೆಸಾಜಿ. ಘೋರ ಅನಾಹುತ. ಇದಕ್ಕೆಲ್ಲ ಈ ಘೋರ್ಪಡೆಯೇ ಕಾರಣ. ಕುಲದ್ರೋಹ ಮಾಡಿದ. ನಂಬಿದವರಿಗೆ ಮೋಸ ಮಾಡಿದ. ಇವನನ್ನು ಹೀಗೇ ಬಿಟ್ಟರೆ ಅನ್ಯಾಯವಾಗುತ್ತಿತ್ತು. ನನ್ನ ತೀರ್ಥರೂಪರ ಆತ್ಮಕ್ಕೆ ಶಾಂತಿ ಸಿಗುತ್ತಿರಲಿಲ್ಲ'' ಎಂದ.

ಯೆಸಾಜಿ ಮತ್ತು ಇತರ ಸಂಗಾತಿಗಳು ತಲೆತಗ್ಗಿಸಿ ನಿಂತರು.

ಶಿವಾಜಿ ಮುಧೋಳದಲ್ಲಿ ತಂಗಲಿಲ್ಲ. ಕತ್ತಲಾಗುವ ಮೊದಲು ಸೇನೆ ದೊಡನೆ ಭಾರೀ ವೇಗದಲ್ಲಿ ಸಹ್ಯಾದ್ರಿಯ ಅಂಚಿನ ಗುಂಟ ಸಾಗಿದ. ಮರುದಿನ ಸಂಜೆಯ ವೇಳೆಗೆ ಖಿವಾಸ್‌ಖಾನ್‌ನ ಸೇನೆ ಡೇರೆ ಹೂಡಿದಲ್ಲಿಂದ ಕೆಲವೇ ಕೋಸು ದೂರದಲ್ಲಿ ಸೇನೆ ನಿಲ್ಲಿಸಿ, ದೂತರ ಮೂಲಕ ಖಿವಾಸ್‌ಖಾನ್‌ಗೆ ಓಲೆ ಕಳಿಸಿದ.

''ಖಿವಾಸ್‌ಖಾನ್, ನೀನೀಗ ಸಾವಿನ ದವಡೆಯಲ್ಲಿದ್ದೀ. ಇದು ನನ್ನ ಕೊಂಕಣದ ಭೂಮಿ. ನನ್ನ ಸೈನಿಕರು ನಿನ್ನ ರಕ್ತ ಕುಡಿಯಲು ಹಾತೊರೆಯುತ್ತಿದ್ದಾರೆ. ಒಳ್ಳೆಯ ಮಾತಿನಲ್ಲಿ ಡೇರೆ ಕಳಚಿ ಬಿಜಾಪುರಕ್ಕೆ ಮರಳಿ ಹೋಗು. ಇಲ್ಲಿ ಉಳಿದರೆ ನೆಟ್ಟಗಾಗದು. ನೀನು ಮಹಾವೀರ ಎಂದು ಕೇಳಿದ್ದೇನೆ. ಆದರೆ ಕೊಂಕಣದಲ್ಲಿ ನಿನ್ನ ಹೆಸರು ಮಣ್ಣಾಗುತ್ತದೆ, ನೀನು ನಿನ್ನ ಕಾಲುಗಳ ಮೇಲೆ ನಡೆದುಕೊಂಡು ಹೋಗಲು ಸಾಧ್ಯವಾಗದು'' ಎಂದು ಶಿವಾಜಿಯ ಓಲೆ ಎಚ್ಚರಿಸಿತ್ತು.

ಮುಧೋಳದ ಮಾರಣಹೋಮದ ಸುದ್ದಿ ಖಿವಾಸ್‌ಖಾನ್‌ಗೆ ಇನ್ನೂ ತಲಪಿರಲಿಲ್ಲ. ಶಿವಾಜಿಯಿಂದ ಬಂದ ಓಲೆಯನ್ನು ಓದಿ ಉರಿದು ಬಿದ್ದ. ''ನಾನು ಹಜ್ರತ್ ಬಾದಶಹರ ಸರದಾರ. ಬಾದಶಹರ ಶತ್ರುಗಳ ತಲೆ ಕಡಿಯುವುದು ನನ್ನ ಧರ್ಮ. ಈ ಪುಂಡು ಶಿವಾಜಿ ಹಲವಾರು ಪುಟಗೋಸಿ ಜನರನ್ನು ಸೋಲಿಸಿರಬಹುದು. ಆದರೆ ಅವನು ನನ್ನಂಥ ವೀರನನ್ನು ಯಾವತ್ತೂ ಎದುರಿಸಿಲ್ಲ. ಅವನು ಬರಲಿ, ನೋಡಿಕೊಳ್ಳುತ್ತೇನೆ. ಬಿಜಾಪುರದ ಖಡ್ಗದ ರುಚಿ ಜೀವಮಾನದಲ್ಲಿ ಯಾವತ್ತೂ ಮರೆಯದಂತೆ ಮಾಡುತ್ತೇನೆ!'' ಎಂದು ಉದ್ಧಟತನದಿಂದ ಹೇಳಿ ದೂತನನ್ನು ಕಳಿಸಿದ.

ಅವನಿಗೆ ತನ್ನ ತಾಕತ್ತಿನ ಬಗ್ಗೆ ತುಸು ಹೆಚ್ಚೇ ವಿಶ್ವಾಸವಿತ್ತು. ಶಿವಾಜಿಯಿಂದ ಚಿತಾವಣೆ ಬಂದ ಬಳಿಕವೂ ಯುದ್ಧಕ್ಕೆ ಸಿದ್ಧತೆ ಮಾಡಲಿಲ್ಲ.

ದೂತ ಹೋಗಿ ಎರಡು ತಾಸು ಕಳೆದಿರಲಿಲ್ಲ, ಸಹ್ಯಾದ್ರಿಯ ಮೇಲೆ ಕತ್ತಲು ಕವಿಯಿತು. ಖಿವಾಸ್‌ಖಾನ್ ರಾತ್ರಿ ಭೋಜನ ಮುಗಿಸಿ ತನ್ನ ಡೇರೆಗೆ ಹೋಗಿ ವಿಜಯದ ಕನಸು ಕಾಣುತ್ತ ನಿದ್ದೆ ಹೋದ. ಆಗಲೇ ರಣಕಹಳೆ ಕೇಳಿಸಿತು.

'ಹರ ಹರ ಮಹಾದೇವ!'

(ಮುಂದುವರಿಯುತ್ತದೆ)

ಸಿದ್ದರಾಮಯ್ಯ ನಿರ್ಗಮನ

ಹೊಸ ಮುಖ್ಯಮಂತ್ರಿಯೆದುರು ಸಾಲು ಸಾಲು ಸವಾಲು

❑ ಆರ್. ಟಿ. ವಿಟ್ಠಲಮೂರ್ತಿ

ಡಿ. ಕೆ. ಶಿವಕುಮಾರ್ - ಸಿದ್ದರಾಮಯ್ಯ : ವಿದಾಯಕ್ಕೆ ಒಪ್ಪಿಗೆ - ಆತ್ಮೀಯ ಅಪ್ಪುಗೆ

ಮುಖ್ಯಮಂತ್ರಿ ಹುದ್ದೆಯಿಂದ ಸಿದ್ದರಾಮಯ್ಯ ಅವರು ನಿರ್ಗಮಿಸುವುದರೊಂದಿಗೆ ರಾಜ್ಯ ರಾಜಕಾರಣ ಮಗ್ಗಲು ಬದಲಾಯಿಸಿದೆ.

ಹಾಗೆ ನೋಡಿದರೆ ಅಧಿಕಾರ ಹಂಚಿಕೆಯ ಸಂಘರ್ಷ ರಾಜ್ಯ ಕಾಂಗ್ರೆಸ್ಸನ್ನು ಯಾವ ರೀತಿ ತಲ್ಲಣಗೊಳಿಸಿತ್ತೆಂದರೆ ಜನಸಾಮಾನ್ಯರೂ ಬೇಸತ್ತು ಹೋಗುವ ಪರಿಸ್ಥಿತಿ ನೆಲೆಯಾಗಿತ್ತು.

ಇದಕ್ಕೆ ರಾಜ್ಯ ಕಾಂಗ್ರೆಸ್ಸಿನ ಉಭಯ ಬಣಗಳು ಎಷ್ಟರ ಮಟ್ಟಿಗೆ ಕಾರಣವೋ ಅದಕ್ಕಿಂತ ಹೆಚ್ಚು ಕಾಂಗ್ರೆಸ್ ಹೈಕಮಾಂಡ್ ಕಾರಣವಾಗಿತ್ತು.

ಅಧಿಕಾರ ಹಂಚಿಕೆಯ ಮಾತು ಎಂಬುದು ವರಿಷ್ಠರ ಮಟ್ಟದಲ್ಲೇ ಉಳಿದು ಬಹಿರಂಗವಾಗಿ ಚರ್ಚೆಯಾಗದೆ ಇದ್ದಿದ್ದರೆ ಕರ್ನಾಟಕದ ಆಡಳಿತ ಸ್ವರೂಪ ಇನ್ನಷ್ಟು ಪರಿಣಾಮಕಾರಿಯಾಗಿರುತ್ತಿತ್ತು.

ಆದರೆ ಕಾಂಗ್ರೆಸ್ ವರಿಷ್ಠರ ಸುದೀರ್ಘ ಮೌನ ಎಲ್ಲ ಹಂತಗಳಲ್ಲೂ ಗೊಂದಲ ಸೃಷ ಿಸಿ ಒಂದು ತಲ್ಲಣದ ವಾತಾವರಣವನ್ನು ಸೃಷ್ಟಿಸಿತು.

ಇದರ ಪರಿಣಾಮ ಏನಾಗಿದೆ ಎಂದರೆ ಸಿದ್ದರಾಮಯ್ಯ ಅವರ ನಿರ್ಗಮನದ ಅನಂತರವೂ ರಾಜ್ಯ ಕಾಂಗ್ರೆಸ್ಸಿನ ತಲ್ಲಣ ಮುಂದುವರಿದಿದೆಯಲ್ಲದೆ ಸರಕಾರದ ಭವಿಷ್ಯದ ಬಗ್ಗೆ ಹಲವು ಅನುಮಾನಗಳು ಶುರುವಾಗಿವೆ.

ಎಲ್ಲಕ್ಕಿಂತ ಮುಖ್ಯವಾಗಿ ಸ್ವತಃ ಸಿದ್ದರಾಮಯ್ಯ ಅವರಿಗೆ ಪಟ್ಟದಿಂದ ಕೆಳಗಿಳಿಯುವ ಮನಸ್ಸಿರಲಿಲ್ಲ.

ಆದರೆ ಅವರೇ ಬಹುವಾಗಿ ನಂಬಿದ್ದ ರಾಹುಲ್ ಗಾಂಧಿ ಅವರು, ''ಅಧಿಕಾರ ತ್ಯಜಿಸಿ'' ಎಂದ ಮೇಲಂತೂ ಅವರು ಕುದಿಯುತ್ತಿದ್ದಾರೆ.

ಮುಖ್ಯಮಂತ್ರಿ ಪಟ್ಟದಿಂದ ಸಿದ್ದರಾಮಯ್ಯ ಅವರು ಕೆಳಗಿಳಿಯುವುದರೊಂದಿಗೆ ಕಾಂಗ್ರೆಸ್ ಪಕ್ಷ ಮತ್ತಷ್ಟು ತಲ್ಲಣ ಅನುಭವಿಸುವಂತಾಗಿದೆಯೆ? ಅವರ ಆಪ್ತರು ಹೊಸ ಮುಖ್ಯಮಂತ್ರಿಯ ಹಾಗೂ ಹೊಸ ಸರಕಾರದ ವಿಷಯದಲ್ಲಿ ಯಾವ ನಿಲುವನ್ನು ತಳೆಯಬಹುದು; ಇದರ ಪರಿಣಾಮ ಪಕ್ಷದ ಭವಿಷ್ಯದ ಮೇಲೆ ಯಾವ್ಯಾವ ರೀತಿಯಲ್ಲಿ ಆಗಬಹುದು ಎಂಬಂಥ ಅನುಮಾನಗಳು ಈಗಾಗಲೇ ಆರಂಭವಾಗಿವೆ.

ಈ ಪ್ರಶ್ನೆಗಳಿಗೆ ಉತ್ತರ ಹುಡುಕಲು ಹೆಚ್ಚು ದಿನ ಕಾಯಬೇಕಿಲ್ಲ! ನಾಯಕತ್ವ ಬದಲಾವಣೆಯ ಕಾರಣದಿಂದ ಕಾಂಗ್ರೆಸ್‌ಪರ ಮತಬ್ಯಾಂಕು ಛಿದ್ರಗೊಂಡು ಬಿಜೆಪಿ-ಜೆಡಿಎಸ್ ಮೈತ್ರಿಕೂಟದತ್ತ ಹೊರಳಬಹುದೆ-ಎನ್ನುವುದು ಕೂಡ ಸದ್ಯ, ಕಾಂಗ್ರೆಸ್ ಪಕ್ಷವನ್ನು ಕಾಡುತ್ತಿರುವ ಚಿಂತೆ!

ಪಕ್ಷದ 'ಛಾಂಪಿಯನ್' ಅನ್ನು ಕೆಳಗಿಳಿಸಿದ್ದೇಕೆ ರಾಹುಲ್ ?

ಅಂದ ಹಾಗೆ ಸಿದ್ದರಾಮಯ್ಯ ಅವರನ್ನು ಮುಖ್ಯಮಂತ್ರಿ ಹುದ್ದೆಯಿಂದ ಕೆಳಗಿಳಿಸುವ ಇಚ್ಛೆ ರಾಹುಲ್ ಗಾಂಧಿ ಅವರಿಗಿರಲಿಲ್ಲ. ಆದರೂ ತಮ್ಮಿಚ್ಛೆಗೆ ವಿರುದ್ಧವಾಗಿ ಅವರು ಹೆಜ್ಜೆ ಇಟ್ಟಿದ್ದೇಕೆ?

ಇಂಥದೊಂದು ಪ್ರಶ್ನೆ ಈಗ ರಾಜಕೀಯ ವಲಯಗಳ ಬಿಸಿ ಬಿಸಿ ಚರ್ಚೆಗೆ ಗ್ರಾಸವಾಗಿದೆ.

ಮೂಲಗಳ ಪ್ರಕಾರ, ಸಿದ್ದರಾಮಯ್ಯ ಅವರನ್ನು ಸಿಎಂ ಹುದ್ದೆಯಿಂದ ಕೆಳಗಿಳಿಸುವ ಮನಸ್ಸು ರಾಹುಲ್ ಗಾಂಧಿ ಅವರಿಗಿರಲಿಲ್ಲ. ಹೀಗಾಗಿಯೇ ಅವರು ದೇಶದ ವಿವಿಧ ಕಡೆಗಳಿಗೆ ಹೋದಾಗ ಸಿದ್ದರಾಮಯ್ಯ ಅವರನ್ನು ಹಿಂದುಳಿದ ವರ್ಗಗಳ 'ಛಾಂಪಿಯನ್' ಎಂದು ಬಣ್ಣಿಸುತ್ತಿದ್ದರು.

ಹೀಗೆ ದೇಶದ ಮುಂದೆ ಯಾರನ್ನು ಅವರು ಎತ್ತಿ ಮೆರೆಸುತ್ತಿದ್ದರೋ, ಅವರನ್ನು ದಿನದಿಂದ ದಿನಕ್ಕೆ ಬಲಿಷ್ಠಗೊಳಿಸುವುದು ಅವರಿಗೆ ಅನಿವಾರ್ಯವಾಗಿತ್ತು. ಹೀಗಾಗಿಯೇ ಸಿದ್ದರಾಮಯ್ಯ ಅವರ ಜಾಗಕ್ಕೆ ಬೇರೊಬ್ಬರನ್ನು ತಂದು ಕೂರಿಸುವ ಪ್ರಸ್ತಾವವನ್ನು ರಾಹುಲ್ ಬಿಲ್‌ಕುಲ್ ಒಪ್ಪುತ್ತಿರಲಿಲ್ಲ

ಇದೇ ಕಾರಣಕ್ಕಾಗಿ ಅವರು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಬೇಡಿಕೆಯನ್ನು ಕೇಳುವ ಗೋಜಿಗೇ ಹೋಗುತ್ತಿರಲಿಲ್ಲ

ಸರಕಾರಕ್ಕೆ ಎರಡೂವರೆ ವರ್ಷ ಭರ್ತಿಯಾದ ಹೊತ್ತಿನಲ್ಲಿ ತಮಗೆ ಮುಖ್ಯಮಂತ್ರಿ ಹುದ್ದೆ ಕೊಡಿಸಿ ಎಂದು ಹೇಳಲು ಪದೇ ಪದೇ ರಾಹುಲ್ ಭೇಟಿಗೆ ಪ್ರಯತ್ನಿಸುತ್ತಿದ್ದ ಡಿ.ಕೆ. ಶಿವಕುಮಾರ್, ರಾಹುಲ್ ಗಾಂಧಿ ಅವರ ವರ್ತನೆಯಿಂದ ಅಸಮಾಧಾನಗೊಂಡಿದ್ದಿದೆ.

ಆದರೆ ಇಂಥ ಪರಿಸ್ಥಿತಿಯ ನಡುವೆಯೂ ರಾಹುಲ್ ಗಾಂಧಿ ಇದ್ದಕ್ಕಿದ್ದಂತೆ ಮನಃ ಪರಿವರ್ತನೆ ಮಾಡಿಕೊಳ್ಳಲು, ಮೇ 26ರಂದು ಸಿಎಂ ಸಿದ್ದರಾಮಯ್ಯ ಅವರನ್ನು ಕರೆಸಿ, '' ನೀವು ಅಧಿಕಾರ ತ್ಯಾಗ ಮಾಡಿ'' ಎಂದು ಹೇಳಲು ಸೋನಿಯಾ ಗಾಂಧಿ ಮತ್ತು ಪ್ರಿಯಾಂಕಾ ಗಾಂಧಿಯವರೇ ಕಾರಣ.

ಸೋನಿಯಾ ಗಾಂಧಿ ಮತ್ತು ಪ್ರಿಯಾಂಕಾ ಗಾಂಧಿ ಅವರು ಡಿ.ಕೆ. ಶಿವಕುಮಾರ್ ಪರವಾಗಿರಲು ಮತ್ತು ಅವರಿಗೆ ಸಿಎಂ ಹುದ್ದೆ ಕೊಡಿಸುವ ವಿಷಯದಲ್ಲಿ ಆಸಕ್ತಿ ತೋರಲು ಹಲವಾರು ಕಾರಣಗಳಿವೆ.

ಈ ಪೈಕಿ ಮುಖ್ಯವಾದುದು ಡಿ.ಕೆ. ಶಿವಕುಮಾರ್ ಅವರ ಪಕ್ಷ ನಿಷ್ಠೆ ಮತ್ತು ಕಾಂಗ್ರೆಸ್ ಪಕ್ಷದ ಕಷ್ಟಕಾಲದಲ್ಲಿ ಅವರು ದುಡಿದ ರೀತಿ.

ಇಂಥ ಕಾರಣಗಳಿಂದ ಡಿ.ಕೆ. ಶಿವಕುಮಾರ್ ಜೈಲಿಗೆ ಹೋಗುವ ಪರಿಸ್ಥಿತಿ ಬಂತಾದರೂ ಎದೆಗುಂದಲಿಲ್ಲ. ಪಕ್ಷ ನಿಷ್ಠೆ ಮರೆಯಲಿಲ್ಲ.

ಇದೇ ರೀತಿ 2023ರ ವಿಧಾನಸಭಾ ಚುನಾವಣೆಯಲ್ಲಿ ಅವರು ಸಿದ್ದರಾಮಯ್ಯ ಅವರಿಗೆ ಸರಿಸಮನಾಗಿ ಹೋರಾಡಿದರು. ರಣವ್ಯೂಹ ರೂಪಿಸಿದರು.

ಅನಂತರ ಪಕ್ಷ ಅಧಿಕಾರಕ್ಕೆ ಬಂದಾಗ ಸಿಎಂ ಹುದ್ದೆಗೆ ಪೈಪೋಟಿ ಶುರುವಾಯಿತಲ್ಲ, ಆಗ ಸಿದ್ದರಾಮಯ್ಯ ಅವರಂತೆ ಡಿ.ಕೆ. ಶಿವಕುಮಾರ್ ಅವರೂ ಪಟ್ಟು ಹಿಡಿದಿದ್ದರು. ಪರಿಸ್ಥಿತಿ ವಿಕೋಪಕ್ಕೆ ಹೋದಾಗ ಸೋನಿಯಾ ಗಾಂಧಿ ಮಧ್ಯೆ ಪ್ರವೇಶಿಸಿ ''ಮುಂದೆ ನಿಮ್ಮ ಹಿತ ಕಾಯುತ್ತೇನೆ. ಈಗ ಸಿದ್ದರಾಮಯ್ಯ ಅವರಿಗೆ ಸಿಎಂ ಹುದ್ದೆ ಕೊಡಲು ಸಹಕರಿಸಿ'' ಎಂದಿದ್ದರು.

ಹೀಗೆ ಅಂದು ತಮಗೆ ಸೋನಿಯಾ ಗಾಂಧಿ ಹೇಳಿದಾಗ ಡಿ.ಕೆ. ಶಿವಕುಮಾರ್ ಮರು ಮಾತನಾಡದೆ ಒಪ್ಪಿಕೊಂಡಿದ್ದರು.

ಇಂಥ ಹಲವಾರು ಕಾರಣಗಳು ಸೋನಿಯಾ ಗಾಂಧಿ ಮತ್ತು ಪ್ರಿಯಾಂಕಾ ಗಾಂಧಿಯವರಿಗೆ ಇಷ್ಟವಾಗಿದ್ದವು. ಹಾಗೆಂದೇ ಹಲವು ಕಾಲದಿಂದ ಅವರು ಡಿ.ಕೆ. ಶಿವಕುಮಾರ್ ಅವರಿಗೆ ಅಧಿಕಾರ ಕೊಡಿಸಲು ರಾಹುಲ್ ಗಾಂಧಿ ಅವರ ಮೇಲೆ ಒತ್ತಡ ಹೇರುತ್ತಲೇ ಇದ್ದರು. ಆದರೆ ಅದು ತುಂಬ ದಿನಗಳ ಕಾಲ ಕೆಲಸ ಮಾಡಲಿಲ್ಲವಾದರೂ ಅಂತಿಮವಾಗಿ ಪರಿಸ್ಥಿತಿ ಬದಲಾಯಿತು. ಸಿದ್ದರಾಮಯ್ಯ ಅವರ ನಾಯಕತ್ವ ಕರ್ನಾಟಕಕ್ಕೆ ಬೇಕೇ ಬೇಕು ಎಂದು ಬಯಸಿದ್ದ ರಾಹುಲ್ ಗಾಂಧಿ ಸಿದ್ದರಾಮಯ್ಯ ಅವರ ರಾಜೀನಾಮೆ ಬಯಸಿದರು.

ಹೊಡೆತ ತಿಂದ ಹುಲಿ!

ಪೆಟ್ಟು ತಿಂದ ಹುಲಿಯ ರೋಷ ಹೆಚ್ಚು ಎಂಬ ಮಾತಿದೆ. ಇವತ್ತು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕೂಡಾ ಪೆಟ್ಟು ತಿಂದ ಹುಲಿ.

ಪೆಟ್ಟು ತಿಂದ ಸಂದರ್ಭದಲ್ಲಿ ಸಿದ್ದರಾಮಯ್ಯ ಸುಮ್ಮನಿದ್ದ ಉದಾಹರಣೆಯೇ ಇಲ್ಲ

ಕಾಂಗ್ರೆಸ್ ಪಕ್ಷಕ್ಕೆ ಸೇರ್ಪಡೆಯಾದ ಹೊಸತರಲ್ಲಿ ವರಿಷ್ಠರು ತಮ್ಮ ಮಾತನ್ನು ಮೀರಿ ಮಲ್ಲಿಕಾರ್ಜುನ ಖರ್ಗೆಯವರ ಆಪ್ತ ಇಕ್ಬಾಲ್ ಅಹ್ಮದ್ ಸರಡಗಿ ಅವರಿಗೆ ರಾಜ್ಯಸಭೆಯ ಟಿಕೆಟ್ ಕೊಟ್ಟಾಗ ಸಿದ್ದರಾಮಯ್ಯ ಕುಪಿತರಾಗಿದ್ದರು. ಅಷ್ಟೇ ಅಲ್ಲ, ರಾಜ್ಯಸಭಾ ಚುನಾವಣೆಯ ಕಣದಲ್ಲಿ ಇಕ್ಬಾಲ್ ಅಹ್ಮದ್ ಸರಡಗಿಯವರು ಸೋಲುವಂತೆ ತಂತ್ರ ಹೆಣೆದಿದ್ದರು.

ಮುಂದೆ 2008ರ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಅತ್ಯಂತ ದೊಡ್ಡ ಶಕ್ತಿಯಾಗಿ ಹೊರಹೊಮ್ಮಿದರೂ ಯಾವ ಪಕ್ಷಕ್ಕೂ ನಿಚ್ಚಳ ಬಹುಮತ ಬಾರದ ಕಾರಣದಿಂದ ಅತಂತ್ರ ವಿಧಾನಸಭೆ ರೂಪುಗೊಂಡಿತ್ತು.

ಇಂಥ ಸಂದರ್ಭದಲ್ಲಿ ಕಾಂಗ್ರೆಸ್-ಜೆಡಿಎಸ್ ಪರಸ್ಪರ ಕೈಗೂಡಿಸಿದ್ದರೆ ಮಿತ್ರ ಸರಕಾರ ರಚನೆಯಾಗುತ್ತಿತ್ತು.

ಹೀಗಾಗಿಯೇ ಜೆಡಿಎಸ್ ವರಿಷ್ಠರಾದ ಎಚ್.

ಮಲ್ಲಿಕಾರ್ಜುನ ಖರ್ಗೆ

ಡಿ. ದೇವೇಗೌಡರು ಕಾಂಗ್ರೆಸ್ ಹೈಕಮಾಂಡ್‌ಗೆ ಒಂದು ಸಂದೇಶ ರವಾನಿಸಿ 'ಕಾಂಗ್ರೆಸ್ ನಾಯಕ ಮಲ್ಲಿಕಾರ್ಜುನ ಖರ್ಗೆ ನೇತೃತ್ವದಲ್ಲಿ ಸರಕಾರ ರಚನೆಯಾಗಲಿ' ಎಂಬ ಪ್ರಸ್ತಾವ ಮುಂದಿಟ್ಟಿದ್ದರು. ಆದರೆ ಯಾವಾಗ ಈ ಬೆಳವಣಿಗೆ ನಡೆಯಿತೋ, ಆಗ ದಿಢೀರನೆ ರಣವ್ಯೂಹ ರೂಪಿಸಿದ ಸಿದ್ದರಾಮಯ್ಯ ತಮಗೆ ಆಪ್ತರಾಗಿದ್ದ ಪಕ್ಷೇತರರನ್ನು ಬಿಜೆಪಿಯ ಕಡೆ ಕಳಿಸಿ ಅದು ಸರಕಾರ ರಚನೆಯಾಗುವಂತೆ ನೋಡಿಕೊಂಡರು.

ಆಗ ಎಚ್ಚೆತ್ತ ಕಾಂಗ್ರೆಸ್ ಹೈಕಮಾಂಡ್ ಮಲ್ಲಿಕಾರ್ಜುನ ಖರ್ಗೆಯವರನ್ನು ರಾಷ್ಟ್ರ ರಾಜಕಾರಣಕ್ಕೆ ಕರೆಸಿಕೊಂಡು ಸಿದ್ದರಾಮಯ್ಯ ಅವರನ್ನು ರಾಜ್ಯದಲ್ಲಿ ನೆಲೆಗೊಳಿಸಿತು.

ಮುಂದೆ 2018ರಲ್ಲಿ ಕಾಂಗ್ರೆಸ್-ಜೆಡಿಎಸ್ ಮಿತ್ರ ಸರಕಾರ ರಚನೆಯಾದರೂ ಅದು ಬಹುಕಾಲ ಬಾಳಲು ಸಿದ್ದರಾಮಯ್ಯ ಬಿಡಲಿಲ್ಲ.

ಹೀಗಾಗಿ ಎಚ್.ಡಿ. ಕುಮಾರಸ್ವಾಮಿ ನೇತೃತ್ವದ ಮಿತ್ರ ಸರಕಾರ ಪತನವಾಯಿತು.

ಮುಂಬರುವ ದಿನಗಳಲ್ಲಿ...

ಇದರರ್ಥ ಬೇರೇನೂ ಅಲ್ಲ ತಮ್ಮಿಚ್ಛೆಗೆ ವಿರುದ್ಧವಾದ ರಾಜಕೀಯ ಸನ್ನಿವೇಶ ರೂಪುಗೊಂಡರೆ ಅದನ್ನು ಅಸ್ಥಿರಗೊಳಿಸುವವರೆಗೆ ಸುಮ್ಮನಿರುವ ಸ್ವಭಾವ ಸಿದ್ದರಾಮಯ್ಯ ಅವರದಲ್ಲ

ಹೀಗಾಗಿ ಸಿದ್ದರಾಮಯ್ಯ ಅವರ ಪಟ್ಟ ತ್ಯಾಗದ ಅನಂತರ ಕಾಂಗ್ರೆಸ್ ಪಕ್ಷ ಆತಂಕದ ನೆಲೆಗಟ್ಟಿನ ಮೇಲೆ ನಿಂತಿದೆ.

ಮೂಲಗಳ ಪ್ರಕಾರ, ಸಿದ್ದರಾಮಯ್ಯ ಅವರ ಆಪ್ತರಾಗಿದ್ದ ಬಹುತೇಕ ಸಚಿವರು ಈಗ ಪರ್ಯಾಯ ಸರಕಾರದಲ್ಲಿ ಪಾಲುದಾರರಾಗಲು ಇಚ್ಛಿಸುತ್ತಿಲ್ಲ

ಇದೇ ರೀತಿ ಮುಂದಿನ ಸಚಿವ ಸಂಪುಟದ ಪಾಲುದಾರರಾಗುವ ಇಚ್ಛೆ ಕೆಲವರಿಗಿದ್ದರೂ ಎಲ್ಲರಿಗೆ ಅವಕಾಶ ಸಿಗುವುದು ಕಷ್ಟ

ಹೀಗಾಗಿ ಮುಂಬರುವ ಸಂಪುಟದಲ್ಲಿ ಅವಕಾಶ ಸಿಗದೆ ಇರುವವರು ಕೂಡಾ ಸರಕಾರದ ವಿರುದ್ಧ ಮುಗಿಬೀಳಲು ಸಜ್ಜಾಗುತ್ತಾರೆ.

ಸರಕಾರಕ್ಕೆ ಸದ್ಯ ಅಪಾಯವಿಲ್ಲ?

ಜನನಾಯಕ ಅನ್ನಿಸಿಕೊಂಡ ಮುಖ್ಯಮಂತ್ರಿಗಳನ್ನು ಅಧಿಕಾರದಿಂದ ಇಳಿಸಿದಾಗ ದೊಡ್ಡ ಮಟ್ಟದ ಸಂಚಲನವಾಗುವುದು, ತೀವ್ರ ವಿರೋಧ ವ್ಯಕ್ತವಾಗುವುದು ಸಹಜ. ಆದರೆ ಈ ಸಂಚಲನ ತತ್‌ಕ್ಷಣವೇ ಸರಕಾರದ ಪದಚ್ಯುತಿಗೆ ಕಾರಣವಾದ ನಿದರ್ಶನ ರಾಜ್ಯದಲ್ಲಿಲ್ಲ.

ಮುಖ್ಯಮಂತ್ರಿಯಾಗಿದ್ದ ದೇವರಾಜ ಅರಸರನ್ನು 1980ರಲ್ಲಿ ಇಂದಿರಾ ಗಾಂಧಿ ಬಲವಂತವಾಗಿ ಪದಚ್ಯುತಗೊಳಿಸಿದ್ದರು. ಇಂಥ ಬೆಳವಣಿಗೆ ಸಹಜವಾಗಿಯೇ ರಾಜ್ಯ ಕಾಂಗ್ರೆಸ್‌ನ್ನು ತಲ್ಲಣಗೊಳಿಸಿತ್ತು.

ಆ ಸಂದರ್ಭದಲ್ಲಿ ಅರಸರಿಂದ ತೆರವಾದ ಜಾಗಕ್ಕೆ ಕೊಡಗಿನ ಗುಂಡೂರಾಯರನ್ನು ತಂದು ಕೂರಿಸಿದಾಗ ಸರಕಾರ ಅಲುಗಾಡುವುದು ಖಚಿತ ಎಂಬ ಅಭಿಪ್ರಾಯ ಕೇಳಿ ಬಂದಿತ್ತು. ಇದಕ್ಕೆ ದೇವರಾಜ ಅರಸು ಅವರಿಗಿದ್ದ ಜನಪ್ರಿಯತೆಯೇ ಕಾರಣ.

ಆದರೆ ಅಂಥ ಪಲ್ಲಟವೇನೂ ಆಗಲಿಲ್ಲ. ಬದಲಿಗೆ ದೇವರಾಜ ಅರಸರ ಅತ್ಯಾಪ್ತರೇ ಗುಂಡೂರಾಯರ ಸಚಿವ ಸಂಪುಟದಲ್ಲಿ ಮಂತ್ರಿಗಳಾಗಿ ಕಂಗೊಳಿಸಿದರು.

ಇನ್ನು 1990ರಲ್ಲಿ ಮುಖ್ಯಮಂತ್ರಿ ವೀರೇಂದ್ರ ಪಾಟೀಲರನ್ನು ಅಂದಿನ ಎಐಸಿಸಿ ಅಧ್ಯಕ್ಷರಾದ ರಾಜೀವ್ ಗಾಂಧಿ ಬಲವಂತವಾಗಿ ಕೆಳಗಿಳಿಸಿದರು. ಆಗಲೂ ಪಕ್ಷದಲ್ಲಿ ದೊಡ್ಡ ಮಟ್ಟದ ಅಪಸ್ವರ ಕೇಳಿ ಬಂತು.

ಇದಾದ ಅನಂತರ ಬಂಗಾರಪ್ಪ ಅವರನ್ನು ಅಂದಿನ ಪ್ರಧಾನಿ ಪಿ.ವಿ. ನರಸಿಂಹರಾವ್ ಬಲವಂತವಾಗಿ ಪದಚ್ಯುತಿಗೊಳಿಸಿದರು. ಆಗಲೂ ಕೈ ಪಾಳೆಯ ತಲ್ಲಣಿಸಿತ್ತು.

ಹೀಗೆ ಪ್ರಬಲ ನಾಯಕರೆನಿಸಿಕೊಂಡವರನ್ನು ಅಧಿಕಾರದಿಂದ ಕಿತ್ತು ಹಾಕಿದಾಗ ಇಲ್ಲವೇ ಬಲವಂತವಾಗಿ ಕೆಳಗಿಳಿಸಿದಾಗ ತಲ್ಲಣ ಸಹಜ ಮತ್ತು ಸರಕಾರ ಉರುಳುತ್ತದೆ ಎಂಬ ಭಾವನೆ ಮೂಡಿದ್ದು ಸಹಜ.

ಈಗ ಸಿದ್ದರಾಮಯ್ಯ ಅವರ ಪದಚ್ಯುತಿಯ ಅನಂತರವೂ ಇಂಥದೇ ಭಾವನೆ ಮೂಡಿದೆ. ಸಿದ್ದರಾಮಯ್ಯ ಅವರಿಲ್ಲದ ಸರಕಾರ ಬಾಳುವುದಿಲ್ಲ ಎಂಬ ಮಾತು ದಟ್ಟವಾಗಿದೆ. ಆದರೆ ಈ ಮಾತು ಎಷ್ಟು ದಿನ ಇರುತ್ತದೆ ಎಂಬುದು ಬಹಳ ಮುಖ್ಯ.

ಹಾಗೊಂದು ವೇಳೆ ಇಂಥ ಮಾತು ಹಲವು ಕಾಲದ ಅನಂತರವೂ ಕೇಳಿ ಬಂದರೆ ಆಗ ಸರಕಾರಕ್ಕೆ ಅಪಾಯವಾಗುವುದು ಸಹಜ.

ಆದರೆ ಸದ್ಯದ ಪರಿಸ್ಥಿತಿ ನೋಡಿದರೆ ರಾಜ್ಯ ಸರಕಾರ ತತ್‌ಕ್ಷಣ ಅಪಾಯವನ್ನೆದುರಿಸುವ ಸಾಧ್ಯತೆ ಕಡಿಮೆ.

ಯಾಕೆಂದರೆ ಇವತ್ತು ಯಾರು ಸಿದ್ದರಾಮಯ್ಯ ಅವರ ಬಣದಲ್ಲಿ ಗುರುತಿಸಿಕೊಂಡಿದ್ದಾರೋ, ಅದರಲ್ಲೇ ಕೆಲವರು ಪರ್ಯಾಯ ನಾಯಕನ ಜತೆ ವಿಶ್ವಾಸದಿಂದಿರಲು ಬಯಸುತ್ತಿದ್ದಾರೆ. ಹೀಗಾಗಿ ಈಗ ಸಿದ್ದರಾಮಯ್ಯ ಅವರ ನಿರ್ಗಮನ ಅವರ ಪಾಳೆಯವನ್ನು ಆಕ್ಸ್ಯೋಶಕ್ಕೆ ದೂಡಿದೆಯಾದರೂ ಅದರ ಪರಿಣಾಮವಾಗಿ ತತ್‌ಕ್ಷಣ ಸರಕಾರಕ್ಕೆ ಅಪಾಯವಾಗುತ್ತದೆ ಅನ್ನಿಸುತ್ತಿಲ್ಲ.

ಆದರೆ ಇದೆಲ್ಲದರ ನಡುವೆ ಗಮನಿಸಬೇಕಾದ ಸಂಗತಿ ಎಂದರೆ ಮುಂದಿನ ವಿಧಾನಸಭಾ ಚುನಾವಣೆಯಲ್ಲಿ ಇದರ ವ್ಯತಿರಿಕ್ತ ಪರಿಣಾಮ ಕಾಣುವುದು ನಿಜ.

ಯಾಕೆಂದರೆ ಒಬ್ಬ ಜನನಾಯಕನ ಪದಚ್ಯುತಿಯನ್ನು ಮೇಲು ಮಟ್ಟದಲ್ಲಿ ಬೆಂಬಲಿಗರು ಸಹಿಸಿಕೊಂಡರೂ ತಳ ಮಟ್ಟದಲ್ಲಿ ಕೆಲಸ ಮಾಡುವ ಮತ ಬ್ಯಾಂಕು ಸಹಿಸಿಕೊಳ್ಳುವುದಿಲ್ಲ.

ಹೀಗಾಗಿಯೇ 1980ರಲ್ಲಿ ಅರಸರನ್ನು ಪದಚ್ಯುತಗೊಳಿಸಿದ ಕಾಂಗ್ರೆಸ್ 1983ರ ವಿಧಾನಸಭೆ ಚುನಾವಣೆಯಲ್ಲಿ ಹೀನಾಯ ಸೋಲು ಅನುಭವಿಸಿತು.

ಇದೇ ರೀತಿ 1990ರಲ್ಲಿ ವೀರೇಂದ್ರ ಪಾಟೀಲ್ ಮತ್ತು 1992ರಲ್ಲಿ ಬಂಗಾರಪ್ಪನವರನ್ನು ಪದಚ್ಯುತಗೊಳಿಸಿದ ಕಾಂಗ್ರೆಸ್ 1994 ಚುನಾವಣೆಯಲ್ಲಿ ಘನಘೋರ ಸೋಲು ಅನುಭವಿಸಿತು.

ಮುಂದಿನ ವಿಧಾನಸಭಾ ಚುನಾವಣೆಯಲ್ಲಿ ಈ ಇತಿಹಾಸ ಪುನರಾವರ್ತನೆಯಾಗುವ ಸಾಧ್ಯತೆ ಹೆಚ್ಚು.

ದೇವರಾಜ ಅರಸು

ವೀರೇಂದ್ರ ಪಾಟೀಲ್

ಬಂಗಾರಪ್ಪ

ಸಿದ್ದರಾಮಯ್ಯ

ಕೆಳಗಿಳಿದ ಮುಖ್ಯಮಂತ್ರಿಗಳು

ಅಲ್ಲಿಗೆ ಮುಂಬರುವ ದಿನಗಳು ಕಾಂಗ್ರೆಸ್ ಸರಕಾರದ ಪಾಲಿಗೆ ಸಂಕಷ್ಟದ ದಿನಗಳಾಗುವುದು ಸ್ಪಷ್ಟ.

ಪರಿಣಾಮ, ಕರ್ನಾಟಕದ ನೆಲೆಯಲ್ಲಿ ಮರಳಿ ತಲೆ ಎತ್ತಲು ಬಿಜೆಪಿ–ಜೆಡಿಎಸ್ ಮೈತ್ರಿಕೂಟಕ್ಕೆ ಅನುಕೂಲವಾಗಲಿದೆ.

ಅಂದ ಹಾಗೆ, ಕಳೆದ ನಾಲ್ಕು ದಶಕಗಳಿಗೂ ಹೆಚ್ಚು ಕಾಲದಿಂದ ಯಾವುದೇ ಪಕ್ಷ ಸತತವಾಗಿ ಅಧಿಕಾರ ಹಿಡಿದಿಲ್ಲ.

ಇಂಥ ಹಿನ್ನೆಲೆ ಇರುವ ಕರ್ನಾಟಕದಲ್ಲಿ ಆಳುವ ಪಕ್ಷ ಅತ್ಯಂತ ದುರ್ಬಲ ಸ್ಥಿತಿಗೆ ಬಂದರೆ ಮರಳಿ ಸುಧಾರಿಸಿಕೊಳ್ಳಲು ಅದಕ್ಕೆ ದಶಕದಷ್ಟು ಸುದೀರ್ಘ ಕಾಲವೇ ಬೇಕಾಗಬಹುದು.

ಚುರುಕುಗೊಂಡಿದ್ದಾರೆ ದೋಸ್ತಿಗಳು!

ಗಮನಿಸಬೇಕಾದ ಸಂಗತಿ ಎಂದರೆ, ಸಿದ್ದರಾಮಯ್ಯ ಅವರು ಅಧಿಕಾರದಿಂದ ಕೆಳಗಿಳಿದ ಅನಂತರ ಬಿಜೆಪಿ ಮತ್ತು ಜೆಡಿಎಸ್ ನಾಯಕರು ಸಕ್ರಿಯರಾಗಿರುವ ರೀತಿ.

ಮೂಲಗಳ ಪ್ರಕಾರ ರಾಜ್ಯ ಕಾಂಗ್ರೆಸ್‌ನ ಹಲವು ಶಾಸಕರು ಈಗಾಗಲೇ ಬಿಜೆಪಿ ಮತ್ತು ಜೆಡಿಎಸ್ ನಾಯಕರ ಸಂಪರ್ಕದಲ್ಲಿದ್ದಾರೆ. ಅರ್ಥಾತ್, ಮುಂದಿನ ವಿಧಾನಸಭಾ ಚುನಾವಣೆಯ ಹೊತ್ತಿಗೆ ಕಾಂಗ್ರೆಸ್ ಪಕ್ಷ ತೊರೆದು ಬಿಜೆಪಿ ಯಾ ಜೆಡಿಎಸ್ ಪಕ್ಷಗಳಿಗೆ ಸೇರುವ ಯೋಚನೆಯಲ್ಲಿದ್ದಾರೆ.

ಹೀಗಾಗಿ ಇವತ್ತು ಕರ್ನಾಟಕದ ರಾಜಕಾರಣದಲ್ಲಿ ಶುರುವಾಗಿರುವ ಅಸ್ಥಿರತೆ ದಿನದಿಂದ ದಿನಕ್ಕೆ ಉಲ್ಬಣಿಸುತ್ತಾ ಒಂದು ಆಯೋಮಯ ವಾತಾವರಣವನ್ನು ಸೃಷ್ಟಿಸಲಿರುವುದು ನಿಜ.

ಎಲ್ಲಕ್ಕಿಂತ ಮುಖ್ಯವಾಗಿ 2023ರ ವಿಧಾನಸಭಾ ಚುನಾವಣೆಯಲ್ಲಿ ಯಾವ ಮತ ಬ್ಯಾಂಕು ಕಾಂಗ್ರೆಸ್ ಜತೆ ನಿಂತು ಅಧಿಕಾರ ಹಿಡಿಯಲು ಕಾರಣವಾಗಿತ್ತೋ, ಆ ಮತ ಬ್ಯಾಂಕು ಈಗ ಛಿದ್ರವಾಗಲಿದೆ.

ಇದನ್ನು ಸರಿಪಡಿಸಿಕೊಳ್ಳಲು ಕಾಂಗ್ರೆಸ್ ಪಕ್ಷಕ್ಕೆ ಸಾಧ್ಯವೇ ಇಲ್ಲ.

ಸಿದ್ದರಾಮಯ್ಯ ಅವರ ನಿರ್ಗಮನದ ಹಿನ್ನೆಲೆಯಲ್ಲಿ ಮೂಡಿರುವ ಈ ಆತಂಕ ಕಡಿಮೆಯಾಗಲು ಸಾಧ್ಯವೇ ಇಲ್ಲ.

ಇದು ಕಾಂಗ್ರೆಸ್ ವರಿಷ್ಠರಿಗೆ ಗೊತ್ತಿಲ್ಲ ಅಂತಲೂ ಅಲ್ಲ, ಆದರೆ ಇದನ್ನು ಸರಿಪಡಿಸುವ ಮಾರ್ಗಗಳೂ ಅವರಿಗೆ ಗೊತ್ತಾಗುತ್ತಿಲ್ಲ.

ಅಂದರೆ, 1980ರಲ್ಲಿ ಮುಖ್ಯಮಂತ್ರಿ ಹುದ್ದೆಯಿಂದ ದೇವರಾಜ ಅರಸರು ಪತನಗೊಂಡ ಅನಂತರ ಇಲ್ಲಿ ಕಾಂಗ್ರೆಸ್ ಪಕ್ಷದ ಸ್ಥಿತಿ ಏನಾಗಿತ್ತೋ, ಇವತ್ತು ಕೂಡಾ ಅದೇ ಪರಿಸ್ಥಿತಿ ಕಾಣಿಸಿಕೊಂಡಿದೆ.

ಇದೇ ಸದ್ಯದ ವಿಶೇಷ. ■

ನಿಗೂಢ ಲಕೋಟೆ

ಅಧ್ಯಾಯ - 10

❑ ಎಸ್. ಜಿ. ಶಿವಶಂಕರ್

ಧಾರಾವಾಹಿ

ಹಿಂದಿನ ಸಂಚಿಕೆಯಿಂದ...

ವಕೀಲರು ಹಾಗೂ ಕುಟುಂಬಿಕರ ಮುಂದೆ ಯಶವಂತರಾಯರ ಬ್ಯಾಂಕ್ ಲಾಕರ್ ಒಡೆಯಲಾಯಿತು. ಅದರಲ್ಲಿ ಅವರ ಪತ್ನಿಗೆ ಸೇರಿದ ಒಡವೆಗಳು ಹಾಗೂ ಕೆಲವು ಕಾಗದ ಪತ್ರಗಳಿದ್ದವು. ಉಳಿದವರಿಗೆ ಆ ಕಾಗದ ಪತ್ರಗಳಲ್ಲಿ ಆಸ್ತಿ ವಿವರಗಳು ಕಂಡರೆ, ಪತ್ತೇದಾರ ವಿಕ್ರಮನ ಚುರುಕು ಕಣ್ಣುಗಳಿಗೆ ವಿಶಿಷ್ಟ ಸಂಖ್ಯೆಯೊಂದು ಕಂಡಿತು. ಆ ಸಂಖ್ಯೆ ಏನಿರಬಹುದು ಎಂದು ಹುಡುಕುತ್ತಾ ಹೋದಂತೆ ಮನೆಯೊಂದರ ಜಾಡು ದೊರಕಿತು.

ಮುಂದೆ ಓದಿ...

ಲಕೋಟೆ ನೀಡಿದ ಸುಳಿವು

ಮನೆ ಹುಡುಕುವುದು ಸುಲಭವಾಗಿರಲಿಲ್ಲ. ಮನೆ ನಂಬರುಗಳು ವ್ಯವಸ್ಥಿತವಾಗಿರಲಿಲ್ಲ. ಒಂದು ಬೀದಿಯ ಕೊನೆಯ ನಂಬರು ಮುಂದಿನ ಅಥವಾ ಹಿಂದಿನ ಬೀದಿಯಲ್ಲಿ ಮುಂದುವರಿದಿರಲಿಲ್ಲ! ಅಲ್ಲಿನ ವ್ಯವಸ್ಥೆ ಅರ್ಥವಾಗದೆ, ಅರ್ಧ ಗಂಟೆ ಹಿಂದು ಮುಂದಿನ ಬೀದಿಗಳಲ್ಲಿ ಓಡಾಡಿ, ಸುಮಾರು ಹತ್ತು ಜನರನ್ನು ಕೇಳಿದ ಮೇಲೆ ಮನೆ ಸಿಕ್ಕಿತು.

ನಂಬರ್ 520ರಲ್ಲಿ ಕಂಡಿದ್ದು ದೊಡ್ಡ ಹಳೆಯ ಮನೆ. ಅದು ಕಾರ್ನರ್ ಮನೆ. ನೂರು ನೂರಿಪ್ಪತ್ತು ವಿಸ್ತೀರ್ಣದ ಸೈಟಿನಲ್ಲಿ ಕಟ್ಟಿದ ಮನೆ. ಅದು ಯಶವಂತರಾಯರ ರಹಸ್ಯ ಹಿಡಿದಿಟ್ಟರಲಾರದು. ಅದು ಸಾಕಷ್ಟು ಸ್ಥಿತಿವಂತರ ಮನೆ. ಜೊತೆಗೆ 520 ವೈಪಿಎಮ್-ಔ ಎನ್ನುವುದರಲ್ಲಿ ಔ ಎನ್ನುವ ಒಂದಕ್ಷರ ಅದು ದೊಡ್ಡ ಮನೆಯಲ್ಲ! ಅದು ಔಟ್ ಹೌಸ್ ಎನ್ನುವುದು ಸ್ಪಷ್ಟಪಡಿಸಿತು. ದೊಡ್ಡ ಮನೆಯ ಪಕ್ಕದ ರಸ್ತೆಯಲ್ಲಿ ಸಾಗಿದರೆ ಮನೆಯ ಪಕ್ಕದಲ್ಲೂ ಒಂದು ಗೇಟು ಕಂಡಿತು! ಅದು ಹಿಂದಿದ್ದ ಔಟ್‌ಹೌಸ್‌ಗೆ ಪ್ರವೇಶ! ದೊಡ್ಡ ಮನೆಯವರು ಹಿಂದಿನ ಮನೆಯವರಿಗೆ ಮಾಡಿದ್ದ ಪ್ರತ್ಯೇಕ ವ್ಯವಸ್ಥೆ 520 ವೈಪಿಎಮ್-ಔ ಎಂಬ ಕೋಡ್ ಈಗ ತನ್ನ ರಹಸ್ಯ ಕಳಚಿತ್ತು! ಅದು ಯಶವಂತಪುರದ ಮನೆ ನಂಬರು 520ರ ಔಟ್ ಹೌಸ್! ಗೇಟು ತೆರೆದು ಒಳಗೆ ಹೋಗಿ ನೋಡಿದಾಗ ಔಟ್ ಹೌಸ್‌ನ ರೂಪುರೇಷೆ ಕಂಡಿತು. ಸುಮಾರು ಹನ್ನೆರಡು ಅಡಿ ಅಗಲ ಮತ್ತು ಮೂವತ್ತು ಅಡಿ ಉದ್ದಕ್ಕಿದ್ದ ಮನೆ ಅದು. ನಿವೇಶನದ ಉಳಿದ ಭಾಗವನ್ನು ದೊಡ್ಡ ಮನೆ ಆಕ್ರಮಿಸಿಕೊಂಡಿತ್ತು.

ಔಟ್ ಹೌಸ್ ಮನೆಯ ಬಾಗಿಲು ತಳ್ಳಿದ ವಿಕ್ರಮ್. ಬಾಗಿಲಿಗೆ ಹಾಕಿದ್ದ ಡೋರ್ ಲಾಕ್ ವಿಕ್ರಮ್‌ನನ್ನು ಅಣಕಿಸಿತು! ಅಂದರೆ ಮನೆಯಲ್ಲಿ ಯಾರೂ ಇಲ್ಲ! ಡೋರ್‌ಲಾಕ್ ಅದನ್ನು ಸ್ಪಷ್ಟಪಡಿಸಿತು. ಅಥವಾ ಮನೆಯ ಒಳಗಿದ್ದೂ ಒಳಗಿನಿಂದಲೇ ಡೋರ್‌ಲಾಕ್ ಮಾಡಿಕೊಳ್ಳಬಹುದಲ್ಲ? ಮನೆಯಲ್ಲಿ ಯಾರಾದರೂ ಇದ್ದರೆ ಹೊರಗೆ ಬಂದಾರು ಎಂಬ ಲೆಕ್ಕಾಚಾರದೊಂದಿಗೆ ವಿಕ್ರಮ್ ಮೆಲ್ಲನೆ ಬಾಗಿಲ ಮೇಲೆ ಟ್ಯಾಪ್ ಮಾಡಿದ. ಕೆಲವು ನಿಮಿಷ ಮನೆಯೊಳಗೆ ಏನಾದರೂ ಶಬ್ದವಾದೀತಾ ಎಂದು ಕಾದು ನೋಡಿದ. ಮನೆಯೊಳಗೆ ಯಾರೂ ಇಲ್ಲ ಎನ್ನುವುದು ಖಾತ್ರಿಯಾಯಿತು. ಮತ್ತೊಮ್ಮೆ ಜೋರಾಗಿ ಬಾಗಿಲು ಬಡಿದ. ಆಗಲೂ ಒಳಗಿಂದ ಯಾವುದೇ ಪ್ರತಿಕ್ರಿಯೆ ಬರಲಿಲ್ಲ! ಕೊನೆಯ ಪ್ರಯತ್ನವನ್ನೂ ಮಾಡಿ ನೋಡೋಣ ಎನ್ನಿಸಿತು. ಏಕಸ್ಮಾತ್ ಮನೆಯೊಳಗಿಂದ ಯಾರು ಬಂದಾರು ಎಂದು ತಿಳಿಯುವುದು ಅವನ ಪ್ರಯತ್ನವಾಗಿತ್ತು.

ಸಾಮಾನ್ಯವಾಗಿ ಎಲ್ಲ ಮನೆಯ ಕಾಲಿಂಗ್ ಬೆಲ್ ಸ್ವಿಚ್ ಬಾಗಿಲ ಫ್ರೇಮ್ ಮೇಲೆ ಇರುತ್ತದೆ. ಅಂಥಾದ್ದು ಏನಾದರೂ ಕಂಡೀತಾ ಎಂದು ವಿಕ್ರಮ್ ಹುಡುಕಿದ. ಬಾಗಿಲಿನ ಪಕ್ಕದ ಬಲ ಬದಿಯ ಗೋಡೆಯ ಮೇಲೆ ಕಾಲಿಂಗ್ ಬೆಲ್ ಸ್ವಿಚ್ ಕಂಡಿತು! ಕಾಲಿಂಗ್ ಬೆಲ್ ಸ್ವಿಚ್ ಒತ್ತಿ ಪ್ರತಿಕ್ರಿಯೆಗಾಗಿ ಕಾದ. ಆಗಲೂ ಒಳಗಿಂದ ಯಾವುದೇ ಪ್ರತಿಕ್ರಿಯೆ ಬರಲಿಲ್ಲ! ಅಂದರೆ ಮನೆಯೊಳಗೆ ಮನೆಯೊಡೆಯನಿಲ್ಲ! ವಿಕ್ರಮ್ ಸಮಯ ನೋಡಿಕೊಂಡ. ಆರು ಗಂಟೆ, ನನ್ನ ಪ್ರಯತ್ನ ವ್ಯರ್ಥವಲ್ಲ ಎಂದು ತನ್ನಷ್ಟಕ್ಕೆ ತಾನೇ ಸಮಾಧಾನ ಹೇಳಿಕೊಂಡು ಈಚೆ ಬಂದ. ಮುಂದಿದ್ದ ಮನೆಯಲ್ಲಿ ವಿಚಾರಿಸಿದ. ಹದಿನೆಂಟು ವರ್ಷದ ಹುಡುಗನೊಬ್ಬ ವಿಕ್ರಮ್ ಪ್ರಶ್ನೆಗಳಿಗುತ್ತರಿಸಲು ಈಚೆ ಬಂದ.

''ಹಿಂದುಗಡೆ ಮನೆಯೋರು ಬಂದಿಲ್ವಾ?''

''ಅವರಾ? ಬೆಳಿಗ್ಗೆ ಇದ್ದರು... ಮತ್ತೆ ಯಾವಾಗ ಬರ್ತಾರೋ ಗೊತ್ತಿಲ್ಲ. ಸಾಮಾನ್ಯವಾಗಿ ಅವರು ಮನೇಲಿರೋದಿಲ್ಲ.''

''ಹಾಗಾದರೆ ಅವರಲ್ಲಿ ವಾಸವಾಗಿಲ್ಲವಾ?''

''ಇಲ್ಲ, ವಾರಕ್ಕೊಂದು ಸಲವೋ ಇಲ್ಲಾ ಎರಡು ಸಲವೋ ಬಂದು ಒಂದು ರಾತ್ರಿ ಇದ್ದು ಹೋಗ್ತಾರೆ.''

''ಅವರ ಹೆಸರು?''

''ನನಗೆ ಗೊತ್ತಿಲ್ಲ, ನಮ್ಮ ತಾತಂಗೆ ಗೊತ್ತು. ಅವರನ್ನ ಕರೀಲಾ...?''

''ಬೇಡ. ನೀವು ಹೇಳಿದ್ರಲ್ಲಾ ಅಷ್ಟು ಸಾಕು. ಅವರ ಜೊತೆ ಫ್ಯಾಮಿಲೀನು ಇದಾರಾ?'' ಹುಡುಗನಿಗೆ ಅನುಮಾನ ಬಾರದಂತೆ ತೀರಾ ಸಾಮಾನ್ಯ ವಿಷಯ ಕೇಳುವಂತೆ ವಿಕ್ರಮ್ ಕೇಳಿದ,

''ಅವರೂ ಅಷ್ಟೆ. ಯಾವಾಗಲಾದರೊಮ್ಮೆ ಬಂದು ಹೋಗ್ತಾರೆ. ಅವರು ಸದ್ಯಕ್ಕೆ

ಯಾವುದೋ ಹಳ್ಳೀಲಿ ವಾಸ ಇದಾರಂತೆ...''

ವಿಕ್ರಮ್ ತಲೆಯಲ್ಲಿ ನೂರಾರು ಯೋಚನೆಗಳು.

''ಹಾಗಾದ್ರೆ ಇವತ್ತವರು ಮನೆಗೆ ಬರೋಲ್ಲವೆ?''

''ಮುಕ್ಕಾಲು ಪಾಲು ಬರೋದಿಲ್ಲ ಏನಾದರೂ ಹೇಳ್ಬೇಕಾಗಿತ್ತೇನು?''

''ಏನೂ ಇಲ್ಲ. ನಾನೇ ಬಂದು ನೋಡ್ತೇನೆ...''

ವಿಕ್ರಮ್ ಕಾಂಪೌಂಡಿನಿಂದೀಚೆಗೆ ಬಂದ.

ಯಶವಂತರಾಯರ ಕೇಸು ಸ್ವಲ್ಪಸ್ವಲ್ಪವಾಗಿ ಬಿಡಿಸಿಕೊಳ್ಳಲಾರಂಭಿಸಿದೆ. ಇದೊಂದು ರಾತ್ರಿಯಲ್ಲಿ ಎಲ್ಲವನ್ನೂ ಕಂಡು ಹಿಡಿದುಬಿಡುವೆನೆಂಬ ಉತ್ಸಾಹ ಅವನಲ್ಲಿ ಮೂಡಿತು.

ಪೊಲೀಸ್, ಕೇಂದ್ರ ದಾಖಲೆಗಳ ಸಂಗ್ರಹದಿಂದ ತಾನು ಹೆಕ್ಕಿ ತೆಗೆದ ವಿಷಯಗಳನ್ನು ಮತ್ತೊಮ್ಮೆ ನೆನಪಿಗೆ ತಂದುಕೊಂಡ.

ಯಶವಂತಪುರದಿಂದ ಹೊರಟವನು ಸೀದಾ ವಿಲ್ಸನ್ ಗಾರ್ಡನ್‌ಗೆ ತೆರಳಿದ. ಅಲ್ಲಿ ಕಾರ್ಪೊರೇಷನ್‌ಗೆ ಸಂಬಂಧಿಸಿದ ಒಂದು ಆಫೀಸಿನಲ್ಲಿ ಬಹಳ ಹೊತ್ತು ಕಳೆದ. ಅಲ್ಲಿ ಸಂಬಂಧಪಟ್ಟವರ ಜೊತೆ ವಿಚಾರಣೆ ನಡೆಸಿದ. ಎಂಟು ಗಂಟೆಯ ನಂತರ ಈಚೆ ಬಂದ.

ಆಫೀಸಿನಲ್ಲಿ ಕೂತು ಶರತ್ ಮೊಬೈಲಿಗೆ ಫೋನು ಮಾಡಿದ. ನೆಟ್‌ವರ್ಕ್ ಸಮಸ್ಯೆಯಿಂದ ಕನೆಕ್ಟಾಗಲಿಲ್ಲ. ಛೇ... ಎಂಥಾ ಸಮಯದಲ್ಲಿ ಈ ಪ್ರಾಬ್ಲಮ್ಮು? ಲ್ಯಾಂಡ್‌ಲೈನು? ಎಸ್...! ಆದರೆ ಮನೆಯವರು ಯಾರಾದರೂ ಮಾತುಗಳನ್ನು ಕೇಳಬಹುದು! ನೋಡೋಣ ಹುಷಾರಾಗಿ ಮಾತನಾಡಿದರೆ ಸಮಸ್ಯೆಯಾಗುವುದಿಲ್ಲ ಎನಿಸಿತು. ಲ್ಯಾಂಡ್‌ಲೈನಿಗೇ ಫೋನು ಮಾಡಿದ ವಿಕ್ರಮ್. ಅದೂ ಕನೆಕ್ಟ್ ಆಗಲಿಲ್ಲ. ಮೂರು ಸಲ ಪ್ರಯತ್ನಿಸಿದ ಮೇಲೆ ಕನೆಕ್ಟಾಯಿತು. ಆದರೆ ಯಾರೂ ಫೋನು ರಿಸೀವ್ ಮಾಡಲಿಲ್ಲ! ವಿಕ್ರಮ್ ಕಾದ ಹೆಂಚಿನ ಮೇಲೆ ನಿಂತವನಂತೆ ಚಡಪಡಿಸಿದ. ಈಗ ಸಮಯ ಅಮೂಲ್ಯ! ಒಂದೊಂದು ಸೆಕೆಂಡೂ ಬಹಳ ಮುಖ್ಯ. ತಡ ಮಾಡಿದರೆ ಯಶವಂತರಾಯರ ಕೊಲೆಗಾರ ಕಣ್ತಪ್ಪಿಸಿ ಹೋಗುವ ಸಾಧ್ಯತೆಯಿದೆ. ಇದುವರೆಗೂ ಕೊಲೆಗಾರ ಆಡಿದ ಕಣ್ಣು ಮಚ್ಚಾಲೆಯಾಟಕ್ಕೆ ಶೀಘ್ರದಲ್ಲಿಯೇ ಮಂಗಳ ಹಾಡುವ ಸಾಧ್ಯತೆಯಿದೆ!

ಕೊನೆಗೊಮ್ಮೆ ಕೆಜಿ ಹಳ್ಳಿಯಲ್ಲಿ ಯಶವಂತರಾಯರ ಮನೆಯಲ್ಲಿರುವ ಯಾರೋ ಫೋನ್ ರಿಸೀವ್ ಮಾಡಿದಾಗ ವಿಕ್ರಮ್ ಉದ್ವೇಗದಿಂದ ಕಂಪಿಸಿದ.

ಆಗತಾನೆ ಮನೆಗೆ ಬಂದಿದ್ದ ಶರತ್ ಲೈನಿನ ಮೇಲೆ ಬಂದಿದ್ದ.

''ಶರತ್?''

''ಯಸ್ ಬಾಸ್ ಶರತ್ ಸ್ಪೀಕಿಂಗ್.''

''ಹತ್ರ ಯಾರಿದ್ದಾರೆ?''

''ಯಾರೂ ಇಲ್ಲ ಮಾತನಾಡಬಹುದು.''

''ಹೇಗಿದೆ ಪರಿಸ್ಥಿತಿ?''

''ನಾಟ್ ಬ್ಯಾಡ್ ಬಾಸ್. ಮುನಿಯಪ್ಪ ಆರು ಗಂಟೆಗೆ ಊರಿಗೆ ಬಂದಿದಾನೆ. ಬಂದಾಗಿನಿಂದ ಅಂಗಡಿ ತೆರೆದಿಲ್ಲ. ಒಳಗಿಂದ ಚಿಲಕ ಹಾಕೊಂಡಿದಾನೆ. ಏನ್ಮಾಡ್ತಿದಾನೇಂತ ಗೊತ್ತಿಲ್ಲ.''

''ಇನ್ನೊಂದು ವಿಷಯ ಹೇಳಿದ್ದೆನಲ್ಲ?''

''ಅದೇ ರಸ್ತೆಗಳಲ್ಲಿನ ಟೀ ಅಂಗಡಿಗಳಲ್ಲಿ ವಿಚಾರಣೆ... ಅದೇನೋ ಯಾವ ರಿಸಲ್ಟೂ ಕೊಡಲಿಲ್ಲ. ಯಾರಿಗೂ ನೆನಪಿಲ್ಲ. ಆದ್ರೆ ಒಂದು ಟೀ ಅಂಗಡಿಯವನಿಂದ ಒಂದು ಮುಖ್ಯವಾದ ವಿಷಯ ತಿಳಿಯಿತು.''

''ಏನು?''

''ಫೋನಲ್ಲೇ ಹೇಳಲೆ?''

''ಬೇಡ. ಒಂದ್ಕೆಲಸ ಮಾಡು. ಸೀದಾ ನೀನು ಬೆಂಗಳೂರಿಗೆ ಬಾ. ನೇರ ಆಫೀಸಿಗೆ ಬರಬೇಕು. ಇನ್ನೊಂದು ಗಂಟೆ ಒಳಗೆ ಬರಬೇಕು. ಒಂದು ವೇಳೆ ನಾನಿಲ್ಲದಿದ್ದರೂ ನೀನು ಆಫೀಸಿನಲ್ಲೇ ನನಗೋಸ್ಕರ ಕಾಯ್ತಾ ಇರು.''

''ಆದ್ರೆ... ಮುನಿಯಪ್ಪ?''

''ಸದ್ಯಕ್ಕೆ ಮುನಿಯಪ್ಪನ ಬಗ್ಗೆ ತಲೆ ಕೆಡಿಸಿಕೋಬೇಕಾಗಿಲ್ಲ. ಬೇಗ ಹೊರಡು.''

''ಇಗೋ... ಹೊರಟೆ.''

★ ★ ★

ಪತ್ನಿ ಸರಳಾಳಿಂದ ಫೋನು ಬಂದಾಗಿನಿಂದ ಮೂರ್ತಿ ಯೋಚನೆಯಲ್ಲಿ ಮುಳುಗಿದ್ದ. ವ್ಯಾಪಾರದಲ್ಲಿ ಮನಸ್ಸು ನಿಲ್ಲುತ್ತಿರಲಿಲ್ಲ. ಅವನ ಊಹೆಯೆಲ್ಲಾ ಸುಳ್ಳಾಗಿತ್ತು. ಕಲ್ಪನೆಗಳೆಲ್ಲಾ ತಲೆಕೆಳಗಾಗಿದ್ದವು. ಇಂಥಾ ಘಟನೆ, ಹೀಗೆ ನಡೆಯಬಹುದೆಂದು ಅವನು ಚಿಂತಿಸಿಯೇ ಇರಲಿಲ್ಲ. ಇನ್ನು ತಡಮಾಡಬಾರದು. ಆ ಪತ್ತೇದಾರರಿಗೆ ಕೇಸು ಕೊಡಬಾರದಿತ್ತು. ಈಗದು ತನಗೇ ಮುಳುವಾಗುತ್ತಿದೆ!

ಪತ್ತೇದಾರರಿಬ್ಬರ ಸಾಮರ್ಥ್ಯ ತಾನು ತಪ್ಪಾಗಿ ಅಳೆದೆ!

ಈಗ ಬೇರೆ ದಾರಿಯಿಲ್ಲ. ಬೇಗನೆ ತಾನು ಕಾರ್ಯನಿರತನಾಗಬೇಕು.

ಮೂರ್ತಿಯ ಮನಸ್ಸಿನಲ್ಲಿ ನಡೆಯುತ್ತಿದ್ದ ಯೋಚನೆಗೂ ಮತ್ತು ಗೋಡೆಯ ಮೇಲಿನ ಗಡಿಯಾರಕ್ಕೂ ಯಾವ ಸಂಬಂಧವೂ ಇರಲಿಲ್ಲ. ಎರಡು ಸ್ವತಂತ್ರ ಘಟನೆಗಳಾಗಿ ಘಟಿಸುತ್ತಲೇ ಇದ್ದವು.

ಅಂಗಡಿಯ ನೌಕರರು ಐದು ನಿಮಿಷಗಳ ಕಾಲ ತಮ್ಮ ಮಾಲೀಕರ ವರ್ತನೆಯನ್ನು ಗಮನಿಸಿದರು. ಅವರು ಮೂರ್ತಿ ಗಾಢ ಚಿಂತೆಯಲ್ಲಿ ಮುಳುಗಿರೋದೂ ಮತ್ತು ಆ ಚಿಂತೆಯಲ್ಲಿ ಸಮಯವನ್ನು ಮರೆತಿರುವುದು ಬೇಗನೆ ತಿಳಿದುಕೊಂಡರು.

ತಮ್ಮಷ್ಟಕ್ಕೆ ತಾವು ಅಂಗಡಿಯ ಬಾಗಿಲುಗಳನ್ನು ಮುಚ್ಚುವ ಕೆಲಸದಲ್ಲಿ ತೊಡಗಿದರು.

ಆಗಷ್ಟೆ ಸಮಯ ಎಂಟೂವರೆಯಾಗಿರುವುದರ ಅರಿವು ಮೂರ್ತಿಗಾಯಿತು. ಈ ಸೋಂಬರಿಗಳಿಗೇನು? ಟೈಮಾಯಿತು. ಬಾಗಿಲು ಮುಚ್ಚಿದರು ಎಂದು ತಮ್ಮ ನೌಕರರನ್ನು ಬೈದುಕೊಂಡ. ಕ್ಯಾಷ್ ಬಾಕ್ಸ್ ಮುಚ್ಚಿ ಮತ್ತೊಮ್ಮೆ ಪೂಜೆ ಮಾಡಿ ಆ ದಿನದ ವ್ಯವಹಾರವನ್ನು ಮುಕ್ತಾಯ ಮಾಡುವ ಕ್ರಿಯೆಯಲ್ಲಿ ತೊಡಗಿದ.

ತಿಳಿದೂ ತಿಳಿದೂ ಡಿಟೆಕ್ಟೀವ್ ವಿಕ್ರಮ್‌ನ ಬಳಿ ತಾನೇಕೆ ಹೋದೆ, ತಾನಾಗಿಯೆ ಪತ್ತೆ ಮಾಡಿ ಎಂದು ಕೇಸು ಕೈಗಿಟ್ಟೆ! ಅದೇ ತಾನು ಮಾಡಿದ ತಪ್ಪು? ಆಗ ತನಗೆ ಕಲ್ಪನೆ ಇರಲಿಲ್ಲ ಹೀಗೆಲ್ಲಾ ಆದೀತು ಎಂದು!

ಇಷ್ಟಾದರೂ ಅವರಿಂದ ಮುಖ್ಯವಾದ ಕೆಲಸವನ್ನೇ ಮಾಡಲಾಗಿಲ್ಲ!

ಯಶವಂತರಾಯರ ಶರೀರ!!

ಅದನ್ನಿನ್ನೂ ಈ ಪತ್ತೇದಾರರು ಹುಡುಕಲಾಗಿಲ್ಲ! ಇನ್ನು ಕೊಲೆಗಾರನನ್ನು ಹುಡುಕುತ್ತಾರೆಯೆ? ಅನುಮಾನ! ಆದರೂ ಏನೋ ನಡೆಯುತ್ತಿದೆ. ತನಗೇ ಮುಳುವಾಗುವ ಪರಿಸ್ಥಿತಿ ಎದುರಾಗಬಹುದು!

ಸರಳಾಳ ಫೋನಿನ ಸುದ್ದಿ ಭಯ ಹುಟ್ಟಿಸುತ್ತದೆ! ಆದರೆ ಈ ಸ್ಥಿತಿಯಲ್ಲಿ ಹೆಚ್ಚೇನು ಮಾಡಲು ಸಾಧ್ಯ? ಎಲ್ಲವೂ ತನ್ನಂತೆಯೇ ಆಗಲಿ ಎಂದು ದೇವರನ್ನು ಬೇಡಿಕೊಳ್ಳಬೇಕಷ್ಟೆ!

ಆರೆ... ಹಾ! ರಾಮಣ್ಣ!!

ತಾನು ರಾಮಣ್ಣನೊಂದಿಗೆ ಈ ವಿಷಯ ಮಾತಾಡೇ ಇಲ್ಲ! ತಾನು ತತ್‌ಕ್ಷಣ ಮಾಡಬೇಕಾದ ಕೆಲಸವೇ ಅದು! ತಾನೇಕೆ ಅವರ ಬಗ್ಗೆ ಯೋಚಿಸಲೇ ಇಲ್ಲ? ಈ ಪತ್ತೇದಾರರ ಕೆಲಸಕ್ಕೂ ಒಂದು ಮಂಗಳವನ್ನು ಹಾಡಿಸಬಹುದು! ಆದರೆ ಒಂದೇ ಒಂದು ಅನುಮಾನ! ತಾನು ಯಶಸ್ವಿಯಾದೇನೆ?

ಅಂಗಡಿಯ ಆಳು ಬೀಗಗಳನ್ನು ಒಂದೊಂದಾಗಿ ಹಾಕಿದ ನಂತರ ಎರಡು ನಿಮಿಷ ಕಾದು ನಿಂತ. ಮೂರ್ತಿಗೆ ಕರ್ತವ್ಯ ಅರಿವಾಯಿತು. ಯಾಂತ್ರಿಕವಾಗಿ ಬಾಗಿಲಿನ ಬಳಿಗೆ ಹೋಗಿ ಪ್ರತಿಯೊಂದು ಬೀಗವನ್ನೂ ಎಳೆದು ನೋಡಿದ. ಎಲ್ಲವನ್ನೂ ಕೆಲಸದಾಳು ಸಮರ್ಪಕವಾಗಿ ಹಾಕಿದ್ದ. ಮಾಮೂಲಿನಂತೆ ಎಲ್ಲ ಸರಿಯಾಗಿದೆ ಎಂಬ ಭಾವದಲ್ಲಿ ತಲೆಯಲುಗಿಸಿದ. ಆದರೆ ಅವನ ಊಹೆ ತಪ್ಪಾಗಿತ್ತು! ಎಲ್ಲ ಸರಿಯಾಗಿರಲಿಲ್ಲ! ಕೊನೆಯ ಪಕ್ಷ ಯಶವಂತರಾಯರ ಸಾವಿನ ವಿಷಯದಲ್ಲಿ ಅವನ ಊಹೆ ತಪ್ಪಾಗಿತ್ತು.

ಅಂಗಡಿಯ ಆಳುಗಳೆಲ್ಲಾ ಹೋದರು. ಮೂರ್ತಿಯೊಬ್ಬನೇ ಎರಡು ನಿಮಿಷಗಳ ಕಾಲ ಅಂಗಡಿಯ ಮುಂದೆ ನಿಂತಿದ್ದವನು ಮತ್ತೇನೋ ನಿರ್ಧಾರ ತೆಗೆದುಕೊಂಡಂತೆ ತನ್ನ ಕಾರು ನಿಲ್ಲಿಸಿದ ಕಡೆಗೆ ನಡೆದ.

ಕಾರಿನ ಬಳಿಗೆ ಮೂರ್ತಿ ಬರುವುದಕ್ಕೂ ವಿಕ್ರಮ್ ಜೀಪು ಅಲ್ಲಿಗೆ ಬರುವುದಕ್ಕೂ ಸರಿಯಾಯಿತು!

ವಿಕ್ರಮ್ ಕಂಡೊಡನೆ ಮೂರ್ತಿಯ ಮುಖ ವಿವರ್ಣವಾಯಿತು!

★ ★ ★

''ಇವತ್ತು ನಿಂಗೆ ನಿದ್ರೆಯಿಲ್ಲ ಶರತ್.''

ವಿಕ್ರಮ್ ಜೂನಿಯರ್‌ನ ಹೆದರಿಸಿದ.

''ಆಗಲಿ ಸಾರ್. ಎಲ್ಲಿಕೆಲಸ ಹೇಳಿ?''

''ನಾನೊಂದು ಜಾಗದಲ್ಲಿ ನಿನ್ನನ್ನು ಬಿಟ್ಟು ಬರ್ತೀನಿ. ಆದರೆ ಇಡೀ ರಾತ್ರಿ ಜಾಗರಣೆ. ನಮ್ಮ ಪಾರ್ಟಿ ಬರುತ್ತೆ. ಬಂದು ಮನೆ ಸೇರುತ್ತೆ, ತತ್‌ಕ್ಷಣ ನಂಗೆ ರಿಂಗ್ ಮಾಡು. ಇವತ್ತು ರಾತ್ರಿ... ಆಫೀಸಲ್ಲೇ ನನ್ನ ಠಿಕಾಣಿ.''

''ಆಗ್ಲಿ ಸಾರ್. ನಿದ್ದೆಗೆಟ್ಟು ಬಹಳ ಕಾಲ ಆಗಿದೆ. ಅದೊಂಥರಾ ಅನುಭವ. ನಾವೆಷ್ಟು ಹೊತ್ತಿಗೆ ಹೋಗ್ಬೇಕು ಸಾರ್?''

''ಒಂಬತ್ತೂವರೆ ಮೇಲೆ.''

''ಅಷ್ಟೊತ್ತಿಗೆ ಊಟವಾದ್ರೂ ಮುಗಿಸಬಹುದಲ್ಲ ಸಾರ್?''

''ರೈಟ್... ಎಲ್ಲಿಗೆ ಹೋಗೋಣ?''

''ನಿಮ್ಮ ಫೇವರಿಟ್ ಹೊಟೇಲಿಗೇ ಹೋಗೋಣ.''

''ಹಾಗಾದ್ರೆ ಆ ಹೊಟೇಲ್ ಊಟ ನಿಂಗೂ ಇಷ್ಟ ಅಲ್ಲವಾ?''

ಶರತ್‌ನ ಮುಖದಲ್ಲಿ ನಗು ಮೂಡಿತು.

ಬೆಂಗಳೂರಿನ ಅತ್ಯುತ್ತಮವಾದ ಹೊಟೇಲಿಗೆ ಇಬ್ಬರೂ ಕಾಲಿಟ್ಟರು...

ಅವರಿಬ್ಬರೂ ತಾವು ಕೈಗೊಂಡಿರುವ ಕೇಸಿನ ಬಗೆಗೇ ಮಾತುಗಳನ್ನು ಆಡುತ್ತ ತಮಗೆ ಪ್ರಿಯವಾದ ಖಾದ್ಯಗಳನ್ನು ಸವಿಯುತ್ತಿದ್ದರು. ಈವರೆಗಿನ ತಮ್ಮ ತನಿಖೆಗಳನ್ನು ಒಂದೊಂದಾಗಿ ವಿಶ್ಲೇಷಣೆ ಮಾಡುತ್ತಿದ್ದರು. ಆ ತನಿಖೆಗಳಿಂದ ತಮಗಾದ ಅನುಕೂಲ, ದೊರೆತ ಮಾಹಿತಿ ಮುಂತಾದುವನ್ನು ಮೆಲುದನಿಯಲ್ಲಿ ಹೇಳಿಕೊಂಡರು.

ಮೊದಲಿಗೆ ಊಟ ಮುಗಿಸಿದವನೇ ವಿಕ್ರಮ್. ಕೈ ತೊಳೆದು ಸಿಗರೇಟ್ ಹಚ್ಚಿ ದೀರ್ಘವಾಗಿ ಹೊಗೆಯೆಳೆದುಕೊಂಡ ಸ್ವಲ್ಪ ದೂರದಲ್ಲಿ ಹೊಗುತ್ತಿದ್ದ ವ್ಯಕ್ತಿಯನ್ನು ನೋಡಿ ಆಶ್ಚರ್ಯದಿಂದ ''ಮೈ ಗಾಡ್!''

ಎಂದು ಉದ್ಗರಿಸಿದ.

ಶರತ್‌ಗೆ ಪ್ರತ್ಯೇಕ ವಿವರಣೆ ಬೇಕಾಗಿರಲಿಲ್ಲ. ಹಿಂದೆ ತಿರುಗಿ ವಿಕ್ರಮ್ ದೃಷ್ಟಿ ನೆಟ್ಟಿದ್ದ ಕಡೆ ನೋಡಿದ.

ಮುನಿಯಪ್ಪ!!

ಕೆ.ಜಿ. ಹಳ್ಳಿಯ ಆಗಸ ಮುನಿಯಪ್ಪ ಬೆಂಗಳೂರಿನ ಹೊಟೇಲಲ್ಲಿ!! ಅದೂ ದುಬಾರಿ ಹೊಟೇಲಲ್ಲಿ!! ಖಂಡಿತವಾಗಿಯೂ ಅವನ ತಿಂಗಳ ಆದಾಯದಲ್ಲಿ ಆ ಹೊಟೇಲಿನಲ್ಲಿ ನಾಲ್ಕು ದಿನವೂ ಊಟ ಮಾಡಲು ಸಾಧ್ಯವಿರಲಿಲ್ಲ! ಆಗಸ ಮುನಿಯಪ್ಪನಿಗೆ ಇನ್ನೊಂದು ಮುಖವಿದೆ! ಅದು ಬೆಂಗಳೂರಿನಲ್ಲಿ ಬೇರೆ! ಎರಡು ವ್ಯಕ್ತಿತ್ವವನ್ನು ಧಾರಣೆ ಮಾಡಲು ಏನು ಕಾರಣ? ಅದು ಯಶವಂತರಾಯರಿಗೆ ಸಂಬಂಧಿಸಿದ್ದೆ?

''ಬಾಸ್ ಈಗಲೇ ಅವನನ್ನು ನಿಲ್ಲಿಸಿ ಮಾತಾಡೋಣವೇ...?''

ಶರತ್ ಮೆಲುದನಿಯಲ್ಲಿ ಕೇಳಿದ.

''ಬೇಡ ಶರತ್! ಇದು ಸರಿಯಾದ ಸಮಯ ಅಲ್ಲ...''

ವಿಕ್ರಮ್ ತಡೆದ.

''ಬಾಸ್, ತಡ ಮಾಡಿದರೆ ಮುನಿಯಪ್ಪ ನಮ್ಮ ಕೈಗೆ ಸಿಗದಂತೆ ತಪ್ಪಿಸಿಕೊಂಡು ಹೋಗಬಹುದು.''

ಶರತ್ ಆತಂಕ ವ್ಯಕ್ತಪಡಿಸಿದ.

''ಇಲ್ಲ ಶರತ್ ಹಾಗೇನೂ ಆಗೊಲ್ಲ. ನನ್ನ ಯೋಚನೆ ಸರಿಯಾದ ದಿಕ್ಕಲ್ಲಿದ್ದರೆ ಶೀಘ್ರದಲ್ಲಿ ಮುನಿಯಪ್ಪ ನಮ್ಮನ್ನ ಮುಖಾಮುಖಿಯಾಗಲೇಬೇಕು. ಸದ್ಯಕ್ಕೆ ಅವನ ವಿಷಯ ಬೇಡ.''

''ಸರಿ ಸಾರ್. ನೀವು ಹೇಳಿದಂತೇ ಆಗಲಿ. ನಿಮ್ಮ ಪ್ಲಾನಿಂಗ್ ಇಲ್ಲಿವರೆಗೆ ಹುಸಿಯಾಗಿಲ್ಲ.''

''ಈ ಸಾರಿ ಐ ಯಾಮ್ ನಾಟ್ ಶೂರ್! ಬಟ್ ಐ ಯಾಮ್ ಟೇಕಿಂಗ್ ಚಾನ್ಸಸ್.''

ಅಷ್ಟರಲ್ಲಿ ಮುನಿಯಪ್ಪ ಹೊಟೇಲಿನಿಂದಾಚೆ ಹೋದ.

''ಸಾರ್, ನಾನು ಚೇಸ್ ಮಾಡಲೆ?''

''ಬೇಡ ಶರತ್. ಅದರ ಅವಶ್ಯಕತೆಯಿಲ್ಲ.''

ಆಶ್ಚರ್ಯದಿಂದ ಸೀನಿಯರ್‌ನ ಮುಖ ನೋಡಿದ ಶರತ್.

''ಅಕಸ್ಮಾತ್ ಅವನು ಬಂದರೆ?''

ಶರತ್ ಅನುಮಾನಿಸುತ್ತ ಕೇಳಿದ.

''ಅಕಸ್ಮಾತ್ ಬಂದರೆ ಮೊಬೈಲ್ ಉಪಯೋಗಿಸು. ಜಸ್ಟ್ ಒಂದು ರಿಂಗ್ ಮಾಡಿದ್ರೂ ನಂಗೆ ವಿಷಯ ಗೊತ್ತಾಗುತ್ತೆ. ಮೊಬೈಲು ವೈಬ್ರೇಶನ್ ಮೋಡಲ್ಲಿಟ್ಟಿರ್ತೀನಿ. ಸೂಚನೆ ಸಿಕ್ಕ ತತ್‌ಕ್ಷಣ ಹೇಗೋ ಬಚಾವಾಗ್ತೀನಿ.''

ಶರತ್‌ಗಿದ್ದ ಆತಂಕ ವಿಕ್ರಮ್‌ಗೆ ಇರಲಿಲ್ಲ.

''ಈಗ ಗಂಟೆ ಹನ್ನೆರಡು. ಹನ್ನೆರಡೂ ಕಾಲಿಗೆ ಒಂದು ಸಲ ರಿಂಗ್ ಮಾಡ್ತೀನಿ. ಅಷ್ಟರೊಳಗೆ ಏನಾದರೂ ಎಮರ್ಜನ್ಸಿ ಒದಗಿದರೆ ಮಾತ್ರ ಮಾತಾಡ್ತೀನಿ. ಇಲ್ಲದಿದ್ದರೆ ಹತ್ತು ನಿಮಿಷಕ್ಕೊಮ್ಮೆ ರಿಂಗ್ ಕೊಡ್ತಿರ್ತೀನಿ.''

ಶರತ್ ತನ್ನ ಕರ್ತವ್ಯ ನೆನಪು ಮಾಡಿಕೊಳ್ಳುತ್ತಾ ಹೇಳಿದ.

''ದಟ್ ಈಸ್ ರೈಟ್. ಈಗ ನಾನು ಹೊರಡ್ತೀನಿ. ಅರ್ಧ ಗಂಟೆಯ ನಂತರ ನನ್ನಿಂದ ಯಾವ ಪ್ರತಿಕ್ರಿಯೆಯೂ ಬಾರದಿದ್ದರೆ ನೀನು ಮನೆಯನ್ನು ಪ್ರವೇಶಿಸಲು ಪ್ರಯತ್ನ ಮಾಡು.''

ಕೊನೆಯ ಸೂಚನೆ ನೀಡಿ ವಿಕ್ರಮ್ ಜೀಪಿಂದ ಕೆಳಗಿಳಿದು ರಸ್ತೆಯ ಎರಡೂ ಕಡೆ ನೋಡಿದ. ಮಧ್ಯರಾತ್ರಿ ಸಮೀಪಿಸಿದ್ದರಿಂದ ರಸ್ತೆ ಪೂರಾ

'ತರಂಗ'ದ ಮುಂದಿನ ಧಾರಾವಾಹಿ
ಚಿನ್ನದ ಶಿಲುಬೆ
ಪಾಲ್ ಸುದರ್ಶನ್ ಅವರ
ಕುತೂಹಲಭರಿತ ಸಾಮಾಜಿಕ ಕಾದಂಬರಿ
ಕರುಣಾಲಯ ಚರ್ಚಿನ ಸ್ಮಶಾನದ ಉಸ್ತುವಾರಿ ನೋಡಿಕೊಳ್ಳುತ್ತಿದ್ದ ರಾಬರ್ಟ್‌ನಿಗೆ ಚರ್ಚ್ ಬಗ್ಗೆ ಅಪಾರ ಆದರ, ಅಭಿಮಾನ. ಎಲ್ಲರನ್ನೂ ತನ್ನ ಲಾಭಕ್ಕಾಗಿ ಬಳಸಿಕೊಳ್ಳುವ ಶಾಸಕ ಹೆನ್ರಿ ಯನ್ನು ಕಂಡರೆ ಅಷ್ಟೇ ಅಸಹನೆ, ಸಿಟ್ಟು.
ಆದರೆ ಮೃದುಹೃದಯಿ ರಾಬರ್ಟ್‌ನ ಪ್ರಾಮಾಣಿಕತೆಯನ್ನು ಪಳಗಿದ ರಾಜಕಾರಣಿ ಹೆನ್ರಿ ತನ್ನ ಸ್ವಾರ್ಥಕ್ಕಾಗಿ ಬಳಸಿಕೊಳ್ಳುತ್ತಾನೆ.
ಹಾಗಾದರೆ ರಾಬರ್ಟ್ ಈ ಸಂಚಿಗೆ ಬಲಿಯಾದನೇ?
ಅಥವಾ ಸಂಚನ್ನು ಬಯಲುಗೊಳಿಸಿದನೇ?

ನಿರ್ಜನವಾಗಿತ್ತು.

ವಿಕ್ರಮ್ ಮೆಲ್ಲನೆ ರಸ್ತೆಯಲ್ಲಿ ನಡೆಯಲಾರಂಭಿಸಿದ.

ಆ ಮನೆಯ ಮುಂದೆ ಬಂದಾಗ ಹಿಂದೆ ತಿರುಗಿ ರಸ್ತೆಯ ತುದಿಯಲ್ಲಿ ನಿಂತಿದ್ದ ಕಾರಿನತ್ತ ನೋಡಿದ. ಸ್ಪಷ್ಟವಾಗಿ ಕಾಣಲಿಲ್ಲ. ಯಾರೋ ಕಿಡಿಗೇಡಿಗಳು ರಸ್ತೆಯ ತುದಿಯಲ್ಲಿದ್ದ ಬೀದಿದೀಪದ ಬಲ್ಬಿಗೆ ಕಲ್ಲು ತೂರಿ ಒಡೆದಿದ್ದರು. ಇದೂ ತನ್ನ ಪಾಲಿಗೆ ಅನುಕೂಲವಾಯಿತು ಎಂದುಕೊಂಡ ವಿಕ್ರಮ್.

ಇದುವರೆಗೂ ರಹಸ್ಯವಾಗಿದ್ದ ಯಶವಂತರಾಯರ ಸಾವಿನ ರಹಸ್ಯ ತಿಳಿಯುವಲ್ಲಿ ಬಹಳ ಮುಖ್ಯವಾದ ಹಂತ! ಯಶವಂತರಾಯರ ಹಸ್ತಾಕ್ಷರದಲ್ಲಿ ಸಿಕ್ಕ ಗುಪ್ತ ಕೋಡ್ 520-ವೈ ಪಿ ಎಂ-ಔ! ಅದರಲ್ಲಿ ಏನಿರಬಹುದು? ವಿಕ್ರಮ್ ಆ ರಹಸ್ಯ ಸ್ಫೋಟಿಸಲು ಹೊರಟಿದ್ದ. ಮನೆಯೊಡೆಯ ಇನ್ನೂ ಬಂದಿಲ್ಲ. ಇದೇ ಸರಿಯಾದ ಸಮಯ ಎನಿಸಿತ್ತು. ಕಳ್ಳತನದಿಂದ ಮನೆ ಪ್ರವೇಶಿಸುವುದು ಅನಿವಾರ್ಯ. ಕಾನೂನಿನ ದೃಷ್ಟಿಯಿಂದ ಅಪರಾಧ. ಆದರೆ ಗತ್ಯಂತರವಿಲ್ಲ!

ವಿಕ್ರಮ್ ಕೈಗಳು ಚುರುಕಾಗಿದ್ದವು. ನಕಲಿ ಬೀಗದ ಕೈಗಳಿಂದ ಡೋರ್‌ಲಾಕ್ ತೆರೆಯಿತು!

ಬಾಗಿಲನ್ನು ಸದ್ದಾಗದಂತೆ ತಳ್ಳಿ ವಿಕ್ರಮ್ ಮನೆಯೊಳಗೆ ಸೇರಿ ಬಾಗಿಲು ಹಾಕಿಕೊಂಡ. ಜರ್ಕಿನ್‌ನ ಜೇಬಿನಿಂದ ಪೆನ್ ಟಾರ್ಚ್ ತೆಗೆದು ಆದರ ಸಣ್ಣದಾದ ಆದರೆ ಶಕ್ತಿಯುತವಾದ ಬೆಳಕನ್ನು ತಾನು ನಿಂತಿದ್ದ ರೂಮಿನ ಸುತ್ತ ಹರಡಿದ. ಅದೊಂದು ವರಾಂಡ-ತುಂಬಾ ಸಣ್ಣದು. ಪೂರ್ಣವಾಗಿ ಖಾಲಿಯಿತ್ತು.

ಬಾಗಿಲಿಗೆ ಒಳಗಿಂದ ಬೋಲ್ಟ್ ಹಾಕಿಕೊಂಡು ಒಳಗೆ ಪ್ರವೇಶಿಸಿದ ವಿಕ್ರಮ್.

ಹಾಲ್ ದೊಡ್ಡದಾಗಿತ್ತು. ಸೋಫಾ ಸೆಟ್, ನೆಲಕ್ಕೆ ಕಾರ್ಪೆಟ್, ಮೂಲೆಯೊಂದರಲ್ಲಿ ಸ್ಟೀಲ್ ಅಲ್ಮೆರಾ ಕಂಡವು.

ಈ ಮನೆಯಲ್ಲಿ ತನಗೇನು ಸಿಗಬಹುದು? ಯಾವ ರೀತಿಯಲ್ಲಿ ಅದು ತನಗೆ ಸಹಾಯವಾಗಬಹುದು? ಕೆ.ಜಿ. ಹಳ್ಳಿಯ ಆಗಸ ಮುನಿಯಪ್ಪ ಬೆಂಗಳೂರಿನ ಪಾರ್ಕ್ ರೆಸ್ಟುರಾಂಟ್‌ನಲ್ಲಿ ಏನು ಮಾಡುತ್ತಿದ್ದ? ತನ್ನನ್ನು ಕಂಡು ಮೂರ್ತಿಯೇಕೆ ಹೆದರಿದ? ಈ ಮನೆ ಯಶವಂತರಾಯರ ಕೊಲೆಯ ರಹಸ್ಯವನ್ನು ಅಡಗಿಸಿಕೊಂಡಿದ್ದರೆ ಅದು ಯಾವ ರೀತಿಯದಿದ್ದೀತು? ಏನೇ ಇದ್ದರೂ ಅದು ಭದ್ರವಾಗಿ, ಸುರಕ್ಷಿತವಾದ ಜಾಗದಲ್ಲಿಟ್ಟಿರುತ್ತಾರೆ! ಹಾಗೆಂದರೆ ಅದು ಕಬ್ಬಿಣದ ಬೀರುವಿನಲ್ಲೇ ಇರಬೇಕು.

ಹಾಗಾದರೆ ತನ್ನ ಪ್ರಥಮ ಕರ್ತವ್ಯ ಎಂದರೆ ಬೀರುವಿನ ಬೀಗವನ್ನು ತೆರೆಯುವುದು!

ಯೋಚನೆಗೆ ದೇಹ ತತ್‌ಕ್ಷಣ ಸ್ಪಂದಿಸಿತು. ವಿಕ್ರಮ್ ಬೀರುವಿನ ಮುಂದೆ ನಿಂತು ಹ್ಯಾಂಡಲ್ ಎಳೆದ. ಬೀಗ ಹಾಕಿತ್ತು. ಕೈಗಳು ಜರ್ಕಿನ್ ತಡಕಾಡಿದವು. ಒಂದು ಬೀಗದ ಕೈಗಳ ಗೊಂಚಲು ಈಚೆ ಬಂತು. ಅವುಗಳನ್ನು ಉಪಯೋಗಿಸಿ ವಿಕ್ರಮ್ ಬೀರುವಿನ ಬೀಗದೊಂದಿಗೆ ಸೆಣಸಿದ. ಅವನ ಅನುಭವೀ ಕೈಗೆ ಮಾಮೂಲೀ ಬೀರು ಬೀಗ ಮೂರು ನಿಮಿಷಗಳಲ್ಲೇ ಸೋತಿತು!

ಒಂದು ಕೈಯಲ್ಲಿ ಟಾರ್ಚು ಹಿಡಿದು ಇನ್ನೊಂದು ಕೈನಿಂದ ಬೀರುವಿನ ವಸ್ತುಗಳನ್ನು ಪರೀಕ್ಷಿಸತೊಡಗಿದಾಗ ಮೊಬೈಲ್ ವೈಬ್ರೇಟ್ ಆಯಿತು. ಫೋನು ಕಿವಿಗಿಟ್ಟುಕೊಂಡಾಗ ಶರತ್ ದನಿ ಕೇಳಿತು.

''ಸಾರ್...?''

''ಹಲೋ ಶರತ್?''

''ಯಸ್ ಬಾಸ್, ಇಲ್ಲಿ ಎಲ್ಲ ಸೇಫ್. ಅನುಮಾನ ಬರೋ ಅಂಥದ್ದೇನೂ ಇಲ್ಲ. ನಿಮ್ಮ ಪ್ರೋಗ್ರೆಸ್ ಹೇಗೆ?''

''ಎಲ್ಲಾ ಸ್ಮೂತಾಗಿ ನಡೀತಿದೆ. ಉಳಿದದ್ದು ಆಚೆ ಬಂದಾಗ.''

ವಿಕ್ರಮ್ ಮೊಬೈಲು ಆಫ್ ಮಾಡಿ ಕೆಲಸ ಮುಂದುವರಿಸಿದ.

ಬೀರುವಿನಲ್ಲಿ ಸೀಕ್ರೆಟ್ ಲಾಕರ್ ಕಂಡಾಗ ವಿಕ್ರಮ್ ಅದರತ್ತ ಗಮನ ಹರಿಸಿದ.

ಸಾಮಾನ್ಯವಾಗಿ ಅಂಥ ಲಾಕರ್‌ಗಳಲ್ಲಿ ಎಲ್ಲರೂ ಒಡವೆಗಳನ್ನು ಇಡುತ್ತಾರೆ. ಆದರೆ ಈ ಲಾಕರ್‌ನಲ್ಲಿ ಒಂದೇ ಒಂದು ಕಂದು ಬಣ್ಣದ ಕವರ್ ಸಿಕ್ಕಿತು! ಅದನ್ನು ಕೈಯಲ್ಲಿ ಹಿಡಿಯುತ್ತಲೇ ವಿಕ್ರಮ್‌ನಿಗೆ ಅದರೊಳಗೆ ಸಣ್ಣದೊಂದು ಬೀಗದ ಕೈ ಇರುವ ಅನುಮಾನ ಬಂತು. ಅದೊಂದು ಲಾಕರಿನ ಬೀಗದ ಕೈ ಇರಬಹುದೆ? ಕವರ್ ತೆರೆದು ಅಲ್ಲಾಡಿಸಿದಾಗ ಕೈಮೇಲೆ ಬಿತ್ತು ಒಂದು ವಸ್ತು. ಆದರೆ ಅದು ಬೀಗದ ಕೈ ಆಗಿರಲಿಲ್ಲ! ಅದೊಂದು ಪೆನ್ ಡ್ರೈವ್! ಅದನ್ನು ಕಂಪ್ಯೂಟರಿನ ದತ್ತಾಂಶ(ಡೇಟಾ) ಸಂಗ್ರಹಿಸಲು ಉಪಯೋಗಿಸುತ್ತಾರೆ! ಇಡೀ ಕವರಿನಲ್ಲಿ ಇದ್ದುದು ಅದೊಂದೇ! ಲಾಕರಿನಲ್ಲಿ ಇದು ಇರಬೇಕೆಂದರೆ ಇದರಲ್ಲಿ ಏನೋ ಮಹತ್ವದ್ದು ಇರಬೇಕು! ಅಂಥದ್ದು ಏನಿದ್ದೀತು? ಅದನ್ನು ನೋಡಬೇಕಾದರೆ ಕಂಪ್ಯೂಟರ್ ಬೇಕು! ಇಲ್ಲವೇ ಮೊಬೈಲಿಗೆ ಅಳವಡಿಸಿ ನೋಡುವ ಒಟಿಜಿ ಅಡಾಪ್ಟರ್ ಬೇಕು! ಈಗ ಇದರಲ್ಲಿ ಏನಿದೆ ಎಂದು ನೋಡುವುದು ಸಾಧ್ಯವಿಲ್ಲ! ಒಟಿಜಿ ಅಡಾಪ್ಟರಾಗಲೀ

ಕಂಪ್ಯೂಟರಾಗಲಿ ಆ ಕ್ಷಣಕ್ಕೆ ಸಿಗುವುದು ಸಾಧ್ಯವಿರಲಿಲ್ಲ! ಈ ಪೆನ್ ಡ್ರೈವ್ ಒಂದು ಗಟ್ಟಿ ಕವರಿನಲ್ಲಿ, ಸ್ಟೀಲ್ ಅಲ್ಮೆರಾದಲ್ಲಿ ಇಟ್ಟಿದ್ದಾರೆ ಅಂದರೆ ಅದರಲ್ಲಿ ಯಾವುದೋ ರಹಸ್ಯ ಅಡಗಿರಲೇಬೇಕು! ಅದನ್ನು ಇಲ್ಲಿ ನೋಡುವುದು ಸಾಧ್ಯವಿಲ್ಲ!

ಬಹುಶಃ ಇದೇ ಯಶವಂತರಾಯರ ಕೊಲೆಯ ರಹಸ್ಯ ಬಿಡಿಸುವ ಮುಖ್ಯ ಸಾಧನವಾಗಬಹುದೆ? ವಿಕ್ರಮ್ ಯೋಚಿಸುತ್ತಾ ಪೆನ್‌ಡ್ರೈವ್ ಜರ್ಕಿನ್ ಜೇಬಿಗೆ ವರ್ಗಾಯಿಸಿದ. ಕಂದು ಬಣ್ಣದ ಕವರನ್ನು ಸ್ವಸ್ಥಾನದಲ್ಲಿರಿಸಿದ. ಅನಂತರ ಮನೆಯ ಒಳಗಿನ ಭಾಗಗಳನ್ನು ಪರೀಕ್ಷಿಸಿ ನೋಡಿದ.

ಮನೆಯೊಳಗೆ ಅತಿ ಹೆಚ್ಚಿಗೆ ಮತ್ತು ಬೆಲೆಬಾಳುವ ವಸ್ತುಗಳೇನೂ ಇಲ್ಲದಿದ್ದರೂ ಇಬ್ಬರು ವಾಸ ಮಾಡಲು ಅಗತ್ಯವಾಗುವಷ್ಟು ಪಾತ್ರೆ, ದಿನಸಿ ಮುಂತಾದುವು ಇದ್ದವು. ಬೀರುವಿನಲ್ಲಿ ಹೆಂಗಸು ಮತ್ತು ಗಂಡಸಿನ ಉಡುಪಿದ್ದುದನ್ನು ವಿಕ್ರಮ್ ಗಮನಿಸಿದ್ದ. ಅಂದರೆ ಇಲ್ಲಿ ವಾಸವಾಗಿರುವವರು ಯಾರು? ಒಂದಂತೂ ಮುನಿಯಪ್ಪ! ಹೆಂಗಸು? ಯಾರಾಕೆ? ಕೆ.ಜಿ. ಹಳ್ಳಿಯ ಅಗಸ ಮುನಿಯಪ್ಪನ ಜೊತೆ ವಾಸವಾಗಿರುವವಳು ಯಾರು? ಮನೆಯ ಒಪ್ಪ, ಓರಣ ಅಷ್ಟೇನೂ ಚೆನ್ನಾಗಿರಲಿಲ್ಲ. ತನ್ನ ಕೆಲಸ ಇಲ್ಲಿಗೆ ಮುಗಿಯಿತು, ಇನ್ನು ತಾನು ಇಲ್ಲಿರುವುದು ಅನಾವಶ್ಯಕ ಎಂದು ವಿಕ್ರಮ್ ಮೆಲ್ಲನೆ ಬಂದ ರೀತಿಯಲ್ಲೇ ಮನೆಯಿಂದ ಆಚೆ ಹೋಗಲು ಅನುವಾದ.

ತಾನು ಆ ಮನೆಗೆ ಬಂದ ವಿಷಯ ಮನೆಯಾತನಿಗೆ ತಿಳಿಯದಿರಲು ಸಾಧ್ಯವಾದಷ್ಟು ಮಟ್ಟಿಗೆ ಶ್ರಮಿಸಿದ. ಯಾವ ಗುರುತೂ ಉಳಿಯಬಾರದು. ವಸ್ತುಗಳಾವುವೂ ಸ್ಥಳ ಬದಲಿಸಬಾರದು. ಆದರೆ ಹಾಗೆ ಮಾಡುವುದು ಬಹಳ ಕಷ್ಟ ಎಂದೂ ಬಲ್ಲ ವಿಕ್ರಮ್. ಅದಕ್ಕೆ ಸಾಕಷ್ಟು ಎಚ್ಚರ ವಹಿಸಿ ಸಮಾಧಾನವಾದ ಮೇಲೆ ವಿಕ್ರಮ್ ಮನೆಯ ಬೀಗ ಹಾಕಿ ಈಚೆ ಬಂದು, ಆತ್ತಿತ್ತ ನೋಡುತ್ತಾ ತನ್ನ ಕೆಲಸವನ್ನು ಯಾರೂ ಗಮನಿಸಿಲ್ಲ ಎನ್ನುವುದನ್ನು ಖಚಿತಪಡಿಸಿಕೊಂಡು ಮೆಲ್ಲನೆ ನಡೆಯುತ್ತಾ ಜೀಪಿನ ಬಳಿ ಬಂದ.

"ಹೇಗಾಯ್ತು ಬಾಸ್?"

ಶರತ್ ಕುತೂಹಲದಿಂದ ಪ್ರಶ್ನಿಸಿದ.

"ನೋ ಪ್ರಾಬ್ಲಮ್. ಲೆಟ್ ಅಸ್ ಗೋ."

ವಿಕ್ರಮ್ ಅವಸರಿಸಿದ.

"ಇವತ್ತು ರಾತ್ರಿಯೆಲ್ಲಾ ಇಲ್ಲೇ ಇರಬೇಕೂಂತ ಹೇಳಿದ್ದಿರಿ?"

"ಓ... ಸಾರಿ, ವಿಷಯ ಮರೆತಿದ್ದೆ. ಹೌದು ಶರತ್. ನೀನು ಇಲ್ಲೇ ಇರಬೇಕು. ನಾನು ಪ್ರವೇಶಿಸಿದ ಮನೆಗೆ ಯಾರು ಬರ್ತಾರೆ ನೋಡ್ಕೊಂಡು ನಂತರ ವಾಪಸ್ಸಾಗು."

"ಬಂದವನನ್ನ ಗುರುತಿಸೋದು ಹೇಗೆ? ಹೊಸಬನಾಗಿದ್ದರೆ?"

"ಶರತ್, ನಿನಗೆ ಅವನನ್ನು ಗುರುತಿಸೋಕೆ ಒಂದಿಷ್ಟೂ ಕಷ್ಟ ಆಗೋಲ್ಲ. ಯಾಕೆಂದರೆ ಬರೋ ಅಂಥವನು ನಮಗೆ ಗೊತ್ತಿರೋನೆ. ಕೆಲವು ಗಂಟೆಗಳ ಮುಂಚೆ ಅವನ್ನ ನಾವು ನೋಡಿದೀವಿ?"

"ಯಾರು ಬಾಸ್? ಯಾರವನು?"

"ಅಗಸ ಮುನಿಯಪ್ಪ!"

ವಿಕ್ರಮ್ ಮೆಲು ದನಿಯಲ್ಲಿ ಹೇಳಿದ.

"ಮುನಿಯಪ್ಪ?! ಈ ಮನೇಗೇ?!"

ಶರತ್ ಉದ್ಗರಿಸಿದ.

"ಎಸ್... ಇದು ನನ್ನ ಗೆಸ್‌ವರ್ಕ್! ಆದ್ರೆ ಕನ್ಫರ್ಮ್ ಮಾಡ್ಕೋಬೇಕು."

(ಮುಂದುವರಿಯುವುದು)

ಶಬ್ದಶಿಲ್ಪ

ಪ್ರಹ್ಲಾದ್

ಎಡದಿಂದ ಬಲಕ್ಕೆ

2. ಮೆಹಂದಿ ಸಮಾರಂಭಕ್ಕಾಗಿ ನಿರ್ಮಿಸಿದ ಚಪ್ಪರ..... 3
5. ಎಡ ದಿಕ್ಕಿಗೆ ವಿರುದ್ಧ ನಿಂತು ಮಾಡಿದ ಒತ್ತಾಯ 4
6. ಕಾಣದೇ ಗುಳಿಗೆ ಬಿದ್ದ ನೆನಪು ಹಾರುವ ಪ್ರೊಫೆಸರ್ 4
7. ಕರವನ್ನು ಹಿಡಿದು ಬಂದ ಅವಯವ 3
9. ಹಿತಕರವಾದುದನ್ನು ತಂದ ಇನಿಯ..... 2
11. ಸುಮಾರು ದೂರ ಹೋಗಿ ನಾಲ್ಕುಮೊಳ ಹೂ ವಿಕ್ರಯಿಸು..... 2
12. ಭರವಸೆಗೆ ಅನುಗುಣವಾಗಿ ನೋಡಿ ಬಂದ ಪಾತಾಳ..... 2
13. ಸುಗಂಧವನ್ನು ಬೀರುವ ಚಂದನ 2
14. ಹರಣ ಕಾಲದಲ್ಲಿ ತಂದು ಕೊಟ್ಟ ದುಡ್ಡು..... 2
15. ವಿಶೇಷವಾಗಿ ಬಳಸಿದ ನಂಜು..... 2
17. ಶ್ಯಾಮಲ ಬಣ್ಣದವನ ರೋಗ ವಾಸಿಯಾಯಿತು..... 3
19. ಭಾಗ ಭಾಗವಾಗಿ ಪ್ರವಚನ ನೀಡಿದ ಪುರಾಣ..... 4
20. ಆನೆಯ ಮೊಗವನ್ನು ಹೊಂದಿದ ಗಣಗಳ ಒಡೆಯ..... 4
21. ಕರದಲ್ಲಿ ಇರಿಸಿಕೊಳ್ಳುವುದು ತುಂಬಾ ಕಠಿಣ..... 3

ಮೇಲಿನಿಂದ ಕೆಳಕ್ಕೆ

1. ಹರ್ಯಂಕ ರಾಜವಂಶ ಸ್ಥಾಪಕನಾದ ಬುದ್ಧನ ಸಮಕಾಲೀನ..... 4
2. ಹಂತ ಹಂತವಾಗಿ ಮೇಲೇರಿ ಬಂದ ಕೊಲೆಗಾರ..... 3
3. ರಣರಂಗಕ್ಕೆ ಬಂದ ಮಣ ತೂಕದ ಗಂಡ..... 3
4. ರುಚಿಕರವಾದ ತೆಳುವಿನ ರಸಂ..... 4
8. ಬೆಳ್ಳಹಬ್ಬದ ನೆನಪಿಗಾಗಿ ನಿರ್ಮಿಸಿದ ಭವನ 5
10. ಮರವನ್ನೇರುವಾಗ ಸಂಭವಿಸಿದ ಸಾವು 3
11. ಮಾಧವನಿಗೆ ಪ್ರಿಯವಾದ ಸುವಾಸನೆ ಭರಿತ ಹೂವು 3
14. ಸಾವಿನ ಸಮೀಪವಿರುವ ಅದೃಷ್ಟಹೀನ..... 4
16. ಆರು ಮೊಗಗಳನ್ನು ಹೊಂದಿದ ಸುಬ್ರಹ್ಮಣ್ಯ 4
17. ಕ್ರಿಕೆಟಿಗ ತಕ ತಕ ಕುಣಿಯುತ್ತ ಬಾರಿಸಿದ ನೂರು ರನ್ನು 3
18. ಜನಗಳು ವಾಸಿಸುತ್ತಿರುವ ನಗಗಳಿರುವ ಶಹರು 3



(ಉತ್ತರ ಮುಂದಿನವಾರ)

ಕಳೆದ ವಾರದ ಶಬ್ದಶಿಲ್ಪದ ಉತ್ತರಗಳು

ಎಡದಿಂದ ಬಲಕ್ಕೆ: 2. ಯಾನ 4. ಜೇಡ 6. ವಜನು 7. ಯುವರಾಜ 9. ಮೇಘಮಾಲೆ 11. ಲವಣ 13. ಕಂಕಣ 14. ಕಂಪನ 15. ಸರಸ 17. ಪಂಚತಾರ 18. ಮನೆತನ 20. ಮಾರುತ 21. ಅಲೆ 22. ಲಗ್ಗೆ

ಮೇಲಿನಿಂದ ಕೆಳಕ್ಕೆ: 1. ಜಟಾಯು 3. ನವಜಲ 4. ಜೇನುಮೇಣ 5. ತಪ್ಪಲೆ 8. ವಜ್ರಕವಚ 10. ಮಾಯಾಪರ್ವತ 12. ವಠಾರ 15. ಸರಮಾಲೆ 16. ಸಮತಲ 17. ಪಂಜರ 19. ನಕ್ಷತ್ರ.

ಎನ್. ಅನಂತನಾಗ್

ಶೈಕ್ಷಣಿಕ ಸಾಲ

ಉನ್ನತ ವ್ಯಾಸಂಗಕ್ಕೆ ಭರವಸೆಯ ಬಲ

ಭಾರತ ಹಿಂದಿನಿಂದಲೂ ಶಿಕ್ಷಣಕ್ಕೆ ಪ್ರಾಧಾನ್ಯ ನೀಡುತ್ತ ಬಂದಿರುವ ದೇಶ. ಒಂದು ಹಂತದಲ್ಲಿ ಪೋಷಕರು ಶಿಕ್ಷಣವನ್ನು ಕಡೆಗಣಿಸಿದ್ದರೂ ಇಂದಿನ ದಿನಗಳಲ್ಲಿ ಎಲ್ಲ ಪೋಷಕರು ತಮ್ಮ ಮಗ/ಮಗಳು ಉನ್ನತ ವ್ಯಾಸಂಗ ಮಾಡಿ ಅತ್ಯುನ್ನತ ಹುದ್ದೆಗಳನ್ನು ಅಲಂಕರಿಸಲಿ ಎಂದು ಆಸೆ ಪಡುತ್ತಾರೆ. ಆದರೆ ಎಲ್ಲ ತಂದೆ-ತಾಯಂದಿರೂ ಆರ್ಥಿಕವಾಗಿ ಸಬಲರಾಗಿರುವುದಿಲ್ಲ. ಈ ಸಮಯದಲ್ಲಿ ವಿದ್ಯಾರ್ಥಿಗಳ ಉನ್ನತ ಶಿಕ್ಷಣಕ್ಕೆ ನೆರವಿಗೆ ಬರುವುದು ಶೈಕ್ಷಣಿಕ ಸಾಲ ಅಥವಾ ವಿದ್ಯಾಸಾಲ. ಆರ್‌ಬಿಐ- ಐಬಿಎ ನಿಯಮದಡಿಯಲ್ಲಿ ಸರಕಾರವೂ ದೇಶದ ಯಾವುದೇ ವಿದ್ಯಾರ್ಥಿಯು ಉನ್ನತ ಮಟ್ಟದ ಓದಿನಿಂದ ಹಿಂದುಳಿಯದಿರಲೆಂಬ ಉದ್ದೇಶದಿಂದ ಕೆಲವು ಯೋಜನೆಗಳನ್ನು ರೂಪಿಸಿದೆ. ಜತೆಗೆ ಬ್ಯಾಂಕೇತರ ವಿದ್ಯಾ ಸಂಸ್ಥೆಗಳು, ಆರ್ಥಿಕ ವಲಯಗಳೂ ಕೆಲವು ನಿಬಂಧನೆಗಳ ಮೂಲಕ ವಿದ್ಯಾಸಾಲವನ್ನು ನೀಡಲು ಮುಂದಾಗಿವೆ. ವಿದ್ಯಾರ್ಥಿಗಳು ಶೈಕ್ಷಣಿಕ ಸಾಲ ಪಡೆಯುವುದು ಹೇಗೆ? ಅದರಿಂದ ಅವರಿಗೆ ಆಗುವ ಅನುಕೂಲತೆಗಳೇನು? ಈ ಕುರಿತು ಇಲ್ಲಿದೆ ಪೂರ್ಣ ವಿವರ.

ಶ್ರೀಮಂತರು ಮಾತ್ರ ಉನ್ನತ ವ್ಯಾಸಂಗ ಮಾಡಬಹುದಾದ ಒಂದು ಕಾಲವಿತ್ತು. 'ನಾವು ಬಡವರು, ಎಂಜಿನಿಯರ್, ಡಾಕ್ಟರ್ಸ್ ಕೋರ್ಸ್‌ಗಳನ್ನು ನಮಗೆ ಓದಿಸಲು ಆಗುವುದಿಲ್ಲ. ಬಿ.ಎ., ಬಿ.ಎಸ್ಸಿ, ಬಿ.ಕಾಂ, ಅಥವಾ ಡಿಪ್ಲೊಮಾ, ಐಟಿಐ ಬೇಕಾದರೆ ಮಾಡಿಸುತ್ತೇನೆ. ಅಷ್ಟು ಓದಿದರೆ ಸಾಕು' ಎಂದು ಮಕ್ಕಳು ಶೈಕ್ಷಣಿಕ ಕನಸುಗಳನ್ನು ಕಟ್ಟಿಕೊಳ್ಳುವ ಮೊದಲೇ ಪೋಷಕರು ಪೂರ್ಣ ವಿರಾಮ ಎಳೆದುಬಿಡುತ್ತಿದ್ದರು. ಹೆಣ್ಣುಮಕ್ಕಳಿಗಂತೂ ಎಸ್ಸೆಸ್ಸೆಲ್ಸಿ ಪಿಯುಸಿ ಮಾಡಿಸಿದರೆ ಸಾಕು ಎನ್ನುವ ಸ್ಥಿತಿಯಿತ್ತು.

ಈ ರೀತಿಯ ವಾತಾವರಣ ಈಗಿಲ್ಲ. ತಾನಂತೂ ಓದಲಾಗಲಿಲ್ಲ, ಮಗ/ಮಗಳಾದರೂ ಓದಿ ಉತ್ತಮ ಹುದ್ದೆ, ಉನ್ನತ ಸ್ಥಾನವನ್ನು ಏರಬೇಕು ಎಂಬುದು ಎಲ್ಲ ತಂದೆ-ತಾಯಿಗಳ ಕನಸು. ಅದಕ್ಕಾಗಿ 'ಸಾಲ -ಸೋಲ ಮಾಡಿಯಾದರೂ ಓದಿಸುತ್ತೇನೆ. ಏನು ಓದುತ್ತೀಯೋ ಓದು, ಆದರೆ ಯಾವುದನ್ನಾದರೂ ಮೊದಲೇ ನಿರ್ಧರಿಸು ; ಮಧ್ಯದಲ್ಲಿ ಅದನ್ನು ಬದಲಿಸಬೇಡ' ಎನ್ನುವುದು ಬುದ್ಧಿವಂತ ಪೋಷಕರ ಮಾತು. ಇದರ ಜತೆಗೆ ಈಗಿನ ಸರಕಾರಗಳೂ, ಬ್ಯಾಂಕುಗಳೂ ಇಂದಿನ ಉತ್ತಮ ವಿದ್ಯಾರ್ಥಿಗಳು ದೇಶದ ಆಸ್ತಿ ಎಂದು ಭಾವಿಸಿ ಶೈಕ್ಷಣಿಕ ಯೋಜನೆಗಳು, ಶೈಕ್ಷಣಿಕ ಸಾಲ, ವಿದ್ಯಾರ್ಥಿ ವೇತನ, ವಿದೇಶಿ ಓದಿಗೆ ಸಾಲ... ಹೀಗೆ ಅನೇಕ ವ್ಯವಸ್ಥೆಗಳನ್ನು ಕಲ್ಪಿಸಿವೆ. ಇವುಗಳ ಪೈಕಿ ಬಡ ಮಕ್ಕಳ ಉನ್ನತ ಶಿಕ್ಷಣಕ್ಕೆ ಕೈಹಿಡಿಯುವುದು ಶೈಕ್ಷಣಿಕ ಸಾಲ ಅಥವಾ ವಿದ್ಯಾಸಾಲ.

ದೇಶೀ- ವಿದೇಶೀ ವಿದ್ಯಾಭ್ಯಾಸ, ಶೈಕ್ಷಣಿಕ ಸಾಲ ಸೌಲಭ್ಯ ಭಾರತದ ಪರಿಕಲ್ಪನೆಯೇನೂ ಅಲ್ಲ. 20ನೆಯ ಶತಮಾನದಲ್ಲಿ ಬಿಷಪ್ ಚರ್ಚ್‌ಗಳ ಮೂಲಕ ಆಕ್ಸ್‌ಫರ್ಡ್‌ನಂಥ ವಿಶ್ವವಿದ್ಯಾಲಯಗಳಲ್ಲಿ ಶೈಕ್ಷಣಿಕ ಸಾಲದ ಪರಿಕಲ್ಪನೆ ಪ್ರಾರಂಭವಾಯಿತು. 1958ರಲ್ಲಿ ಅಮೆರಿಕಾ ನ್ಯಾಷನಲ್ ಡಿಫೆನ್ಸ್ ಎಜ್ಯುಕೇಷನ್ ಆ್ಯಕ್ಟ್ ಮೂಲಕ ವಿದ್ಯಾರ್ಥಿಗಳಿಗೆ ಫೆಡರಲ್ ಸಾಲವನ್ನು ನೀಡುವ ವ್ಯವಸ್ಥೆ ಪ್ರಾರಂಭಿಸಿತು. ಅಮೆರಿಕಾದಲ್ಲಿ ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕಾಗಿಯೇ ಅಲ್ಲಿನ ಸರಕಾರ ಶಿಕ್ಷಣ ಇಲಾಖೆ ಮೂಲಕ ಒಂದು ಸ್ಥಿರ ಬಡ್ಡಿದರ (ಫಿಕ್ಸೆಡ್ ಇಂಟ್ರೆಸ್ಟ್ ರೇಟ್)ವನ್ನು ನಿಗದಿಪಡಿಸಿ ಪ್ರಾರಂಭಿಸಲಾದ ವಿದ್ಯಾಸಾಲ ಯೋಜನೆ ಫೆಡರಲ್ ಲೋನ್. ಇದೇ ಯೋಜನೆಯೇ ಮುಂದಿನ ಪಾಶ್ಚಾತ್ಯ- ಪೌರಸ್ಯ ರಾಷ್ಟ್ರಗಳ ಶೈಕ್ಷಣಿಕ ಸಾಲಕ್ಕೆ ಆಡಿಪಾಯ.

1963ರಲ್ಲಿ ಭಾರತದಲ್ಲಿ ವಿದ್ಯಾರ್ಥಿಗಳ ಉನ್ನತ ಶಿಕ್ಷಣದ ನೆರವಿಗೆ ನ್ಯಾಷನಲ್ ಲೋನ್ ಸ್ಕಾಲರ್‌ಶಿಪ್ ಸ್ಕೀಮ್ ಅನ್ನು ಪ್ರಾರಂಭಿಸಿತು. ಆರಿವಿನ ಕೊರತೆಯಿಂದ ಇದು ದೇಶದಲ್ಲಿ ಹೆಚ್ಚು ಪ್ರಚಾರ ಪಡೆಯಲಿಲ್ಲ. ಬಳಿಕ 1995ರಲ್ಲಿ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಸಂಘಟಿತ ಶೈಕ್ಷಣಿಕ ಸಾಲ ಯೋಜನೆಗಳನ್ನು ಪ್ರಾರಂಭಿಸಿತು. ಆದರೂ ಭಾರತದಲ್ಲಿ ಶೈಕ್ಷಣಿಕ ಸಾಲದ ಪ್ರಾಮಾಣಿಕ ಬಳಕೆ ಪ್ರಾರಂಭವಾದದ್ದು 2001ರ ಬಳಿಕ. ಭಾರತವು ಜಾಗತೀಕರಣಕ್ಕೆ ತೆರೆದುಕೊಂಡಂತೆ ವಿದೇಶೀ ಬ್ಯಾಂಕು ಮತ್ತು ಹಣಕಾಸು ಸಂಸ್ಥೆಗಳು ಹೂಡಿಕೆಗೆ ಮುಂದಾದವು. ಈ ಸಮಯದಲ್ಲಿ ಸಾಲದ ವಿತರಣೆ ಪ್ರಮಾಣ ಹೆಚ್ಚಾಯಿತು. ಇದೇ ವೇಳೆ ಸ್ಪರ್ಧಾತ್ಮಕ ಬಡ್ಡಿದರದಲ್ಲಿ ಸ್ಪರ್ಧಾತ್ಮಕ ಸಾಲಗಳೂ ಹೆಚ್ಚಾದವು.

2000ದಲ್ಲಿ ಭಾರತ ಸರಕಾರವು ದೇಶದ ವಿವಿಧ ಬ್ಯಾಂಕುಗಳಿಗೆ ಉನ್ನತ ಶಿಕ್ಷಣಕ್ಕೆ ಹಣಕಾಸು ನೆರವು ನೀಡಲು ಶಿಕ್ಷಣ ಸಾಲ ಯೋಜನೆ ರೂಪಿಸಲು ಸೂಚಿಸಿತು. ಇದರ ಮುಂದುವರಿದ ಭಾಗವಾಗಿ 2001ರಲ್ಲಿ ಇಂಡಿಯನ್ ಬ್ಯಾಂಕ್ಸ್ ಅಸೋಸಿಯೇಷನ್ (ಐಬಿಎ) ಮೂಲಕ ಮಾದರಿ ಶೈಕ್ಷಣಿಕ ಸಾಲ ಯೋಜನೆ ಜಾರಿಗೆ ಬಂತು. ಈ ಸೌಲಭ್ಯ ಬಡ ವಿದ್ಯಾರ್ಥಿಗಳೂ ವಿದೇಶದಲ್ಲಿ ಶೈಕ್ಷಣಿಕ ವಿದ್ಯಾಭ್ಯಾಸ ಮಾಡಬಹುದಾದ ಕನಸಿಗೆ ಚೈತನ್ಯ ನೀಡಿತು. ಈ ಯೋಜನೆಯನ್ನು ಐಬಿಎ ಕಾಲದಿಂದ ಕಾಲಕ್ಕೆ ಪರಿಷ್ಕರಿಸಿದೆ. 2022ರಲ್ಲೂ ಈ ಯೋಜನೆಯಲ್ಲಿ ಕೆಲವು ಬದಲಾವಣೆಗಳನ್ನು ಮಾಡಲಾಗಿದೆ.

ಶೈಕ್ಷಣಿಕ ಸಾಲ

ಭಾರತದಲ್ಲಿ ಬಡತನ ರೇಖೆಗಿಂತ ಕೆಳಗಿರುವ (ಹಿಂದುಳಿದ, ಅಂಗವಿಕಲರೂ ಸೇರಿದಂತೆ) ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ತಾಂತ್ರಿಕ/ವೃತ್ತಿಪರ ಕೋರ್ಸ್‌ಗಳಿಗೆ ನೆರವು ನೀಡುವುದು, ವಿದೇಶಿ ಶಿಕ್ಷಣಕ್ಕೆ ಅನುಕೂಲ ಕಲ್ಪಿಸುವುದು ಶೈಕ್ಷಣಿಕ ಸಾಲದ ಉದ್ದೇಶ.

ಭಾರತೀಯ ಬ್ಯಾಂಕ್‌ಗಳು ಮತ್ತು ಬ್ಯಾಂಕೇತರ ಆರ್ಥಿಕ ಸಂಸ್ಥೆಗಳು (ಎನ್‌ಬಿಎಫ್‌ಸಿ) ಉನ್ನತ ವಿದ್ಯಾಭ್ಯಾಸ ಮಾಡ ಬಯಸುವ ಭಾರತೀಯ ವಿದ್ಯಾರ್ಥಿಗೆ ದೇಶದಲ್ಲಿ ಅಥವಾ ವಿದೇಶದಲ್ಲಿ ಉನ್ನತ ತಾಂತ್ರಿಕ/ ವೈದ್ಯಕೀಯ ಅಧ್ಯಯನಕ್ಕಾಗಿ ಶೈಕ್ಷಣಿಕ ವೆಚ್ಚ (ಕಾಲೇಜು ಶುಲ್ಕ, ವಾಸಸ್ಥಳ, ಪುಸ್ತಕಗಳು) ಗಳನ್ನು ಪೂರೈಸಲು ಅಧ್ಯಯನ ಅವಧಿಯಲ್ಲಿ ಆರ್ಥಿಕ ನೆರವು ನೀಡುತ್ತವೆ. ಓದಿನ ಸಮಯದಲ್ಲಿ ಯಾವುದೇ ತಡೆ ಅಥವಾ ನಿಷೇಧ ವಿಧಿಸದೆ ಪರಿಹಾರದ ವಿರಾಮ (ಮೊರಟೋರಿಯಂ)ನೀಡಿ, ಬಳಿಕ ಆ ಹಣವನ್ನು ಬಡ್ಡಿ ಸಮೇತ ಕಂತಿನ ಮೂಲಕ (ಇಎಂಐ) ವಾಪಸ್ ಪಡೆಯುವ ವ್ಯವಸ್ಥೆಯನ್ನು ಶೈಕ್ಷಣಿಕ ಸಾಲ ಯೋಜನೆ ಹೊಂದಿದೆ. ಸಾಮಾನ್ಯವಾಗಿ ಕೋರ್ಸ್ ಮುಗಿದ 6 ರಿಂದ 12 ತಿಂಗಳ ಬಳಿಕ ಪಾವತಿ ಪ್ರಾರಂಭವಾಗುತ್ತದೆ. ಓದಿನ ಖರ್ಚು-ವೆಚ್ಚಗಳು ಹೆಚ್ಚಾಗಿದ್ದರೆ ಈ ಸಾಲಗಳನ್ನು ನೀಡಲು ಆಸ್ತಿ, ಮೇಲಾಧಾರ, ಪೋಷಕರ ವರಮಾನ (ಕೊಲ್ಯಾಟೆರಲ್) ಭದ್ರತೆ, ಶ್ಯೂರಿಟಿಯನ್ನು ಬ್ಯಾಂಕುಗಳು ಅಪೇಕ್ಷಿಸುತ್ತವೆ.

ಯಾವ್ಯಾವ ಕೋರ್ಸ್‌ಗಳಿಗೆ ಇದೆ ವಿದ್ಯಾಸಾಲ?

ಭಾರತದಲ್ಲಿ ಎಂಜಿನಿಯರಿಂಗ್, ವೈದ್ಯಕೀಯ, ವಾಣಿಜ್ಯ, ಕಾನೂನು, ಕೃಷಿ ಸೇರಿದಂತೆ ವಿಜ್ಞಾನ, ಕಲಾ ವಿಷಯಗಳ ಸ್ನಾತಕೋತ್ತರ ಪದವಿಗಳಿಗೆ ಹಾಗೂ ಯುಜಿಸಿ/ಎಐಸಿಟಿಇ/ ಸರಕಾರಿ ಮಾನ್ಯತೆ ಪಡೆದ ಬಹುತೇಕ ವೃತ್ತಿಪರ ಹಾಗೂ ಉನ್ನತ ಶಿಕ್ಷಣ ಕೋರ್ಸ್‌ಗಳಿಗೆ, ಸಂಶೋಧನಾತ್ಮಕ ಕೋರ್ಸ್‌ಗಳಿಗೆ ವಿದ್ಯಾಸಾಲ ಸಿಗಲಿದೆ.

ವಿದೇಶದಲ್ಲಿಯೂ ಪ್ರತಿಷ್ಠಿತ ವಿಶ್ವವಿದ್ಯಾಲಯಗಳ ವೃತ್ತಿಪರ/ ತಾಂತ್ರಿಕ ಶಿಕ್ಷಣ, ಸ್ನಾತಕೋತ್ತರ ಪದವಿ, ವಿದ್ಯಾಸಂಸ್ಥೆಗಳ ಸರ್ಟಿಫೈಡ್ ಕೋರ್ಸ್‌ಗಳಿಗೂ ಸಾಲ ಸೌಲಭ್ಯವಿರುತ್ತದೆ.

ಕೆಲವು ಅರ್ಹ ಕೋರ್ಸ್‌ಗಳು

- **ವೃತ್ತಿಪರ/ತಾಂತ್ರಿಕ:** ವೈದ್ಯಕೀಯ, ದಂತ ವೈದ್ಯಕೀಯ, ಆಯುಷ್, ಫಾರ್ಮಸಿ, ನರ್ಸಿಂಗ್, ಎಂಜಿನಿಯರಿಂಗ್ ಮತ್ತು ಐಟಿ(ಬಿಸಿಎ/ಎಂಸಿಎ)
- **ಕಾನೂನು, ಮ್ಯಾನೇಜ್‌ಮೆಂಟ್:** ಎಲ್‌ಎಲ್.ಬಿ, ಎಲ್‌ಎಲ್.ಎಂ, ಎಂಬಿಎ, ಬಿಬಿಎ

- **ಪದವಿ, ಸ್ನಾತಕೋತ್ತರ ಪದವಿ:** ಎಂ.ಎ., ಎಂ.ಕಾಮ್, ಎಂ.ಎಸ್ಸಿ., ಬಿ.ಎಸ್ಸಿ (ವೆಟರ್ನರಿ, ಹಾರ್ಟಿಕಲ್ಚರ್)
- **ಸರ್ಟಿಫೈಡ್ ಕೋರ್ಸ್‌ಗಳು:** ಹೊಟೇಲ್ ಮ್ಯಾನೇಜ್‌ಮೆಂಟ್, ಶಿಕ್ಷಕ ತರಬೇತಿ (ಬಿ.ಎಡ್/ ಡಿ.ಎಡ್), ಜಾಬ್ ಓರಿಯೆಂಟೆಡ್ ಕೋರ್ಸ್‌ಗಳು,
- **ವೃತ್ತಿಪರ ಪರೀಕ್ಷೆಗಳು:** ಸಿಎ, ಸಿಎಫ್‌ಐ, ಐಸಿಡಬ್ಲ್ಯೂಎ, ಸಿಎಸ್ ಇತ್ಯಾದಿ
- ಯುಜಿಸಿ/ ಎಐಸಿಟಿಇ/ ಎಐಸಿಎಂಎಸ್/ ಏಮ್ಸ್‌ಗುರುತಿಸುವ ಯಾವುದೇ ಕಾಲೇಜು ಅಥವಾ ವಿಶ್ವವಿದ್ಯಾಲಯಗಳು
- ಮಾನ್ಯತೆ ಪಡೆದ ರಾಷ್ಟ್ರೀಯ/ ಪ್ರತಿಷ್ಠಿತ ಖಾಸಗಿ ವಿದ್ಯಾಸಂಸ್ಥೆಗಳು ಐಐಟಿ, ಐಐಎಂ, ಐಐಎಸ್ಸಿ ಎನ್‌ಐಡಿ, ಎಕ್ಸ್‌ಎಲ್‌ಆರ್‌ಐ ಇತ್ಯಾದಿ ವಿದ್ಯಾಸಂಸ್ಥೆಗಳು ನಡೆಸುವ ಕೋರ್ಸ್‌ಗಳು.
- ದೇಶದಲ್ಲಿ ವಿದೇಶಿ ಯುನಿವರ್ಸಿಟಿಗಳು ಆಳವಡಿಸಿರುವ ಕೋರ್ಸ್‌ಗಳಿಗೆ ಸಾಲ ಸೌಲಭ್ಯವಿದೆ.

ಬ್ಯಾಂಕುಗಳು ಫಲಾನುಭವಿಯು ಓದಲಿಚ್ಛಿಸುವ ಕೋರ್ಸ್‌ಗಳ ಆಧಾರದ ಮೇಲೆ ಶೈಕ್ಷಣಿಕ ಸಾಲವನ್ನು ನೀಡುತ್ತವೆ. ಕೆಲವು ಬ್ಯಾಂಕುಗಳು ಕೋರ್ಸ್‌ಗಳ ಪ್ರತಿಷ್ಠೆ ಮತ್ತು ಉದ್ಯೋಗ ಸೃಷ್ಟಿಯನ್ನು ಗಮನದಲ್ಲಿರಿಸಿಕೊಳ್ಳುತ್ತವೆ. ಐಐಟಿ, ಐಐಎಂ ರೀತಿ ವಿದ್ಯಾಸಂಸ್ಥೆಗಳನ್ನು ಪ್ರೀಮಿಯರ್ ಎಂದೂ, ಇತರ ವಿದ್ಯಾಸಂಸ್ಥೆಗಳನ್ನು ನಾನ್ ಪ್ರೀಮಿಯರ್ ಎಂದೂ ಪರಿಗಣಿಸುತ್ತವೆ. ವಿದ್ಯಾರ್ಥಿಯ ವಯೋಮಿತಿ, ಕುಟುಂಬದ ವಾರ್ಷಿಕ ಆದಾಯ, ಕೋರ್ಸ್‌ನ ವೆಚ್ಚ ಎಲ್ಲವನ್ನೂ ಪರಿಗಣಿಸಿ ಶೈಕ್ಷಣಿಕ ಸಾಲದ ಲೆಕ್ಕಾಚಾರ ನಡೆಸಲಾಗುತ್ತದೆ.

ಕಡಿಮೆ ಬಡ್ಡಿದರದಲ್ಲಿ ಶಿಕ್ಷಣ ಸಾಲ ನೀಡುವ ಬ್ಯಾಂಕುಗಳು-

ವಿದ್ಯಾರ್ಥಿ ಪ್ರವೇಶ ಪಡೆಯುವ ವಿದ್ಯಾಸಂಸ್ಥೆ (ಪ್ರೀಮಿಯರ್/ನಾನ್ ಪ್ರೀಮಿಯರ್), ಕೋರ್ಸ್, ಸಾಲದ ಮೊತ್ತ, ಭದ್ರತೆ(ಕೊಲ್ಯಾಟೆರಲ್)ಯನ್ನು ಗಮದಲ್ಲಿರಿಸಿಕೊಂಡು ಸರಕಾರಿ ಅಥವಾ ಖಾಸಗಿ ಬ್ಯಾಂಕುಗಳು ಶೈಕ್ಷಣಿಕ ಸಾಲವನ್ನು ನೀಡುತ್ತವೆ.

ಬ್ಯಾಂಕು	ವಾರ್ಷಿಕ ಬಡ್ಡಿದರ	ಸಾಲದ ಗಾತ್ರ (ಭಾರತ/ ವಿದೇಶ)	ಸ್ಕೀಮ್/ ವೈಶಿಷ್ಟ್ಯ
ಕೆನರಾ ಬ್ಯಾಂಕ್	ಶೇ. 6.60- ಶೇ. 10.35	40 ಲಕ್ಷ/ 1.5 ಕೋಟಿ ರೂ.	ವಿದ್ಯಾ ತುರಂತ್ ಯೋಜನೆ
ಬ್ಯಾಂಕ್ ಆಫ್ ಮಹಾರಾಷ್ಟ್ರ	ಶೇ. 6.85- ಶೇ. 10.5	40 ಲಕ್ಷ/ 1.5 ಕೋಟಿ ರೂ.	ಹೆಣ್ಣುಮಕ್ಕಳಿಗೆ ಶೇ. 0.50 ವಿನಾಯಿತಿ
ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ	ಶೇ. 8.15- ಶೇ. 10.75	1.5 ಕೋಟಿ ರೂ./ 3 ಕೋಟಿ ರೂ.	ವಿದ್ಯಾಲಕ್ಷ್ಮೀ ಸಬ್ಸಿಡಿ ಮೇಗಾ ಮಿತಿ
ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ	ಶೇ. 8.00- ಶೇ. 9.75	40 ಲಕ್ಷ/ 1.5 ಕೋಟಿ ರೂ.	ಅಡಮಾನದ ಮೇಲೆ ಕಡಿಮೆ ಬಡ್ಡಿದರ
ಬ್ಯಾಂಕ್ ಆಫ್ ಬರೋಡಾ	ಶೇ. 8.50- ಶೇ. 10.50	40 ಲಕ್ಷ/ 2 ಕೋಟಿ ರೂ.	ಪ್ರೀಪೇಯ್ಡ್ ಶುಲ್ಕವಿಲ್ಲ (ಶೂನ್ಯ ಮಿತಿ)
ಐಡಿಬಿಐ ಬ್ಯಾಂಕ್	ಶೇ. 7.45- ಶೇ. 11.50	20 ಲಕ್ಷ/30 ಲಕ್ಷ ರೂ.	ಸ್ಪರ್ಧಾತ್ಮಕ ಬಡ್ಡಿ

ಶೈಕ್ಷಣಿಕ ಸಾಲ ಪಡೆಯಲು ಬ್ಯಾಂಕುಗಳು ತಮ್ಮ ಖಾತೆಯಲ್ಲಿ ಎಸ್‌ಬಿ ಖಾತೆ ತೆರೆಸಿಕೊಂಡು ಅದರ ಮೂಲಕವೇ ವ್ಯವಹಾರ ನಡೆಸುವಂತೆ ಸೂಚಿಸುತ್ತವೆ. ವಿದ್ಯಾ ಸಾಲಕ್ಕಾಗಿ ಪ್ಯಾನ್‌ಕಾರ್ಡ್, ಗುರುತಿನ ಚೀಟಿ, ವಯೋಮಿತಿ ಪುರಾವೆ, ದೃಢೀಕೃತ ವಿಳಾಸ, ಪೋಷಕರ ಆದಾಯ, 5-6 ತಿಂಗಳ ಆರ್ಥಿಕ ವಹಿವಾಟು, ಆಧಾರ್ ಕಾರ್ಡ್, ಎಸ್ಸೆಸ್ಸೆಲ್ಸಿ- ಪಿಯುಸಿ ಅಂಕಪಟ್ಟಿ ವಿದ್ಯಾಭ್ಯಾಸ ಫೀಸ್ ಮತ್ತಿತರ ಖರ್ಚು ವೆಚ್ಚದ ವಿವರ, ವಿದ್ಯಾ ಸಂಸ್ಥೆಯ ವಿವರ, ಓದಲಿರುವ ಸಂಸ್ಥೆಯ ಪ್ರವೇಶಾತಿ ಪತ್ರ, ಭಾವಚಿತ್ರಗಳು, ಶ್ಯೂರಿಟಿ/ ಜಾಮೀನು ಸಂಬಂಧಿ ಕಾಗದ ಪತ್ರ, ಆಸ್ತಿ/ ಅಡಮಾನ ಪ್ರಕಾರಗಳನ್ನು ಅಪೇಕ್ಷಿಸುತ್ತವೆ.

ಶೈಕ್ಷಣಿಕ ಸಾಲದ ಗಾತ್ರ ಏರಿಳಿತ

ವಿದ್ಯಾರ್ಥಿಯು ಸಾಲವನ್ನು ಪಡೆದ ಸಮಯದಲ್ಲಿ ಅಥವಾ ಒಂದು ವರ್ಷದ ಬಳಿಕ ಆತ/ಆಕೆ ಓದುತ್ತಿರುವ ಕೋರ್ಸ್ ಶುಲ್ಕಗಳ ಬದಲಾವಣೆ, ವೆಚ್ಚಗಳಲ್ಲಿ ಬದಲಾವಣೆ, ಆರ್ಥಿಕ ಏರಿಳಿತ, ಸಂಸ್ಥೆಗಳಿಂದ ಸಂಸ್ಥೆಗೆ ಬದಲಾವಣೆ ಬಯಸಿದಾಗ, ಲ್ಯಾಬ್ ಫೀಸ್, ಪರೀಕ್ಷಾ ಶುಲ್ಕಗಳಲ್ಲಿ ಪರಿವರ್ತನೆಗಳು ಕಂಡು ಬಂದು ಸಾಲದ ಪ್ರಮಾಣ ಹೆಚ್ಚಾದರೆ ಅಥವಾ ಕಡಿಮೆಯಾದರೆ ಬ್ಯಾಂಕ್ ಗಮನಕ್ಕೆ ತಂದರೆ ಸಾಲವನ್ನು ಪರಿಷ್ಕರಣೆ ಮಾಡಿಕೊಡುತ್ತದೆ.

ಭದ್ರತೆ

ಶಿಕ್ಷಣ ಸಾಲದಲ್ಲಿ ಭದ್ರತೆಯ ಪಾತ್ರ ಹಿರಿದು. ವಿದ್ಯಾರ್ಥಿ ಕುಟುಂಬದ ಆರ್ಥಿಕ ಭದ್ರತೆಯು ವಿದ್ಯಾರ್ಥಿಯ ಶೈಕ್ಷಣಿಕ ಭವಿಷ್ಯವನ್ನು ನಿರ್ಧರಿಸುತ್ತದೆ. ಬ್ಯಾಂಕುಗಳು 7ಲಕ್ಷ ರೂ.ಗಿಂತ ಹೆಚ್ಚಿನ ವಿದ್ಯಾಸಾಲ ನೀಡುವಾಗ ಭದ್ರತೆಯನ್ನು ಅಪೇಕ್ಷಿಸುತ್ತವೆ. ಆಗ ವಿದ್ಯಾರ್ಥಿ ಕುಟುಂಬದ ಆಸ್ತಿ, ಎಫ್‌ಡಿ ಠೇವಣಿ, ಚಿನ್ನಾಭರಣ, ವಿಮಾ ಪಾಲಿಸಿಗಳನ್ನು ಅಡಮಾನ ಇಡಬೇಕಾಗುತ್ತದೆ. ಇದು ವಿದ್ಯಾರ್ಥಿಗೆ ಒಂದು ರೀತಿಯ ಜವಾಬ್ದಾರಿಯನ್ನು ಹೆಚ್ಚಿಸುತ್ತದೆ. ನಾನು ಸರಿಯಾಗಿ ಓದದೇ ಇದ್ದರೆ ಪೋಷಕರ ಆಸ್ತಿ ಅಪವ್ಯಯ ಕುರಿತ ಭಯ ಕಾಡದೇ ಇರದು. ಅಸುರಕ್ಷಿತ ಸಾಲದಲ್ಲಿಯೂ 3ನೆಯ ವ್ಯಕ್ತಿಯ ಶ್ಯೂರಿಟಿಯನ್ನು ಭದ್ರತೆಯಾಗಿ ಪರಿಗಣಿಸಲಾಗುತ್ತದೆ.

ಶೈಕ್ಷಣಿಕ ಸಾಲದಲ್ಲಿ ಕೋಟ್ಯಂತರ ರೂ. ಹಣವನ್ನು ಒಮ್ಮೆಲೇ ನೀಡಲಾಗುವುದಿಲ್ಲ. ಬ್ಯಾಂಕುಗಳು ವಿದ್ಯಾರ್ಥಿಯ ಪೋಷಕರು ಅಡಮಾನವಿಟ್ಟ ಆಸ್ತಿಯ ಮಾರುಕಟ್ಟೆ ಮೌಲ್ಯದ ಬದಲಿಗೆ ವಾಸ್ತವಿಕ ಮೌಲ್ಯವನ್ನು (ರಿಲೀಜೆಬಲ್ ವ್ಯಾಲ್ಯು) ಮಾತ್ರ ಪರಿಗಣಿಸುತ್ತದೆ. ಅಂದರೆ ತುರ್ತು ಆಸ್ತಿ ಮಾರಾಟವಾದರೆ ಎಷ್ಟು ಹಣ ಸಿಗುತ್ತದೆ ಎಂಬುದನ್ನು ಲೆಕ್ಕಹಾಕಲಾಗುತ್ತದೆ.

ಮಾರ್ಜಿನ್: ಇನ್ನು ಬ್ಯಾಂಕುಗಳು ಆಸ್ತಿಯ ಸಂಪೂರ್ಣ ಮೌಲ್ಯಕ್ಕೆ ಸಾಲ ನೀಡುವುದಿಲ್ಲ. ಆಸ್ತಿಯ ಮೌಲ್ಯದ ಶೇ. 70 ಅಥವಾ ಶೇ. 80ರಷ್ಟು ಮಾತ್ರ ಸಾಲ ನೀಡುತ್ತದೆ. ಶೇ.20 ರಷ್ಟನ್ನು ಮಾರ್ಜಿನ್ ಎಂದು ತಿಳಿಯಬೇಕು. ಅಂದರೆ 50 ಲಕ್ಷ ಆಸ್ತಿ ಮೌಲ್ಯವಿದ್ದರೆ 40ಲಕ್ಷ ಮಾತ್ರ ವಿದ್ಯಾಸಾಲ ಸಿಗುತ್ತದೆ.

ಎಫ್‌ಡಿ ಠೇವಣಿ, ಮನೆ, ನಿವೇಶನ, ಬೇರೆ ಆಸ್ತಿಗಳನ್ನು ಅಡಮಾನ ಇಡಬಹುದು. ಜಂಟಿ ಒಡೆತನದ ಆಸ್ತಿ ಇದ್ದರೆ ಎಲ್ಲಾ ಮಾಲೀಕರ ಒಪ್ಪಿಗೆ ಅಗತ್ಯ. ಜತೆಗೆ ಅಡಮಾನ ಇಟ್ಟ ಆಸ್ತಿಗೆ ಯಾವುದೇ ಕಾನೂನು ವಿವಾದ ಇರಬಾರದು.

ಸುರಕ್ಷಿತ/ ಅಸುರಕ್ಷಿತ ಶೈಕ್ಷಣಿಕ ಸಾಲ

ವಿದ್ಯಾರ್ಥಿಯು ಪಡೆಯುವ ಶೈಕ್ಷಣಿಕ ಸಾಲವು ಎಷ್ಟು ಸುರಕ್ಷಿತ ಎಂಬುದನ್ನು ಮೇಲಾಧಾರ/ ಭದ್ರತೆ(ಕೊಲ್ಯಾಟೆರಲ್/ ಸೆಕ್ಯೂರಿಟಿ) ಮತ್ತು ಬಡ್ಡಿದರಗಳ (ಇಂಟ್ರೆಸ್ಟ್ ರೇಟ್)ಗಳ ಮೇಲೆ ಅವಲಂಬಿತವಾಗಿ ಲೆಕ್ಕಾಚಾರ ಮಾಡಲಾಗುತ್ತದೆ.

	ಸುರಕ್ಷಿತ ಶೈಕ್ಷಣಿಕ ಸಾಲ	ಅಸುರಕ್ಷಿತ ಶೈಕ್ಷಣಿಕ ಸಾಲ
ಮೇಲಾಧಾರ/ ಭದ್ರತೆ	ಮನೆ ಆಸ್ತಿಪತ್ರ, ಸ್ಥಿರ ಠೇವಣಿ, ವಿಮಾ ಪಾಲಿಸಿ, ಚಿನ್ನಾಭರಣ	ಭದ್ರತೆ ಮೇಲಾಧಾರದ ಅಗತ್ಯವಿಲ್ಲ. ಸಹ-ಅರ್ಜಿದಾರರ ಆದಾಯದ ಮೇಲೆ ಸಾಲ
ಬಡ್ಡಿದರ	ಶೇ.8- ಶೇ.11	ಶೇ. 10-ಶೇ.16 ಅದಕ್ಕೂ ಹೆಚ್ಚು
ಸಾಲದ ಮೊತ್ತ	ಹೆಚ್ಚಿನ ಮೊತ್ತ 3 ಕೋಟಿ ರೂ. ವರೆಗೆ	ಸೀಮಿತ ಮೊತ್ತ 50-80 ಲಕ್ಷ ರೂ. ವರೆಗೆ
ಅನುಕೂಲ	ಸಾಲದ ಮೊತ್ತ ಹೆಚ್ಚಿದ್ದರೂ ಬಡ್ಡಿ ಕಡಿಮೆ ಪಾವತಿ ಸುಲಭ	ಸಾಲದ ಮೊತ್ತ ಹೆಚ್ಚುತ್ತಾ ಬಡ್ಡಿ ಕಟ್ಟಲು ಕಷ್ಟ
ಪ್ರಕ್ರಿಯೆ ಸಮಯ	15-20 ದಿನ	3-7 ದಿನ
ಅರ್ಹತೆ	ಆಸ್ತಿ ಹೊಂದಿದವರಿಗೆ ಮಾತ್ರ	ಉತ್ತಮ ಸಿಬಿಲ್ ಸ್ಕೋರ್ ಅತ್ಯವಶ್ಯ
ಸಾಲದಾತರು ಯಾರು?	ಸಾರ್ವಜನಿಕರ ವಲಯದ ಬ್ಯಾಂಕುಗಳು (ಎಸ್ ಬಿಐ-ಬ್ಯಾಂಕ್ ಆಫ್ ಬರೋಡಾ ಇತ್ಯಾದಿ	ಖಾಸಗಿ ಬ್ಯಾಂಕುಗಳು, ಸಹಕಾರ ಸಂಘಗಳು, ಎನ್‌ಬಿಎಫ್ಸಿಗಳು

ಬಡ್ಡಿದರಲ್ಲಿ ಏರಿಳಿತವಾಗುವುದೇ?

ಯಾವುದೇ ದೇಶದ ಆರ್ಥಿಕತೆ ಏರಿಳಿತದಿಂದ ಕೂಡಿರುತ್ತದೆ. ಮಾರುಕಟ್ಟೆ ಏರಿಳಿತಗಳಿಗೆ ಅನುಗುಣವಾಗಿ ಬದಲಾಗುವ ಬಡ್ಡಿದರವನ್ನು ಫ್ಲೋಟಿಂಗ್ ರೇಟ್ ಎಂದು ಕರೆಯಲಾಗುತ್ತದೆ. ಶಿಕ್ಷಣ ಸಾಲದ ಮರುಪಾವತಿ ದೀರ್ಘಾವಧಿಯಾಗಿರುವುದರಿಂದ ಆರ್‌ಬಿಐ ನಿಯಮಗಳಡಿಯಲ್ಲಿ ರೆಪೋದರ (ವಾಣಿಜ್ಯ ಬ್ಯಾಂಕ್‌ಗಳಿಗೆ ರಿಸರ್ವ್‌ಬ್ಯಾಂಕ್ ಹಣ ಒದಗಿಸುವ ಬಡ್ಡಿದರ) ಬದಲಾವಣೆಯಾದಂತೆ ಬ್ಯಾಂಕುಗಳ ಬಡ್ಡಿದರಲ್ಲಿ ಏರಿಳಿತ ಕಂಡು ಬರುತ್ತದೆ.

ಬಡ್ಡಿದರವು ಬೇಸ್ ರೇಟ್ ಮತ್ತು ಸ್ಪ್ರೆಡ್(ಬ್ಯಾಂಕಿನ ಲಾಭಾಂಶ) ಗಳ ಮೇಲೆ ಅವಲಂಬಿತವಾಗಿದೆ. ಮಾರುಕಟ್ಟೆ ಬದಲಾವಣೆ ಬ್ಯಾಂಕುಗಳ ಬೇಸ್ ರೇಟ್ ಮೇಲೆ ಪರಿಣಾಮ ಬಿರುತ್ತದೆ. ಮಾರುಕಟ್ಟೆ ಬಡ್ಡಿದರ ಇಳಿಕೆಯಾದಾಗ ವಿದ್ಯಾಸಾಲದ ಇಎಂಐ ಕಡಿಮೆಯಾಗಬಹುದು. ಮಾರುಕಟ್ಟೆ ಬಡ್ಡಿದರ ಏರಿಕೆಯಾದರೆ ಸಾಲದ ಹೊರೆ ಹೆಚ್ಚಬಹುದು.

ವಿದ್ಯಾರ್ಥಿಯು ಸಾಲ ಪಡೆಯುವ ಮುನ್ನ ಸಾಲದ ಪ್ರಸ್ತುತ ಬಡ್ಡಿದರ, ಪ್ರೊಸೆಸಿಂಗ್ ಫೀಸ್ ಮತ್ತು ಮುಂಪಾವತಿ ನಿಯಮಗಳನ್ನು ಕಡ್ಡಾಯವಾಗಿ ಪರಿಶೀಲಿಸಬೇಕು.

ಪಡೆಯುವ ಸಾಲ ಮತ್ತು ಮರುಪಾವತಿ ಸಾಲ ಹಾಗೂ ಸಾಲದ ಅವಧಿಯಲ್ಲಿ ಎಷ್ಟು ಪಾವತಿ ಮಾಡಲಾಗುತ್ತದೆ ಎಂಬುದನ್ನು ಮೊದಲೇ ಲೆಕ್ಕಾಚಾರ ಮಾಡಿಕೊಳ್ಳುವುದು ಒಳಿತು. ಬೇಗ ಸಾಲ ಸಿಗುತ್ತದೆ ಎಂದು ಅಸುರಕ್ಷಿತ ಶೈಕ್ಷಣಿಕ ಸಾಲ ಪಡೆದರೆ ಮುಂದೆ ಹೆಚ್ಚು ಬಡ್ಡಿ ಕಟ್ಟುತ್ತಾ ಬ್ಯಾಂಕಿನ ಸಿಬಂದಿಗೆ ಹಿಡಿಶಾಪ ಹಾಕಬೇಕಾಗುತ್ತದೆ.

ಇನ್ನು ಬ್ಯಾಂಕ್‌ಗಳು ತಾವು ನೀಡುವ ವಿದ್ಯಾಸಾಲವನ್ನು ಪೂರ್ಣಪ್ರಮಾಣದಲ್ಲಿ ಒಮ್ಮೆಲೇ ನೀಡುವುದಿಲ್ಲ. ವಿದ್ಯಾರ್ಥಿಯ ಶೈಕ್ಷಣಿಕ ಸಾಧನೆಗೆ ಅನುಗುಣವಾಗಿ ವರ್ಷದಿಂದ ವರ್ಷಕ್ಕೆ ನೀಡುತ್ತಾ ಹೋಗುತ್ತವೆ. ವಿದ್ಯಾರ್ಥಿಯ ಪೋಷಕರು ಆರ್ಥಿಕವಾಗಿ ಸುದೃಢರಾಗಿದ್ದರೆ, ಕೊನೆ ವರ್ಷ ಬ್ಯಾಂಕ್ ನೀಡುವ ಮೊತ್ತವನ್ನು ಪಡೆಯದೆ ಆರ್ಥಿಕ ಹೊರೆ ಕಡಿಮೆ ಮಾಡಿಕೊಳ್ಳಬಹುದು. ಈ ಕುರಿತು ಬ್ಯಾಂಕಿನವರೊಂದಿಗೆ ಮಾತುಕತೆ ನಡೆಸುವುದು ಒಳಿತು.

ಇನ್ನೂ ಕೆಲವು ಆರ್ಥಿಕ ಸಬಲರು ತಮ್ಮ ಹಣದಲ್ಲಿ ವಿದ್ಯಾರ್ಥಿ ವ್ಯಾಸಂಗ ಮಾಡಿಸಿ ವಿದ್ಯಾಸಾಲವನ್ನೂ ಪಡೆದು ಅದನ್ನು ಬಡ್ಡಿ ಆಸೆಗೆ ಎಫ್‌ಡಿ ಇಡುತ್ತಾರೆ. ಈ ಕೆಲಸ ಮಾಡಬೇಡಿ, ಅಗತ್ಯ ಮತ್ತು ಆವಶ್ಯಕತೆಗಳಿಗನುಗುಣವಾಗಿ ಸಾಲ ಪಡೆಯಿರಿ.

20 ಲಕ್ಷ ಸಾಲ : 15 ವರ್ಷಕ್ಕೆ

ಶೇ. 11 ವಾರ್ಷಿಕ ಬಡ್ಡಿದರದಲ್ಲಿ ಮರುಪಾವತಿ ಮೊತ್ತ

ವರ್ಷ	ಅಸಲು ರೂ. ಗಳಲ್ಲಿ	ಬಡ್ಡಿಪಾವತಿ ರೂ. ಗಳಲ್ಲಿ	ವರ್ಷಾಂತ್ಯ ಉಳಿಕೆ ರೂ. ಗಳಲ್ಲಿ
1	55527	217255	1944472
2	61952	210830	1882519
3	69122	203661	1813397
4	77120	195662	1736276
5	86045	186738	1650231
6	96002	176781	1554230
7	10711	165671	1447117
8	119506	153276	1327611
9	133335	139447	1194275
10	148764	124018	1045510
11	165979	106803	879531
12	185186	87596	694344
13	206616	66166	487727
14	230525	42257	257202
15	257202	15581	0.00
ಒಟ್ಟು	2000000	2091750	0.00

ಸಾಲ ಮರುಪಾವತಿ ಮಾಡುವಾಗ ಪ್ರಾರಂಭಿಕ ಹಂತದಲ್ಲಿ ಬಡ್ಡಿಪ್ರಮಾಣ ಅಧಿಕ ಹಾಗೂ ಅಸಲಿನ ಪ್ರಮಾಣ ಕಡಿಮೆ ಇರುತ್ತದೆ. ಈ ರೀತಿಯಲ್ಲಿಯೇ ಬ್ಯಾಂಕ್‌ಗಳು ಮರುಪಾವತಿಯನ್ನು ವಿನ್ಯಾಸಗೊಳಿಸಿರುತ್ತವೆ. ಇದನ್ನು ನೋಡಿ ಯಾರೂ ಹೌಹಾರುವುದು ಬೇಡ.

ಬಡ್ಡಿದರ ಕಡಿಮೆ ಇದ್ದರೆ ಪಾವತಿ ಕಡಿಮೆಯಾಗಬಹುದು. ಆದರೆ ಬ್ಯಾಂಕುಗಳು ತಮ್ಮ ಲಾಭಾಂಶವನ್ನು ಪರಿಗಣಿಸದೆ ಯಾವುದೇ ಆರ್ಥಿಕ ವ್ಯವಹಾರ ಮಾಡುವುದಿಲ್ಲ. ಇದರ ಜತೆ ಮೊರಟೋರಿಯಂ ಅವಧಿಯ ಬಡ್ಡಿಯನ್ನು ಪಡೆಯುತ್ತವೆ.

ಪ್ರತಿ ಸಮಾನ ಮಾಸಿಕ ಕಂತು (ಇಎಂಐ) ಇಕ್ವೇಟೆಡ್ ಮಂತ್ಲಿ ಇನ್‌ಸ್ಟಾಲ್‌ಮೆಂಟ್‌ಗಳನ್ನು ಅಭ್ಯರ್ಥಿಯು ಪಾವತಿ ಕಾಲದಲ್ಲಿ ಸರಿಯಾಗಿ ಪಾವತಿಸಿದರೆ ಒಳಿತು. ಒಂದು ಕಂತು ಹಿಂದೆ ಮುಂದೆಯಾದರೂ ಬ್ಯಾಂಕಿನವರು ಕರೆ ಮಾಡಿ ಎಚ್ಚರಿಸುತ್ತಾರೆ. ಜತೆಗೆ ದಂಡ ಪ್ರಯೋಗವನ್ನೂ ಮಾಡುತ್ತಾರೆ. ದಂಡ ಶೇಕಡಾ ಪ್ರಮಾಣದಲ್ಲಿರುತ್ತದೆ ಎನ್ನುವುದನ್ನು ಮರೆಯದಿರಿ. ಇದೇ ರೀತಿ ಕೆಲವು ಬ್ಯಾಂಕುಗಳಲ್ಲಿ ಮುಂಪಾವತಿಗೂ ದಂಡ ಇರುತ್ತದೆ. ಇದರ ಮೇಲೂ ನಿಗಾ ಇರಲಿ.

ವಿದ್ಯಾರ್ಥಿಯು ಶಿಸ್ತುಬದ್ಧ ಮರುಪಾವತಿ ಮಾಡುತ್ತಾ ಹೋದರೆ ಕೆಲವು ಬ್ಯಾಂಕುಗಳು ಕೊನೆ ಹಂತದ ಪಾವತಿಗೆ ವಿನಾಯಿತಿ ನೀಡಬಹುದು.

ಕೇಂದ್ರದ ಪಿಎಂ ವಿದ್ಯಾಲಕ್ಷ್ಮೀ ಯೋಜನೆ

ಭಾರತ ಸರಕಾರದ ಶಿಕ್ಷಣ ಸಚಿವಾಲಯವು ವಿದ್ಯಾರ್ಥಿಗಳ ಉನ್ನತ ವಿದ್ಯಾಭ್ಯಾಸಕ್ಕಾಗಿ ಶೈಕ್ಷಣಿಕ ಸಾಲವನ್ನು ಒದಗಿಸಿದೆ. ಉನ್ನತ ಶಿಕ್ಷಣ ಪಡೆಯ ಬಯಸುವ, ಆರ್ಥಿಕವಾಗಿ ಹಿಂದುಳಿದ ಪ್ರತಿಭಾನ್ವಿತ ಭಾರತೀಯ ವಿದ್ಯಾರ್ಥಿಗಳಿಗೆ ಯಾವುದೇ ಮೇಲಾಧಾರ (ಕೊಲ್ಯಾಟರಲ್) ಇಲ್ಲದೆ 10 ಲಕ್ಷ ರೂ. ವರೆಗೆ ಸಾಲ ಮತ್ತು ಸಬ್ಸಿಡಿ ಒದಗಿಸುವ ಯೋಜನೆಯೇ ಪಿಎಂ ವಿದ್ಯಾ ಲಕ್ಷ್ಮೀ ಸ್ಕೀಮ್. ಡಿಜಿಟಲ್ ಅರ್ಜಿಯ ಮೂಲಕ ಅರ್ಹ ವಿದ್ಯಾರ್ಥಿಗಳು ಈ ಸಾಲ ಪಡೆಯಬಹುದು.

ವಾರ್ಷಿಕವಾಗಿ 8 ಲಕ್ಷದಿಂದ 10 ಲಕ್ಷ ರೂ. ವರೆಗಿನ ವಾರ್ಷಿಕ ಆದಾಯ ಹೊಂದಿರುವ ಕುಟುಂಬದ ವಿದ್ಯಾರ್ಥಿಗಳಿಗೆ ಸರಕಾರ ಗೊತ್ತುಪಡಿಸಿದ 860 ಗುಣಮಟ್ಟದ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ (ಕ್ಯೂಎಚ್ಇಐ) ಪ್ರವೇಶ ಪಡೆಯಬಹುದು.

ಯೋಜನೆಯ ವಿವರ

- ಕೊಲ್ಯಾಟರಲ್ ಮತ್ತು ಗ್ಯಾರಂಟರ್ ಇಲ್ಲದೆ 10 ಲಕ್ಷ ರೂ. ವರೆಗೆ ಶಿಕ್ಷಣ ಸಾಲ ಸೌಲಭ್ಯ
- ಪಿಎಂ ವಿದ್ಯಾಲಕ್ಷ್ಮೀ ಡಿಜಿಟಲ್ ರುಪಿ ಆ್ಯಪ್ ಮೂಲಕವೇ ಸಚಿವಾಲಯವು ವಿದ್ಯಾರ್ಥಿ ಅಥವಾ ಫಲಾನುಭವಿಯೊಂದಿಗೆ ವ್ಯವಹಾರ.
- ಕುಟುಂಬದ ಆದಾಯ ಏನೇ ಇದ್ದರೂ ಏಳೂವರೆ ಲಕ್ಷ ರೂ.ವರೆಗಿನ ಸಾಲದ ಮೊತ್ತಕ್ಕೆ ಕೇಂದ್ರ ಸರಕಾರದಿಂದ ಕ್ರೆಡಿಟ್ ಗ್ಯಾರಂಟಿ
- ಮಾಸಿಕ ಬಡ್ಡಿದರ ಕಡಿತದ ಅವಧಿಯಲ್ಲಿ (ಕೋರ್ಸ್ ಅವಧಿ+ 1 ವರ್ಷ) 8ಲಕ್ಷದ ವರೆಗೆ ಆದಾಯ ಹೊಂದಿದ ಕುಟುಂಬಕ್ಕೆ 10 ಲಕ್ಷ ಸಾಲಗಳ ಮೇಲೆ ಶೇ. 3ರಷ್ಟು ಸಬ್ಸಿಡಿ. ನಾಲ್ಕೂವರೆ ಲಕ್ಷ ವಾರ್ಷಿಕ ಆದಾಯ ಹೊಂದಿದ ಕುಟುಂಬಕ್ಕೆ ಸಾಲದ ಬಡ್ಡಿಯಲ್ಲಿ ವಿನಾಯಿತಿ.
- ಮರುಪಾವತಿ ಅವಧಿ 15ವರ್ಷ. ಅಧ್ಯಯನದ ಅವಧಿ+ ವಿನಾಯಿತಿ ಅವಧಿಯಲ್ಲಿ ಬಡ್ಡಿ ಪಾವತಿಸಿದರೆ ಶೇ. 1ರವರೆಗೆ ಹೆಚ್ಚುವರಿ ಬಡ್ಡಿರಿಯಾಯಿತಿ.

ಅರ್ಹತೆಗಳು

- ವಿದ್ಯಾರ್ಥಿ ಭಾರತೀಯ ಪ್ರಜೆಯಾಗಿರಬೇಕು
- ಯೋಜನೆ ಗೊತ್ತು ಪಡಿಸಿದ (860 ಕಾಲೇಜುಗಳು) ಕಾಲೇಜಿನಲ್ಲಿ ಅರ್ಹತೆ ಆಧಾರಿತ ಪ್ರವೇಶಕ್ಕೆ ಮಾತ್ರ ಮಾನ್ಯತೆ
- ಶೇ.3 ರಷ್ಟು ಸಬ್ಸಿಡಿ ಪಡೆಯಲು ಆದಾಯ ಪ್ರಮಾಣ ಪತ್ರ ಕಡ್ಡಾಯ
- ರಾಜ್ಯ ಅಥವಾ ಕೇಂದ್ರದ ವಿದ್ಯಾರ್ಥಿವೇತನ ಅಥವಾ ಬಡ್ಡಿ ಸಹಾಯಧನ ಪಡೆಯುತ್ತಿರಬಾರದು.
- ಫಲಾನುಭವಿಯು ಆರಿಸಿಕೊಂಡ ಕೋರ್ಸನ್ನು ಮಧ್ಯದಲ್ಲಿಯೇ ನಿಲ್ಲಿಸಬಾರದು. ಅಥವಾ ಶೈಕ್ಷಣಿಕ ಸಂಸ್ಥೆಯಿಂದ ಹೊರಹಾಕಲ್ಪಡಬಾರದು.
- ಎರಡನೆಯ ವರ್ಷದಿಂದ ಸಹಾಯಧನ ಪಡೆಯಲು ತೃಪ್ತಿದಾಯಕ ಶೈಕ್ಷಣಿಕ ಕಾರ್ಯಕ್ಷಮತೆ ಪ್ರದರ್ಶಿಸಬೇಕು.
- ಪಿಯುಸಿ, ಪದವಿ ಅಥವಾ ಸಂಯೋಜಿತ ಕೋರ್ಸ್‌ಗಳ ಮೂಲಕ ವಿದ್ಯಾಭ್ಯಾಸಕ್ಕೆ ಒಮ್ಮೆ ಮಾತ್ರ ಕ್ರೆಡಿಕ್ ಗ್ಯಾರಂಟಿ ಪ್ರಯೋಜನ ಪಡೆಯಬಹುದು.

ಅಗತ್ಯ ದಾಖಲೆಗಳು

ಪ್ಯಾನ್ ಕಾರ್ಡ್, ಆಧಾರ್ ಕಾರ್ಡ್, ವಿಳಾಸ ದಾಖಲೆ, ಸ್ವಯಂ ದೃಢೀಕರಿಸಿದ ಅಂಕಪಟ್ಟಿ ಭಾವಚಿತ್ರ, ಸೇರಬಯಸುವ ಕಾಲೇಜಿನ ಪ್ರವೇಶ ಪರೀಕ್ಷೆ ಫಲಿತಾಂಶ ಪಟ್ಟಿ ಕಾಲೇಜಿನ ದೃಢೀಕೃತ ಆಫರ್ ಲೆಟರ್, ಆದಾಯ ಪ್ರಮಾಣ ಪತ್ರ ಅಗತ್ಯವಾಗಿ ಬೇಕಾಗುತ್ತದೆ.

ನೋಂದಣಿ, ಅರ್ಜಿ ಪ್ರಕ್ರಿಯೆ ಹೇಗೆ?

ಆನ್‌ಲೈನ್ ಮೂಲಕ pmvidyalaxmi.co.in/ವಿದ್ಯಾಲಕ್ಷ್ಮೀ ಜಾಲತಾಣದಲ್ಲಿ ಲಾಗಿನ್ ಆಗಿ ವಿದ್ಯಾರ್ಥಿ ತಮ್ಮ ಖಾತೆ ರಚಿಸಿಕೊಳ್ಳಬೇಕು. ಬಳಿಕ ವಿದ್ಯಾರ್ಥಿ ನೋಂದಣಿ ಪುಟದಲ್ಲಿ ತಮ್ಮ ವಿವರಗಳನ್ನು ತುಂಬಿ ಬಡ್ಡಿ ಸಬ್ಸಿಡಿ, ಕ್ರೆಡಿಟ್ ಗ್ಯಾರಂಟಿ ಪಡೆಯಲು ಆಧಾರ್ ಮೂಲಕ ನೋಂದಣಿ ಮಾಡಿಕೊಳ್ಳಬೇಕು. ಜತೆಗೆ ಅರ್ಹರಾಗಿದ್ದರೆ ಬಡ್ಡಿ ಸಬ್ಸಿಡಿಗೆ ಅರ್ಜಿ ಸಲ್ಲಿಸಬಹುದು. ಬಳಿಕ ಮೊಬೈಲ್ ಸಂಖ್ಯೆ, ಇ-ಮೇಲ್ ಐಡಿ ಒಟಿಪಿ ಮೂಲಕ ಪಾಸ್‌ವರ್ಡ್ ರಚನೆ ಮಾಡಿಕೊಳ್ಳಬೇಕು. ನೋಂದಣಿ ದೃಢೀಕರಣಕ್ಕೆ ಎಸ್ ಎಂಎಸ್ / ಇ-ಮೇಲ್ ಪರೀಕ್ಷಿಸಿಕೊಳ್ಳುವುದು.

ಬಳಿಕ ಅಧಿಕೃತ ಜಾಲತಾಣದ ಮೂಲಕ ತಮ್ಮ ಪಾಸ್‌ವರ್ಡ್ ಬಳಸಿ ಲಾಗಿನ್ ಆಗಿ ನಿಯಮ ಮತ್ತು ಗೌಪ್ಯತೆಗೆ ಸಮ್ಮತಿಸಿ ಈಗಾಗಲೇ ಸ್ವೀಕರಿಸಿದ ಒಟಿಪಿ ಒದಗಿಸಿ. ಬಳಿಕ ಮುಖಪುಟದಲ್ಲಿ ಶೈಕ್ಷಣಿಕ ಸಾಲಕ್ಕೆ ಅರ್ಜಿ ಸಲ್ಲಿಸಿ. ಅರ್ಜಿ ನಮೂನೆ ಪುಟದಲ್ಲಿ ಅಗತ್ಯ ದಾಖಲೆ, ಮಾಹಿತಿಯನ್ನು ತುಂಬಿ ಫೈಲ್‌ಗಳನ್ನು ಅಪ್‌ಲೋಡ್ ಮಾಡಿ. ಜತೆಗೆ ನಿಮ್ಮ ಆದ್ಯತೆಯ ಬ್ಯಾಂಕ್ ಶಾಖೆಯನ್ನು ಆಯ್ಕೆ ಮಾಡಿ. ಮತ್ತೊಮ್ಮೆ ದಾಖಲೆ ಪರಿಶೀಲಿಸಿ ಸಬ್‌ಮಿಟ್ ಮಾಡಿ, ದೃಢೀಕರಣ ಸಂದೇಶ ಸ್ವೀಕರಿಸಿ.

ಶೈಕ್ಷಣಿಕ ಸಾಲಕ್ಕೆ ತೆರಿಗೆ ವಿನಾಯಿತಿ ಇದೆಯೇ?

ಉನ್ನತ ವಿದ್ಯಾಭ್ಯಾಸಕ್ಕಾಗಿ ಬ್ಯಾಂಕಿನಿಂದ ಪಡೆದ ಸಾಲದ ಬಡ್ಡಿಗೆ ತೆರಿಗೆ ವಿನಾಯಿತಿ ಇದೆ. 1961ರ ಸೆಕ್ಷನ್ 80ಇ ಅಡಿಯಲ್ಲಿ ಉನ್ನತ ಶಿಕ್ಷಣ ಸಾಲದ ಮೇಲಿನ ಬಡ್ಡಿಗೆ ತೆರಿಗೆ ವಿನಾಯಿತಿ ಸಿಗಲಿದೆ. ಸಾಲದ ಅಸಲು ಮೊತ್ತ ಮರುಪಾವತಿಗೆ ಇಲ್ಲಿ ಕರ ವಿನಾಯಿತಿ ಇಲ್ಲ. ಜತೆಗೆ ನೀವು ಎಷ್ಟು ಬಡ್ಡಿ ಪಾವತಿಸುತ್ತೀರೋ ಅಷ್ಟು ಮೊತ್ತವನ್ನು ನೀವು ತೆರಿಗೆಗೆ ಒಳಪಡುವ ಆದಾಯದಿಂದ ಕಳೆಯಬೇಕು. ಅಂದರೆ ಬಡ್ಡಿಯ ಮೊತ್ತದ ಮೇಲೆ ಯಾವುದೇ ಗರಿಷ್ಠ ಮಿತಿ ಇರುವುದಿಲ್ಲ. ಶೈಕ್ಷಣಿಕ ಸಾಲವನ್ನು ನೀವು, ನಿಮ್ಮ ಸಂಗಾತಿ ಅಥವಾ ಮಕ್ಕಳು ಬ್ಯಾಂಕ್ ಅಥವಾ ಮಾನ್ಯತೆ ಪಡೆದ ಹಣಕಾಸು ಸಂಸ್ಥೆಯಿಂದ ಪಡೆದಿರಬೇಕು. ವೈಯಕ್ತಿಕ ತೆರಿಗೆದಾರರಾಗಿದ್ದರೆ ಈ ವಿನಾಯಿತಿ ಸಿಗುತ್ತದೆ. ಅಂದರೆ, ಒಂದು ಮನೆಯಲ್ಲಿ ಒಬ್ಬರಿಗೆ ಮಾತ್ರ ಶೈಕ್ಷಣಿಕ ಸಾಲದ ಮೇಲಿನ ಬಡ್ಡಿ ಮೇಲಿನ ತೆರಿಗೆಗೆ ವಿನಾಯಿತಿ ಸಿಗುತ್ತದೆ.

ಮೊರಟೋರಿಯಂ ಅವಧಿ ಎಂದರೇನು?

ಶೈಕ್ಷಣಿಕ ಸಾಲ ಪಡೆದ ವಿದ್ಯಾರ್ಥಿ ತಾನು ಕೋರ್ಸ್ ಓದುತ್ತಿರುವ ಅವಧಿ ಮತ್ತು ಕೋರ್ಸ್ ಮುಗಿಸಿ ಇಎಂಐ ಮರುಪಾವತಿ ವಿನಾಯಿತಿ ಪಡೆಯುವ ಸಮಯವನ್ನು ಮೊರಟೋರಿಯಂ ಅವಧಿ ಎನ್ನುತ್ತಾರೆ. ಇದು ಸಾಮಾನ್ಯವಾಗಿ ಕೋರ್ಸ್ ಅವಧಿ+ ಕೆಲಸ ಹುಡುಕಿಕೊಳ್ಳಲು ನೀಡುವ 6ರಿಂದ 12 ತಿಂಗಳ ಸಮಯವಾಗಿರುತ್ತದೆ. ಮೊರಟೋರಿಯಂ ಅವಧಿಯಲ್ಲಿ ಬಡ್ಡಿ ಮನ್ನಾ ಮಾಡಲಾಗದು. ಆದರೆ ಸರಳ ಬಡ್ಡಿಯನ್ನು ಮಾತ್ರ ಅನ್ವಯಿಸಲಾಗುತ್ತದೆ. ಜತೆಗೆ ಕಾಂಪೌಂಡಿಂಗ್ ಮಾಡಲಾಗುವುದಿಲ್ಲ

ಉದಾಹರಣೆಗೆ ಒಬ್ಬ ವಿದ್ಯಾರ್ಥಿ ನಾಲ್ಕು ವರ್ಷ ಕೋರ್ಸ್ ಓದುತ್ತಾನೆ. ಅದಕ್ಕಾಗಿ ವಿದ್ಯಾಸಾಲ ಎಂದು 20 ಲಕ್ಷ ರೂ. ಬ್ಯಾಂಕಿನಿಂದ ಪ್ರತಿ ವರ್ಷ ಕಂತಿನ ರೂಪದಲ್ಲಿ ಪಡೆಯುತ್ತಾನೆ. ಸಾಮಾನ್ಯ ಬಡ್ಡಿದರ ಶೇ. 12 ಎಂದಿಟ್ಟುಕೊಳ್ಳಿ. ಮೊರಟೋರಿಯಂ ಅವಧಿ ಸೇರಿ ವ್ಯಾಸಂಗದ ಕಾಲ ಒಟ್ಟು ಐದು ವರ್ಷವಾಯಿತು.

ಈಗ 20 ಲಕ್ಷ ಹಣವನ್ನು 4 ವರ್ಷದ ಅವಧಿಗೆ ಬ್ಯಾಂಕ್ ಕಂತು ಕಂತಾಗಿ ಪ್ರತಿವರ್ಷ 5ಲಕ್ಷ ರೂ. ವಿದ್ಯಾರ್ಥಿಗೆ ನೀಡುತ್ತದೆ. ಆಯಾ ವರ್ಷ ನೀಡಿದ ಹಣದ ಮೇಲೆ ಸಾಮಾನ್ಯ ಬಡ್ಡಿ ಹೇರುತ್ತದೆ. ಜತೆಗೆ ಮೊರಟೋರಿಯಂ ಅವಧಿಯಲ್ಲೂ ನೀಡಿದ ಒಟ್ಟು ಮೊತ್ತಕ್ಕೆ ಬಡ್ಡಿ ಹಾಕುತ್ತದೆ. ಬಳಿಕ ಇಎಂಐ ಪಾವತಿಸುವ ಸಮಯ ಬಂದಾಗ ಬಡ್ಡಿ ಸಮೇತ ವಿದ್ಯಾರ್ಥಿ ಹಣ ಪಾವತಿ ಮಾಡಬೇಕು.

ಕರ್ನಾಟಕದ ಅರಿವು ಸಾಲ ಯೋಜನೆ

ಕರ್ನಾಟಕ ಸರಕಾರದ ಅಲ್ಪಸಂಖ್ಯಾಕ ಅಭಿವೃದ್ಧಿ ನಿಗಮದ ಅಡಿಯಲ್ಲಿ ಅಲ್ಪಸಂಖ್ಯಾಕ ವಿದ್ಯಾರ್ಥಿಗಳಿಗೆ ಎಂಬಿಬಿಎಸ್, ಬಿಇ, ಎಂಬಿಎ ಸೇರಿದಂತೆ ಉನ್ನತ ಮಟ್ಟದ ಓದಿಗಾಗಿ ವಾರ್ಷಿಕ 50 ಸಾವಿರದಿಂದ 5ಲಕ್ಷದ ವರೆಗೆ ಶೇ. 2ರ ಬಡ್ಡಿದರದಲ್ಲಿ ಸರಕಾರಿ ಕೋಟಾದ ಸೀಟು (ಸಿಇಟಿ/ನೀಟ್) ಗಳಿಗೆ ಸಾಲಸೌಲಭ್ಯ ಕಲ್ಪಿಸುವ ಯೋಜನೆಯೇ ಅರಿವು ಸಾಲ ಯೋಜನೆ. ಹಿಂದುಳಿದ, ಅಲ್ಪಸಂಖ್ಯಾಕ ವಿದ್ಯಾರ್ಥಿಗಳಿಗೆ ಮಾತ್ರ ಈ ಯೋಜನೆ ಉಪಯೋಗವಿದ್ದು, ವಾರ್ಷಿಕ 8ಲಕ್ಷ ಆದಾಯ ಮಿತಿ ಹೊಂದಿರುವ ಕುಟುಂಬದ ವಿದ್ಯಾರ್ಥಿಗೆ ಅನುಕೂಲಕರವಾಗಿದೆ. ಕೋರ್ಸ್ ಮುಗಿದ 6 ತಿಂಗಳ ಬಳಿಕ ಮರುಪಾವತಿ ಅವಧಿ ಪ್ರಾರಂಭವಾಗುತ್ತದೆ.

ವೃತ್ತಿಪರ ಶಿಕ್ಷಣದ ಮೂಲಕ ಉನ್ನತ ಹುದ್ದೆಯನ್ನು ಅಲಂಕರಿಸಲು ಹಿಂದುಳಿದ ಅಲ್ಪಸಂಖ್ಯಾಕ ವಿದ್ಯಾರ್ಥಿಗಳನ್ನು ಆರ್ಥಿಕವಾಗಿ ಪ್ರೋತ್ಸಾಹಿಸುವುದು ಈ ಯೋಜನೆಯ ಉದ್ದೇಶವಾಗಿದೆ.

ಯೋಜನೆಯ ವಿವರ

- ವಾರ್ಷಿಕ 8ಲಕ್ಷಕ್ಕಿಂತ ಕಡಿಮೆ ಆದಾಯವುಳ್ಳ ಮತೀಯ ಅಲ್ಪಸಂಖ್ಯಾಕ ವಿದ್ಯಾರ್ಥಿಗಳಿಗೆ ಸಂಪೂರ್ಣ ಉಪಯೋಗ.
- ಅಲ್ಪಸಂಖ್ಯಾಕ ವರ್ಗಕ್ಕೆ ಸೇರಿದ ಜಾತಿ-ಆದಾಯ ಪತ್ರವನ್ನು ಓದ ಬಯಸುವ ಕಾಲೇಜಿನಿಂದ ಪ್ರಮಾಣೀಕರಿಸಿರಬೇಕು.
- ಸಾಲದ ಮೊತ್ತವನ್ನು ನಿಗಮದಿಂದ ನೇರವಾಗಿ ಡಿಬಿಟಿ ಮೂಲಕ ನೇರವಾಗಿ ಕಾಲೇಜಿನ ಬ್ಯಾಂಕ್ ಖಾತೆಗೆ ವರ್ಗಾಯಿಸಲಾಗುತ್ತದೆ.
- ಕರ್ನಾಟಕ ಪರೀಕ್ಷಾ ಪ್ರಾಧಿಕಾರದಿಂದ (ಸಿಇಟಿ/ನೀಟ್) ಎಂಬಿಬಿಎಸ್, ಎಂಡಿ/ಎಂಎಸ್ ಕೋರ್ಸ್‌ಗಳಿಗೆ ಸರಕಾರಿ ಕೋಟಾದಡಿ ಆಯ್ಕೆಯಾದ ವಿದ್ಯಾರ್ಥಿಗಳಿಗೆ 5ಲಕ್ಷ ರೂ.ವರೆಗೆ, ಬಿಡಿಎಸ್, ಎಂಡಿಎಸ್ ಕೋರ್ಸ್‌ಗಳಿಗೆ ಆಯ್ಕೆಯಾದ ವಿದ್ಯಾರ್ಥಿಗಳಿಗೆ ಗರಿಷ್ಠ 1ಲಕ್ಷ ರೂ. ವರೆಗೆ ಮತ್ತು ಆಯುಷ್ ಕೋರ್ಸ್‌ಗಳಿಗೆ ಗರಿಷ್ಠ 50 ಸಾವಿರ ರೂ. ವರೆಗೆ ಸಾಲ ಸೌಲಭ್ಯ ಕಲ್ಪಿಸಲಾಗಿದೆ.

ಬಿ.ಇ/ಬಿ.ಟೆಕ್, ಎಂ.ಟೆಕ್/ ಎಂ.ಇ. ಕೋರ್ಸ್‌ಗಳಿಗೆ ಸರಕಾರಿ/ ಖಾಸಗಿ ಕೋಟಾದಡಿ ಆಯ್ಕೆಯಾದ ಅಲ್ಪಸಂಖ್ಯಾಕ ವಿದ್ಯಾರ್ಥಿಗಳಿಗೆ ಬೋಧನಾ ಶುಲ್ಕ ಗರಿಷ್ಠ 50 ಸಾವಿರ ರೂ. ಸಾಲವಾಗಿ ನೀಡಲಾಗುತ್ತದೆ. ಜತೆಗೆ ಎಂಬಿಎ, ಎಂಸಿಎ, ಎಲ್‌ಎಲ್‌ಬಿ, ವಿಜ್ಞಾನ ವಿಭಾಗದ ಬಿ.ಎಸ್ಸಿ, ಎಂ.ಎಸ್ಸಿ ಕೋರ್ಸ್‌ಗಳಿಗೂ ಇದೇ ನಿಯಮ ಜಾರಿಯಲ್ಲಿದೆ.

- ನವೀಕರಣಕ್ಕಾಗಿ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸುವಾಗ ವಿದ್ಯಾರ್ಥಿಗಳು ಹಿಂದಿನ ವರ್ಷದಲ್ಲಿ ನಿಗಮವು ವಿತರಿಸಿದ ಸಾಲದ ಮೊತ್ತ ಶೇ.12ರಷ್ಟನ್ನು ಪಾವತಿ ಮಾಡಬೇಕಾಗುತ್ತದೆ.
- ಮರುಪಾವತಿ ಅವಧಿ ಕೋರ್ಸ್ ಪೂರ್ಣಗೊಂಡ 6 ತಿಂಗಳ ಅನಂತರ ಮೂರು ವರ್ಷಗಳವರೆಗೆ ತಿಂಗಳ ಕಂತಿನ ರೂಪದಲ್ಲಿ ಮರುಪಾವತಿ ವ್ಯವಸ್ಥೆ.

ಅರ್ಹತೆಗಳು

- ವಿದ್ಯಾರ್ಥಿಯು ಕರ್ನಾಟಕ ರಾಜ್ಯದ ಖಾಯಂ ನಿವಾಸಿಯಾಗಿರಬೇಕು.
- ರಾಜ್ಯದ ಮತೀಯ ಅಲ್ಪಸಂಖ್ಯಾಕ ವರ್ಗಕ್ಕೆ ಸೇರಿರಬೇಕು.
- ವಿದ್ಯಾರ್ಥಿಯ ಕುಟುಂಬದ ವಾರ್ಷಿಕ ಆದಾಯ 8ಲಕ್ಷ ರೂ. ಮೀರಿರಬಾರದು.

ದಾಖಲೆಗಳು

ವಿದ್ಯಾರ್ಥಿಯ ಜಾತಿ ಮತ್ತು ಆದಾಯ ಪ್ರಮಾಣ ಪತ್ರ, ಆಧಾರ್ ಕಾರ್ಡ್, ಸಿಇಟಿ/ನೀಟ್ ತೇರ್ಗಡೆ ಪತ್ರ, ಕಾಲೇಜುಗಳು ಪ್ರವೇಶಾತಿ ಪತ್ರ, ಎಸ್ಸೆಸ್ಸೆಲ್ಸಿ, ಪಿಯುಸಿ/ ಡಿಪ್ಲೊಮಾ ಅಂಕಪಟ್ಟಿ, ಇಂಟರ್‌ಮೀಡಿಯೆಟ್ ಬಾಂಡ್, ವಿದ್ಯಾರ್ಥಿ ಕಾಲೇಜು ಬ್ಯಾಂಕ್ ಖಾತೆ ವಿವರ, ವಿದ್ಯಾರ್ಥಿ ಸ್ಟಡಿ ಸರ್ಟಿಫಿಕೇಟ್, ವಿದ್ಯಾರ್ಥಿ ಸ್ವಯಂ ಘೋಷಣೆ ಪತ್ರ, ಪೋಷಕರ ಸ್ವಯಂ ಘೋಷಣೆ ಪತ್ರ, ಕಾಲೇಜು ಶುಲ್ಕ ರಚನೆ ರಶೀದಿ, ಇತ್ತೀಚಿನ ವಿದ್ಯಾರ್ಥಿ ಭಾವಚಿತ್ರ ಮತ್ತು ಅರಿವು ಯೋಜನೆ ಸಲ್ಲಿಸಿದ ಅರ್ಜಿ ಪ್ರತಿ ಸಲ್ಲಿಸಬೇಕು.

ನೋಂದಣಿ, ಅರ್ಜಿ ಪ್ರಕ್ರಿಯೆ ಹೇಗೆ?

ಕರ್ನಾಟಕದ ಅರಿವು ಯೋಜನೆ ಮೂಲಕ ಸಾಲ ಪಡೆಯುವ ವಿದ್ಯಾರ್ಥಿಗಳು ಕೆಎಂಡಿಸಿ **kmdconline.karnataka.gov.in/Portal/login** ಪೋರ್ಟಲ್‌ಗೆ ಭೇಟಿ ನೀಡಿ, ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಿ ಆಧಾರ್ ಲಿಂಕ್ ಮಾಡಲಾದ ಮೊಬೈಲ್ ಸಂಖ್ಯೆ ನಮೂದಿಸಿ, ಒಟಿಪಿ ನೀಡಿ ಪರಿಶೀಲಿಸಿ ನೋಂದಣಿ ಮಾಡಿಕೊಳ್ಳಿ. ಬಳಿಕ ಅರ್ಜಿಯನ್ನು ತುಂಬಿ, ಜಾತಿ-ಆದಾಯ ಪತ್ರ ಸೇರಿದಂತೆ ಅಗತ್ಯ ದಾಖಲೆಗಳನ್ನು ಭರ್ತಿ ಮಾಡಿ, ಅರ್ಜಿಯನ್ನು ಮತ್ತೊಮ್ಮೆ ಪರಿಶೀಲಿಸಿ ಕಳಿಸಿ, ಭವಿಷ್ಯದ ಉದ್ದೇಶಕ್ಕಾಗಿ ಅರ್ಜಿ ಸ್ವೀಕೃತಿ ಐಡಿ, ಸ್ವೀಕೃತಿ ಪ್ರತಿ ಡೌನ್‌ಲೋಡ್ ಮಾಡಿಕೊಳ್ಳುವುದು.

ಮೊರಟೋರಿಯಂ ಅವಧಿ ಸಾಮಾನ್ಯ ಬಡ್ಡಿಲೆಕ್ಕಾಚಾರ

ವರ್ಷ	ಬ್ಯಾಂಕ್ ವರ್ಷವಾರು ಕಂತು ರೂ.ಗಳಲ್ಲಿ	ಒಟ್ಟು ಮೊತ್ತ ರೂ.ಗಳಲ್ಲಿ	ಶೇ. ಬಡ್ಡಿ	ಬಡ್ಡಿ ರೂ.
1.	500000	500000	ಶೇ. 12	33093
2.	500000	1000000	ಶೇ. 12	66186
3.	500000	1500000	ಶೇ. 12	99279
4.	500000	2000000	ಶೇ. 12	132371
5.	0.00			132371
ಒಟ್ಟು	2000000			463300

- ದೇಶೀ ವರ್ಸಸ್ ವಿದೇಶೀ ವ್ಯಾಸಂಗ

ಐಬಿಎ ಮತ್ತು ಆರ್‌ಬಿಐ ನಿಯಮಗಳಡಿ ದೇಶೀ ಶಿಕ್ಷಣಕ್ಕೆ 10 ಲಕ್ಷ ರೂ., ವಿದೇಶೀ ಶಿಕ್ಷಣಕ್ಕೆ 20 ಲಕ್ಷ ರೂ. ಮಿತಿ ಬಹಳವರ್ಷದ ಹಿಂದಿನಿಂದಲೂ ಇದೆ. ಆದರೆ ಪ್ರತಿ 4-5 ವರ್ಷಕ್ಕೆ ಹೊಸ ಕೋರ್ಸ್‌ಗಳು, ಕೋರ್ಸ್‌ಗಳ ವೆಚ್ಚ ದುಪ್ಪಟ್ಟಾಗುತ್ತಿದೆ. ಅಂದರೆ ಒಂದು ಪದವಿ ಕೋರ್ಸ್‌ಗೆ 4 ವರ್ಷ ಹಿಂದೆ ಇದ್ದ ಶೈಕ್ಷಣಿಕ ವೆಚ್ಚ 4 ವರ್ಷದ ಅನಂತರ ದ್ವಿಗುಣವಾಗಿರುತ್ತದೆ. ಅಂದರೆ ಕಾಲೇಜಿನ ಶುಲ್ಕಗಳು, ಟ್ಯೂಷನ್/ಲೈಬ್ರೆರಿ/ ಲ್ಯಾಬ್ ಪರೀಕ್ಷೆ / ಪರೀಕ್ಷಾ ಶುಲ್ಕ, ಪಠ್ಯಪುಸ್ತಕಗಳು, ವಿದ್ಯಾರ್ಥಿನಿಲಯಗಳ ವೆಚ್ಚ ಕಂಪ್ಯೂಟರ್, ಸ್ಟಡಿ ಟೂರ್, ಭದ್ರತಾ ಠೇವಣಿ-ಹೀಗೆ ಎಲ್ಲವೂ ದಿನದಿಂದ ದಿನಕ್ಕೆ ದುಬಾರಿಯಾಗುತ್ತಿದೆ. ಹೀಗಾಗಿ ಪೋಷಕರು ಮಕ್ಕಳನ್ನು ಓದಿಸುವುದು ಹೇಗೆ ಎಂದು ಪರಿತಪಿಸುತ್ತಾರೆ.

ರಾಜ್ಯದಲ್ಲಿ ವಿದೇಶೀ ವ್ಯಾಸಂಗಕ್ಕೆ ಬಡ್ಡಿರಹಿತ ಸಾಲ

ವಿದೇಶೀ ವಿಶ್ವವಿದ್ಯಾಲಯಗಳಲ್ಲಿ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳು ಎಂಜಿನಿಯರಿಂಗ್ ಮತ್ತು ಟೆಕ್ನಾಲಜಿ, ಅಗ್ರಿಕಲ್ಚರ್ ಮತ್ತು ಅಲೈಡ್ ಸೈನ್ಸ್ / ಟೆಕ್ನಾಲಜಿ, ಮೆಡಿಸಿನ್, ಹ್ಯುಮಾನಿಟೀಸ್ ಮತ್ತು ಸೋಷಿಯಲ್ ಸೈನ್ಸ್ ಕೋರ್ಸ್‌ಗಳ ವ್ಯಾಸಂಗ ಮಾಡಲು ವಾರ್ಷಿಕ ಮೂರೂವರೆ ಲಕ್ಷದಂತೆ 3 ವರ್ಷದ ಅವಧಿಗೆ 10 ಲಕ್ಷ ರೂ. ವರೆಗೆ ಶೈಕ್ಷಣಿಕ ಸಾಲವನ್ನು ರಾಜ್ಯ ಸರಕಾರ ದೇವರಾಜ ಅರಸು ಹಿಂದುಳಿದ ವರ್ಗಗಳ ನಿಗಮದ ಮೂಲಕ ನೀಡುತ್ತಿದೆ.
ಈ ಸಾಲ ಪಡೆಯಲು ಹಿಂದುಳಿದ ವರ್ಗಗಳಿಗೆ ಸೇರಿದ ವಿದ್ಯಾರ್ಥಿಗಳು ಮಾತ್ರ ಅರ್ಹರು. ಜಾತಿ- ಆದಾಯ ಮತ್ತು ಶೈಕ್ಷಣಿಕ ಪ್ರಮಾಣ ಪತ್ರದ ಜತೆ ಅಗತ್ಯ ದಾಖಲೆಗಳೊಂದಿಗೆ ಸೇವಾಸಿಂಧು ಪೋರ್ಟಲ್ ಮೂಲಕ ಅರ್ಜಿ ಸಲ್ಲಿಸಬಹುದು.

ದೇಶೀ ವ್ಯಾಸಂಗ ಮಾದರಿ

ರಕ್ಷಿತ್ ಎಂಬ ವಿದ್ಯಾರ್ಥಿ ಒಂದು ವೃತ್ತಿಪರ ಕೋರ್ಸ್ ಆಯ್ಕೆ ಮಾಡಿಕೊಂಡು ಅದಕ್ಕಾಗಿ ರಾಷ್ಟ್ರೀಯ ಬ್ಯಾಂಕಿನಲ್ಲಿ ಶ್ಯೂರಿಟಿ ಇಟ್ಟು ವಾರ್ಷಿಕ ಶೇ.8ರ ಬಡ್ಡಿದರದಲ್ಲಿ ಶೈಕ್ಷಣಿಕ ಸಾಲ 10ಲಕ್ಷ ರೂ. ಪಡೆಯುತ್ತಾನೆ. ತಮ್ಮ ಊರಿನ ಬಳಿಯೇ ಇರುವ ಪಟ್ಟಣದ ಒಂದು ಸರಕಾರದ ಮಾನ್ಯತೆ ಪಡೆದ ಕಾಲೇಜಿನಲ್ಲಿ ನಾಲ್ಕು ವರ್ಷ ಎಂಜಿನಿಯರಿಂಗ್ ಪೂರೈಸಿ, ವರ್ಷದಲ್ಲಿ ಉತ್ತಮ ನೌಕರಿಯನ್ನೂ ಗಿಟ್ಟಿಸಿಕೊಳ್ಳುತ್ತಾನೆ. ಈಗ ರಕ್ಷಿತ್ 10 ವರ್ಷದ ಅವಧಿಗೆ ಮರುಪಾವತಿ ಪ್ರಾರಂಭಿಸಿದರೆ ಪ್ರತಿ ತಿಂಗಳ ಇಎಂಐ 12, 133 ರೂ. ಇರುತ್ತದೆ. 10 ವರ್ಷಗಳಲ್ಲಿ ಆತ ಪಡೆದ ಸಾಲಕ್ಕೆ ಹೆಚ್ಚುವರಿಯಾಗಿ 4,55, 931 ರೂ.ಗಳನ್ನು ಪಾವತಿಸಬೇಕು.

ಈ 20 ಅಂಶಗಳು ಗಮನದಲ್ಲಿರಲಿ

ರಾಷ್ಟ್ರೀಕೃತ ಅಥವಾ ಸಾರ್ವಜನಿಕ ವಲಯದ ಬ್ಯಾಂಕುಗಳಲ್ಲಿ ಸುರಕ್ಷಿತ ಶೈಕ್ಷಣಿಕ ಸಾಲ ಮಾಡುವುದು ಒಳಿತು. ಸರಕಾರಿ ಶಿಕ್ಷಣ ಸಚಿವಾಲಯದ ಸ್ಕೀಮ್‌ಗಳು, ಸರಕಾರಿ ಸಬ್ಸಿಡಿ ಯೋಜನೆಗಳನ್ನು ಬಳಸಿಕೊಳ್ಳಿ.

- ಭಾರತದಲ್ಲಿಯೇ ಓದುತ್ತೀರಾ ಅಥವಾ ವಿದೇಶೀ ಉನ್ನತ ಶಿಕ್ಷಣ ಮಾಡಬೇಕೇ ಮೊದಲೇ ನಿರ್ಧರಿಸಿ. ವೊಕೇಶನಲ್ ತರಬೇತಿ ಬಗ್ಗೆ ತಿಳಿಯಿರಿ.
- 16-35ರ ವಯೋಮಿತಿಯವರು ಸಾಲ ಪಡೆಯಬಹುದು. (ಕೆಲವು ಬ್ಯಾಂಕ್‌ಗಳು 18-35 ಎಂದು ನಿಗದಿ ಪಡಿಸಿವೆ.)
- ಕೋರ್ಸ್‌ಗಳನ್ನು 'ಪ್ರೀಮಿಯರ್' ಮತ್ತು 'ನಾನ್ ಪ್ರೀಮಿಯರ್' ಎಂದು ವಿಭಾಗಿಸಲಾಗಿದೆ. ಅದರ ಕುರಿತು ತಿಳುವಳಿಕೆ ಅಗತ್ಯ.
- ಸಾಲಕ್ಕೆ ಅರ್ಜಿ ಸಲ್ಲಿಸುವ ಮುನ್ನ ನೀವು ಆಯ್ಕೆ ಮಾಡಿಕೊಂಡ ಕೋರ್ಸ್ (ಪದವಿ, ಸ್ನಾತಕೋತ್ತರ, ಪಿಎಚ್.ಡಿ.) ಮತ್ತು ಶಿಕ್ಷಣ ಸಂಸ್ಥೆಯು ಬ್ಯಾಂಕಿನಿಂದ ಮಾನ್ಯತೆ ಪಡೆದಿದೆಯೇ ಎಂಬುದನ್ನು ಖಚಿತಪಡಿಸಿಕೊಳ್ಳಿ.
- ಸಾಲ ಪಡೆಯುವ ಮುನ್ನ ವಿವಿಧ ಬ್ಯಾಂಕುಗಳ ಬಡ್ಡಿದರ, ಯೋಜನೆ, ವಿನಾಯಿತಿಗಳು, ಮರುಪಾವತಿ ಅವಧಿ ಸೇರಿದಂತೆ ಎಲ್ಲ ಅಂಶಗಳನ್ನು ಅರಿಯಿರಿ.
- ಸುರಕ್ಷಿತ ಶೈಕ್ಷಣಿಕ ಸಾಲ ಪಡೆಯಲು ನಿಮ್ಮ ಆಸ್ತಿಯ ವಾಸ್ತವಿಕ ಮೌಲ್ಯ ಮತ್ತು ತಾವು ಪಡೆಯಲಿರುವ ವಿದ್ಯಾಸಾಲದ ಗಾತ್ರದೊಂದಿಗೆ ತುಲನೆ ಮಾಡಿ, ಮಾರ್ಜಿನ್ ಲೆಕ್ಕಾಚಾರ ಹಾಕಿಕೊಳ್ಳಿ.
- ಅಸುರಕ್ಷಿತ ವಿದ್ಯಾಸಾಲ ಪಡೆಯಲು ಇಚ್ಛಿಸಿದರೆ ಶ್ಯೂರಿಟಿ ವ್ಯಕ್ತಿಯನ್ನು ಮೊದಲೇ ನೋಡಿ ಇಟ್ಟುಕೊಳ್ಳಿ.(ಕೋ-ಅಪ್ಲಿಕೆಂಟ್ ಕಡ್ಡಾಯ.)
- ಕೆವೈಸಿ, ಶೈಕ್ಷಣಿಕ ದಾಖಲೆಗಳು, ಕಾಲೇಜು ಪ್ರವೇಶ ಪತ್ರ, ಫೀಸ್ ಸ್ಟ್ರಕ್ಚರ್, ಸಹ- ಅರ್ಜಿದಾರರ ದಾಖಲೆಗಳನ್ನು ಸಿದ್ಧವಾಗಿಟ್ಟುಕೊಳ್ಳಿ ಪಿಡಿಎಫ್ ಕೂಡ ಸಿದ್ಧವಾಗಿರಲಿ ಇದು ಅಪ್‌ಲೋಡ್ ಸಂದರ್ಭದಲ್ಲಿ ಅಗತ್ಯ.
- ಶೈಕ್ಷಣಿಕ ಸಾಲವನ್ನು ನಿಮ್ಮ ಹತ್ತಿರದ ಬ್ಯಾಂಕ್ ಶಾಖೆಗಳಿಂದಲೇ ಪಡೆಯಲು ಬ್ಯಾಂಕ್ ಸೂಚಿಸುತ್ತದೆ. ಇದು ಸುರಕ್ಷಿತವೂ ಕೂಡ.
- ಸಾಲದ ಮೊತ್ತ ಕೇವಲ ಬೋಧನಾ ಶುಲ್ಕವಲ್ಲದೆ ಟ್ಯೂಷನ್, ಹಾಸ್ಟೆಲ್, ಸ್ಟಡಿ ಟೂರ್, ಲ್ಯಾಬ್ ವೆಚ್ಚ ಪ್ರಾಜೆಕ್ಟ್, ಕಂಪ್ಯೂಟರ್ ಖರೀದಿ ವೆಚ್ಚಗಳನ್ನು ಒಳಗೊಂಡಿದೆಯೇ ಪರಿಶೀಲಿಸಿ.
- ಯಾವ ಬ್ಯಾಂಕಿನಲ್ಲಿ ಸಾಲ ಪಡೆಯುತ್ತೀರೋ ಶೈಕ್ಷಣಿಕ ಸಾಲದ ಕುರಿತು ಆ ಬ್ಯಾಂಕ್ ನಿರ್ಧರಿಸಿದ ಕೆಲವು ನಿಯಮಗಳಿರುತ್ತವೆ ಅದನ್ನು ಪರಿಶೀಲಿಸಿ.
- ಶೈಕ್ಷಣಿಕ ಸಾಲವನ್ನು 15 ದಿನಗಳ ಒಳಗೆ ಬ್ಯಾಂಕ್ ವಿಲೇವಾರಿ ಮಾಡಬೇಕು. ನೀವು ಸರಿಯಾದ ದಾಖಲೆ ಸಕಾಲದಲ್ಲಿ ಒದಗಿಸಿ ಶೀಘ್ರವಾಗಿ ಲೋನ್ ಪಡೆಯಿರಿ.
- ಮಾರುಕಟ್ಟೆ ಏರಿಳಿತಗಳಿಗನುಗುಣವಾಗಿ ಶೈಕ್ಷಣಿಕ ಸಾಲದ ಬಡ್ಡಿದರದಲ್ಲಿ ಏರಿಳಿತವಾಗುತ್ತದೆ. ಬಡ್ಡಿದರ ಬದಲಾದರೆ ಸಮಾನ ಮಾಸಿಕ ಕಂತಿನ (ಇಎಂಐ) ಗಾತ್ರವೂ ಬದಲಾಗುತ್ತದೆ.
- ಸಾಲದ ಗಾತ್ರಕ್ಕೆ ಅನುಗುಣವಾಗಿ ಇಎಂಐ ಗಾತ್ರ ಮತ್ತು ಮರುಪಾವತಿ ಅವಧಿ ದೀರ್ಘವಾಗುತ್ತದೆ. ಇದನ್ನು ಮೊದಲೇ ಲೆಕ್ಕಹಾಕುವುದು ಒಳಿತು.
- ಮಹಿಳಾ, ಎಸ್ಸಿ/ಎಸ್ಟಿ, ಒಬಿಸಿ, ಅಂಗವಿಕಲ ರಿಯಾಯಿತಿ, ವಿನಾಯಿತಿಗಳು ಬ್ಯಾಂಕಿನಿಂದ ಬ್ಯಾಂಕಿಗೆ ಭಿನ್ನವಾಗಿರುತ್ತವೆ.
- ಸರಕಾರದ ಶೈಕ್ಷಣಿಕ ಸಾಲ ಯೋಜನೆ, ಅಭ್ಯುದ್ಧಿನಿಗಮ ಯೋಜನೆ ಮತ್ತು ಬ್ಯಾಂಕುಗಳ ಯೋಜಿತ ಸಾಲಗಳ ತುಲನೆ ಮಾಡಿ.
- ಬ್ಯಾಂಕುಗಳಲ್ಲಿ ಶೈಕ್ಷಣಿಕ ಸಾಲಕ್ಕೆ ಪ್ರೊಸೆಸಿಂಗ್ ಫೀಸ್ ಇದೆಯೇ- ಇಲ್ಲವೇ ನೋಡಿಕೊಳ್ಳಿ. ಸಾಲದ ಮೇಲೆ ವಿಮೆ ಕಡ್ಡಾಯವಾಗಿ ಮಾಡಿಸಿ.
- ಶೈಕ್ಷಣಿಕ ಸಾಲದ ಬಡ್ಡಿಯ ಮೇಲೆ ತೆರಿಗೆ ವಿನಾಯಿತಿ ಇದೆ. ಇದನ್ನು ಬಳಸಿಕೊಳ್ಳಿ.
- ಸಾಲದ ಮುಂಪಾವತಿ, ಬ್ಯಾಂಕುಗಳು ನೀಡುವ ಸಾಲದ ಒಂದು ಕಂತನ್ನು ತಡೆಹಿಡಿಯುವುದು ಸೇರಿದಂತೆ ಯಾವುದೇ ಅನುಮಾನಗಳಿದ್ದರೂ ಬ್ಯಾಂಕಿನ ವ್ಯವಸ್ಥಾಪನಾ ವರ್ಗದಿಂದ ಮೊದಲೇ ಮಾಹಿತಿ ಪಡೆದುಕೊಳ್ಳಿ

ವಿದೇಶೀ ವ್ಯಾಸಂಗ ಮಾದರಿ

ಆದೇ ರಕ್ಷಿತ್ ಎಂಬ ವಿದ್ಯಾರ್ಥಿ ವಿದೇಶಿ ವ್ಯಾಸಂಗಕ್ಕೆ ಒಂದು ವೃತ್ತಿಪರ ಕೋರ್ಸ್ ಆಯ್ಕೆ ಮಾಡಿಕೊಂಡು ಅದಕ್ಕಾಗಿ ರಾಷ್ಟ್ರೀಯ ಬ್ಯಾಂಕಿನಲ್ಲಿ ತಮ್ಮ ತಂದೆಯ ಆಸ್ತಿಯನ್ನು ಅಡ ಇಟ್ಟು ವಾರ್ಷಿಕ ಶೇ. 8ರ ಬಡ್ಡಿದರದಲ್ಲಿ ಶೈಕ್ಷಣಿಕ ಸಾಲ 20ಲಕ್ಷ ರೂ. ಪಡೆಯುತ್ತಾನೆ. ವಿದೇಶದ ಮಾನ್ಯತೆ ಪಡೆದ ಕಾಲೇಜಿನಲ್ಲಿ 4 ವರ್ಷ ಎಂಜಿನಿಯರಿಂಗ್ ಪೂರೈಸಿ ವರ್ಷದಲ್ಲಿ ವಿದೇಶದಲ್ಲಿಯೇ ಉತ್ತಮ ನೌಕರಿಯನ್ನೂ ಪಡೆಯುತ್ತಾನೆ

ಈಗ ರಕ್ಷಿತ್ 10 ವರ್ಷದ ಅವಧಿಗೆ ಮರುಪಾವತಿ ಪ್ರಾರಂಭಿಸಿದರೆ ಪ್ರತಿ ತಿಂಗಳ ಇಎಂಐ 24,133 ರೂ. ಇರುತ್ತದೆ. 10 ವರ್ಷದಲ್ಲಿ ಆತ ಪಡೆದ ಸಾಲಕ್ಕೆ ಹೆಚ್ಚುವರಿಯಾಗಿ 9,11, 931 ರೂ.ಗಳನ್ನು ಪಾವತಿಸಬೇಕು.

ಇಲ್ಲಿ ಒಂದಂಶವನ್ನು ಗಮದಲ್ಲಿಟ್ಟುಕೊಳ್ಳಬೇಕು: ಯಾವುದೇ ಬ್ಯಾಂಕ್ ಆದರೂ ವಿದ್ಯಾರ್ಥಿ ಓದಿನ ಅವಧಿಗೆ ಅನುಗುಣವಾಗಿ ವರ್ಷದಿಂದ ವರ್ಷಕ್ಕೆ ಹಣ ಸಂದಾಯ ಮಾಡುತ್ತದೆ. 7.5ಲಕ್ಷ ರೂ. ಹೆಚ್ಚಿನ ಹಣ ನೀಡಲು ಶ್ಯೂರಿಟಿ, ಸೆಕ್ಯೂರಿಟಿ ಪಡೆದೇ ಪಡೆಯುತ್ತದೆ. ದೇಶೀ ಅಥವಾ ವಿದೇಶೀ ಕಾಲೇಜುಗಳ ಪ್ರವೇಶ ಶುಲ್ಕವನ್ನು ಪಾವತಿಸಿದ ಮೇಲೆಯೇ ಬ್ಯಾಂಕುಗಳು ಸಾಲವನ್ನು ವಿತರಿಸಲು ಮುಂದಾಗುತ್ತವೆ. ಏಕೆಂದರೆ ವಿದ್ಯಾರ್ಥಿ ನಿಜವಾಗಿಯೂ ಅಪೇಕ್ಷಿತ ಕೋರ್ಸ್ ಓದುತ್ತಾನೆಯೇ ಎಂಬ ನಂಬಿಕೆ ಬ್ಯಾಂಕುಗಳಿಗೂ ಬೇಕು. ಹೀಗಾಗಿ ಪ್ರವೇಶ ಶುಲ್ಕವನ್ನು ವಿದ್ಯಾರ್ಥಿಯ ಕುಟುಂಬವು ತಮ್ಮ ಜೇಬಿನಿಂದಲೇ ಪಾವತಿ ಮಾಡಬೇಕು.

ದೇಶೀ ಮನಸ್ಥಿತಿ	ವಿದೇಶೀ ಓದಿನ ಸ್ಥಿತಿ-ಗತಿ
• ಪೋಷಕರಿಗೆ ನಮ್ಮ ಮಗ/ಮಗಳು ಎಂಜಿನಿಯರ್, ಡಾಕ್ಟರ್ ಆಗುತ್ತಾನೆ/ಳೆಂಬ ಹೆಮ್ಮೆ	• ನಮ್ಮ ಮಗ/ಳು ವಿದೇಶಿದಲ್ಲಿ ಓದುತ್ತಿದ್ದಾನೆ/ಳೆ ಎಂಬ ಪ್ರತಿಷ್ಠೆ
• ನಮ್ಮ ಜತೆಯಲ್ಲಿದ್ದುಕೊಂಡೇ ವ್ಯಾಸಂಗ ಮಾಡತ್ತಿದ್ದಾನೆ/ಳೆ ಅಥವಾ ಪಕ್ಕದ ರಾಜ್ಯದಲ್ಲಿದ್ದು ವಾರಕ್ಕೊಮ್ಮೆ ಬರುತ್ತಾನೆಂಬ(ಳೆ) ನೆಮ್ಮದಿ	• ದೂರದ ದೇಶದಲ್ಲಿ ಹೇಗಿದ್ದಾನೋ/ಳೋ ಎಂಬ ಕಳವಳ
• ವಸತಿ, ಊಟ ಪರೀಕ್ಷಾ ಶುಲ್ಕ ಸೇರಿದಂತೆ ಖರ್ಚು-ವೆಚ್ಚ ಸೀಮಿತ	• ಇತರ ವೆಚ್ಚಗಳು ಡಾಲರ್-ಪೌಂಡಿನಲ್ಲಿ ಖರ್ಚು ಮಾಡುವುದರಿಂದ ವೆಚ್ಚ ಅಧಿಕ
• ತಮ್ಮ ಓದಿಗೆ ಮಾತ್ರ ಸಮಯ ಮೀಸಲು	• ಆಯಾ ದೇಶದ ನಿಯಮಗಳಂತೆ ಓದಿನ ಜತೆ ಕೆಲಸ. (ಕೆಲವು ಖರ್ಚು- ವೆಚ್ಚ ಭರಿಸಲು ಸ್ವಪ್ರೇರಿತವಾಗಿ ಕೆಲಸ ಮಾಡುವುದಿದೆ)
• ಉತ್ತಮ ಹುದ್ದೆ ಆಕಾಂಕ್ಷೆ, ಒಳ್ಳೆಯ ಗಳಿಕೆ ನಿರೀಕ್ಷೆ	• ಉತ್ತಮ ಹುದ್ದೆಗಿಂತ ಡಾಲರ್ ಲೆಕ್ಕದ ಗಳಿಕೆಯ ನಿರೀಕ್ಷೆ
• ಮನೆ, ವಿವಾಹ ಭವಿಷ್ಯದ ಬುನಾದಿಗಳ ಯೋಜನೆ.	• ವಿದೇಶದಲ್ಲೇ ನೆಲೆಸಿದರೆ, ಅಲ್ಲೇ ವಿವಾಹವಾದರೆ... ಎಂಬ ಭೀತಿ.

ಶೈಕ್ಷಣಿಕ ಸಾಲದ ಮೇಲೆ ವಿಮೆ

ಪ್ರಸ್ತುತ ಕಾಲಮಾನದಲ್ಲಿ ಶಿಕ್ಷಣವು ದುಬಾರಿ. ಆದ್ದರಿಂದ ಶೈಕ್ಷಣಿಕ ಸಾಲದ ಗಾತ್ರವು ದೊಡ್ಡದಾಗಿಯೇ ಇರುತ್ತದೆ. ಹೀಗಾಗಿ ಶೈಕ್ಷಣಿಕ ಸಾಲದ ಮೇಲೆ ವಿಮೆ ಮಾಡಿಸುವುದು ಒಳ್ಳೆಯದು. ಓದಿನ ಸಮಯದಲ್ಲಿ ವಿದ್ಯಾರ್ಥಿಗೆ ಅಪಘಾತವಾದರೆ, ಅನಾರೋಗ್ಯಕ್ಕೆ ತುತ್ತಾಗಿ ಓದು ಮುಂದುವರಿಸಲಾಗದಿದ್ದರೆ, ಪೋಷಕರ ಮರಣದಿಂದ ಓದು ಬಿಡಬೇಕಾಗಿ ಬಂದರೆ, ವಿದ್ಯಾರ್ಥಿಯೇ ಕಾರಣಾಂತರದಿಂದ ಸಾವಿಗೀಡಾದರೆ-ಇಂಥ ಸಂದರ್ಭದಲ್ಲಿ ವಿಮಾ ಮೊತ್ತವು ಸಾಲದ ಮರುಪಾವತಿಗೆ ಬಳಕೆಗೆ ಬರುತ್ತದೆ. ಬ್ಯಾಂಕ್ ವಿತರಿಸಿದ ಸಾಲದ ಮೊತ್ತದ ಬಡ್ಡಿ ಸಮೇತ ಕ್ಲೈಂ ಮಾಡಿಕೊಳ್ಳುತ್ತದೆ.

■

ಕಥೆ

ಪಾಂಚಿ

❑ ವಿಲಾಸ ನಾ. ಹುದ್ದಾರ

ಎಲ್ಲ ಕಲಾವಿದರೂ ವಿಲಾಸಿಗಳಾಗಿರುತ್ತಾರೆ ಎಂಬ ಭ್ರಮೆಯಿಂದ ಪಾಪ ಮಾಡಲು ಮುಂದಾಗಿದ್ದ ಅವಳ ಅರಿವಿನ ಮಿತಿಯನ್ನು ವಿಸ್ತರಿಸಿದವರಾರು?



ಶ್ರಾವಣ ಮಾಸದ ಶನಿವಾರದ ಆಹ್ಲಾದಕರವಾದ ಸುಂದರ ಸಂಜೆ. ತುಂತುರು ಮಳೆಯು ತನ್ನ ಸಿಂಚನದಿಂದ ಪರಿಸರವನ್ನು ಮತ್ತಷ್ಟು ಆಪ್ಯಾಯಮಾನವನ್ನಾಗಿಸಿತ್ತು. ಮಳೆಯ ಹನಿಗಳು ಭೂಮಿಯನ್ನು ಆಗೊಮ್ಮೆ ಈಗೊಮ್ಮೆ ಮುತ್ತಿಕ್ಕುತ್ತಿದ್ದರೂ ನಗರದ 1,200 ಆಸನಗಳಿರುವ ಸಭಾಂಗಣ ಕಿಕ್ಕಿರಿದು ತುಂಬಿತ್ತು. ಮೆಟ್ಟಿಲುಗಳ ಮೇಲೂ ಸಂಗೀತದ ಶ್ರೋತೃಗಳು ತಾಳ್ಮೆಯಿಂದ ಕುಳಿತಿದ್ದರು. ಸಾವಿರಕ್ಕಿಂತ ಮಿಗಿಲಾದ ಕೇಳುಗರಿದ್ದರೂ, ಅಲ್ಲಲ್ಲಿ ಪಿಸುಮಾತುಗಳನ್ನು ಹೊರತುಪಡಿಸಿ ಶಾಂತತೆ ನೆಲೆಸಿತ್ತು. ಎಲ್ಲರ ಕಂಗಳೂ ವೇದಿಕೆಯ ಮೇಲೆ ನೆಟ್ಟಿದ್ದವು. ಕಾತರದಿಂದ ತಮ್ಮ ನೆಚ್ಚಿನ, ಮೆಚ್ಚಿನ, ಜಗತ್ಪ್ರಸಿದ್ಧ ಹಿಂದುಸ್ಥಾನಿ ಶಾಸ್ತ್ರೀಯ ಸಂಗೀತದ ಮೇರುಪರ್ವತವಾದ ಪಂ. ರಾಜಶೇಖರರನ್ನು ನೋಡಲು ಮತ್ತು ಅವರ ಸಂಗೀತದ ರಸದೌತಣವನ್ನು ಸವಿಯಲು ಸಂಯಮದಿಂದ ಕಾಯುತ್ತಿದ್ದರು. ಎಲ್ಲರಿಗೂ ಅವರು ಸಮಯಕ್ಕೆ ಸರಿಯಾಗಿ ಬರುವರೆಂದು ಭರವಸೆ ಇತ್ತು. ಅದರಂತೆಯೇ ಸರಿಯಾಗಿ 6.00 ಗಂಟೆಗೆ ಆಯೋಜಕರು ವೇದಿಕೆಗೆ ಬಂದು ಅವರನ್ನು ಆಮಂತ್ರಿಸಿದರು. ಪಂಡಿತರಿಗೂ ಮತ್ತು ಸಹಕಲಾವಿದರಿಗೂ ಪುಷ್ಪಗುಚ್ಛ ನೀಡಿ ಗೌರವಾರ್ಪಣೆ ಮಾಡಿದರು.

ಶುಭ್ರವಾದ ಬಿಳಿ ಜುಬ್ಬಾ, ಪೈಜಾಮ, ಹೆಗಲ ಮೇಲೊಂದು ಕಂದು ಬಣ್ಣದ ಶಾಲು ಹೊದ್ದು ಘನಗಾಂಭೀರ್ಯದಿಂದ ಹೆಜ್ಜೆ ಹಾಕುತ್ತ ತಮಗಾಗಿ ಸಿದ್ಧಪಡಿಸಿದ ಸ್ಥಾನಕ್ಕೆ ಬಂದು ಎಲ್ಲ ಶ್ರೋತೃಗಣಕ್ಕೂ ಬಾಗಿ ವಂದಿಸಿದರು. 6 ಅಡಿ ಎತ್ತರದ ಆಜಾನುಬಾಹು, ತಿಳಿಗೆಂಪು ಮೈಬಣ್ಣ ಆಕರ್ಷಕ ಕಣ್ಣುಗಳು, ಉದ್ದ ತಿದ್ದಿತೀಡಿದಂಥ ನಾಸಿಕ, ಮುಖದಲ್ಲೊಂದು ಕಿರು ನಗು ಒಳ್ಳೆಯ ಆಕರ್ಷಕ ವ್ಯಕ್ತಿತ್ವದ ಪಂ. ರಾಜಶೇಖರರು ತಮ್ಮ ಸ್ಥಾನಕ್ಕೆ ನಮಸ್ಕರಿಸಿ ಕುಳಿತು ತಮ್ಮ ಗುರುಗಳನ್ನು ನೆನೆದು ಎರಡೂ ಕಿವಿಗಳನ್ನು ಮುಟ್ಟಿಕೊಂಡು ಮತ್ತೊಮ್ಮೆ ತಮ್ಮ ಸಂಗೀತಾಭಿಮಾನಿಗಳಿಗೆ ನಮಸ್ಕರಿಸಿದಾಗ ಕರತಾಡನದಿಂದ ತಮ್ಮ ನೆಚ್ಚಿನ ಗಾಯಕರನ್ನು ಅಭಿಮಾನಿಗಳು ಸ್ವಾಗತಿಸಿದರು. ತಮ್ಮ ಸಹಕಲಾವಿದರಾದ ಪ್ರಸಿದ್ಧ ತಬಲಾವಾದಕ ಖೋಡೆ, ಪ್ರಸಿದ್ಧ ಹಾರ್ಮೋನಿಯಂ ವಾದಕ ಬಸವರಾಜ, ಸರಳಾ ಮತ್ತು ಮಂಗಳಾ ತಾನಪುರದ ಜೊತೆಗೆ ಕುಳಿತು ತಮ್ಮ ತಮ್ಮ ವಾದ್ಯಗಳನ್ನು ಪರೀಕ್ಷಿಸಿ, ಸರಿಮಾಡಿಕೊಳ್ಳುತ್ತಿರುವುದನ್ನು ನೋಡಿ ತೃಪ್ತಿಯಿಂದ ತಮ್ಮ ಶ್ರುತಿ ಪೆಟ್ಟಿಗೆಯನ್ನು ಮತ್ತು ಕಂಠವನ್ನು ಹಾಡಲು ಸರಿಹೊಂದಿಸಿಕೊಳ್ಳಲಾರಂಭಿಸಿದರು. ಆಡಿಯೋ ವ್ಯವಸ್ಥೆ, ವ್ಯಾಲ್ಯೂಮ್ ಎಲ್ಲವೂ ಸರಿ ಇದ್ದದ್ದನ್ನು ಖಚಿತ ಮಾಡಿಕೊಂಡರು. ಎಲ್ಲರೂ ತಮ್ಮ ತಮ್ಮ ವಾದ್ಯವನ್ನು ಸರಿಪಡಿಸಿಕೊಂಡದ್ದನ್ನು ಕಂಡು, ಎಲ್ಲ ಸಹಕಲಾವಿದರೆಡೆಗೆ ಒಂದು ಮುಗುಳ್ನಗು ಬೀರಿ ತಮ್ಮ ಗಾಯನ ಪ್ರಾರಂಭಿಸಿದರು.

ಮಳೆಗಾಲದ ವರ್ಷಾಋತುವಿಗೆ ಅನುಗುಣವಾಗಿ ಮಲ್ಹಾರ್ ರಾಗದ ಗೌಡ ಮಲ್ಹಾರ್, ಶುದ್ಧ ಮಲ್ಹಾರ್, ಸುಹಾನ ಮಲ್ಹಾರ್ ಪ್ರಸ್ತುತಪಡಿಸಿ ಕಜರಿಯೊಂದಿಗೆ ಕಾರ್ಯಕ್ರಮ ಮುಕ್ತಾಯಗೊಳಿಸಿದರು. ಸುಮಾರು ಮೂರು ಗಂಟೆಗಳ ಕಾಲ ಹಿಂದುಸ್ಥಾನಿ ಶಾಸ್ತ್ರೀಯ ಸಂಗೀತದ ಮಲ್ಹಾರ್ ರಾಗದ ಅನೇಕ ಪ್ರಕಾರಗಳನ್ನು ಹಾಡಿ ಶ್ರೋತೃಗಳನ್ನು ಸಂಗೀತದ ರಸಧಾರೆಯಲ್ಲಿ ಮಿಂದೆಬ್ಬಿಸಿದರು. ಸಂಗೀತ ರಸಿಕರು ತಮ್ಮನ್ನೇ ತಾವು ಮರೆತು ಪಂಡಿತರ ಗಾಯನದಲ್ಲಿ ತೇಲಿ ಹೋದರು. ಸಂಗೀತದ ಧಾರೆಯಲ್ಲಿ ಎಲ್ಲರೂ ಇಷ್ಟು ಮಿಂದಿದ್ದರೆಂದರೆ ಅದು ಹರಿಯುವುದು ನಿಂತಿದ್ದರೂ ಎಲ್ಲರೂ ರಾಗಗಳ ಜಗತ್ತಿನಲ್ಲಿಯೇ ವಿಹರಿಸುತ್ತಿದ್ದರು. ಐದು ನಿಮಿಷ ಕಳೆದ ಮೇಲೆ ಎಲ್ಲರೂ ನಿದ್ದೆಯಿಂದ ಎಚ್ಚೆತ್ತವರಂತೆ ಎದ್ದು ನಿಂತು ಗೌರವ ತೋರಿಸಿ ಮುಗಿಲೆತ್ತರಕ್ಕೆ ಕರತಾಡನ ಮಾಡಿದರು. ಪಂಡಿತರು ಸುತ್ತಲೂ ನೋಡಿ ಎಲ್ಲರಿಗೂ ಧನ್ಯವಾದ ಹೇಳುವಂತೆ ವಂದಿಸಿದಾಗ ಮೊದಲಿನ ಸಾಲಿನ ಆಸನದಲ್ಲಿ ಕುಳಿತ ಮಹಿಳೆ ಇವರನ್ನೇ ತದೇಕಚಿತ್ತದಿಂದ ನೋಡುತ್ತ ಮೈಮರೆತು ಕುಳಿತಿದ್ದಳು. ಅವಳಿಗೆ ಸುತ್ತಲಿನ ಪರಿವೆಯೇ ಇದ್ದಂತೆ ತೋರಲಿಲ್ಲ. ಪಂಡಿತರಿಗೆ ಆಶ್ಚರ್ಯವೇನೆಂದರೆ ವಿವಿಧ ನಗರಗಳಲ್ಲಿ ನಡೆದ ಐದಾರು ಗಾಯನ ಸಮಾರಂಭಗಳಲ್ಲಿ ಅವಳು ಮೊದಲಿನ ಸಾಲಿನಲ್ಲಿಯೇ ಕುಳಿತು ತಮ್ಮನ್ನೆ ಗಮನಿಸುತ್ತಿದ್ದ ನೆನಪಾಯಿತು. ಮೊದಲಿನ ಎರಡು ಸಮಾರಂಭಗಳಲ್ಲಿ ಅಷ್ಟಾಗಿ ಗಮನ ಸೆಳೆಯದಿದ್ದು ಆಮೇಲಿನ ಮೂರು ಸಮಾರಂಭಗಳಲ್ಲಿ ಅವಳು ಕುಳಿತು ತನ್ನನ್ನೇ ತದೇಕಚಿತ್ತದಿಂದ ಗಮನಿಸುತ್ತಿರುವುದು ಇವರ ಗಮನಕ್ಕೆ ಬಂತು. ಇಂದು ಅವಳನ್ನು ನೋಡುತ್ತಲೇ ಇವರಿಗೂ ಯಾವುದೋ ಹಿಂದಿನ ನೆನಪು ಮನಃಪಟಲದ ಮೇಲೆ ಬಂದು ವಿಚಲಿತನನ್ನಾಗಿ ಮಾಡಿತು. ಆದರೆ ಮರುಕ್ಷಣ ತಮ್ಮನ್ನು ತಾವೇ ಸಾವರಿಸಿಕೊಂಡರು. ಒಂದು ನಿಮಿಷ ಅವಳ ವಿಷಯವಾಗಿ ವಿಚಾರಿಸಬೇಕೆಂಬ ಭಾವ ಮೂಡಿದರೂ, ತತ್‌ಕ್ಷಣ ಅವಳೂ ಒಬ್ಬ ಸಂಗೀತ ಪ್ರೇಮಿ ಇರಬೇಕೆಂದು ಭಾವಿಸಿದರು.

ಸಂಗೀತದ ಹೊನಲನ್ನು ಹರಿಸಿ ತೃಪ್ತಭಾವದಿಂದ ತಮ್ಮ ಕೋಣೆಗೆ ಬಂದರು. ಇಂದು ರಾತ್ರಿ ತಮ್ಮ ಬಾಲ್ಯಸ್ನೇಹಿತರೊಡನೆ ಒಟ್ಟಗೆ ಸೇರುವ ಕಾರ್ಯಕ್ರಮ ನೆನಪಾಗಿ ಮನಸ್ಸು ಪ್ರಫುಲ್ಲಗೊಂಡಿತು. ಯಾವಾಗಲೋ ಒಮ್ಮೆ ಜಾಸ್ತಿ ಖುಷಿ ಆದಾಗ ಮೂಗಿಗೆ ಏರಿಸುತ್ತಿದ್ದ ನಶ್ಯ ನೆನಪಾಗಿ, ಬಸವರಾಜನಿಂದ ಕೇಳಿ

ಪಡೆದರು. ಅಷ್ಟರಲ್ಲಿ ಆಯೋಜಕರು ಬಂದು ಬಿಸಿ ಬಿಸಿ ಕಾಫಿ ತುಂಬಿದ ಫ್ಲಾಸ್ಕ್ ಇಟ್ಟು, ಒಬ್ಬ ಮಹಿಳೆ ತಮ್ಮನ್ನು ಭೇಟ್ಟಿ ಆಗಲು ಅನುಮತಿ ಕೇಳುತ್ತಿದ್ದಾಳೆಂದು ಹೇಳಲು , ಅವಳನ್ನು ಒಳಗೆ ಕಳಿಸಲು ಹೇಳಿದರು. ಯಾರ ವಿಷಯವಾಗಿ ತಿಳಿದುಕೊಳ್ಳಬೇಕೆಂದು ಮನಸ್ಸಿಗೆ ಬಂದಿತ್ತೋ ಅದೇ ಮಹಿಳೆ ಅವರ ಮುಂದೆ ಬಂದು ನಿಂತಳು. ಸುಮಾರು 45 ವರ್ಷ ವಯಸ್ಸಿನ ಶ್ರೀಮಂತರ ವರ್ಚಸ್ಸಿರುವ ಸುಂದರವಾದ ಮಹಿಳೆ ಇವರನ್ನು ಮತ್ತೆ ನೆನಪಿನಾಳಕ್ಕೆ ಒಯ್ದಳು. ಒಂದು ಕ್ಷಣ ವಿಚಲಿತರಾದರೂ ಸಾವರಿಸಿಕೊಂಡು ಅವಳಿಗೆ ಕೂಡಲು ಹೇಳಿದರು. ಅವಳು ಅವರನ್ನು ತದೇಕಚಿತ್ತದಿಂದ ನೋಡುತ್ತ ಕುಳಿತುಕೊಂಡಳು. ಅವಳ ಮಖದಲ್ಲಿ ಅವರಲ್ಲಿ ಏನೋ ಹೇಳಿಕೊಳ್ಳುವ ಆತುರ, ಕಾತರ ಎದ್ದು ಕಾಣುತ್ತಿತ್ತು.

ಯಾವುದೇ ಸಂಕೋಚವಿಲ್ಲದೆ ಅವಳು ನೇರವಾಗಿ, ಪಂಡಿತರಲ್ಲಿ ''ನನಗೆ ಕೆಲವು ವೈಯಕ್ತಿಕ ವಿಚಾರಗಳನ್ನು ಮಾತನಾಡುವುದಿದೆ...'' ಎಂದು ಹೇಳಲು ಅಲ್ಲಿದ್ದ ಎಲ್ಲ ಸಹಕಲಾವಿದರು ಹೊರಗಡೆ ಹೋದರು. ''ನಾನು ಮಧುರಾ, ನನ್ನ ಪತಿ ನಟರಾಜ ಮತ್ತು ನಾನು ಸ್ಥಾಪಿಸಿದ ನಗರದ ಪ್ರತಿಷ್ಠಿತ ಉದ್ಯಮದ ಅಧ್ಯಕ್ಷೆ . ನಾವು 25 ವರ್ಷ ಅಮೆರಿಕಾದಲ್ಲಿದ್ದು ಎರಡು ವರ್ಷಗಳ ಹಿಂದೆ ಇಲ್ಲಿಗೆ ಬಂದು ಉದ್ಯಮವನ್ನು ಸ್ಥಾಪಿಸಿದೆವು. ನೀವು ಅಮೆರಿಕಾದಲ್ಲಿ ಮಾಡಿದ ಬಹಶಃ ಎಲ್ಲ ಸಂಗೀತ ಕಛೇರಿಗಳಿಗೂ ನಾವು ಬರುತ್ತಿದ್ದೆವು. ನಟರಾಜರಂತೂ ನಿಮ್ಮ ಗಾಯನದ ಕಟ್ಟಾಭಿಮಾನಿ. ಅದಕ್ಕೆ ಎರಡು ಕಾರಣಗಳು, ಮೊದಲನೆಯದಾಗಿ ನಿಮ್ಮ ಅದ್ಭುತ ಗಾಯನ, ಎರಡನೆಯದು ನಿಮ್ಮ ರೂಪ. ಅವರ ಮುಖ ಚಹರೆ, ಬಣ್ಣ ಮೈಕಟ್ಟು ಬಹುತೇಕ ನಿಮ್ಮಂತೆಯೇ ಇತ್ತು. ಅವರು ನಿಮ್ಮಷ್ಟು ಎತ್ತರವಿರಲಿಲ್ಲ ಮತ್ತು ಮೈಕಟ್ಟೂ ಸ್ವಲ್ಪ ಕಡಿಮೆ. ಆದರೆ ನಿಮ್ಮನ್ನು ನೋಡಿದರೇ ನಟರಾಜರೇ ಕಣ್ಣ ಮುಂದೆ ಬಂದು ನಿಂತಂತೆ ಭಾಸವಾಗುತ್ತದೆ. ನಿಮ್ಮ ನಡಿಗೆಗೂ ಅವರ ನಡಿಗೆಗೂ ತುಂಬಾ ಸಾಮ್ಯತೆ ಇತ್ತು. ನನ್ನ ದುರಾದೃಷ್ಟ ಭಾರತಕ್ಕೆ ಬಂದು ಒಂದೇ ವರ್ಷದಲ್ಲಿ ಅವರು ಹೃದಯಾಘಾತಕ್ಕೆ ಬಲಿಯಾಗಿ ನನ್ನನ್ನು ಒಬ್ಬಂಟಿಯನ್ನಾಗಿ ಮಾಡಿ ಹೋದರು. ಅದಕ್ಕೇ ನಿಮ್ಮ ಸಂಗೀತ ಕಛೇರಿ ಎಲ್ಲಿಯೇ ಇರಲಿ ನಾನು ಬರುತ್ತೇನೆ. ನಿಮ್ಮ ಸಹವಾಸದಲ್ಲಿ ಅವರನ್ನು ಮರೆಯಬಹುದೇನೋ ಎಂಬ ದೂರದ ಆಸೆ. ಇಲ್ಲಿಯವರೆಗೆ ನಿಮ್ಮನ್ನು ಸಂಪರ್ಕಿಸಲು ಧೈರ್ಯ ಸಾಲದಾಗಿತ್ತು. ಆದರೆ ಇವತ್ತು ಸಾಕಷ್ಟು ಧೈರ್ಯ ತೆಗೆದುಕೊಂಡು ಬಂದೆ. ಒಬ್ಬನೇ ಮಗ, ಅಮೆರಿಕಾದಲ್ಲಿ ಎಮ್.ಎಸ್. ಮಾಡುತ್ತಿದ್ದಾನೆ...'' ಹೇಳುತ್ತ ಹೇಳುತ್ತ ಅವಳ ಕಣ್ಣಾಲಿಗಳು ತುಂಬಿ ಬಂದು ಅವರ ಕೈಗಳನ್ನು ಹಿಡಿದುಕೊಂಡು ಭಾವಾವೇಶಕ್ಕೆ ಒಳಗಾಗಿ ಅಳಲು ಪ್ರಾರಂಭಿಸಿದಳು. ಪಂಡಿತರು ಅವಳು ಅಳುವುದನ್ನು ತಡೆಯಲಿಲ್ಲ. ಅವಳ ಮನಸ್ಸು ಸ್ವಲ್ಪ ತಹಬಂದಿಗೆ ಬರುತ್ತಲೇ, ''ಕಾಫಿ ಬೇಕಾ?'' ಎಂದು ಕೇಳಿ, ಅವಳು ತಲೆ ಆಡಿಸುವ ಮೊದಲೇ ಅವರ ಪಕ್ಕದಲ್ಲಿದ್ದ ಫ್ಲಾಸ್ಕ್‌ನಿಂದ ಒಂದು ಕಪ್ಪಿನಲ್ಲಿ ಕಾಫಿ ಹಾಕಿಕೊಟ್ಟರು. ಅವಳು ಕಾಫಿ ಕುಡಿಯುತ್ತಿದ್ದಾಗಲೂ ಉತ್ಕಟ ಬಯಕೆ ತುಂಬಿದ ಅವಳ ನಯನಗಳು ಪಂಡಿತರನ್ನೇ ಅವಲೋಕಿಸುತ್ತಿದ್ದವು. ಪಂಡಿತರಿಗೆ ಇರಿಸುಮುರಿಸಾದರೂ ಅವಳ ಮನಸ್ಸಿನಲ್ಲಿರುವುದು ಅವರಿಗೆ ವೇದ್ಯವಾಯಿತು. ಅವಳು ತನ್ನ ನಟರಾಜನನ್ನು ತನ್ನಲ್ಲಿ ಕಂಡುಕೊಂಡು ತನ್ನ

'ಅಳಿಯಂದಿರು ಗಾಡಿ ಕೊಡ್ಲಿಲ್ಲ ಅಂತ ಪದೇ ಪದೇ ಹೇಳ್ತಿದ್ರಲ್ಲಾ, ಅದಕ್ಕೆ ಕೊಟ್ಟು ಬಂದೆ ಕಣೇ...!'

ಬಯಕೆಗಳನ್ನು ನಿಯಂತ್ರಿಸಲಾರದೇ ತನ್ನಲ್ಲಿ ತನ್ನ ಬೇಗುದಿಯನ್ನು ಹೇಳಿಕೊಂಡಿದ್ದಾಳೆಂದು ಮನವರಿಕೆ ಆಯಿತು. ಆದರೆ ಅವಳನ್ನು ಇಂದು ಕಾರ್ಯಕ್ರಮ ಮುಗಿದಾಗ ನೋಡುತ್ತಲೇ ತನ್ನ ಮನಃಪಟಲದ ಮೇಲೆ ಮೂಡಿದ ಭಾವನೆಗಳನ್ನು ನೆನಪಿಸಿಕೊಂಡು, ಇದಕ್ಕೆಲ್ಲ ಒಂದೇ ಪರಿಹಾರ ಎಂದು ನಿರ್ಣಯಿಸಿ,

''ಈ ಸಂದರ್ಭದಲ್ಲಿ ಮತ್ತು ಈ ಸ್ಥಳದಲ್ಲಿ ಬಹಳ ಸಮಯ ಮಾತನಾಡುವುದು ಉಚಿತವಲ್ಲ, ಅಲ್ಲದೇ ನಾನು ಈಗ ನನ್ನ ಬಾಲ್ಯ ಸ್ನೇಹಿತರ ಜೊತೆಗೆ ಹೊರಗಡೆ ಹೋಗುವುದಿದೆ. ನೀನು ಬರುವ ರವಿವಾರ 9.00 ಗಂಟೆಗೆ ನಮ್ಮ ಮನೆಗೇ ಬಾ... ಆಷ್ಟರಲ್ಲಿ ನನ್ನ ರಿಯಾಜ್ ಅಂದರೆ ಸಂಗೀತಾಭ್ಯಾಸವೂ ಮುಗಿದಿರುತ್ತದೆ .... ರವಿವಾರದ ಮುಂಜಾನೆಯ ತಿಂಡಿಯನ್ನು ಕೂಡಿಯೇ ಮಾಡುವಾ...'' ಎಂದರು.

ಪಂಡಿತರು ತನ್ನನ್ನು ತಮ್ಮ ಮನೆಗೇ ಆಹ್ವಾನಿಸಿದ್ದನ್ನು ಕೇಳಿ ಅವಳ ಮುಖ ಅರಳಿತು. ಸಮಾಧಾನದಿಂದ ಆಗಲೆಂದು ಮುಗುಳ್ನಗುತ್ತ ತಲೆ ಆಡಿಸಿದಳು. ಅವಳು ಗೆಲುವಿನಿಂದ ಹೆಜ್ಜೆ ಹಾಕುತ್ತ ಹೋದದ್ದನ್ನು ಕಂಡು ಪಂಡಿತರು ತಮ್ಮಲ್ಲಿಯೇ ನಕ್ಕರು.

★ ★ ★

ಪಂಡಿತರು ಎಣಿಸಿದಂತೆ ಮಧುರಾ ಒಂದು ಗಂಟೆ ಮುಂಚೆಯೇ ಅವರ ಮನೆಗೆ ಬಂದಳು. ರಿಯಾಝು ಇನ್ನೂ ನಡದೇ ಇತ್ತು. ಗೇಟು ತೆರೆಯುವ ಶಬ್ದ ಕೇಳಿ ಸೆಕ್ಯುರಿಟಿ ಅವನು ಮಧುರಾಳನ್ನು ಕೇಳುವ ಮೊದಲೇ ಇಂದುಮತಿ ಅವರು ಮಧುರಾಳನ್ನು ಸ್ವಾಗತಿಸಲು ಹೋದರು. ಪಂಡಿತರು ತಮ್ಮ ಧರ್ಮಪತ್ನಿ ಇಂದುಮತಿ ಅವರಿಗೆ ಮೊದಲಿಗೇ ಮಧುರಾಳ ವಿಷಯವನ್ನು ವಿಶದವಾಗಿ ತಿಳಿಸಿ ಇಬ್ಬರೂ ಚರ್ಚಿಸಿದ್ದರು. ಮಧುರಾಳನ್ನು ಸಮೀಪಿಸಿ ಮೃದುವಾಗಿ ಅವಳ ಕೈಯನ್ನು ತಮ್ಮ ಕೈಯಲ್ಲಿ ತೆಗೆದುಕೊಂಡು ಒಳಗೆ ಕರೆದುಕೊಂಡು ಹೋಗಿ ಸೋಫಾದ ಮೇಲೆ ಕೂಡಿಸಿ, ನೀರು ಕುಡಿಯಲು ಕೊಟ್ಟು ಅವಳ ಪಕ್ಕಕ್ಕೇ ಕುಳಿತರು. ಅವರ ವಾತ್ಸಲ್ಯಪೂರಿತ ನಡವಳಿಕೆ ಮಧುರಾಳಿಗೆ ಎಲ್ಲವೂ ಅಯೋಮಯ ಎನಿಸಿ ಆಶ್ಚರ್ಯವೂ ಆಯಿತು. ಅವರಿಗೆ 65 ವರ್ಷ ವಯಸ್ಸು ಆಗಿದ್ದರೂ ನೋಡಲು ಸುಂದರವಾಗಿ, ಚೈತನ್ಯಭರಿತರಾಗಿ ಕಂಡರು ಮಧುರಾಳಿಗೆ. ಅವರನ್ನು ನೋಡುತ್ತಲೇ ಗೌರವದಿಂದ ಅವರಿಗೆ ನಮಸ್ಕರಿಸಬೇಕೆಂಬ ಮನಸ್ಸಿನ ಒತ್ತಾಯಕ್ಕೆ ಮಣಿದು ನಮಸ್ಕರಿಸಿದಳು. ಆದರೆ ಎಲ್ಲೋ ಒಂದು ಕಡೆ ಅವರ ಮುಖದಲ್ಲಿ ವಿಷಾದದ ಛಾಯೆ ಮಧುರಾಳಿಗೆ ಕಂಡು ಬಂತು.

''ನಾನು ಇಂದುಮತಿ, ಪಂಡಿತರ ಧರ್ಮಪತ್ನಿ... ಅವರ ರಿಯಾಜ್ ಮುಗಿಯಲು ಇನ್ನು ಅರ್ಧ ಗಂಟೆ ಇದೆ... ಬಾ ನಿನಗೆ ಮನೆ ತೋರಿಸುವೆ...'' ಎಂದು ಹೇಳಿ ಆಕ್ಕರೆಯಿಂದ ಅವಳನ್ನು ಕರೆದುಕೊಂಡು ಒಳಗೆ ನಡೆದರು.

ಸಾಕಷ್ಟು ವಿಶಾಲವಾದ ಹಜಾರ, ಅಡುಗೆಯ ಕೋಣೆ, ಊಟದ ಮನೆ, ನಾಲ್ಕು ಸುಸಜ್ಜಿತ ಮಲಗುವ ಕೋಣೆಗಳು, ಮಹಡಿ ಮೇಲೆ ದೊಡ್ಡದಾದ ಪರದೆ (ಸ್ಕ್ರೀನ್) , ಟಿ.ವಿ. , ಸಂಗೀತದ ವಾದ್ಯಗಳು, ಮ್ಯೂಸಿಕ್ ಸಿಸ್ಟಮ್ ಎಲ್ಲವನ್ನೂ ಒಳಗೊಂಡ ಕೋಣೆ. ಹಜಾರಕ್ಕೆ ಹೊಂದಿಕೊಂಡಂತೆಯೇ ಹೂದೋಟಕ್ಕೆ ಮುಖಮಾಡಿಕೊಂಡ ವಿಶಾಲವಾದ ಕಟ್ಟೆ ಅಲ್ಲಿಯೇ ಪಂಡಿತರ ಮತ್ತು ಅವರ ಶಿಷ್ಯರ ರಿಯಾಜ್ ನಡೆದಿತ್ತು. ಅಲ್ಲಲ್ಲಿ ಕಂಡುಬರುವ ಸಂಗೀತದ ಉಪಕರಣಗಳು, ವಾದ್ಯಗಳು, ಪರಿಕರಗಳು, ಪೇಂಟಿಂಗ್‌ಗಳು ಇದು ಒಳ್ಳೆಯ ಅಭಿರುಚಿ ಉಳ್ಳ ಸಂಗೀತಗಾರನ ಮನೆ ಎಂದು ಸಾರಿ ಸಾರಿ ಹೇಳುತ್ತಿದ್ದವು. ಸರಳ, ಸುಂದರ ಆದರೆ ಮುತುವರ್ಜಿ ವಹಿಸಿ ವಿನ್ಯಾಸಗೊಳಿಸಿದ ಒಳಾಂಗಣ ತನ್ನ ಕಲಾಭರಿತ ಶ್ರೀಮಂತಿಕೆಯಿಂದ ಮನಸ್ಸಿಗೆ ಶಾಂತತೆಯನ್ನೀಯುತ್ತಿದೆಯೆಂದು ಅವಳಿಗೆ ಭಾಸವಾಯಿತು. ಹೂದೋಟದ ಸೌಂದರ್ಯವನ್ನು ಕಣ್ತುಂಬಿಸಿಕೊಂಡು ಇಬ್ಬರೂ ಒಳಗೆ ಬಂದು ಕುಳಿತಾಗ ಇಷ್ಟರವರೆಗೆ ಗಮನಿಸದೇ ಇದ್ದ ಎದುರಿಗೆ ಇರುವ ಗೋಡೆಯ ಮೇಲೆ ತೂಗುಹಾಕಿದ ಸುಮಾರು 18 ವರ್ಷ ವಯಸ್ಸಿನ ಯುವತಿಯ ಭಾವಚಿತ್ರ ಮಧುರಾಳನ್ನು ಸೆಳೆಯಿತು. ಅಗಲವಾದ ಲಲಾಟದ ಮೇಲೆ ಭ್ರಮರದಂತಿರುವ ಮುಂಗುರುಳುಗಳು, ಉದ್ದನೆಯ ನಾಸಿಕ, ತುಟಿಗಳ ಮೇಲೊಂದು ಕಿರುನಗೆ, ಮುಖದಲ್ಲಿ ಅದೆಂಥದೋ ಆಕರ್ಷಣೆ. ಪಂಡಿತರ ಮುಖಚರ್ಯೆಯ ಸಾಮ್ಯತೆ ಅವಳ ಮುಖದಲ್ಲಿ ಕಂಡುಬರುತ್ತಿತ್ತು. ಆ ಭಾವಚಿತ್ರಕ್ಕೆ ಗಂಧದ ಹಾರವನ್ನು ಹಾಕಲಾಗಿತ್ತು. ಮಧುರಾ ಇನ್ನೇನು ಆ ಭಾವಚಿತ್ರದ ವಿಷಯವಾಗಿ ಇಂದುಮತಿ ಅವರನ್ನು ಕೇಳಬೇಕೆನ್ನುತ್ತಿರುವಾಗ ಪಂಡಿತರು ರಿಯಾಝು ಮುಗಿಸಿ ಬಂದರು. ಅವಳ ಮನದಲ್ಲಿ ಉದ್ಭವಿಸಿದ್ದ ಪ್ರಶ್ನೆ ಪ್ರಶ್ನೆಯಾಗೇ ಉಳಿಯಿತು. ಅವಳ ಮನದಲ್ಲಿದ್ದ ತುಮುಲ ಇಂದುಮತಿ ಅವರ ವಾತ್ಸಲ್ಯಪೂರಿತ ಆತಿಥ್ಯದಿಂದ ಮತ್ತು ಆ ಭಾವಚಿತ್ರದಿಂದಾಗಿ ಮತ್ತಷ್ಟು ತೀವ್ರಗೊಂಡಿತು.

ಪಂಡಿತರು ಮತ್ತು ಶಿಷ್ಯರು ಬಂದದ್ದನ್ನು ನೋಡಿ ಇಂದುಮತಿ ಅವರು ಊಟದ ಕೋಣೆಗೆ ಹೋದರು. ಪಂಡಿತರು ಮಧುರಾಳನ್ನು ಉದ್ದೇಶಿಸಿ,

'ಮೊದಲು ತಿಂಡಿ ಆಮೇಲೆ ಮಾತುಕತೆ' ಎಂದು ಹೇಳುತ್ತ ಊಟದ ಮೇಜಿನ ಕಡೆಗೆ ನಡೆದರು. ಆಡುಗೆಯವಳು ಬಂದು ಎಲ್ಲರಿಗೂ ತಟ್ಟೆ ಇಟ್ಟು, ನೀರಿನ ಲೋಟವನ್ನು ಇಟ್ಟಳು. ಆದರೆ ಅವಳಿಗೆ ತಿಂಡಿ ಬಡಿಸಲು ಬಿಡದೇ ಇಂದುಮತಿ ಅವರು ತಾವೇ ಸ್ವತಃ ನಿಂತು ಬಿಸಿ ಬಿಸಿ ಇಡ್ಲಿ, ಸಾಂಬಾರ ಮತ್ತು ಚಟ್ನಿ ಬಡಿಸಿದರು. ಮಧುರಾ ಎಷ್ಟೇ ಒತ್ತಾಯಿಸಿದರೂ ತಾವು ತಿನ್ನಲು ಕೂಡದೇ ಎಲ್ಲರಿಗೂ ಪ್ರೀತಿಯಿಂದ ಒತ್ತಾಯಿಸುತ್ತ ಬಡಿಸುತ್ತಿದ್ದರು. ಅವರು ಮಮತೆಯಿಂದ ಉಪಚರಿಸುತ್ತಿರುವಾಗ ಮಧುರಾಳಿಗೆ ಕೊಂಚ ಮುಜುಗರ ಎನಿಸಿದರೂ ಅದರಲ್ಲಿಯೇ ಎಂಥದೋ ಸುಖದ ಅನುಭವ ಎಲ್ಲಿಯೋ ಮನದ ಮೂಲೆಯಲ್ಲಿ ಮೂಡುತ್ತಿತ್ತು. ತನ್ನ ತಾಯಿಯೂ ಇದೇ ರೀತಿ ಉಪಚರಿಸುತ್ತಿದ್ದ

ನೆನಪಾಯಿತು. ಆ ಭಾವನೆ ಮೂಡುತ್ತಲೇ ಮನದಲ್ಲಿ ಅಪರಾಧ ಪ್ರಜ್ಞೆ ಕಾಡಲಾರಂಭಿಸಿತು. ತಾನು ಯಾವುದೋ ಲೋಭಕ್ಕೆ, ಮೋಹಕ್ಕೆ ಒಳಗಾಗಿ ಪಂಡಿತರ ಬೆನ್ನು ಬಿದ್ದಿದ್ದೇನೆ. ಆದರೆ ವಾಸ್ತವದಲ್ಲಿ ನಡೆಯುತ್ತಿರುವ ಘಟನೆಗಳು ತಾನು ಮಾಡುತ್ತಿರುವುದು ವಿಹಿತವಲ್ಲವೆಂದು ಸ್ಪಷ್ಟಪಡಿಸುತ್ತ ತನ್ನನ್ನು ಅಪರಾಧಿ ಸ್ಥಾನದಲ್ಲಿ ನಿಲ್ಲಿಸುತ್ತಿವೆ ಎಂಬ ಭಾವದ ಅಲೆಗಳು ಮನದಲ್ಲಿ ಏಳುತ್ತಿದ್ದವು. ಯೋಚಿಸುತ್ತಲೇ ತನ್ನ ತಟ್ಟೆಯಲ್ಲಿದ್ದ ಇಡ್ಲಿ ತಿಂದಳು. ಪಂಡಿತರು ಅವಳ ಮುಖದಲ್ಲಾಗುತ್ತಿದ್ದ ಬದಲಾವಣೆಗಳನ್ನು ಸೂಕ್ಷ್ಮವಾಗಿ ಗಮನಿಸುತ್ತಿದ್ದರು.

ತಿಂಡಿ ತಿಂದು ಶಿಷ್ಯರೆಲ್ಲ ಹೊರಟು ಹೋದರು. ಪಂಡಿತರು, ಇಂದುಮತಿ ಮತ್ತು ಮಧುರಾ ಮೂವರೂ ಸೋಫಾದ ಮೇಲೆ ಕುಳಿತರು. ಇಂದುಮತಿ ಮಧುರಾಳ ಪಕ್ಕಕ್ಕೇ ಬಂದು ಕುಳಿತರು. ಮಧುರಾಳ ಮುಖದ ಮೇಲೆ ಮುಜುಗರ ಮತ್ತು ತಳಮಳ ಎದ್ದು ಕಾಣುತ್ತಿತ್ತು. ಇದೇ ಸರಿಯಾದ ಸಮಯವೆಂದು ಪಂಡಿತರು,

"ಮಧುರಾ, ನಿನಗೆ ಇಂದುಮತಿಯ ನಡತೆ ವಿಚಿತ್ರ ಎನಿಸಿರಬಹುದು. ಯಾಕೆ ಅವಳು ನಿನ್ನನ್ನು ಅಷ್ಟು ಅನ್ಯೋನ್ಯವಾಗಿ ಉಪಚರಿಸುತ್ತಿದ್ದಾಳೆ ಎಂದು. ಅದು ಬೇರೇನು ಅಲ್ಲ ಪರಿಶುದ್ಧವಾದ ತಾಯಿಯ ಮಮತೆ. ಆ ಭಾವಚಿತ್ರದಲ್ಲಿರುವ ಶ್ರುತಿ ನಮ್ಮ ಮಗಳು. 18 ವರ್ಷದವಳಿದ್ದಾಗ ತೆಗೆದ ಭಾವಚಿತ್ರ. ಮುಂದೆ ಆರೇ ತಿಂಗಳಲ್ಲಿ ಅವಳನ್ನು ವಿಧಿ ನಮ್ಮಿಂದ ಕಸಿದುಕೊಂಡಿತು. ಅವಳು ಜೀವಂತ ಇದ್ದಿದ್ದರೆ ಬಹುಶಃ ನಿನ್ನಷ್ಟೇ ವಯಸ್ಸಿನವಳಾಗಿರುತ್ತಿದ್ದಳು. ನಿನ್ನನ್ನು ನಾನು ಸಂಗೀತ ಕಛೇರಿಯಲ್ಲಿ ನೋಡಿದಾಗ ನನ್ನ ಮಗಳೇ ನನ್ನೆದುರಿಗೆ ನಿಂತಂತೆ ಭಾಸವಾಯಿತು. ಆದರೆ ನಿನ್ನ ಮಾತುಗಳನ್ನು ಕೇಳಿದ ಮೇಲೆ ಮತ್ತು ನಿನ್ನ ಮುಖದಲ್ಲಿ ಮೂಡುತ್ತಿದ್ದ ಭಾವನೆಗಳನ್ನು ಗಮನಿಸಿದಾಗ, ನಿನಗೆ ಆ ಸಂದರ್ಭದಲ್ಲಿ ನಾನು ಏನೇ ಹೇಳಿದರೂ ಮೋಹಕ್ಕೆ ಒಳಗಾದ ನಿನ್ನ ಮನಸ್ಸು ಒಪ್ಪುತ್ತಿರಲಿಲ್ಲ, ಏಕೆಂದರೆ ನೀನು ನಿನ್ನ ನಟರಾಜನನ್ನು ನನ್ನಲ್ಲಿ ಹುಡುಕಲು ಪ್ರಯತ್ನಿಸುತ್ತಿದ್ದೆ, ಅದು ತಪ್ಪು ಎಂದು ನೇರವಾಗಿ ಆಗಲೇ ಹೇಳಿದ್ದರೆ ಏನಾದರೂ ಅನಾಹುತವನ್ನು ನೀನು ಮಾಡಿಕೊಳ್ಳುವ ಸಾಧ್ಯತೆ ಇತ್ತು. ನಾನು ನಿನ್ನಲ್ಲಿ ನಮ್ಮ ಮಗಳನ್ನು ಕಂಡೆ. ನನ್ನಲ್ಲಿ ಮತ್ತು ನಟರಾಜನಲ್ಲಿ ಸಾಮ್ಯತೆ ಇದ್ದರೆ ತಂದೆ ಮಗನಲ್ಲಿ ಸಾಮ್ಯತೆ ಇದ್ದ ಹಾಗೆ. ಏಕೆಂದರೆ ನನ್ನ ವಯಸ್ಸು ಅವನ ತಂದೆಯ ವಯಸ್ಸೇ. ಆ ದೃಷ್ಟಿಯಿಂದ ನೋಡಿದರೆ ನೀನು ನಮಗೆ ಸೊಸೆ ಇದ್ದಂತೆ. ನಿಮ್ಮ ಮಗ ನಮ್ಮ ಮೊಮ್ಮಗ ಇದ್ದಂತೆ. ಅದಕ್ಕೇ ನಿನಗೆ ಇದೆಲ್ಲವನ್ನೂ ನಿನ್ನ ಮನಸ್ಸಿಗೆ ಮನವರಿಕೆ ಮಾಡಿಕೊಡಲೆಂದೇ ಮನೆಗೆ ಕರೆದೆ. ಇಂದುಮತಿಗೆ ನಿನ್ನ ವಿಷಯವಾಗಿ ಹೇಳಿದಾಗಿನಿಂದ ನಿನ್ನನ್ನು ತನ್ನ ಮಗಳೇ ಎಂದು ತಿಳಿದಿದ್ದಾಳೆ. ನೀನು ಬಂದಾಗಿನಿಂದ ಇಂದುಮತಿಯ ವ್ಯವಹಾರ ಬಹಳ ದಿನಗಳ ನಂತರ ಭೆಟ್ಟಿಯಾದ ಮಗಳನ್ನು ಭೆಟ್ಟಿ ಆದಾಗ ಇರು..."

ಪಂಡಿತರು ಹೇಳುತ್ತಲೇ ಇದ್ದರು... ಮಧುರಾಳಿಗೆ ನಿಧಾನವಾಗಿ ತನ್ನ ತಪ್ಪಿನ ಅರಿವು ಆಗಲಾರಂಭಿಸಿತು. ಕ್ಷಣಿಕದ ಸುಖಕ್ಕಾಗಿ ಎಂಥ ಘೋರ ಕೃತ್ಯಕ್ಕೆ ಮುಂದಾಗಿದ್ದೆ. ಎಲ್ಲಾ ಸಂಗೀತಗಾರರು, ಕಲಾವಿದರು, ಗಾಯಕರು ವಿಲಾಸಿಗಳೂ, ರಸಿಕರೂ ಆಗಿರುತ್ತಾರೆ ಎಂಬ ತಪ್ಪು ತಿಳುವಳಿಕೆಯಿಂದಾಗಿ ತಾನು ಮೋಹಕ್ಕೆ ಒಳಗಾಗಿ ಪಾಪ ಮಾಡಲು ಮುಂದಾಗಿದ್ದೆ, ಮನಸ್ಸಿನಲ್ಲಿ ಪಾಪಪ್ರಜ್ಞೆ ಹೊರಹೊಮ್ಮುತ್ತಲೇ ಪಂಡಿತರ ಮತ್ತು ಇಂದುಮತಿಯವರ ಕಾಲಿಗೆರಗಿ,

"ಪಂಡಿತರೆ... ಅಲ್ಲಾ ಅಲ್ಲಾ.... ಅಪ್ಪಾಜಿ, ಅಮ್ಮ ನನ್ನನ್ನು ಕ್ಷಮಿಸಿ... ಮೋಹಕ್ಕೆ ಬಲಿಯಾಗಿದ್ದ ನನ್ನನ್ನು ಸಮಯೋಚಿತವಾಗಿ ನನ್ನ ತಪ್ಪನ್ನು ನನಗೆ ಮನವರಿಕೆ ಮಾಡಿ ಕೊಟ್ಟು ಘೋರ ಅಪರಾಧದಿಂದ ಪಾರು ಮಾಡಿ ಕಾಪಾಡಿದ್ದೀರಿ... ಇನ್ನು ನೀವೇ ನನಗೆ ಅಪ್ಪ-ಅಮ್ಮ..." ಮುಂದಕ್ಕೆ ದುಃಖದಿಂದ ಮಾತು ಹೊರಡದೇ ಅಳುತ್ತ ಅವರ ಕಾಲುಗಳ ಮೇಲೆ ತಲೆಯನ್ನಿಟ್ಟಳು.

"ಹೌದಮ್ಮಾ, ನಮಗೂ ಯಾರೂ ಇರಲಿಲ್ಲ. ಈಗ ನಮಗೆ ನೀನು ಮಗಳೂ ಹೌದು, ಸೊಸೆಯೂ ಹೌದು... ಅಲ್ಲದೇ ನಿನ್ನಿಂದ ನಮಗೆ ಮೊಮ್ಮಗನೂ ದೊರಕಿದ..." ಇಷ್ಟು ಹೇಳಿದ ಇಂದುಮತಿ ಅವರಿಗೂ ಮುಂದೆ ಮಾತನಾಡಲು ಆಗದೇ ಮಧುರಾಳನ್ನು ತಬ್ಬಿಕೊಂಡು ತಮ್ಮ ಪಕ್ಕಕ್ಕೆ ಕೂಡಿಸಿಕೊಂಡರು. ತೇವವಾದ ಎಲ್ಲರ ಕಣ್ಣುಗಳು ಶ್ರುತಿಯ ಭಾವಚಿತ್ರವನ್ನು ನೋಡುತ್ತಿದ್ದವು.

■

ಲಹರಿ

ಎಲ್ಲವೂ ಎಂದಿನಂತೆಯೇ ಇತ್ತು

ಹೊಳೆ ಹೊಳೆವ ತಾರೆಗಳೆಲ್ಲ
ಕಣ್ಣು ಮಿಟುಕಿಸಿದಾಗ
ಕಳೆದು
ಕೂಡುವ ಹುರುಪು

ಕಳೆವಾಗ ತಡಸಿ
ಹೊಮ್ಮಿದ್ದು ನಿಟ್ಟುಸಿರೇ?
ಕೂಡುವಾಗ ಬಂಧ
ಬಿಗಿಯಾಗಿ ಪದ ಹೊಮ್ಮದೇ
ತಪ್ಪಿತೇ ಛಂದ?
ಯಾವುದೂ ತಿಳಿಯಲಿಲ್ಲ

ಕಂತುತ್ತ ಬಂದಂತೆ
ಹೊಮ್ಮಿದ್ದ ರಾಗಗಳೇ ಒಂದು
ಇರುಳಲ್ಲಿ ಮೂಡಿದ್ದ
ಭಾವಗಳೇ ಇನ್ನೊಂದು

ಆವಳೆಂದಳು
ಹೊಸ ಭಾವಗೀತೆಯಂತಿರಲಿ
ಹೊಸ ಹೂವು ಮುಡಿಸುವಂತಿರಲಿ
ಮೃದು ಮಧುರ ತಾನ
ಬಂಧ ಹರಿಯದೇ ಇರಲಿ
ಈ ಇರುಳು

ಜೊತೆಯಾಗಿ ಬೆಳತನಕ
ಮೀಟಿದರೂ
ಉಳಿಯಿತೇ ಅಪಸ್ವರ?
ಸಂದೇಹ

ತಂತಿ ಮತ್ತಷ್ಟು ಬಿಗಿದು ಮೀಟಲು
ಮುಂದಾದರೆ
ಬೆಳಕು ಹರಿದು
ಎಲ್ಲವೂ ಎಂದಿನಂತೆಯೇ ಇತ್ತು.

❑ ಪಿ. ಬಿ. ಪ್ರಸನ್ನ

ಪುಲಿಯಾಂಬಲಿ ಎಂಬ ಮಹಾಭಕ್ತ

❑ಡಾ॥ ಸಂಧ್ಯಾ ಪೈ

ಮುದ್ದು,

ಎಂದಿನಂತೆ ರಾಜಾ ವಿಕ್ರಮಾದಿತ್ಯ ಬೇತಾಳ ಸೇರಿಕೊಂಡಿದ್ದ ಶವವನ್ನು ಮುತ್ತುಗದ ಮರದಿಂದ ಕೆಳಗಿಳಿಸಿ, ಹೆಗಲ ಮೇಲಿರಿಸಿಕೊಂಡು ನಡೆಯತೊಡಗಿದ. ಕೆಲವೇ ಕ್ಷಣಗಳಲ್ಲಿ ಶವ ಅಲುಗಾಡಿತು. ಬೇತಾಳ ಮಾತನಾಡತೊಡಗಿತು. ''ರಾಜಾ, ನಿನ್ನ ಛಲ, ಕ್ಷಮತೆಗೆ ಮೆಚ್ಚಿದೆ. ಈ ಬಾರಿಯ ಮಾರ್ಗಾಯಾಸ ಕಡಿಮೆ ಮಾಡಲು ಒಂದು ಮನೋಜ್ಞಕಥೆ ಹೇಳುತ್ತೇನೆ ಕೇಳು. ಮಲೆಯಾಳದ ಒಂದೂರಿನಲ್ಲಿ ಪುಲಿಯಾಂಬಲಿ ಎಂಬ ಹೆಸರಿನ ಮಹಾ ಭಕ್ತನೊಬ್ಬ ಇದ್ದ. ದೇವಿ ಭಗವತಿಯನ್ನು ಶಾಸ್ತ್ರೋಕ್ತವಾಗಿ ಪ್ರತಿದಿನ ಪೂಜಿಸುತ್ತಿದ್ದ. ಮಂಗಳವಾರ, ಶುಕ್ರವಾರ, ಭಾನುವಾರ ಮತ್ತು ಅಮಾವಾಸ್ಯೆಯಂದು ವಿಶೇಷ ಪೂಜೆ ನಡೆಯುತ್ತಿತ್ತು. ಅಂದು 'ಶಾಸ್ತ್ರಗಳಲ್ಲಿ ಹೇಳಿರುವಂತೆ' ಎಂದು ಅವನೇ ಹೇಳುವಂತೆ, ದೇವಿಗೆ ಸುರೆಯ ನೈವೇದ್ಯ ನಡೆಯುತ್ತಿತ್ತು. ಪ್ರಸಾದ ಎಂದು ಇವನು ಅದನ್ನು ಸ್ವೀಕರಿಸುತ್ತಿದ್ದ.

ಊರಿನ ಮಿಕ್ಕ ಬ್ರಾಹ್ಮಣರಿಗೆ ಇದರಿಂದ ಕಣ್ಣು ಕಿಸಿರಾಗಿತ್ತು. ಮೊದಲನೆಯದಾಗಿ ಬ್ರಾಹ್ಮಣನಾಗಿ ಮಾಂಸ, ಮದಿರೆಗಳು ನಿಷಿದ್ಧ. ಎರಡನೆಯದಾಗಿ ಅದನ್ನು-ಇದನ್ನು ಕುಡಿಯುವುದು ಮಹಾ ಅಪರಾಧ ಎಂದವರ ಅಂಬೋಣ. ಆದರೆ, ಹಾಗೇ ಮುಕ್ತವಾಗಿ ಹೇಳುವ ಧೈರ್ಯ ಇಲ್ಲ ಇವರಿಗೆ. ಇವನ ಭಗವತಿಗೆ ಕೋಪ ಬಂದರೆ...! ಕಡೆಗೆ ಅಳೆದೂ ಸುರಿದು ಮಹಾರಾಜರಿಗೆ ದೂರು ಕೊಡುವುದು ಎಂದಾಯಿತು. ಮಹಾರಾಜರು ಇವರ ಮಾತು ಕೇಳಿ ಪುಲಿಯಾಂಬಲಿಯನ್ನು ವಿಚಾರಿಸುವುದು ಎಂದು ನಿರ್ಧರಿಸಿದರು. ಇಲ್ಲಿಯೂ ಒಂದು ವಿಷಯ ಎಂದರೆ, ಮಹಾರಾಜರಿಗೆ ಬ್ರಾಹ್ಮಣ ವರ್ಗವನ್ನು ಎದುರು ಹಾಕಿಕೊಳ್ಳುವುದು ಬೇಡವಿತ್ತು. ಸರಿ, ಪುಲಿಯಾಂಬಲಿಗೆ ಕರೆಹೋಯಿತು.

ಪುಲಿಯಾಂಬಲಿ ಮದ್ಯ ತರಲು ಹೋಗುವ ದಾರಿಯಲ್ಲಿ ಕೆಲವರು ಕಾದು ನಿಂತರು. ಇವನು, ಮತ್ತಿವನ ತಲೆಯ ಮೇಲಿರುವ ಮಡಕೆ ನೋಡುತ್ತಲೇ, 'ಏನಿದೆ ಅದರಲ್ಲಿ?' ಅಂದರು. ಇವನು ನಗುತ್ತಾ, 'ಮಡಕೆ' ಎಂದ. 'ಮಡಕೆ ಎಂದು ನಮಗೂ ಕಾಣುತ್ತಿದೆ. ಮಡಕೆಯೊಳಗೆ ಏನಿದೆ? ಕೆಳಗಿಳಿಸು ಮಡಕೆಯನ್ನು' ಎಂದರು ಜಬರದಸ್ತಿನಿಂದ. 'ಹೋ, ಮಡಕೆಯ ಒಳಗೆ ಏನಿದೆ ಎಂದೋ? ಅದರಲ್ಲಿ ನನ್ನ ಹೆಂಡತಿಗೆ ನೀರಡಿಕೆ ಇದೆ' ಎಂದ ಈ ಭೂಪ! ಇವರು ಮಡಕೆಯ ಮುಚ್ಚಳ ತೆರೆದರು. ಮೂಗು ಹಿಡಿದುಕೊಂಡು ಬಗ್ಗಿ ನೋಡಿದರು. ಸುಗಂಧಪೂರಿತ ನೆನೆಸಿದ ಅಡಿಕೆ ಇತ್ತು ಅದರಲ್ಲಿ! ಇವರು ಮುಖ ಮುಖ ನೋಡಿಕೊಂಡರು. ಇರಲಿ, ಪೂಜೆ ಮುಗಿಯಲಿ, ಮತ್ತೆ ನೋಡುವ ಎಂದು ಅರಮನೆಗೆ ಹೋಗಿ ಅಂಗಳದಲ್ಲಿ ಕಾದು ಕುಳಿತರು. ಅರಮನೆಯಿಂದ ಕರೆಯಲು ಬಂದವನಿಗೆ ಪುಲಿಯಾಂಬಲಿ, 'ಪೂಜೆ ಮುಗಿಸಿ, ಚಂದ್ರೋದಯ ಆದ ಕೂಡಲೇ ಬರುತ್ತೇನೆ ಎಂದು ಹೇಳು' ಎಂದ. ಇದನ್ನು ಕೇಳಿದ ರಾಜ ಮತ್ತು ಕಾಯುತ್ತಿದ್ದ ಬ್ರಾಹ್ಮಣರು ಬೆಚ್ಚಿಬಿದ್ದರು. ಆನಂತರ ವಿಜಯದ ನಗುವೊಂದು ಅವರ ಬಾಯಿಂದ ಹೊರಬಿತ್ತು. ಏಕೆಂದರೆ ಅಂದು ಅಮಾವಾಸ್ಯೆ! ಚಂದ್ರೋದಯ ಎಲ್ಲಿಂದ!? ಸುದ್ದಿ ಹರಡಿತು. ಊರ-ಪರವೂರವರೆಲ್ಲಾ ಇವನಿಗೆ

ಶಿಕ್ಷೆಯಾಗುವುದನ್ನು ನೋಡಲು ಬಂದು ನೆರೆದರು.

ಪೂಜೆ ಮುಗಿಯಿತು. ಬೆಳಗ್ಗಿನ ಪ್ರಸಾದ 'ಸ್ವೀಕರಿಸಿ' ಮತ್ತನಾಗಿದ್ದ ಇವ ಈಗ ಮತ್ತೂ ಮತ್ತನಾದ. ಆದರೂ ಮುಂದಾಗುವ ಘಟನೆಗಳ ಬಗ್ಗೆ ಒಂದಿಷ್ಟು ಸುಳಿವು ಇದ್ದೇ ಇತ್ತು. ಪೂಜೆ ಮುಗಿಯುತ್ತಿರುವಂತೆ, ''ಅಮ್ಮಾ, ನಿನ್ನ ಇಚ್ಛೆಯಂತೆ ಎಲ್ಲವೂ ನಡೆಯುತ್ತದೆ. ಒಂದು ಹುಲ್ಲುಕಡ್ಡಿಯೂ ಅದರಂತೆ ಅಲುಗಾಡುತ್ತದೆ ಎಂದು ಹೇಳಿರುವೆ. ಅಂದರೆ, ನಿನ್ನ ಇಚ್ಛೆಯಂತೆ ನಾನು ನಡೆದಿದ್ದೇನೆ. ಈಗ ಹೇಳಿದ ಮಾತನ್ನು ಉಳಿಸಿಕೊಳ್ಳುವುದು ನಿನ್ನ ಧರ್ಮ. ಹಾಲಿನಲ್ಲಾದರೂ ಹಾಕು, ನೀರಿನಲ್ಲಾದರೂ ಹಾಕು!'' ಎಂದು ದೀರ್ಘದಂಡ ನಮಸ್ಕಾರ ಹಾಕಿ, ಎದ್ದು ಅರಮನೆಯತ್ತ ಹೊರಟ.

ಇವನು ಮಹಾದ್ವಾರ ದಾಟಿ ಒಳಗೆ ಕಾಲಿಡುತ್ತಿರುವಂತೆ ಆಕಾಶದಲ್ಲಿ ಚಂದ್ರೋದಯವಾಯಿತು! ಕಾದು ಕುಳಿತಿದ್ದವರು ಬೆರಗಾಗಿ ನೋಡುತ್ತಿರುವಂತೆ ಹಾಲಿನ ಮಳೆಯಂಥ ಬೆಳದಿಂಗಳು ಸುರಿಯಿತು. ಇಂಥದ್ದೊಂದು ಚಂದ್ರೋದಯದ ಬೆಳದಿಂಗಳನ್ನು ಹಿಂದೆ ಎಂದೂ ಯಾರೂ ಕಂಡಿರಲಿಲ್ಲ! ಕಾಣಲು ಸಾಧ್ಯವೂ ಇರಲಿಲ್ಲ! ಏಕೆಂದರೆ, ಆಗಸದಲ್ಲಿ ಕಾಣುತ್ತಿದ್ದದ್ದು ಚಂದ್ರೋದಯವೇ ಆಗಿರಲಿಲ್ಲ. ಅದು ತಾಯಿ ಭಗವತಿಯ ಕಿವಿಯ ಓಲೆಯಾಗಿತ್ತು! ಹೀಗೆ ತಾಯಿ ಭಗವತಿ ತನ್ನ ಭಕ್ತನ ಮರ್ಯಾದೆ ಉಳಿಸಿದ್ದಳು!

''ರಾಜಾ ವಿಕ್ರಮಾದಿತ್ಯ, ಇಲ್ಲಿ ನನಗೊಂದು ಸಂದೇಹ ಇದೆ. ಪುಲಿಯಾಂಬಲಿ ಹುಟ್ಟಿನಿಂದ ಬ್ರಾಹ್ಮಣ. ಬ್ರಾಹ್ಮಣ ಮದ್ಯ, ಮಾಂಸ ಉಪಯೋಗಿಸುವುದು ನಿಷಿದ್ಧ. ಆದರೆ, ಇವ ಮದ್ಯವನ್ನು ಪ್ರಸಾದ ಎಂದೇ ಉಪಯೋಗಿಸುತ್ತಿದ್ದ. ಅದರಿಂದಾಗುವ ನಶೆಯ ಸುಖ ಅನುಭವಿಸುತ್ತಿದ್ದ. ಹಾಗೆಂದು ಮಿಕ್ಕ ಬ್ರಾಹ್ಮಣರು ಹೇಳುವುದು ನ್ಯಾಯಬದ್ಧವಾಗಿಯೇ ಇತ್ತು. ಹಾಗಿರುವಾಗ ಭಗವತಿ ಇವನ ಬೆಂಗಾವಲಿಗೆ ನಿಂತದ್ದು ಯಾಕೆ? ಇದರಿಂದ ಮುಂದೆ ಬರುವ ಜನಾಂಗಕ್ಕೆ ಸ್ವೇಚ್ಛೆಯ ಪಾಠದ ತಪ್ಪು ಕಲ್ಪನೆ ಬಾರದೇ? ಉತ್ತರಿಸು'' ಎಂದಿತು ಬೇತಾಳ.

ವಿಕ್ರಮಾದಿತ್ಯ ಉತ್ತರಿಸಿದ, ''ಅಯ್ಯಾ ಬೇತಾಳ, ಇದಕ್ಕೆ ಉತ್ತರ ಸರಳ. ಭಕ್ತಿಗೆ ಎಂಥ ಶಕ್ತಿ ಇದೆ ಎಂದರೆ, ಅದು ವಸ್ತುವಿನ ಅಸಲಿ ಅಸ್ತಿತ್ವವನ್ನೇ ಅದಲುಬದಲು ಮಾಡಬಹುದು. ಅದಮ್ಯ ಭಕ್ತಿ ಎಂದರೆ, ಅದಮ್ಯ ಮನೋಬಲ. ಅದು ಪರಮ ಸಮರ್ಪಣಾಭಾವ. ನಂಬಿಕೆಗಳು ಒಂದಾದಾಗ ಏನನ್ನು ಬೇಕಾದರೂ ಬದಲಿಸಬಹುದು. ಒಂದು ವೇಳೆ ಭಗವತಿ ಅಮಾವಾಸ್ಯೆಯನ್ನು ಪೌರ್ಣಮೆಯಾಗಿ ಬದಲಿಸದೇ ಇದ್ದರೆ, ಅಲ್ಲಿ ನೆರೆದವರ ಮನದಲ್ಲಿ ಇರಬಹುದಾದ ಭಕ್ತಿಯನ್ನು ತರಿದುಹಾಕಬಹುದಾಗಿತ್ತು. ಇಂಥ ಮಹಾನ್ ಭಕ್ತ ಪುಲಿಯಾಂಬಲಿಯನ್ನೇ ಭಗವತಿ ಕೈಬಿಟ್ಟಳು ಎಂದಾದರೆ, ನಮ್ಮ ಗತಿ ಏನು ಎಂಬ ನಾಸ್ತಿಕ ಭಾವ ಬರಬಹುದಾಗಿತ್ತು. ಭಕ್ತರ ಅಧೀನಳು ಭಗವತಿ. ಹೀಗೆ ಅವಳು ತನ್ನ ಗೌರವ ಉಳಿಸಿಕೊಂಡಳು. ಜಗತ್ತಿನಲ್ಲಿ ಭಕ್ತಿಗೆ ಮಿಗಿಲಾದದ್ದು ಏನೂ ಇಲ್ಲ ಎಂದು ಸಾರಿದಳು!'' ಎಂದ.

ಕೂಡಲೇ, 'ಹೌದು' ಎನ್ನುತ್ತಾ ಶವ ಮಾಯವಾಯಿತು!

ಮಂಡೂರಾಯನ ಸಾಹಸ

• ಚಿತ್ರ-ಕಥೆ: ಟಿ.ಜಿ.

ಬಂಗಾರದ ಕಳ್ಳ – ಭಾಗ 2

*ನೀವು ಓದಿದ್ದು: **ಬಂಗಾರದ ಅಂಗಡಿಯವನು ಮಂಡೂರಾಯನನ್ನು ಹಿಡಿದುಕೊಂಡ.***


ಗುಂಡಣ್ಣ! ಬಾ!ಬಾ!
ನಮ್ಮ ಅಂಗಡಿಯ ಬಂಗಾರ ಕಳವಾಗಿದೆ. ಈ ಹುಡುಗ ಕಳ್ಳನೊಡನೆ ಸೇರಿದ್ದಾನೆ.
ನಿನ್ನ ತಲೆ! ಬಿಡೋ ಅವನನ್ನು!
ಇವನು ಕಳ್ಳ ಅಲ್ಲ ಮಂಡೂರಾಯ! ನಮಗೆ ನೂರಾರು ಕಳ್ಳರನ್ನು ಹಿಡಿದು ಕೊಟ್ಟಿದ್ದಾನೆ ಗೊತ್ತಾ?
ಅ್ಞಾ!?
ಠಾಣೆಗೆ ಬಂದು ರಿಪೋರ್ಟು ಬರೆಯಿಸು. ಕಳ್ಳರನ್ನು ಹಿಡಿಯೋ ಕೆಲಸ ನಿನ್ನದಲ್ಲ, ಪೊಲೀಸರದ್ದು!






ಮಂಡೂರಾಯ ಬಳ್ಳಿ ಎಸೆದು ಕಳ್ಳನನ್ನು ಎಳೆಯತೊಡಗಿದ...
ಅ್ಞೂ ss! ಮೂರ್ಖ! ಜೋರಾಗಿ ಎಳೆಯೋ!
ಅ್ಞೂss! ಮೇಲೆ ಬನ್ರೀ!
ಕೊನೆಗೂ ಅವನು ಮೇಲೆ ಬಂದಾಗ-
ಮೂರ್ಖ! ಎಲ್ಲಿ ಹೋದರೂ ನೀನು ವಕ್ಕರಿಸುತ್ತಿದ್ದೀ!
ನಿನ್ನಿಂದಾಗಿ ಎಲ್ಲ ಹಾಳಾಯ್ತು. ನನ್ನ ಕೆಲಸ ಕೆಟ್ಟಿತು. ನನ್ನ ಕಷ್ಟದ ಸಂಪಾದನೆ ಹೋಯ್ತು! ನಿನ್ನನ್ನು -
ಅ್ಞೂ?
ಅಯ್ಯಮ್ಮಾ!
ಧಡ್!

ಅಯ್ಯಮ್ಮಾ!
ಸುಯ್ಯೋ!!
ಸುಯ್ಯ್!!!
ಧೊಪ್!!
?!!!
ನಿಮ್ಮ ಚೀಲ ಇಲ್ಲಿದೇರೀ!
?!!
ಎಲ್ಲಿ? ಎಲ್ಲಿ?
ಕೊಡು! ಇಲ್ಲಿ ಕೊಡು!
ಲ್ಲೂ!
ಮರಕ್ಕೆ ಸಿಕ್ಕಿ ಬಿದ್ದಿದೇರೀ!
ಎಳೆದಾಟದಲ್ಲಿ ರೆಂಬೆ ಮುರಿಯಿತು.
ಲಟಾರ್!!
ಧಡಾಂಮ್!!
ಅಯ್ಯಮ್ಮಾ!
ಏಳ್ರೀ, ನಿಮ್ಮ ಚೀಲ ಸಿಕ್ತು ನೋಡಿ!
ಎಲಾ ಇವರ! ನಿದ್ದೆ ಹೋಗಿದ್ದಾರೆ!
ಶಹಬ್ಬಾಸ್ ಮಂಡೂರಾಯ!
ನಾನು ಮೊದಲೇ ಹೇಳಿಲ್ವಾ? ನಮ್ಮ ಮಂಡೂರಾಯ ಎಂತೆಂಥಾ ಕಳ್ಳರನ್ನು ಕೂಡ ಹಿಡಿದು ಕೊಡುತ್ತಾನೆ!
ನನ್ನ ಬಂಗಾರ!
ಹಾಗೇ–
ನನ್ನ ಅಂಗಡಿಗೆ ಬಾ, ನಿನಗೊಂದು ಬಹುಮಾನ ಕೊಡುತ್ತೇನೆ.
ಬಹುಮಾನ ನೀವೇ ಇಟ್ಕೊಳ್ರೀ!
ಆ ಹಣದಲ್ಲಿ ನಿಮ್ಮ ಅಂಗಡಿಗೊಂದು ಗಟ್ಟಿ ಬೀಗ ಹಾಕಿ!
ಇನ್ನೊಮ್ಮೆ ಬಂಗಾರ ಕಳ್ಳತನ ಆದರೆ ನನ್ನನ್ನು ಕೇಳಲು ಬರಬೇಡಿ!
ಮುಂದಿನ ವಾರ
ಮಂಡೂರಾಯನ ಹೊಸ ಸಾಹಸ

ಸಾಂಪ್ರದಾಯಿಕ ಸೊಬಗಿನ ಸುರ ಸುಂದರ ಉಡುಗೆಗಳು

ಟಾಪ್ ಟೆನ್ ಸರಣಿ

❑ಚಿನ್ಮಯ್

ಪೌರಸ್ಯ ನಾರಿಯರ ಸುಂದರ ಉಡುಗೆಗಳು.

''ಫ್ಯಾಶನ್ ಮಾಸಿಹೋಗುತ್ತದೆ, ಸಂಪ್ರದಾಯ ಮಾತ್ರ ಶಾಶ್ವತವಾಗಿ ಉಳಿಯುತ್ತದೆ'' ಎಂದು ಫ್ಯಾಶನ್ ಗುರುಗಳು ಹೇಳುತ್ತಾರೆ. ಇವರು ಹೇಳುವುದು ಉಡುಗೆಗಳ ಬಗ್ಗೆ.

ಉಡುಗೆ – ತೊಡುಗೆಗಳ ನವೀನ ಫ್ಯಾಶನ್ ಇಂದು ಬರುತ್ತದೆ, ನಾಳೆ ಮಾಯವಾಗುತ್ತದೆ. ಆದರೆ ಸಾಂಪ್ರದಾಯಿಕ ಉಡುಗೆಗಳ ಆಕರ್ಷಣೆ ಮಾತ್ರ ಎಂದಿಗೂ ಮಾಸಿಹೋಗುವುದಿಲ್ಲ. ಯಾಕೆಂದರೆ ಇವು ಬರೆಯ ಬಟ್ಟೆ ಅಥವಾ ವಿನ್ಯಾಸಗಳಲ್ಲ ಇವುಗಳ ಹಿಂದೆ ಶತಮಾನಗಳ ಇತಿಹಾಸ ಇರುತ್ತದೆ, ಆಯಾ ಪ್ರದೇಶದ ಸಮೃದ್ಧ ಸಂಸ್ಕೃತಿಯ ಝಲಕ್ ಇರುತ್ತದೆ.

ಸಾಂಪ್ರದಾಯಿಕ ಉಡುಗೆಗಳು ಆಯಾ ದೇಶದ ಜನರ ಇತಿಹಾಸ ಮತ್ತು ಸಂಪ್ರದಾಯಗಳಿಗೆ ಕನ್ನಡಿ ಹಿಡಿಯುತ್ತವೆ. ಪರಂಪರೆ, ಸ್ವಾಭಿಮಾನ, ಕಲಾಕಾರರ ನೈಪುಣ್ಯ, ಇತಿಹಾಸದ ಪ್ರಭಾವ, ಜನರು ಪ್ರಕೃತಿ ಮತ್ತು ಹವಾಮಾನಕ್ಕೆ ಹೊಂದಿಕೊಂಡ ವಿಧಾನ – ಇವೆಲ್ಲ ಸೇರಿ ಆಯಾ ಪ್ರದೇಶದ ವಿಶಿಷ್ಟ ಉಡುಗೆ ತೊಡುಗೆಗಳು ಸೃಷ್ಟಿಯಾಗುತ್ತವೆ.

''ಆಧುನಿಕ ಬಟ್ಟೆ ತೊಟ್ಟಾಕ್ಷೆ ಮಾಡೆಲ್‌ನಂತೆ ಕಾಣಿಸಬಹುದು. ಆದರೆ ಸಾಂಪ್ರದಾಯಿಕ ಉಡುಗೆಯನ್ನು ತೊಟ್ಟಾಕ್ಷೆ ಒಂದು ನಡೆದಾಡುವ ಕವಿತೆಯಾಗಿರುತ್ತಾಳೆ'' ಎಂದು ಫ್ಯಾಶನ್‌ಪ್ರಿಯರು ಹೇಳುವುದು ಇದಕ್ಕೇ.

ಜಗತ್ತಿನ ಸುತ್ತ ಎಲ್ಲ ದೇಶಗಳಲ್ಲಿ ಅಲ್ಲಿನದ್ದೇ ಆದ ಒಂದು ವಿಶಿಷ್ಟ ಸಾಂಪ್ರದಾಯಿಕ ಉಡುಗೆ ಇರುತ್ತದೆ. ಇವುಗಳಲ್ಲಿ ಕೆಲವು ಉಡುಗೆಗಳು ತಮ್ಮ ಅಪೂರ್ವ ಮಾಟ, ಲಾವಣ್ಯ, ಲಾಲಿತ್ಯದಿಂದ ದೇಶ, ಕಾಲಗಳನ್ನು ದಾಟಿ ಜಗತ್ತಿನ ಎಲ್ಲೆಡೆ ಜನಪ್ರಿಯವಾಗುತ್ತವೆ. ಇಂಥ ಸಾಂಪ್ರದಾಯಿಕ ಉಡುಗೆಗಳ ಟಾಪ್ 10 ಯಾದಿ ಇದು.

1 ಸೀರೆ: ಅನಂತ ವೈವಿಧ್ಯಗಳ ಮೋಹಕ ತೊಡುಗೆ

ಜಗತ್ತಿನ ಅತ್ಯಂತ ಸುಂದರ ಉಡುಗೆಗಳಲ್ಲಿ ಸೀರೆ ನಂ. ವನ್ ಸ್ಥಾನ ಪಡೆದಿದೆ. ಇದರಷ್ಟು ಸುಂದರ, ರೋಮಾಂಚಕ ಉಡುಗೆ ಬೇರೊಂದಿಲ್ಲ.

ಸೀರೆ ನಾರಿಯ ಮೈಮಾಟ ಎದ್ದು ಕಾಣಿಸುವಂತೆ ಮಾಡುವುದಷ್ಟೇ ಅಲ್ಲ ಅವಳ ಮಾದಕತೆಯನ್ನು ಕೂಡ ಪ್ರತಿಬಿಂಬಿಸುತ್ತದೆ. ಇದರ ಜೊತೆಗೆ ಗಾಂಭೀರ್ಯ, ಅಂತಸ್ತು, ಸಂಸ್ಕೃತಿ ಮತ್ತು ಸಂಪ್ರದಾಯಗಳನ್ನು ಕೂಡ ಎತ್ತಿ ತೋರಿಸುವ ಸುರಸುಂದರ ಉಡುಗೆ ಇದು..

ಅಪ್ಪಟ ಭಾರತೀಯ ಸಂಸ್ಕೃತಿಯ ಈ ಪೋಷಾಕಿನ ಆಕರ್ಷಣೆ ಎಷ್ಟಿದೆ ಎಂದರೆ, ವಿದೇಶೀಯರೂ ಇದಕ್ಕೆ ಮರುಳಾಗುತ್ತಾರೆ, ಜಗತ್ತಿನ ಸುಪ್ರಸಿದ್ಧ ಫ್ಯಾಶನ್ ಡಿಸೈನರ್‌ಗಳೂ ಇದರಲ್ಲಿ ಕೈಯಾಡಿಸುತ್ತಾರೆ.

ಕಚ್ಚಾ ನಿವಿ, ಸೀದಾ ಪಲ್ಲೂ, ಫಾ ನೆಕ್, ಮೇಖಿಲಾ, ನೌವಾರಿ– ಹೀಗೆ ಸೀರೆ ಉಡುವ ಸಾಂಪ್ರದಾಯಿಕ ಶೈಲಿಗಳಲ್ಲಿ ಹಲವು ವೈವಿಧ್ಯಗಳಿವೆ. ಹೆಸರುಗಳು ಮಾತ್ರವೇ ಅಲ್ಲ ಇವುಗಳ ರೂಪಮಾಧುರ್ಯವೂ ಅದ್ವಿತೀಯ, ಅಲೌಕಿಕ. ಒಂದೊಂದು ಶೈಲಿಯೂ ಮೋಹಕ, ಆಕರ್ಷಕ.

ವಾಸ್ತವದಲ್ಲಿ ಉಡುಗೆಗಳ ಇತಿಹಾಸ ಆರಂಭವಾದದ್ದೇ ಭಾರತದಲ್ಲಿ. ಪಾಶ್ಚಾತ್ಯರು ಚರ್ಮ, ತೊಗಟೆಗಳಿಂದ ಮೈಮುಚ್ಚುತ್ತಿದ್ದ ಕಾಲದಲ್ಲಿ ಭಾರತೀಯರು ನೇಯ್ದ ಬಟ್ಟೆಗಳನ್ನು ತೊಡುತ್ತಿದ್ದರು ಎಂದರೆ ಆಶ್ಚರ್ಯವಾಗದೆ?

ಭಾರತದಲ್ಲಿ ಕ್ರಿಸ್ತಪೂರ್ವ ಐದನೆಯ ಸಹಸ್ರಮಾನದಲ್ಲೇ ಹತ್ತಿ ಬೆಳೆ ಆರಂಭವಾಗಿತ್ತು. ಬಟ್ಟೆ ನೇಯುವ ಕಲೆ ಆವಿಷ್ಕಾರವಾದದ್ದೇ ಭಾರತದಲ್ಲಿ. ಕ್ರಿಸ್ತಪೂರ್ವ 2450ರ ಸುಮಾರಿಗೆ ರೇಷ್ಮೆ ಬಟ್ಟೆ ತಯಾರಿಸುವ ತಂತ್ರಜ್ಞಾನ ಕೂಡ ಭಾರತೀಯರು ಕಲಿತಿದ್ದರು. ಬಟ್ಟೆಗೆ ಬಣ್ಣ ಕೊಡುವ ಕಲೆಯನ್ನು ಕೂಡ ಭಾರತೀಯರು ಸಾವಿರಾರು ವರ್ಷಗಳ ಹಿಂದೆಯೇ ಸಾಧಿಸಿದ್ದರು. ಕ್ರಿಸ್ತಪೂರ್ವ 2800ರ ಸುಮಾರಿಗೆ ಪ್ರಾಚೀನ ಸಿಂಧೂ ನಾಗರಿಕತೆಯ ಕಾಲದಲ್ಲೇ ಸೀರೆಯ ಮಾದರಿಯ ಉಡುಗೆ ಧರಿಸುತ್ತಿದ್ದರು ಎಂದು ಹೇಳುತ್ತಾರೆ ಇತಿಹಾಸಜ್ಞರು.

ಸೀರೆ: ಅನಂತ ವೈವಿಧ್ಯಗಳ ಮೋಹಕ ತೊಡುಗೆ.

ಸೀರೆ, ಸೆಲ್ವಾರ್, ಕಿಮೋನೋ, ಕೆಬಾಯಾ... ಜಗತ್ತಿನ ಹೆಚ್ಚಿನ ದೇಶಗಳಲ್ಲಿ ಅಲ್ಲಿನವೇ ಆದ ವಿಶಿಷ್ಟ ಸಾಂಪ್ರದಾಯಿಕ ಉಡುಗೆಗಳು ಇರುತ್ತವೆ. ಆಯಾ ದೇಶದ ಸಂಸ್ಕೃತಿ, ಚರಿತ್ರೆ ಮತ್ತು ಹವಾಮಾನದ ಆಧಾರದಲ್ಲಿ ಕಾಲಾಂತರದಲ್ಲಿ ರೂಪುಗೊಂಡ ಉಡುಗೆಗಳಿವು. ಹಾಗೆಂದೇ ಇವು ಅಲ್ಲಿನ ಸಾಂಸ್ಕೃತಿಕ ಪ್ರತೀಕಗಳಾಗಿರುತ್ತವೆ, ಕಲಾವೈಭವದ ಅಭಿವ್ಯಕ್ತಿಯಾಗಿರುತ್ತವೆ, ಚರಿತ್ರೆಯ ಪರಿಚಯ ಮಾಡಿಕೊಡುವ ಕೊಡುಗೆಗಳಿರುತ್ತವೆ. ಕಸೂತಿ, ಬಣ್ಣ, ಅಲಂಕಾರಗಳ ಆಕರ್ಷಣೆ, ಧರಿಸಿದ ವ್ಯಕ್ತಿಯ ಘನತೆ, ಗೌರವ ಅಥವಾ ಮೈಮಾಟವನ್ನು ಎತ್ತಿ ತೋರಿಸುವ ಕೌಶಲ ಇವೆಲ್ಲ ಈ ಉಡುಗೆಗಳ ಮೌಲ್ಯವನ್ನು ನಿರ್ಧರಿಸುತ್ತವೆ. ಆಯಾ ದಿರಿಸನ್ನು ತೊಟ್ಟವರ ಅಂತಸ್ತು, ಘನತೆ, ಕುಲಗೌರವಗಳ ಪರಿಚಯ ಮಾಡುವ ಉಡುಗೆಗಳೂ ಇವೆ. ಸೀರೆ, ಕಿಮೋನೋ ಮುಂತಾದ ಕೆಲವು ಸಾಂಪ್ರದಾಯಿಕ ಉಡುಗೆ- ತೊಡುಗೆಗಳು ದೇಶಗಳ ಗಡಿದಾಟಿ ಜಗತ್ತನ್ನೇ ಮರುಳು ಮಾಡಿವೆ. ಆಧುನಿಕ ಫ್ಯಾಶನ್‌ಗೂ ಸವಾಲೊಡ್ಡುವ ಅಪೂರ್ವ ಉಡುಗೆಗಳಿವು. ಇಂಥ ಆಕರ್ಷಕ, ಸುಂದರ ಸಾಂಪ್ರದಾಯಿಕ ಉಡುಗೆಗಳನ್ನು ಕುರಿತ ಟಾಪ್ ಟೆನ್ ಯಾದಿ ಇದು...

ಋಗ್ವೇದದ ಮಂತ್ರಗಳಲ್ಲಿ 'ಶಾಟಿಕಾ' ಎಂಬ ಬಟ್ಟೆಯ ಉಲ್ಲೇಖ ಬರುತ್ತದೆ. ಬೌದ್ಧರ ಜಾತಕಕಥೆಗಳಲ್ಲಿ ಕೂಡ ಶಾಟಿಕಾ/ಸಾಟಿಕಾ ಕಾಣಿಸಿಕೊಳ್ಳುತ್ತದೆ. ಈ ಶಬ್ದ ಪ್ರಾಕೃತ ಭಾಷೆಯಲ್ಲಿ 'ಸಾಡೀ' ಎಂದಾಗಿ ಈಗ ಸಾರಿ, ಸೀರೆ ಎಂದಾಗಿದೆ.

ಸೀರೆ ಬರೇ ಒಂದು ಉದ್ದದ ಬಟ್ಟೆ. ಈ ಬಟ್ಟೆಯನ್ನು ತೊಡುವುದರಲ್ಲೇ ಇದೆ ಆಕರ್ಷಣೆ. ಸೊಂಟದ ಸುತ್ತ ಸೀರೆ ಸುತ್ತಿ ನೆರಿಗೆ ಕಟ್ಟಿ ಎದೆಯ ಮೇಲೆಳೆದು ಮೈಮಾಟ ಎದ್ದು ತೋರಿಸುವಂತೆ ಮಾಡುವುದೂ ಒಂದು ಕಲೆಯೇ ಆಗಿದೆ.

ಸೀರೆ ಎಷ್ಟು ಪರಿಪೂರ್ಣ ಮತ್ತು ಶ್ರೀಮಂತ ದಿರಿಸು ಎಂದರೆ, ಇದರ ಮುಂದೆ ಸ್ತ್ರೀಯರ ಬೇರೆಲ್ಲ ಉಡುಗೆಗಳು ಸಪ್ಪೆಯಾಗುತ್ತವೆ. ಭಾರತದಲ್ಲಿ ಆಧುನಿಕ ಫ್ಯಾಶನ್ ಉಡುಗೆ ಉದ್ಯಮ ಪಾಶ್ಚಾತ್ಯ ದೇಶಗಳಷ್ಟು ದೊಡ್ಡದಾಗಿ ಯಾಕೆ ಬೆಳೆದಿಲ್ಲ ಎನ್ನುವುದಕ್ಕೆ ಕಾರಣ ಸೀರೆ. ಸೀರೆಯ ಆಕರ್ಷಣೆ, ಮಾದಕತೆ, ಮಿರುಗಿನ ಮುಂದೆ ವಿಶ್ವದ ಯಾವ ಉಡುಗೆಯೂ ಸಾಟಿಯಲ್ಲ. ಸೀರೆಗಳಲ್ಲಿ ಸಾವಿರ ಸಾವಿರ ವಿಧ, ಇದನ್ನು ಉಡುವುದರಲ್ಲೇ ನೂರೆಂಟು ವಿಧ ಇರುವಾಗ ಎರವಲು ಫ್ಯಾಶನ್ ನಮಗೇಕೆ ಬೇಕು?

ಭಾರತದಲ್ಲಿ ಮಾತ್ರವೇ ಅಲ್ಲ ಪಾಕಿಸ್ತಾನ, ನೇಪಾಳ, ಬಾಂಗ್ಲಾದೇಶ, ಶ್ರೀಲಂಕಾ, ಮಲೇಶ್ಯಾ, ಸಿಂಗಾಪುರಗಳಲ್ಲಿ ಜಯಭೇರಿ ಬಾರಿಸಿ ಇದೀಗ ಪಾಶ್ಚಾತ್ಯ ಲಲನೆಯರ ಮನ ಮೋಹಿಸುತ್ತಿದೆ ಸೀರೆ.

'ಶಾರೀ' ಬಾಂಗ್ಲಾದೇಶದ ರಾಷ್ಟ್ರೀಯ ಉಡುಪು. ಢಾಕಾ ಜಮ್ದಾನಿ (ಕೈಮಗ್ಗದ 'ಶಾರೀ') ಇಲ್ಲಿನ ಜನಪ್ರಿಯ ಸೀರೆ. ಪಾಕಿಸ್ತಾನದಲ್ಲಿ ಸೀರೆ ಶ್ರೀಮಂತಿಕೆ, ಹಿರಿತನ ಮತ್ತು ಗೌರವದ ಸಂಕೇತವಾಗಿದೆ.

ನೇಪಾಳದಲ್ಲೂ ನಾರಿಯರ ಸಾಮಾನ್ಯ ಉಡುಗೆ ಸೀರೆ. ಇಲ್ಲಿ ಹಾಕು ಪತಾಶೀ ಎಂಬ ಶೈಲಿಯಲ್ಲಿ ಸೀರೆ ಉಡುತ್ತಾರೆ. ಬರ್ಮಾ, ಮಲೇಶಿಯಾ, ಫಿಲಿಪ್ಪೀನ್ಸ್, ಸಿಂಗಾಪುರ ದೇಶಗಳಲ್ಲಿ ಸೀರೆಯನ್ನು ಹೋಲುವ ಬಟ್ಟೆಯಿಂದ ಮೈ ಮುಚ್ಚಿಕೊಳ್ಳುತ್ತಾರೆ.

ಶ್ರೀಲಂಕೆಯ ಲಲನೆಯರು ಹಲವು ಶೈಲಿಗಳಲ್ಲಿ ಸೀರೆ ಉಡುತ್ತಾರೆ. ಕಾಂಡಿ ಪಟ್ಟಣದಲ್ಲಿ ಸುಪ್ರಸಿದ್ಧವಾಗಿರುವ ಕಾಂಡಿ ಶೈಲಿಯ ಸೀರೆ ಶ್ರೀಲಂಕಾದ ರಾಷ್ಟ್ರೀಯ ಉಡುಗೆಯಾಗಿದ್ದು, ಶ್ರೀಲಂಕಾ ಏರ್‌ಲೈನ್ಸ್‌ನ ಏರ್ ಹೋಸ್ಟೆಸ್‌ಗಳ ಯುನಿಫಾರ್ಮ್ ಕೂಡ ಆಗಿದೆ.

2 ಕಿಮೋನೋ: ಜಪಾನ್‌ನ ಕಲಾತ್ಮಕ ಉಡುಗೆ

ಕಿಮೋನೋ ಜಪಾನಿನ ಸಾಂಪ್ರದಾಯಿಕ ಉಡುಗೆ. ಜಗತ್ತಿನ ಅತ್ಯಂತ ಕಲಾತ್ಮಕ ಮತ್ತು ಆಕರ್ಷಕ ದಿರಿಸುಗಳಲ್ಲಿ ಭಾರತದ ಸೀರೆಗೆ ನಿಕಟ ಸ್ಪರ್ಧೆ ನೀಡುತ್ತದೆ ಕಿಮೋನೋ.

ಕಿಮೋನೋ ಜಪಾನಿನ ಸಂಸ್ಕೃತಿ ಮತ್ತು ಕಲೆಯ ಪ್ರತೀಕ. ದೇಹದ ಸುತ್ತ ಸುಂದರವಾಗಿ ಸುತ್ತಿಕೊಳ್ಳುವ ಕಿಮೋನೋ ಬರೇ ಉಡುಗೆಯಲ್ಲ, ಒಂದು ಕಾವ್ಯ ಎಂದು ಹೇಳುತ್ತಾರೆ ಜಪಾನೀಯರು. ಇದರ ಪ್ರತಿಯೊಂದು ಮಡಿಕೆ, ಬಣ್ಣ, ಚಿತ್ರಗಳಿಗೆ ಅರ್ಥ ಹೇಳುತ್ತಾರೆ.

ಕಿಮೋನೋ ಎಂದರೆ ಜಪಾನೀ ಭಾಷೆಯಲ್ಲಿ 'ತೊಡುವ ವಸ್ತು'. ಆದರೆ ಶತಮಾನಗಳ ಕಾಲಮಾನದಲ್ಲಿ 'ಕಿಮೋನೋ' ಎಂದರೆ ಒಂದು ಸಂಕೀರ್ಣ ಸಾಂಸ್ಕೃತಿಕ ಭಾಷೆಯೇ ಆಗಿ ಬೆಳೆದಿದೆ. ಆಧುನಿಕ ಫ್ಯಾಶನ್‌ನಂತೆ ಕಿಮೋನೋ ಉಟ್ಟು ಎಸೆಯುವ ಬಟ್ಟೆಯಲ್ಲ. ಇದರ ಹಿಂದೆ ತಾಳ್ಮೆ ಇದೆ, ಕಲೆ ಇದೆ, ಪ್ರಕೃತಿಯೊಡನೆ ಸಾಮರಸ್ಯ ಇದೆ.

ಕಿಮೋನೋ ಜಪಾನ್‌ನಲ್ಲಿ ಮೊತ್ತಮೊದಲು ಕಾಣಿಸಿಕೊಂಡದ್ದು ಕ್ರಿಸ್ತಶಕ 800ರ ಸುಮಾರಿಗೆ. ಆಗಿನ ರಾಜಸ್ಥಾನದಲ್ಲಿ ರಾಜಪುರುಷರು ಬಣ್ಣದ ದಿರಿಸುಗಳನ್ನು ಧರಿಸಲು ಆರಂಭಿಸಿದ್ದರು. ಮುಂದೆ 'ಇಡೋ' ಎಂಬ

ಕಿಮೋನೋ ಧರಿಸಿದ ಜಪಾನೀ ತರುಣಿಯರು.

ಸಾಮ್ರಾಜ್ಯದ ಕಾಲದಲ್ಲಿ ಶ್ರೀಮಂತ ವರ್ತಕರು ಮತ್ತು ಸಮುರಾಯಿ ಕುಟುಂಬಗಳು ಕಿಮೋನೋ ತಯಾರಿಕೆಯನ್ನು ಒಂದು ಪರಿಪೂರ್ಣ ಕಲೆಯನ್ನಾಗಿ ಮಾಡಿದ್ದರು. ರೇಷ್ಮೆ ಬಟ್ಟೆಯ ನೇಯ್ಗೆ ಕೈಯಲ್ಲೇ ಕೊಡುವ ಬಣ್ಣ, ಬಂಗಾರದ ಕಸೂತಿ, ಸಂಕೇತಗಳ ಚಿತ್ರ- ಇವೆಲ್ಲ ಸೇರಿ ಕಿಮೋನೋ ಅಂತಸ್ತು ಮತ್ತು ಅಭಿರುಚಿಯ ಪ್ರತೀಕವಾಗಿತ್ತು.

ಇಂದಿಗೂ ಸಾಂಪ್ರದಾಯಿಕ ಕಿಮೋನೋವನ್ನು ತಯಾರಿಸಲು ಕಲಾಕಾರರು ತಿಂಗಳುಗಟ್ಟಲೆ ದುಡಿಯುತ್ತಾರೆ.

ಪ್ರಾಚೀಯ ಕ್ಯೋಟೋ ಮತ್ತು ಎಡೋ (ಇಂದಿನ ಟೋಕಿಯೋ) ಪಟ್ಟಣಗಳಲ್ಲಿ ಕಬುಕಿ (ಜಪಾನ್‌ನ ಸಾಂಪ್ರದಾಯಿಕ ನೃತ್ಯನಾಟಕ) ಕಲಾಕಾರರು ತೊಡುತ್ತಿದ್ದ ಆಕರ್ಷಕ ಕಿಮೋನೋಗಳನ್ನು ಅಲ್ಲಿನ ಫ್ಯಾಶನ್‌ಪ್ರೇಮಿಗಳು ಅನುಕರಿಸುತ್ತಿದ್ದರು. ಅವಿವಾಹಿತೆಯರು ಉದ್ದ ಕೈಯ ಕಿಮೋನೋಗಳನ್ನು ಧರಿಸಿ ಹಬ್ಬ-ಹುಣ್ಣಿಮೆಗಳಲ್ಲಿ ನರ್ತಿಸುವುದು ಜಪಾನ್‌ನ ಸಂಪ್ರದಾಯವಾಗಿತ್ತು.

ಕಿಮೋನೋದಲ್ಲಿ ಕಾಣಿಸುವ ಚಿತ್ರಗಳಿಗೆ ಕೂಡ ಒಂದೊಂದು ವಿಶಿಷ್ಟ ಅರ್ಥ ಇದೆ. ಚೆರಿ ಹೂವಿನ ಚಿತ್ರ ಬದುಕಿನ ಕ್ಷಣಿಕ ಸೌಂದರ್ಯವನ್ನು ಸೂಚಿಸುತ್ತದೆ, ಕೊಕ್ಕರೆಗಳು ದೀರ್ಘಾಯುಷ್ಯವನ್ನು ಸೂಚಿಸುತ್ತವೆ, ಅಲೆಗಳು ಮತ್ತು ಮೇಪಲ್ ಎಲೆಗಳು ಬದಲಾಗುವ ಋತುಗಳನ್ನು ಸೂಚಿಸುತ್ತವೆ.

ಕಿಮೋನೋ ಯಾರು ಬೇಕಾದರೂ ಧರಿಸಬಹುದಾದ ಉಡುಗೆ. ಪುರುಷರಿಗೆ, ಮಹಿಳೆಯರಿಗೆ ಮತ್ತು ಮಕ್ಕಳಿಗೆ ಸೂಕ್ತ ಮಾದರಿಯ ಕಿಮೋನೋಗಳಿವೆ. ಸಂದರ್ಭ, ಋತುಮಾನ, ಧರಿಸುವವರ ವಯಸ್ಸಿಗೆ ತಕ್ಕಂತೆ ಕಿಮೋನೋಗಳ ಶೈಲಿಗಳು ಬದಲಾಗುತ್ತವೆ.

38 ಅಡಿ ಉದ್ದ, 14 ಇಂಚು ಅಗಲದ ಒಂದು ಬಟ್ಟೆಯನ್ನು ಎಂಟು ತುಂಡುಗಳಾಗಿ ಕತ್ತರಿಸಿ ಮಹಿಳೆಯರ ಕಿಮೋನೋವನ್ನು ತಯಾರಿಸಲಾಗುತ್ತದೆ. (ಪುರುಷರು ಮತ್ತು ಸುಮೋಗಳ ಕಿಮೋನೋಗೆ ಇದಕ್ಕಿಂತ ದೊಡ್ಡ ಬಟ್ಟೆ ಬೇಕು)

ಇದರಲ್ಲಿ ಎಲ್ಲೂ ಜಿಪ್, ಹುಕ್ ಅಥವಾ ಬಟನ್‌ಗಳು ಇರುವುದಿಲ್ಲ. ಇದನ್ನು ತೊಡುವುದು ಒಂದು ಸಂಕೀರ್ಣ ಕಲೆ. ಮಕ್ಕಳಿಗೆ ಎಳವೆಯಲ್ಲೇ ಇದರ ಬಗ್ಗೆ ತರಬೇತಿ ನೀಡಲಾಗುತ್ತದೆ.

ಕಿಮೋನೋ ಶತಮಾನಗಳಿಂದ ಜಗತ್ತಿನ ವಿವಿಧೆಡೆಗಳ ಲೇಖಕರಿಗೆ ಮತ್ತು ಕಲಾಕಾರರಿಗೆ ಪ್ರೇರಣೆ ನೀಡುತ್ತದೆ. 'ಸರಳತೆಯಲ್ಲಿಯೂ ಐಷಾರಾಮ ಸಾಧ್ಯವಿದೆ ಎಂದು ಜಗತ್ತಿಗೆ ತೋರಿಸಿಕೊಡುತ್ತದೆ ಕಿಮೋನೋ' ಎಂದು ಒಬ್ಬ ಖ್ಯಾತ ಫ್ಯಾಶನ್ ಡಿಸೈನರ್ ಹೇಳುತ್ತಾರೆ. ಇಂದಿಗೂ ಅಂತಾರಾಷ್ಟ್ರೀಯ ಡಿಸೈನರ್‌ಗಳು ಆಧುನಿಕ ಫ್ಯಾಶನ್‌ಗಾಗಿ ಸಾಂಪ್ರದಾಯಿಕ ಕಿಮೋನೋಗಳಿಂದ ಐಡಿಯಾ ಪಡೆಯುತ್ತಾರೆ.

ಕಿಮೋನೋ ತೊಡುವುದು ಸುಲಭದ ಕೆಲಸವಲ್ಲ. ಹೀಗಾಗಿ ಆಧುನಿಕ ಜಪಾನೀಯರು ದಿನನಿತ್ಯ ಕಿಮೋನೋ ಧರಿಸುವುದಿಲ್ಲ. ಬೇಸಗೆಯ ಉತ್ಸವಗಳ ವೇಳೆ ಜನರು ಯುಕಟಾ ಎಂಬ ಮಾದರಿಯ ಸರಳ ರೆಡಿಮೇಡ್ ಕಿಮೋನೋ ಧರಿಸಬಹುದು. ಮದುವೆ, ಸಾವು ಅಥವಾ ಕಾಲೇಜಿನ ಸಮಾರಂಭಗಳಲ್ಲಿ ಯುವಜನರು ಕಿಮೋನೋ ಧರಿಸುತ್ತಾರೆ. ಗೀಶಾ ಎಂಬ ಸಾಂಪ್ರದಾಯಿಕ ಕಲಾಕಾರ್ತಿಯರು ತಮ್ಮ ವೃತ್ತಿಯ ನಿಯಮದಂತೆ ಕಿಮೋನೋ ಧರಿಸಬೇಕಾಗುತ್ತದೆ. ಸುಮೋ ಪಟುಗಳು ಸುಮೋ ಕಣದ ಹೊರಗೆ ಕಡ್ಡಾಯವಾಗಿ ಕಿಮೋನೋ ಧರಿಸಬೇಕು ಎಂಬ ನಿಯಮ ಇದೆ.

ನೋಡಲು ಸರಳವಾಗಿ ಕಂಡರೂ ಕಿಮೋನೋ ಒಂದು ದುಬಾರಿ ಉಡುಗೆ. ಫ್ಯಾಕ್ಟರಿಯಲ್ಲಿ ತಯಾರಾಗುವ ಕಿಮೋನೋದ ಬೆಲೆ ಸಾವಿರ ಯೆನ್(ಸುಮಾರು 600 ರೂಪಾಯಿ)ಗಳಿಂದ ಆರಂಭವಾದರೆ, ಸಾಂಪ್ರದಾಯಿಕ ಕಲಾಕಾರರು ತಯಾರಿಸುವ ಕಿಮೋನೋದ ಬೆಲೆ ಎರಡು ಲಕ್ಷ ಯೆನ್ (1.2ಲಕ್ಷ ರೂಪಾಯಿ) ತನಕ ಇರುತ್ತದೆ

3 ಹ್ಯಾನ್‌ಬಾಕ್ ಕೊರಿಯನ್ನರ ಹೆಮ್ಮೆಯ ಲಾಂಛನ

ಹ್ಯಾನ್‌ಬಾಕ್ ಉತ್ತರ ಕೊರಿಯಾ ಮತ್ತು ದಕ್ಷಿಣ ಕೊರಿಯಾ ದೇಶಗಳ ಸಾಂಪ್ರದಾಯಿಕ ಉಡುಗೆ. ಮಾಟವಾದ ಗೆರೆಗಳು, ಆಕರ್ಷಕ ಬಣ್ಣ ವಿನ್ಯಾಸಗಳ ಲಾವಣ್ಯ ಇದರದ್ದು.

ಹ್ಯಾನ್‌ಬಾಕ್ ಆಧುನಿಕ ದಿರಿಸುಗಳಂತೆ ಮೈಗೆ ಅಂಟಿರುವುದಿಲ್ಲ. ಇದರ ಸೌಂದರ್ಯ ಇರುವುದು ಸರಳತೆಯಲ್ಲಿ. ದೇಹದ ಸುತ್ತ ಕೋಮಲವಾಗಿ ಹರಿಯುವ ಇದು ತನ್ನದೇ ಸಮತೋಲನ ಮತ್ತು ಶಾಂತ ಗಾಂಭೀರ್ಯ ರೂಪ ತೋರಿಸುತ್ತದೆ.

ಹ್ಯಾನ್‌ಬಾಕ್ ಎರಡು ಸಾವಿರ ವರ್ಷಗಳ ಹಿಂದೆ ಪ್ರಾಚೀನ ಗೋರ್ಯೋ, ಬೇಕ್ಚೆ ಮತ್ತು ಸಿಲ್ಲಾ ರಾಜವಂಶಗಳ ಕಾಲದಲ್ಲಿ ಆರಂಭವಾಗಿತ್ತು. ಶತಮಾನಗಳ ನಡುವೆ ವಾಣಿಜ್ಯ, ರಾಜಸ್ಥಾನದ ಸಂಪ್ರದಾಯಗಳು, ಕನ್‌ಫ್ಯೂಶಿಯಸ್ ಧರ್ಮದ ಪ್ರಭಾವ ಎಲ್ಲ ಸೇರಿ ಹ್ಯಾನ್‌ಬಾಕ್‌ನ ಶೈಲಿ ಪರಿಷ್ಕೃತವಾಗಿತ್ತು. ಆ ಕಾಲದ ಶಿಲ್ಪಗಳು ಮತ್ತು ಭಿತ್ತಿಚಿತ್ರಗಳಲ್ಲಿ ಕಾಣಿಸಿಕೊಳ್ಳುವ ಚಾರಿತ್ರಿಕ ಹ್ಯಾನ್‌ಬಾಕ್ ಮತ್ತು ಆಧುನಿಕ ಹ್ಯಾನ್‌ಬಾಕ್‌ಗಳಿಗೆ ಹೆಚ್ಚು ವ್ಯತ್ಯಾಸವೇನೂ ಕಾಣಿಸುವುದಿಲ್ಲ

ಹ್ಯಾನ್‌ಬಾಕ್‌ನಲ್ಲಿ ಎರಡು ಮುಖ್ಯ ಭಾಗಗಳಿವೆ. ಇದರ ಸ್ಕರ್ಟ್‌ಗೆ ಚೀಮಾ ಎಂದು ಹೆಸರು, ಮೇಲಿನ ಜಾಕೆಟ್‌ಗೆ ಜೊಗೋರಿ ಎಂದು ಹೆಸರು.

ಹ್ಯಾನ್‌ಬಾಕ್ ಅದನ್ನು ಧರಿಸಿದವರ ಸಾಮಾಜಿಕ ಅಂತಸ್ತು, ವಯಸ್ಸು ಮತ್ತು ಪ್ರತಿಷ್ಠೆಯನ್ನು ಸೂಚಿಸುತ್ತದೆ. ವಿಶೇಷ ಸಮಾರಂಭ, ಉತ್ಸವಗಳಿಗೆ ನಿರ್ದಿಷ್ಟ ಶೈಲಿ ಮತ್ತು ಮಾದರಿಯ ಹ್ಯಾನ್‌ಬಾಕ್ ಮಾತ್ರ ತೊಡಬಹುದು.

ಹಿಂದಿನ ಕಾಲದಲ್ಲಿ ಕುಲೀನ ಮಹಿಳೆಯರು ತಮ್ಮ ಬಟ್ಟೆಯ ಬಣ್ಣ ಮತ್ತು ಕಸೂತಿಗಳಲ್ಲಿ ತಮ್ಮ ಮನೋಭಾವವನ್ನು ಸೂಚಿಸುತ್ತಿದ್ದರು. ಆಕರ್ಷಕ ಬಣ್ಣಗಳ ಹ್ಯಾನ್‌ಬಾಕ್ ತೊಟ್ಟವಳು ಮದುವೆಗೆ ತಯಾರಾಗಿದ್ದಾಳೆ ಎಂದು ಅರ್ಥ. ವಿಧವೆಯರು ಬಿಳಿ ಅಥವಾ ತಿಳಿ ಬಣ್ಣದ ಹ್ಯಾನ್‌ಬಾಕ್ ಧರಿಸುತ್ತಿದ್ದರು. ಕೊರಿಯಾದಲ್ಲಿ ಬಿಳಿ ಹ್ಯಾನ್‌ಬಾಕ್‌ಗೆ ವಿಶೇಷ ಗೌರವ ಸಿಗುತ್ತಿತ್ತು. ಬೆಲೆಬಾಳುವ ರೇಷ್ಮೆಬಟ್ಟೆಯ ಬಿಳಿ ಹ್ಯಾನ್‌ಬಾಕ್ ಅಂತಸ್ತು ಮತ್ತು ಘನತೆಯ ಸೂಚಕವಾಗಿತ್ತು.

ರಾಜಮನೆತನದವರು ವೈಭವದ ರೇಷ್ಮೆ ಬಟ್ಟೆಯ ಹ್ಯಾನ್‌ಬಾಕ್ ಧರಿಸುತಿದ್ದರು. ಇದರ ಮೇಲೆ ಡ್ರ್ಯಾಗನ್, ಫೀನಿಕ್ಸ್, ಕೊಕ್ಕರೆ ಇತ್ಯಾದಿ ವಿಶೇಷ ಚಿತ್ರಗಳು ಇರುತ್ತಿದ್ದವು. ಸಾಮಾನ್ಯ ಜನರು ಹತ್ತಿ ಬಟ್ಟೆಯ ಹ್ಯಾನ್‌ಬಾಕ್ ಧರಿಸುತ್ತಿದ್ದರು. ಇದರ ವಿನ್ಯಾಸವೂ ಸರಳವಾಗಿರುತ್ತಿತ್ತು.

ದಕ್ಷಿಣ ಕೊರಿಯಾದ ಸಾಂಪ್ರದಾಯಿಕ ಹ್ಯಾನ್‌ಬಾಕ್ ದಿರಿಸು.

ಹ್ಯಾನ್‌ಬಾಕ್‌ನ ರಂಗುಗಳಲ್ಲೂ ವಿಶೇಷ ಇದೆ. ಕೊರಿಯನ್ ಸಂಸ್ಕೃತಿಯಲ್ಲಿ ನೀಲ, ಕೆಂಪು, ಹಳದಿ, ಬಿಳಿ ಮತ್ತು ಕಪ್ಪು ಬಣ್ಣಗಳ ಮೇಳ ಬ್ರಹ್ಮಾಂಡದ ಸಾಮರಸ್ಯವನ್ನು ಸೂಚಿಸಿದರೆ, ವಧುಗಳು ಧರಿಸುವ ಕೆಂಪು ಚೀಮಾ (ಸ್ಕರ್ಟ್, ಲಂಗ) ಮತ್ತು ಹಸುರು ಜಾಗೋರಿ (ಜ್ಯಾಕೆಟ್) ಐಶ್ವರ್ಯ ಮತ್ತು ಸಂತೋಷವನ್ನು ಸೂಚಿಸುತ್ತದೆ. ಎಳೆಯರ ಜಾಗೋರಿಯ ಉದ್ದ ತೋಳುಗಳಲ್ಲಿ ಕಾಮನಬಿಲ್ಲಿನ ವಿನ್ಯಾಸ ಇರುತ್ತದೆ. ಈ ವಿನ್ಯಾಸ ದುಷ್ಟ ಶಕ್ತಿಗಳನ್ನು ದೂರ ಓಡಿಸುತ್ತದೆ, ಅದೃಷ್ಟ ತರುತ್ತದೆ ಎಂಬ ನಂಬಿಕೆ ಕೊರಿಯನ್ನರಲ್ಲಿ ಇದೆ.

'ಹ್ಯಾನ್‌ಬಾಕ್ ಹೃದಯಕ್ಕೆ ಕನ್ನಡಿ ಹಿಡಿಯುತ್ತದೆ' ಎಂದು ಹಳೆಯ ಕೊರಿಯನ್ ನಾಣ್ನುಡಿ ಹೇಳುತ್ತದೆ. ಹ್ಯಾನ್‌ಬಾಕ್ ಇರುವುದು ಮೈಮಾಟ ತೋರಿಸಲಿಕ್ಕಲ್ಲ, ಗಾಂಭೀರ್ಯ ಮತ್ತು ಲಾಲಿತ್ಯದ ಅಭಿವ್ಯಕ್ತಿ ಇದು. ಹ್ಯಾನ್‌ಬಾಕ್ ತೊಟ್ಟು ನಡೆದಾಗ ಬಟ್ಟೆ ಅಲೆಗಳಂತೆ ಹೊಯ್ದಾಡುತ್ತದೆ, ಇದನ್ನು ತೊಟ್ಟವರಿಗೆ ಶಾಂತ ಮತ್ತು ಕುಲೀನ ವರ್ಚಸ್ಸು ನೀಡುತ್ತದೆ ಎಂದು ಅಲ್ಲಿನವರು ವರ್ಣಿಸುತ್ತಾರೆ.

ಕೊರಿಯನ್ನರ ಪಾಲಿಗೆ ಹ್ಯಾನ್‌ಬಾಕ್ ರಾಷ್ಟ್ರೀಯ ಸ್ವಾಭಿಮಾನದ ಸೂಚಕವಾಗಿದೆ. ಕೊರಿಯಾದ ಯುವಜನಾಂಗೀಯರು ಪಾಶ್ಚಾತ್ಯ ದಿರಿಸುಗಳನ್ನು ತೊಡುತ್ತಾರೆ. ಆದರೆ ಹ್ಯಾನ್‌ಬಾಕ್‌ನ ಆಕರ್ಷಣೆ ಮಾತ್ರ ತಗ್ಗಿಲ್ಲ. ಚಾಂದ್ರಮಾನ ನವವರ್ಷ, ಸುಗ್ಗಿ ಮುಂತಾದ ಸಾಂಸ್ಕೃತಿಕ ಉತ್ಸವಗಳ ವೇಳೆ ಇದನ್ನು ತಪ್ಪದೆ ಧರಿಸುತ್ತಾರೆ. ಇವರು ಚಾರಿತ್ರಿಕ ಅರಮನೆಗಳಿಗೆ ಮತ್ತು ಸ್ಮಾರಕಗಳಿಗೆ ಭೇಟಿ ನೀಡುವಾಗ ಹ್ಯಾನ್‌ಬಾಕ್ ಧರಿಸುವುದು ವಾಡಿಕೆ.

4 ಔಯಾಯ್ ವಿಯೆಟ್ನಾಮ್‌ನ ರಾಷ್ಟ್ರೀಯ ಉಡುಗೆ

(ವಿಯೆಟ್ನಾಂನ ರಾಷ್ಟ್ರೀಯ ಉಡುಗೆಯ ಹೆಸರನ್ನು ಇಂಗ್ಲಿಷ್‌ನಲ್ಲಿ ಬರೆಯುವುದು 'Ao Dai' ಎಂದು. ಆದರೆ ಇದರ ಉಚ್ಚಾರ 'ಔಯಾಯ್'. ಇಲ್ಲಿ 'ಡಿ' ಮೌನವಾಗಿರುತ್ತದೆ.)

ಔಯಾಯ್ ವಿಯೆಟ್ನಾಮ್ ದೇಶದ ಸಂಸ್ಕೃತಿಯ ಪ್ರತೀಕ ಮತ್ತು ರಾಷ್ಟ್ರೀಯ ಗೌರವದ ದಿರಿಸು. ಅಲ್ಲಿನ ಮಹಿಳೆಯರ ಲಾಲಿತ್ಯಕ್ಕೆ ಕಳೆ ನೀಡುವುದೇ ಔಯಾಯ್!

ಉದ್ದಕ್ಕೆ ಇಳಿಯುವ ನಿಲುವಂಗಿ, ಎತ್ತರದ ಕಾಲರ್, ಹಗುರ ಪೈಜಾಮ ಇದರ ಮೂಲ ರೂಪ. 'ಔಯಾಯ್ ಗಾಳಿಯಲ್ಲಿ ನೀರಿನಂತೆ ಸಾಗುತ್ತದೆ, ತೊಟ್ಟವರಿಗೆ ಕಾವ್ಯಮಯ ಲಾವಣ್ಯ ನೀಡುತ್ತದೆ' ಎಂದು ಇದನ್ನು ವರ್ಣಿಸುತ್ತಾರೆ.

ಔಯಾಯ್ ದಿರಿಸು ಆವಿಷ್ಕಾರವಾದದ್ದು 18ನೆಯ ಶತಮಾನದಲ್ಲಿ. ತಮ್ಮ ದೇಶದ ಜನರ ಉಡುಗೆ –ತೊಡುಗೆಗಳು ನೆರೆಹೊರೆಯವರಿಗಿಂತ ವಿಭಿನ್ನವಾಗಿ ಕಾಣಿಸಬೇಕು ಎಂದು ದಕ್ಷಿಣ ವಿಯೆಟ್ನಾಂನ ಗುಯೆನ್ ದೊರೆಗಳು ನಿರ್ಧರಿಸಿದ್ದ ಕಾರಣ ಆಸ್ಥಾನದ ಫ್ಯಾಶನ್ ಕಲಾಕಾರರು ಈ ದಿರಿಸನ್ನು ರೂಪಿಸಿದ್ದರು. ಮುಂದೆ 20ನೆಯ ಶತಮಾನದ ಆರಂಭದಲ್ಲಿ ವಿಯೆಟ್ನಾಂ ಒಂದು ಫ್ರೆಂಚ್ ವಸಾಹತುವಾಗಿದ್ದ ಕಾಲದಲ್ಲಿ ಈ ದಿರಿಸಿಗೆ ಆಧುನಿಕ ರೂಪಾಂತ ಸಿಕ್ಕಿತ್ತು. ಪೌರ್ವ ಸಂಪ್ರದಾಯ ಮತ್ತು ಪಾಶ್ಚಾತ್ಯ ಪ್ರಭಾವಗಳು ಸೇರಿ ಔಯಾಯ್‌ಗೆ ಒಂದು ವಿಶಿಷ್ಟ, ಸುಸಂಸ್ಕೃತ ರೂಪ ಬಂದಿತ್ತು.

ಔದಾಯ್ ಔಯಾಯ್: ವಿಯೆಟ್ನಾಂನ ಕಾವ್ಯಮಯ ದಿರಿಸು.

''ಔಯಾಯ್ ಎಲ್ಲವನ್ನೂ ಮುಚ್ಚುತ್ತದೆ, ಆದರೆ ಯಾವುದನ್ನೂ ಮರೆಮಾಚುವುದಿಲ್ಲ'' ಎಂದು ವಿಯೆಟ್ನಾಂನ ನಾಣ್ನುಡಿ ಹೇಳುತ್ತದೆ. ನಾರೀಮಣಿಯರ ಮೈಮಾಟವನ್ನು ಎತ್ತಿತೋರಿಸುವ ಸರಳ ಸುಂದರ ಉಡುಗೆ ಇದು.

ಶಾಲೆಯ ಹೆಣ್ಣುಮಕ್ಕಳು ಧರಿಸುವ ಔಯಾಯ್ ಸಮವಸ್ತ್ರ ತಾರುಣ್ಯ, ಮುಗ್ಧತೆ ಮತ್ತು ಆಶಾವಾದದ ಸಂಕೇತ ಎನ್ನುತ್ತಾರೆ. ''ಹಾನೋಯ್, ಹೊ ಚಿ ಮಿನ್ಹ್‌ಸಿಟಿ ಮುಂತಾದ ಪಟ್ಟಣಗಳಲ್ಲಿ ಎಳೆ ತರುಣಿಯರು ಮರಗಳ ಕೆಳಗಿನ ದಾರಿಯಲ್ಲಿ ಸೈಕಲ್ ಮೇಲೆ ಸಾಗುವಾಗ ಅವರ ಬಿಳಿ ರೇಶ್ಮೆಯ ಔಯಾಯ್ ರೆಕ್ಕೆಗಳಂತೆ ಅವರ ಹಿಂದೆ ಬೀಸುವುದು ಒಂದು ಎದೆತಣಿಸುವ ದೃಶ್ಯ'' ಎಂದು ಕವಿಗಳು ವರ್ಣಿಸುತ್ತಾರೆ.

20ನೆಯ ಶತಮಾನದ ನಡುವೆ ರಾಜಕೀಯ ಉತ್ಪಾತಗಳ ಕಾಲದಲ್ಲಿ ಔಯಾಯ್ ತೊಡುವುದು ಸಾಂಸ್ಕೃತಿಕ ಅಭಿಮಾನದ ಪ್ರತೀಕವಾಗಿತ್ತು. ಇಂದಿಗೂ ಇದರ ಪ್ರತಿಯೊಂದು ಮಡಿಕೆಯಲ್ಲಿ, ಗಾಳಿಯಲ್ಲಿ ತೇಲುವ ಅಂಚಿನಲ್ಲಿ ವಿಯೆಟ್ನಾಂನ ಆತ್ಮ ಅಡಕವಾಗಿದೆ ಎನ್ನುತ್ತಾರೆ ಅಲ್ಲಿನವರು.

5 ಕೆಬಾಯಾ: ಇಂಡೋನೇಷ್ಯಾ ಮತ್ತು ಮಲೇಷ್ಯಾದ ರಾಜಮರ್ಜಿಯ ದಿರಿಸು

ಕೆಬಾಯಾ ಮೂಲತಃ ಇಂಡೋನೇಷ್ಯಾದ ಸಾಂಪ್ರದಾಯಿಕ ದಿರಿಸು .ಇದು ಮಲೇಷ್ಯಾ, ಸಿಂಗಾಪುರ, ಥಾಯ್ಲೆಂಡ್, ಬ್ರೂನೈ ಮುಂತಾದ ಆಗ್ನೇಯ ಏಷ್ಯಾದ ದೇಶಗಳಲ್ಲಿ ಕೂಡ ಜನಪ್ರಿಯವಾಗಿದೆ. ಸಿಂಗಾಪುರ ಏರ್‌ಲೈನ್ಸ್, ಮಲೇಷ್ಯಾ ಏರ್‌ಲೈನ್ಸ್, ರಾಯಲ್ ಬ್ರೂನೈ ಏರ್‌ಲೈನ್ಸ್, ಗರುಡಾ ಏರ್‌ಲೈನ್ಸ್ ಮುಂತಾದ ಆಗ್ನೇಯ ಏಷ್ಯಾದ ವಿಮಾನಯಾನಗಳಲ್ಲಿ ಗಗನ ಪರಿಚಾರಿಕೆಯರು ಇದನ್ನು ಸಮವಸ್ತ್ರವಾಗಿ ಬಳಸುತ್ತಾರೆ.

ಕೆಬಾಯಾ ಒಂದು ಮೇಲುಡುಗೆ. ತೆಳ್ಳಗಿನ ಅಥವಾ ಹಗುರ ಬಟ್ಟೆಯಲ್ಲಿ ತಯಾರಿಸುವ ಇದರ ಮೇಲೆ ಲೇಸ್ ಅಥವಾ ಕಸೂತಿಯ ಅಲಂಕಾರ ಇರುತ್ತದೆ. ಕೆಳಭಾಗದಲ್ಲಿ ಸಾರೋಂಗ್ ಎಂಬ ಬಟ್ಟೆಯನ್ನು ತೊಟ್ಟುಕೊಳ್ಳುತ್ತಾರೆ. ಸಾರೋಂಗ್ ಎಂದರೆ ಲುಂಗಿಯಂತೆ ಸೊಂಟದ ಸುತ್ತ ಸುತ್ತಿಕೊಳ್ಳುವ ಉಡುಗೆ. ಇದನ್ನು ಬಾಟಿಕ್, ಐಕಟ್ ಮುಂತಾದ ಶೈಲಿಯಲ್ಲಿ ವರ್ಣರಂಜಿತವಾಗಿ ತಯಾರಿಸುತ್ತಾರೆ. ಸಾರೋಂಗ್ ಪುರುಷರು ಮತ್ತು ನಾರಿಯರು ಧರಿಸುವ ಉಡುಗೆ.

ಕೆಬಾಯಾ ಇಂಡೋನೇಷ್ಯಾದಲ್ಲಿ 15ನೆಯ ಶತಮಾನದಲ್ಲಿ ಆರಂಭವಾಯಿತು. ಆರಬ್ಬರ ಅಬಾಯಾ ಎಂಬ ಮೇಲುಡುಗೆ ಇದಕ್ಕೆ ಪ್ರೇರಣೆಯಾಗಿತ್ತು. ಜಾವಾ ದ್ವೀಪದಲ್ಲಿ ಮಜಪಾಹಿತ್ ಸಾಮ್ರಾಜ್ಯದ ಕಾಲದಲ್ಲಿ ಇದು ಮಹಿಳೆಯರ ದಿರಿಸಾಗಿ ಆರಂಭವಾಯಿತು.

ಕೆಬಾಯಾ ತೊಟ್ಟ ಜಾವಾದ ಬಾಲೆಯರು.

ಕೆಬಾಯಾ ತೊಟ್ಟವರಿಗೆ ರಾಜಕಳೆ ಬರುತ್ತದೆ ಎನ್ನುತ್ತಾರೆ. ಆಗ್ನೇಯ ಏಷ್ಯಾದ ದೇಶಗಳ ನಡುವೆ ಇದು ವಿಭಿನ್ನ ರೂಪ ಪಡೆದಿದೆ. ಸರಳ –ಸುಂದರ ಕೆಬಾಯಾ ಬಾಲಿ, ಮಲೇಶ್ಯಾ ಮತ್ತು ಸಿಂಗಾಪುರದ ಆಲಂಕೃತ ಕೆಬಾಯಾ ನ್ಯೂನ್ಯಾ, ತೆಳ್ಳಗಿನ ಬಟ್ಟೆಯ ಕೆಬಾಯಾ ಕರ್ತಿನಿ, ಉದ್ದ ನಿಲುವಂಗಿ ಮತ್ತು ಸೆಲಂಲೆಂದಾಂಗ್(ಶಾಲು) ಸೇರಿಕೊಳ್ಳುವ ಕೆಬಾಯಾ ಪಂಜಾಂಗ್ ಇವುಗಳಲ್ಲಿ ಜನಪ್ರಿಯವಾಗಿದೆ.

6 ಫ್ಲೆಮೆಂಕಾ: ಸ್ಪೇಯ್ನ್‌ನ ರೋಮಾನ್ಸ್

ತ್ರಾಜೆ ಡಿ ಫ್ಲೆಮೆಂಕಾ ಎಂದರೆ ಸ್ಪೇಯ್ನ್ ದೇಶದ ಆ್ಯಂಡಲೂಸಿಯಾ ಪ್ರದೇಶದ ನಾರಿಯರು ಉತ್ಸವಗಳ ಸಮಯದಲ್ಲಿ ಧರಿಸುವ ಸಾಂಪ್ರದಾಯಿಕ ದಿರಿಸು. ಇದರಲ್ಲಿ ಫ್ಲೆಮೆಂಕೋ ನರ್ತಕಿಯರು ತೊಡುವ ಫ್ಲೆಮೆಂಕಾ ಮತ್ತು ಮಹಿಳೆಯರು ದಿನದಲ್ಲಿ ತೊಡುವ ಫ್ಲೆಮೆಂಕಾ ಎಂಬ ಎರಡು ವಿಧಗಳಿವೆ. (ಸ್ಪೇಯ್ನ್‌ನ ಜನಪ್ರಿಯ ನೃತ್ಯ ಮತ್ತು ಕಲೆಗೆ 'ಫ್ಲೆಮೆಂಕೋ' ಎಂದು ಹೆಸರು, ದಿರಿಸಿನ ಹೆಸರು ಫ್ಲೆಮೆಂಕಾ ಎಂದಾಗಿದೆ)

ಈ ದಿರಿಸಿನ ಮೇಲ್ಭಾಗ, ಮೇಲಿನಿಂದ ತೊಡೆಗಳ ಅರ್ಧದ ತನಕ ದೇಹಕ್ಕೆ ಅಂಟಿಕೊಳ್ಳುವಂತೆ ಬಿಗಿಯಾಗಿರುತ್ತದೆ. ಅನಂತರ ಮೊಣಕಾಲಿನ ತನಕ ಹಲವು ಪದರಗಳಲ್ಲಿ ಸುಳಿ ಸುತ್ತುತ್ತದೆ. ಈ ದಿರಿಸಿನಲ್ಲಿ ನಡೆಯುವುದೇ ಕಷ್ಟ, ನರ್ತಿಸುವುದಂತೂ ಅಸಾಧ್ಯವೇ ಸರಿ. ಹೀಗಾಗಿ ನರ್ತಕಿಯರ ಫ್ಲೆಮೆಂಕಾ ದಿರಿಸು ಸೊಂಟದಿಂದ ಕೆಳಗೆ ಅಗಲಕ್ಕೆ ಹರಡುತ್ತದೆ.

ಫ್ಲೆಮೆಂಕಾ ದಿರಿಸು ಆಕರ್ಷಕ ಬಣ್ಣಗಳಲ್ಲಿ ಮತ್ತು ವಿನ್ಯಾಸಗಳಲ್ಲಿ ತಯಾರಾಗುತ್ತದೆ. ಗಾಢ ಕೆಂಪು ಮತ್ತು ಕಪ್ಪು ಬಣ್ಣಗಳ ಸಂಯೋಜನೆಯ ಸಾಂಪ್ರದಾಯಿಕ ಫ್ಲೆಮೆಂಕಾ ಎಲ್ಲಕ್ಕಿಂತ ಹೆಚ್ಚು ಜನಪ್ರಿಯವಾಗಿದೆ. ಸಾಮಾನ್ಯವಾಗಿ ಇದರ ಜೊತೆಗೆ ಹೆಗಲ ಮೇಲೆ ಒಂದು ಶಾಲು ಧರಿಸಿಕೊಳ್ಳುತ್ತಾರೆ. ನರ್ತಕಿಯರು ತಮ್ಮ ಕೂದಲನ್ನು ಬನ್ ರೂಪದಲ್ಲಿ ಕಟ್ಟಿ, ಹೂಗಳಿಂದ ಶೃಂಗರಿಸುತ್ತಾರೆ. ಕೆಲವರು ಅಲಂಕಾರದ ಬಾಚಣಿಗೆಯನ್ನು ಕೂಡ ಸಿಕ್ಕಿಸಿಕೊಳ್ಳುತ್ತಾರೆ. ಇತ್ತೀಚೆಗೆ ಪೋಲ್ಕಾ ಡಾಟ್ (ಚಿಕ್ಕ ಚುಕ್ಕೆ)ಗಳ ಫ್ಲೆಮೆಂಕಾ ಜನಪ್ರಿಯವಾಗಿದೆ.

ಎರಡು ಶತಮಾನಗಳ ಹಿಂದಿನ ಕಾಲದಲ್ಲಿ ಇದು ರೋಮಾ (ಜಿಪ್ಸಿ) ಎಂಬ ಅಲೆಮಾರಿ ಸಮುದಾಯದವರ ಸಾಂಪ್ರದಾಯಿಕ ದಿರಿಸಾಗಿತ್ತು. ಫ್ಲೆಮೆಂಕಾ ನೃತ್ಯ ಕೂಡ ಅವರದ್ದೇ ಆಗಿತ್ತು. ಆದರೆ ಇಂದು ಫ್ಲೆಮೆಂಕಾ ಸ್ಪೇಯ್ನ್‌ನ ಆ್ಯಂಡಲೂಸಿಯಾ ಸಂಸ್ಕೃತಿಯೊಡನೆ ಹಾಸುಹೊಕ್ಕಾಗಿ ಸೇರಿಕೊಂಡಿದೆ.

ಫ್ಲೆಮೆಂಕಾ ಧರಿಸಿ ಹಬ್ಬಕ್ಕೆ ಹೊರಟ ತಾಯಿ-ಮಗಳು.

ಕಳೆದ ಶತಮಾನದಲ್ಲಿ ಈ ಉಡುಗೆ ಹಲವಾರು ಬದಲಾವಣೆಗಳನ್ನು ಕಂಡಿದೆ. ಪ್ರತಿವರ್ಷ ಸೆವಿಲ್ಲೇ ಎಂಬಲ್ಲಿ ನಡೆಯುವ ಫ್ಲೆಮೆಂಕಾ ಉತ್ಸವದಲ್ಲಿ ನವನವೀನ ಫ್ಯಾಶನ್‌ಗಳನ್ನು ಪ್ರದರ್ಶಿಸಲಾಗುತ್ತದೆ.

7 ಚಿಯಾಂಗ್‌ಸ್ಯಾಮ್ ಐತಿಹಾಸಿಕ ಚೀನೀ ಸಾಮ್ರಾಜ್ಯಗಳ ನೆನಪು

ಚಿಯಾಂಗ್‌ಸ್ಯಾಮ್ ಚೀನಾದ ಹಾನ್ ಮಹಿಳೆಯರ ಸಾಂಪ್ರದಾಯಿಕ ತೊಡುಗೆ. ಇದಕ್ಕೆ ಕಿಪಾವ್ ಎಂದೂ ಹೆಸರಿದೆ. 1920ರ ಸುಮಾರಿಗೆ ಶಾಂಘೈನಲ್ಲಿ ಮಂಚು ಸಂಸ್ಕೃತಿಯ ಸಾಂಪ್ರದಾಯಿಕ ದಿರಿಸಿನ ಪ್ರಭಾವದಲ್ಲಿ ಇದನ್ನು ತಯಾರಿಸಲಾಯಿತು.

ಚೀನೀಯರ ಸಾಂಪ್ರದಾಯಿಕ ಚಿಯಾಂಗ್‌ಸ್ಯಾಮ್

ಇದು ಕುತ್ತಿಗೆಯಿಂದ ಕಾಲಿನ ತನಕ ಮೈಗೆ ಅಂಟಿಕೊಳ್ಳುವ ಒಂದೇ ಬಟ್ಟೆಯ ದಿರಿಸು. ಇದರ ಕುತ್ತಿಗೆಯ ಭಾಗದಲ್ಲಿ ಬಿಗಿ ಕಾಲರ್ ಇರುತ್ತದೆ. ಇದಕ್ಕೆ 'ಮ್ಯಾಂಡರಿನ್ ಕಾಲರ್' ಎಂದು ಹೆಸರು. ಎದೆಯ ಮೇಲೆ ಬಲಭಾಗಕ್ಕೆ ಮಡಚಿ ಕೊಳ್ಳುವ ಈ ದಿರಿಸಿನಲ್ಲಿ ಗುಂಡಿಗಳ ಜಾಗದಲ್ಲಿ ಅಲಂಕಾರಿಕ ರಿಬ್ಬನ್ ಅಥವಾ ಪಿನ್‌ಗಳು ಇರುತ್ತವೆ.

ನಡೆಯಲು ಅನುಕೂಲವಾಗುವಂತೆ ಈ ಬಿಗಿ ನಿಲುವಂಗಿಯನ್ನು ಸೊಂಟದ ತನಕ ಎರಡೂ ಬದಿಗಳಲ್ಲಿ ಕತ್ತರಿಸಲಾಗುತ್ತದೆ. ಧರಿಸುವವರ ಅಭಿರುಚಿಗೆ ತಕ್ಕಂತೆ ಇದರ ತೋಳುಗಳು ಉದ್ದ ಅಥವಾ ಗಿಡ್ಡ ಇರಬಹುದು.

ಸಾಪ್ರದಾಯಿಕ ಚಿಯಾಂಗ್‌ಸ್ಯಾಮ್ ದಿರಿಸನ್ನು ರೇಶ್ಮೆ ಅಥವಾ ವೆಲ್ವೆಟ್ ಬಟ್ಟೆಯಿಂದ ತಯಾರಿಸಲಾಗುತ್ತದೆ. ಇದರ ಮೇಲೆ ಸೂಕ್ಷ್ಮ ಚಿತ್ತಾರ, ಕಸೂತಿ ಅಥವಾ ಮಣಿಗಳ ವಿನ್ಯಾಸ ಇರುತ್ತದೆ. ಚಾಂದ್ರಮಾನ ನವವರ್ಷ ಮುಂತಾದ ವಿಶೇಷ ಉತ್ಸವಗಳಲ್ಲಿ ಮಾತ್ರ ಸಾಂಪ್ರದಾಯಿಕ ಚಿಯಾಂಗ್‌ಸ್ಯಾಮ್ ತೊಡುತ್ತಾರೆ. ಆಧುನಿಕ ಚಿಯಾಂಗ್‌ಸ್ಯಾಮ್ ಆಧುನಿಕ ಮಹಿಳೆಗೆ ಒಪ್ಪುವಂತೆ ಮೊಣಕಾಲಿನ ತನಕ ಮಾತ್ರ ಇರಬಹುದು.

8 ಬುನಾಡ್: ನಾರ್ವೆಯ ಜಾನಪದ ಉಡುಗೆ

ಬುನಾಡ್ ನಾರ್ವೆಯ ಮಹಿಳೆಯರ ಸುಂದರ ದಿರಿಸು. ಇದರಲ್ಲಿ ಉಣ್ಣೆಯ ದುಬಾರಿ ಬಟ್ಟೆ ಸೂಕ್ಷ್ಮ ಕಸೂತಿಯ ಭರ್ಜರಿ ಕಲಾವೈಭವ ಇರುತ್ತದೆ, ಮೇಲೆ ಬೆಳ್ಳಿ ಬಂಗಾರದ ಅಲಂಕಾರಿಕ ವಸ್ತುಗಳು ಸೇರಿಕೊಳ್ಳುತ್ತವೆ.

ನಾರ್ವೆಯ ಪ್ರತಿಯೊಂದು ಮಹಿಳೆಯ ಬಳಿ ಒಂದು ಬುನಾಡ್ ಇದ್ದೇ ಇರಬೇಕು. ಕಲಾಕಾರರು ಕೈಯಲ್ಲೇ ಇದನ್ನು ತಯಾರಿಸುವ ಕಾರಣ ಇದರ ಬೆಲೆ ದುಬಾರಿಯಾಗಿರುತ್ತದೆ. ಮಾರುಕಟ್ಟೆಯಲ್ಲಿ ಇವುಗಳ ಬೆಲೆ 2000 ಡಾಲರ್ (ಸುಮಾರು 1,90,000 ರೂಪಾಯಿ)ಗಳಿಂದ ಆರಂಭವಾಗಿ 10,000 ಡಾಲರ್ (9,50,000 ರೂಪಾಯಿ) ತನಕ ಹೋಗಬಹುದು. ಹೀಗಾಗಿ ಕೆಲವರು ಇದನ್ನು ಮನೆಯಲ್ಲೇ ತಯಾರಿಸುತ್ತಾರೆ. ಇದನ್ನು ಸಾಂಪ್ರದಾಯಿಕವಾಗಿ ತಯಾರಿಸಲು ಒಂದು ವರ್ಷ ಹೋಗಬಹುದು. ಹೆತ್ತವರು ತಮ್ಮ ಮಕ್ಕಳಿಗೆ ಮದುವೆಯ ವೇಳೆ ಕಾಣಿಕೆಯಾಗಿ ಕೊಡುತ್ತಾರೆ.

ನಾರ್ವೆಯ ನಾರಿಯರ ಪಾರಂಪರಿಕ ಉಡುಪು: ಬುನಾಡ್.

ನಾರ್ವೆ ಭಾಷೆಯಲ್ಲಿ ಬುನಾಡ್ ಎಂದರೆ, ಹಲವಾರು ಅರ್ಥಗಳಿವೆ. ಬಟ್ಟೆಗಳ ಬಗ್ಗೆ ಹೇಳುವಾಗ ಬುನಾಡ್ ಎಂದರೆ 20ನೆಯ ಶತಮಾನದಲ್ಲಿ ಆರಂಭವಾದ ಸಾಂಪ್ರದಾಯಿಕ ಉಡುಗೆ ಎಂದು ಅರ್ಥವಾಗುತ್ತದೆ. ನಾರ್ವೆಯ ವಿವಿಧ ಪ್ರಾಂತ್ಯಗಳ ಬುನಾಡ್‌ನಲ್ಲಿ 450ಕ್ಕೂ ಹೆಚ್ಚು ವೈವಿಧ್ಯಗಳಿವೆ. ಪ್ರತಿಯೊಂದು ದಿರಿಸನ್ನು ನೋಡಿ ಆಕೆ ಯಾವ ಊರು, ಯಾವ ಕುಟುಂಬದಿಂದ ಬಂದಾಕೆ ಎಂದು ಹೇಳಬಹುದು.

ಹಿಂದೆ ಇದರ ಜೊತೆಗೆ ವಿಶೇಷ ಶಿರೋಭೂಷಣಗಳೂ ಸೇರಿಕೊಳ್ಳುತ್ತಿದ್ದವು. ಇವು ತೊಟ್ಟವರ ಅಂತಸ್ತು ಮತ್ತು ವಿವಾಹಿತೆ/ಅವಿವಾಹಿತೆ/ಕುಮಾರಿ ಇತ್ಯಾದಿ ಸ್ಥಿತಿಗಳನ್ನು ಸೂಚಿಸುತ್ತಿದ್ದವು. ಆದರೆ ಈಗಿನ ಮಹಿಳೆಯರು ಅವುಗಳನ್ನು ತೊಡುವುದಿಲ್ಲ.

ನಾರ್ವೆಯ ಸಂವಿಧಾನ ದಿನ (ಮೇ 17), ನೃತ್ಯ ಸಮಾರಂಭ, ಕ್ರಿಸ್ಮಸ್, ಮದುವೆ ಇತ್ಯಾದಿ ವಿಶೇಷ ದಿನಗಳಲ್ಲಿ ಮಹಿಳೆಯರು ಇದನ್ನು ಧರಿಸುತ್ತಾರೆ. ಇದನ್ನು ಎಲ್ಲ ಸಂದರ್ಭಗಳಲ್ಲೂ ತೊಡಲು ಸಾಧ್ಯವಿಲ್ಲ. ಇದಕ್ಕಾಗಿ ಫೆಸ್ಟ್‌ಡ್ರಾಕ್ ಎಂಬ ಆಧುನಿಕ ಬುನಾಡ್ ಮಾದರಿ ತಯಾರಾಗಿದೆ. ಇವುಗಳನ್ನು ಪುರುಷರೂ ತೊಡಬಹುದು.

9 ಕೆಚುವಾ: ಕಸೂತಿಯ ವರ್ಣರಂಜಿತ ಅಲಂಕಾರ

ದಕ್ಷಿಣ ಅಮೆರಿಕಾದ ಪೆರು ದೇಶದ ಮೂಲ ನಿವಾಸಿಗಳ ಹೆಸರು ಕೆಚುವಾ. ಇವರು ಧರಿಸುವ ವರ್ಣರಂಜಿತ ದಿರಿಸಿಗೆ ಕೂಡ ಇದೇ ಹೆಸರು.

ಕೆಚುವಾ ಜನರು ಪೆರು, ಇಕ್ವಡೋರ್, ಬೊಲೀವಿಯಾ, ಚಿಲಿ, ಕೊಲಂಬಿಯಾ ದೇಶದ ಗುಡ್ಡ-ಗಾಡು ಪ್ರದೇಶಗಳಲ್ಲಿ ವಾಸವಾಗಿದ್ದಾರೆ. ವಸಾಹತುಶಾಹಿ ಕಾಲದಲ್ಲಿ ಇವರು ಕ್ರಿಶ್ಚಿಯನ್ ಧರ್ಮ ಸ್ವೀಕರಿಸಿದ್ದರು. ಆದರೆ ಇವರು ಇಂದಿಗೂ ತಮ್ಮ ಪ್ರಾಚೀನ ಸಂಸ್ಕೃತಿ, ಸಂಪ್ರದಾಯಗಳನ್ನು ಪಾಲಿಸುತ್ತಿದ್ದಾರೆ, ಸಾಂಪ್ರದಾಯಿಕ ಬಟ್ಟೆಬರೆಗಳನ್ನು ಧರಿಸುತ್ತಾರೆ.

ಇವರ ಬಟ್ಟೆಗಳು ವರ್ಣರಂಜಿತವಾಗಿರುತ್ತವೆ. ಕೆಚುವಾ ಹುಡುಗಿ ವಯಸ್ಸಿಗೆ ಬಂದ ಬಳಿಕ ಹಲವು ಅಂತರಗಳ ಪೆಟಿಕೋಟ್ ಮತ್ತು ಸ್ಕರ್ಟ್ ತೊಡುತ್ತಾಳೆ. ಈ ಬಟ್ಟೆ ಅವಳ ಕುಟುಂಬದ ಐಶ್ವರ್ಯ ಮತ್ತು ಅಂತಸ್ತಿನ ಸೂಚಕವಾಗಿರುತ್ತದೆ. ಬಟ್ಟೆಯ ಮೇಲೆ ಪೋಂಚೋ ಎಂಬ ಅಲಂಕೃತ ಕಂಬಳಿ ತೊಡುವುದು ವಾಡಿಕೆ. ತಲೆಯ ಮೇಲೆ ಪಾಶ್ಚಾತ್ಯ ಮಾದರಿಯ ಫೆಡೋರಾ ಎಂಬ ಹ್ಯಾಟು ಧರಿಸಬಹುದು.

ಕ್ವೆಚುವಾ: ಪೆರು ದೇಶದ ಸುಂದರ ಸಾಂಪ್ರದಾಯಿಕ ದಿರಿಸು.

10 ಡಿರ್‌ಂಡ್ಲ್: ಜರ್ಮನಿಯ ಅಕ್ಟೋಬರ್ ಫೆಸ್ಟ್ ಸ್ಟರ್ಟ್

ಡಿರ್‌ಂಡ್ಲ್: ಜರ್ಮನಿ, ಆಸ್ಟ್ರಿಯಾ, ಸ್ವಿಟ್ಸರ್ಲಂಡ್‌ನ ಪರ್ವತಮಯ ಪ್ರದೇಶಗಳ ಸಾಂಪ್ರದಾಯಿಕ ದಿರಿಸು.

ಜರ್ಮನಿಯ ಸುಪ್ರಸಿದ್ಧ ಬಿಯರ್ ಮೇಳ ಅಕ್ಟೋಬರ್ ಫೆಸ್ಟ್‌ನಲ್ಲಿ ಅಲ್ಲಿನ ತರುಣಿಯರು ಒಂದು ವಿಶೇಷ ಸಾಂಪ್ರದಾಯಿಕ ಉಡುಗೆಯಲ್ಲಿ ಕಾಣಿಸಿಕೊಳ್ಳುತ್ತಾರೆ. ಇದರ ಹೆಸರು ಡಿರ್‌ಂಡ್ಲ್ (dirndl). ದಕ್ಷಿಣ ಜರ್ಮನಿ, ಆಸ್ಟ್ರಿಯಾ ಮತ್ತು ಸ್ವಿಟ್ಸರ್ಲ್ಂಡ್ ದೇಶಗಳ ಸಾಂಪ್ರದಾಯಿಕ ತೊಡುಗೆ ಇದು.

ಸಾಮಾನ್ಯವಾಗಿ ಆಲ್ಪ್ಸ್ ಪರ್ವತ ಪ್ರದೇಶಗಳ ಜನರು ಇದನ್ನು ಧರಿಸುತ್ತಾರೆ. ಅಲ್ಲಿನ ಭಾಷೆಯಲ್ಲಿ ಡಿರ್‌ಂಡ್ಲ್ ಎಂದರೆ 'ತರುಣಿ' ಎಂದೂ ಅರ್ಥ.

ಒಂದು ಬಿಗಿಯಾದ ಬಾಡೀಸ್ (ಕುಪ್ಪಸ), ಅದರ ಕೆಳಗೆ ಒಂದು ಬ್ಲೌಸ್, ಉದ್ದದ ಸ್ಕರ್ಟ್ ಮತ್ತು ಏಪ್ರನ್- ಇಷ್ಟೆಲ್ಲ ಸೇರಿ ಡಿರ್‌ಂಡ್ಲ್ ಆಗುತ್ತದೆ. ಬ್ಲೌಸ್‌ನ ಕೈಗಳು ಉಬ್ಬಿಕೊಂಡಿರುತ್ತವೆ (ಪಫ್).

ಸ್ಕರ್ಟ್ ಸಾಮಾನ್ಯವಾಗಿ ಮೊಣಕಾಲಿನ ತನಕ ಇದ್ದು, ಅಗಲಕ್ಕೆ ಹರಡುತ್ತದೆ. ಸ್ಕರ್ಟ್ ಮೇಲೆ ಸುತ್ತಿಕೊಳ್ಳುವ ಏಪ್ರನ್‌ಗೆ ವಿಶೇಷ ಅರ್ಥ ಇದೆ. ಇದನ್ನು ಎಡಕ್ಕೆ ಕಟ್ಟಿದರೆ ಆ ತರುಣಿ ಅವಿವಾಹಿತೆ ಎಂದರ್ಥ. ಬಲಕ್ಕೆ ಕಟ್ಟಿದರೆ ಆಕೆಗೆ ಮದುವೆಯಾಗಿದೆ ಅಥವಾ ಆಕೆಯ ಜೊತೆಗೆ ಯಾರಾದರೂ ಇದ್ದಾರೆ ಎಂದರ್ಥ. ಇದನ್ನು ಮಧ್ಯೆ ಕಟ್ಟಿದರೆ ಆ ಹುಡುಗಿ ಕನ್ಯೆ ಎಂದು ಅರ್ಥ. ಇದನ್ನು ಹಿಂದಕ್ಕೆ ಕಟ್ಟಿದರೆ ಆಕೆ ವಿಧವೆ ಎಂದು ಅರ್ಥ. ವೈಟ್ರೆಸ್(ಪರಿಚಾರಿಕೆ)ಗಳು ಕೂಡ ಇದನ್ನು ಹಿಂದಕ್ಕೆ ಕಟ್ಟಿಕೊಳ್ಳುತ್ತಾರೆ.

ಬೋರ್ಡ್ ರೀಡಿಂಗ್

❑ ಸುಮಾ ರಮೇಶ್

ನಾಮಫಲಕದಲ್ಲಿ ಕನಿಷ್ಠ 60 ಭಾಗವಾದರೂ ಕನ್ನಡ ಪದಗಳಿರಬೇಕೆಂಬ ಇತ್ತೀಚಿನ ಬೆಳವಣಿಗೆ ಅವಳ ಬೋರ್ಡ್ ಓದುವ ಚಟಕ್ಕೆ ಇನ್ನಷ್ಟು ಹುರುಪು ತುಂಬಿತು!

ಚಿಕ್ಕಂದಿನಲ್ಲಿ ಅಕ್ಷರಾಭ್ಯಾಸ ಮಾಡಿಸುವ ಸಮಯ ನಮ್ಮ ಶಿಕ್ಷಕರು ದಿನಕ್ಕೊಂದು ಹೊಸ ಚಾರ್ಟ್ ತಂದು ಬೋರ್ಡಿನ ಪಕ್ಕದ ಮೊಳೆಗೆ ನೇತು ಹಾಕಿ ನಮ್ಮ ಕೈಗೊಂದು ಉದ್ದನೆಯ ಕೋಲನ್ನು ನೀಡುತ್ತಿದ್ದರು. ನಾವು ಚಾರ್ಟ್ ಮೇಲಿನ ಪ್ರತಿ ಪದದ ಮೇಲೂ ಕೋಲಿರಿಸಿ ಅದನ್ನು ಓದಬೇಕಿತ್ತು. ತಡವರಿಸುತ್ತಾ, ತಲೆ ಕೆರೆಯುತ್ತಾ ನಿಂತವರ ಕಾಲಿಗೆ ಮತ್ತೊಂದು ಕೋಲಿನಿಂದ ಬಿಸಿ ತಾಗುತ್ತಿತ್ತು. 'ಬಾಳೆಗೊಂದು ಗೊನೆ ಬಾಳಿಗೊಂದು ಮಾತು' ಎಂಬಂತೆ ಅಕ್ಷರಕ್ಕೊಂದೇ ಪದ ಎನ್ನುತ್ತಾ 'ಅ' ಅರಸ, 'ಆ' ಆನೆ, 'ಇ' ಇಲಿಗಷ್ಟೇ ತೃಪ್ತವಾಗಿದ್ದ ನಮ್ಮ ಹೂಮನ ಹೀಗೆ ಮಲ್ಟಿಪಲ್ ಚಾರ್ಟುಗಳಲ್ಲಿ ವಿಭಿನ್ನ ಪದಗಳು ಬಂದು ದಾಳಿ ನಡೆಸಿದಾಗ ನಲುಗಿತು.

ಇತರ ಶಾಲೆಯ ಶಿಕ್ಷಕರು ತಮ್ಮ ಮಕ್ಕಳ ಸಾಕ್ಷರತೆಗೆ ಅಷ್ಟೇ ಪದಗಳ ಕಲಿಕೆ ಸಾಕೆಂದು ಒಂದೇ ಚಾರ್ಟಿನಲ್ಲಿ ಕಲಿಸುತ್ತಿದ್ದರೆ ನಮ್ಮ ಶಿಕ್ಷಕರು ತಮ್ಮ ಶಿಷ್ಯಂದಿರ ಪದ ಪ್ರಾವೀಣ್ಯತೆಯನ್ನು ಗರಿಷ್ಠ ಮಟ್ಟಕ್ಕೆ ಕೊಂಡೊಯ್ಯುವ ಹುಕಿಯಲ್ಲಿದ್ದರು. ಮುಂದಿನ ದಿನಗಳಲ್ಲಿ ಈ ಚಾರ್ಟ್ ರೀಡಿಂಗ್ ಎಂಬುದು ಹೇಗೆ ಒಂದು ಚಟವಾಗಿ ಪರಿಣಮಿಸಿತೆಂದರೆ ರಸ್ತೆಯಲ್ಲಿ ಸಾಗುವಾಗ ಅಲ್ಲಲ್ಲಿ ತಗುಲಾಕಿದ ಬೋರ್ಡುಗಳೆಡೆಗೆ ನೋಡುವುದು, ಪಕ್ಕ ಪಾಸ್ ಆಗುವ ವಾಹನಗಳ ಮುಂಬರಹ, ಹಿಂಬರಹ, ತಲೆಬರಹದೆಡೆಗೆ ಕಣ್ಣು ಹಾಯಿಸಿ ದೂರದಿಂದಲೇ ಬೆರಳಿರಿಸಿ ಓದುವ ಗೀಳು ಹುಟ್ಟಿಕೊಂಡಿತು. ಇದು ಅಷ್ಟಕ್ಕೇ ಸೀಮಿತವಾಗದೆ ಬೋರ್ಡಿನಲ್ಲಿರುವ ಪದಗಳ ವ್ಯಾಕರಣ ದೋಷದ ಬಗ್ಗೆ ಎಕ್ಸ್‌ರೇ ಕಣ್ಣು ಹಾಯಿಸುವ ಚಟ ಅಕ್ಷರಶಃ ನನ್ನಲ್ಲಿ ರಕ್ತಗತವಾಯಿತು. ಮನೆ ಬಾಡಿಗೆಗಿದೆ ಎಂಬ 'ಟು ಲೆಟ್' ಬೋರ್ಡ್ ನಿಂದ ಹಿಡಿದು 'ಶೌಚಾಲಯ'ವೆಂಬ ಟಾಯ್‌ಲೆಟ್ ಬೋರ್ಡಿನವರೆಗೂ ಪ್ರತಿದಿನ ನೂರಾರು ಬೋರ್ಡುಗಳು ನನಗೆದುರಾಗಿ ಬುದ್ಧಿಗೆ ಸಾಣೆ ಹಿಡಿಯತೊಡಗಿದವು.

ರೇಡಿಯಂ ಇಲ್ಲವೇ ಪ್ರತಿಫಲಿತ ವಸ್ತುವಿನಿಂದ ರಾತ್ರಿ ಸಮಯ ಕತ್ತಲು ಆಧಿಪತ್ಯ ಸಾಧಿಸಿದ ರಸ್ತೆಯಲ್ಲಿ ಬೋರ್ಡಿನ ಅಕ್ಷರಗಳು ಮಿನುಗುವಾಗ ನನ್ನ ಕತ್ತು ಅತ್ತ ಹೊರಳಿ ತೋರ್ಬೆರಳು ತೆರೆದುಕೊಂಡು ಅರ್ಜುನನಿಗೆ ಪಕ್ಷಿಯ ಅಕ್ಷಿಯಷ್ಟೇ ಕಂಡಂತೆ ನನ್ನ ಕಂಗಳಿಗೆ ಹೊಳೆಯುವ ಅಕ್ಷರಗಳಷ್ಟೇ ಕಂಡು ಇಹಪರಗಳೆಲ್ಲ ಬದಿಗೆ ಸರಿದುಬಿಡುವುದು. ಈ ರೋಡ್ ರೀಡಿಯೋ ಚಟದಿಂದ ವೇಗವಾಗಿ ಚಲಿಸುವ ವಾಹನಗಳಿಗೆ ನಾನು ಖಿದ್ದು ಸ್ಪೀಡ್ ಬ್ರೇಕರ್‌ನಂತಾಗಿ ಚಾಲಕರು ಕೋಪದಿಂದ ಕುದ್ದು 'ಸಾಯಕ್ ನನ್ ಗಾಡೀನೇ ಬೇಕಾ ಈ ಯಮ್ಮುಂಗೆ...' ಎನ್ನುತ್ತಾ ವಾಹನದೊಂದಿಗೆ ತಾವೂ ಬುಸುಗುಡುತ್ತಾ ಸುಂದರ ಪದಪುಂಜಗಳನ್ನು ಉದುರಿಸುವಾಗ ನನ್ನೊಡನೆ ಬಂದವರೂ ಅದಕ್ಕೆ ಕಿವಿಯಾಗಿ ನನ್ನತ್ತ ಕೆಕ್ಕರಿಸಿ ಕಳಚಿಕೊಳ್ಳುವರು.

ಹುಟ್ಟಿದ ಮಕ್ಕಳಿಗೆ ನಾಮಕರಣ ಮಾಡಿದಷ್ಟೇ ಆಸ್ತೆಯಿಂದ ತಮ್ಮ ಶಾಪ್‌ಗಳಿಗೂ ನೇಮಿಂಗ್ ಸೆರಮನಿ ಮಾಡಿ ಅದನ್ನು ಅತ್ಯಾಕರ್ಷಕವಾಗಿ ಬೋರ್ಡಿಗಿಳಿಸುವಲ್ಲಿ ನಮ್ಮ ಜನರ ಕ್ರಿಯೇಟಿವಿಟಿ ಮೆಚ್ಚುವಂಥದ್ದು. ಗ್ರಾಮೀಣ ಸೊಗಡನ್ನು ತೋರುವ ಹಟ್ಟಿ ಕಾಫಿ, ಅಮ್ಮನ ಕೈತುತ್ತು, ಹಳ್ಳಿ ಮನೆ ಊಟ, ನಮ್ಮಂಗ್ಡಿ ಎಂಬ ಬೋರ್ಡ್‌ಗಳು ನನ್ನ ಬೋರ್ಡ್ ವಾಚನ ಚಟಕ್ಕೆ ಇನ್ನಷ್ಟು ಹುರುಪು ತುಂಬಿವೆ. ಒಂದಕ್ಕೊಂದು ಸಂಬಂಧವೇ ಇಲ್ಲದ 'ಮಹಾವೀರ ಮಟನ್ ಸ್ಟಾಲ್', 'ಮಾರುತಿ ಮಿಲ್ಟ್ರಿ ಹೋಟೇಲ್', 'ರಾಘವೇಂದ್ರ ವೈನ್ ಸ್ಟೋರ್'ನಂಥ ಬೋರ್ಡುಗಳನ್ನು ಓದುವಾಗ ಕಸಿವಿಸಿಯಾಗುವುದು. 'ಅಕ್ಕಮಹಾದೇವಿ ಸಲೂನ್' ಮುಂದೆ ಸಾಗುವಾಗ ಸಲೂನ್ ಮುಖವನ್ನೇ ಕಾಣದ ಫ್ರೀ ಹೇರುಧಾರಿ ಅಕ್ಕನ ಹೆಸರನ್ನು ಇಲ್ಲೇಕೆ ತಂದರೆಂದು ಅಚ್ಚರಿ ಪಡುವೆ. ಪಕ್ಕದಲ್ಲಿದ್ದ 'ಗೋಮಟೇಶ್ವರ ಡ್ರೆಸ್ ಮೆಟೀರಿಯಲ್ಸ್' ಎಂಬಲ್ಲಿ ತ್ಯಾಗದ ಬಗ್ಗೆ ಅರಿವು ಮೂಡಿಸಿದವನನ್ನು ಪುನಃ ಅರಿವೆಯೊಂದಿಗೆ ಬಂಧಿಸಿದ ಬಗ್ಗೆ ಖೇದವಾಗುವುದು. ಉತ್ತರ ಪ್ರದೇಶದ ನೇತ್ರ ತಜ್ಞರೊಬ್ಬರ 'ಹರ್ಷ ಆಪ್ಟಿಕಲ್ಸ್' ಆಂಗ್ಲ ಭಾಷೆಯಲ್ಲಿ "Harsh optical' ಎಂದಾಗಿ ನನ್ನ ಕಣ್ಣಿಗೆ 'ಹಾರ್ಶ್' ಆಗಿ ಗೋಚರಿಸಿತ್ತು.

'ನೋ ಬಾರ್ಕಿಂಗ್' ಬೋರ್ಡಿನಲ್ಲಿ ಕೇವಲ 'ಪಿ' ಅಕ್ಷರದ ವ್ಯತ್ಯಾಸದಿಂದ ವಾಹನ ಪಾರ್ಕ್ ಮಾಡಿದವರೆಡೆಗೆ ಅವರ ಡಾಗಿ ಕೂಡಾ ಬಾರ್ಕ್ ಮಾಡದಂಥ ಪರಿಸ್ಥಿತಿ! ಹಳ್ಳಿ ರಸ್ತೆಯಲ್ಲೊಮ್ಮೆ ಕಂಡ 'ಸಾರಯು ಅಂಗಡಿ' ಎದುರು ಸಾರಾಯಿ ಹೊಳೆಯೇ ಹರಿಯುತ್ತಿತ್ತು. 'ಗೌಡರ ಮುದ್ದೆ ಮನೆ', 'ಮಟನ್ ಚಿಕನ್ ಬಿರಿಯಾನಿ ಆಂಡ್ ಆಲ್ ಸ್ಪೇರ್ ಪಾರ್ಟ್ಸ್' ಎಂಬ ಅಡಿಬರಹದಲ್ಲಿ ಬಿಡಿಭಾಗಗಳಿಗಾಗಿ ಕಣ್ಣುಗಳು ಹುಡುಕಾಡಿದ್ದವು.

ಪ್ರಾದೇಶಿಕ ಸಾರಿಗೆ ಕಚೇರಿಯವರು ಅಳವಡಿಸಿದ 'ನೋ ಎಂಟ್ರಿ', 'ರಾಂಗ್ ವೇ', 'ಒನ್ ವೇ'ಯಂಥ ಸೂಚನಾ ಫಲಕಗಳಲ್ಲಿನ ಜಮಿಟ್ರಿಕಲ್ ರೋಡ್ ಸೈನ್‌ಗಳು ನನ್ನ ಮೆದುಳಿಗೆ ಮೇವು ನೀಡಿದರೆ ಗುಂಡಿ, ಹಂಪು ನೋಡದೆ ಜಂಪ್ ಮಾಡುವ ಎಲ್- ಬೋರ್ಡ್‌ಧಾರಿಗಳು ಎಲ್ಲೆಲ್ಲೋ ನುಗ್ಗುವಾಗ ಎಲ್ಬೋ ಮಡಚಿ ಅದುರುವ ಗುಂಡಿಗೆಯ ಒತ್ತಿ ಹಿಡಿದು ಪಕ್ಕಕ್ಕೆ ಒತ್ತರಿಸುವೆ. ಒನ್ ವೇ ಬೋರ್ಡ್‌ಗಳು ವಾಹನ ಚಾಲಕರಿಗಷ್ಟೇ ಅನ್ವಯಿಸಿದರೂ



ಸುರೇಶ್ ಎ.ತುಂಬಗೇರಿ

ನನ್ನ ಚರಣಗಳೂ ಅದನ್ನು ಪಾಲಿಸುವಾಗ ಆರ್.ಟಿ.ಓ.ದವರು ನೋಡಿದರೆ ನಿನ್ನ ಪಾದದ ಜೆರಾಕ್ಸ್‌ನೂ ಅಂಟಿಸಿಬಿಟ್ಟಾರು ಜೋಕೆ ಎಂದು ಆತ್ಮೀಯರು ಕಾಲೆಳೆಯುವುದಿದೆ. ಶಾಲೆಗಳ ತಿರುವಿನಲ್ಲಿ 'ಶಾಲಾ ಆವರಣ ಜಾಗ್ರತೆಯಿಂದ ವಾಹನ ಚಾಲನೆ ಮಾಡಿ' ಎಂಬ ಬೋರ್ಡಿನಡಿ 'ಅಮಾಯಕ ವಿದ್ಯಾರ್ಥಿಗಳನ್ನು ಸಾಯಿಸದಿರಿ, ಶಿಕ್ಷಕರು ಬರುವವರೆಗೂ ಕಾಯಿರಿ' ಎಂಬ ಅಡಿಬರಹ ಕಿಡಿಗೇಡಿಗಳ ಕ್ರಿಯೇಟಿವಿಟಿಯನ್ನು ತೋರುವುದು. ನಾಮಫಲಕದಲ್ಲಿ ಕನಿಷ್ಠ ಅರವತ್ತು ಭಾಗವಾದರೂ ಕನ್ನಡ ಪದಗಳಿರಬೇಕೆಂಬ ಇತ್ತೀಚಿನ ಬೆಳವಣಿಗೆ ನನ್ನ ಬೋರ್ಡ್ ಓದುವ ಚಟಕ್ಕೆ ಇನ್ನಷ್ಟು ಹುರುಪು ತುಂಬಿ ಆಂಗ್ಲೀಕರಣಗೊಂಡ ಬೋರ್ಡುಗಳಲ್ಲಿ ಶೇಕಡಾವಾರು ಗುರುತಿಸುವ ಪ್ರಯತ್ನವೂ ನಡೆಯುವುದು.

ಅದೊಂದು ಮುಂಜಾನೆ ಶುದ್ಧ ಗಾಳಿಯನ್ನು ಆಸ್ವಾದಿಸುತ್ತಾ, ಸುತ್ತಮುತ್ತಲಿನ ಬೋರ್ಡುಗಳ ಮೇಲೆ ಕಣ್ಣಾಡಿಸುತ್ತಾ ನನ್ನಂಥ ಹಲವು ಬೃಹನ್ಮಹಿಳೆಯರೊಂದಿಗೆ ಸಾಗುತ್ತಿದ್ದೆ. ದಿನಕ್ಕೆ ಹತ್ತು ಸಾವಿರ ಸ್ಟೆಪ್ಸ್ ಇಡಲು ಪ್ರತಿಜ್ಞೆಗೈದ ವಾಕಿಗರು ಮೊಬೈಲ್ ಟಾಕಿಗರಾಗಿ ಫಿಟ್ನೆಸ್ ಟ್ರ್ಯಾಕರ್, ಪೆಡೋಮೀಟರ್‌ಗಳನ್ನು ಸೊಂಟಕ್ಕೆ ಸಿಕ್ಕಿಸಿಕೊಂಡು ಹುಮ್ಮಸ್ಸಿನಿಂದ ಹೆಜ್ಜೆ ಹಾಕುತ್ತಿದ್ದರು. ನಡುನಡುವೆ ಸ್ಮಾರ್ಟ್‌ಫಿಟ್ನೆಸ್ ಚೆಕ್ ಮಾಡುತ್ತಾ ನಡಿಗೆಯ ವೇಗವನ್ನು ಹೆಚ್ಚಿಸುತ್ತಿದ್ದರು. ಅಲ್ಲಿದ್ದ ಒಂದು ವಿದ್ಯುತ್ ಕಂಬದ ಕೆಳಗೆ ಕಸ ಗುಡ್ಡೆಯಾಗಿತ್ತು. ಅದೇ ಕಂಬದ ಮೇಲೆ 'ನೀವೀಗ ಸಿಸಿ ಕ್ಯಾಮೆರಾದ ಕಣ್ಗಾವಲಿನಲ್ಲಿರುವಿರಿ' ಎಂಬ ಬೋರ್ಡ್ ಗೋಚರಿಸಿತು. ಸುತ್ತಲೂ ಕಣ್ಣಾಡಿಸಿದೆ. ನನ್ನ ಕಣ್ಣೋಟಕ್ಕೆ ಯಾವ ಸಿಸಿ ಕ್ಯಾಮರವೂ ಕಾಣಲಿಲ್ಲ. ಕಸ ತೂರಿಗರನ್ನು ಹೀಗೆ ಅವಾಯ್ಡ್ ಮಾಡಬಹುದೆಂಬ ಅವರ ದೂರಾಲೋಚನೆ ಫಲಕಾರಿಯಾಗಿರಲಿಲ್ಲ. ಅಡ್ಡಾದಿಡ್ಡಿ ಎಸೆದ ಕಸದ ತುಂಡುಗಳು ಆ ಬೋರ್ಡಿನ ಮೇಲೆಯೇ ಉರುಳು ಹಾಕಿಕೊಂಡಿದ್ದವು 'ಕಸಮಯವೆಂಬುದು ಖರೆ ಸೈರಿಸಲಾಗದೀ ಪರಿಮಳಮುಂ ದುರ್ನಾತಮುಂ' ಎನ್ನುತ್ತಾ ಮೂಗಿಗೆ ಕರ್ಚೀಫಿನ ಪರದೆಯೆಳೆದು ಅದೇ ಮಾರ್ಗದಲ್ಲಿ ಮುಂದೆ ಸಾಗಿದೆ. ಮತ್ತೊಂದು ರಸ್ತೆಯಲ್ಲಿ 'ಇಲ್ಲಿ ಕಸ ಹಾಕುವವರು ಹಂದಿಗೆ ಸಮಾನ' ಎಂಬ ಬೋರ್ಡ್ ಕೆಳಗಿದ್ದ ಕಸದ ಗುಡ್ಡೆಯನ್ನು ಕಂಡು ಹಂದಿಗಳೇ ತಲೆತಗ್ಗಿಸಿ ಮುಂದೆ ಸಾಗುತ್ತಿದ್ದವು. ಕೆಲವು ಮನೆಗಳ ಗೇಟಿನಲ್ಲಿ ರಾರಾಜಿಸುತ್ತಿದ್ದ 'ನಾಯಿ ಇದೆ ಎಚ್ಚರಿಕೆ' ಬೋರ್ಡು ನಾಯಿ ಓಡಿ ಹೋದ, ತೀರಿ ಹೋದ ಅನಂತರವೂ ಕಾರ್ಯ ನಿರ್ವಹಿಸುತ್ತಿತ್ತು. ಹೀಗೆ ಹಲವು ಬೋರ್ಡ್‌ಗಳು ಎಕ್ಸ್‌ಪೈರಿ ಡೇಟ್ ಅನಂತರವೂ ಅಸ್ತಿತ್ವದಲ್ಲಿದ್ದವು.

ಕಾಲಕ್ಕೆ ತಕ್ಕಂತೆ ಬೋರ್ಡುಗಳೂ, ಅದರೊಳಗಿನ ಕಂಟೆಂಟ್ ಕೂಡಾ ಬದಲಾಗುತ್ತದೆ. ಹಿಂದೆ ಅಂಗಡಿಗಳಲ್ಲಿ 'ಸಾಲ ಕೇಳಬೇಡಿ', 'ಚಿಲ್ಲರೆ ಕೊಟ್ಟು ಸಹಕರಿಸಿ', 'ಚೌಕಾಸಿ ಮಾಡಬೇಡಿ' ಇಂಥ ಬೋರ್ಡುಗಳಿದ್ದರೆ ಹೊಟೇಲುಗಳಲ್ಲಿ 'ಗ್ಲಾಸು, ಪ್ಲೇಟುಗಳಲ್ಲಿ ಕೈ ತೊಳೆಯಬೇಡಿ', 'ನೋ ಸ್ಮೋಕಿಂಗ್' ಬೋರ್ಡುಗಳಿರುತ್ತಿದ್ದವು. ಕಾಲ ಬದಲಾದಂತೆ ಕೈಗಳು ಬದಲಾಗಿ ಬೋರ್ಡುಗಳೂ ಬದಲಾದವು. 'ನಿಮ್ಮ ಮೊಬೈಲಿಗೆ ನೀವೇ ಹೊಣೆ', 'ಸಿಸಿ ಕ್ಯಾಮೆರಾ ಚಾಲನೆಯಲ್ಲಿದೆ' ಎಂಬ ಅಪ್ಡೇಟೆಡ್ ವರ್ಶನ್‌ಗಳು ಬಂದವು. ಇತ್ತೀಚೆಗೆ ಎಸಿ ಹಾಲ್‌ನಲ್ಲಿ ಕುಳಿತು ಟೈಂ ಪಾಸ್ ಮಾಡುವ ಗಿರಾಕಿಗಳಿಗೆ ತಿನ್ನೋಂದು ಬಿಲ್ ಕೊಟ್ಟು ಹೋಗ್ತಾ ಇರಿ ಎಂಬುದನ್ನು ಶುಗರ್ ಕೋಟೆಡ್ ಶೈಲಿಯಲ್ಲಿ ಹೀಗೆ ಸೂಚಿಸಿದ್ದರು 'ಊಟ ಉಪಾಹಾರದ ಹೆಸರು ಹೇಳಿ ಸಮಯ ಕಳೆಯಲು ಅವಕಾಶವಿಲ್ಲ' ಎಂದು.

ಹೀಗೆ ಆಕ್ಷರಮಾಲೆಯೊಂದಿಗೆ ಪ್ರಾರಂಭವಾದ ನನ್ನ ಚಾರ್ಟ್ ರೀಡಿಂಗ್ , ಬೋರ್ಡ್ ರೀಡಿಂಗ್ ಅಭ್ಯಾಸ ಚಟವಾಗಿ, ವ್ಯಸನವಾಗಿ ಕಾಡಿದರೂ ಎಂದಿಗೂ ಬೋರ್ ಹೊಡೆಸದೆ ಮನವನ್ನು ರಂಜಿಸಿ, ನನ್ನ ಜ್ಞಾನದ ಹರಹನ್ನು ವಿಸ್ತರಿಸಿರುವುದು ಸುಳ್ಳಲ್ಲ. ■

ಕಿರುಕಥೆ

ಒಂದಾಗಿ ಬಾಳು

❑ನಾ. ನಾ. ಕಾಸರಗೋಡು

ಉಷಾ ಮತ್ತು ಮೋಹನ ಒಂದೇ ಕಂಪೆನಿಯಲ್ಲಿ ಸೇವೆ ಸಲ್ಲಿಸುವವರು. ಒಂದು ದಿನ ಇಬ್ಬರೂ ಒಂದೇ ಬಣ್ಣದ ಉಡುಪನ್ನು ಧರಿಸಿ ಕೆಲಸಕ್ಕೆ ಹಾಜರಾಗಿದ್ದರು. ಕಡುನೀಲಿ ಬಣ್ಣದ ಶರ್ಟ್ ಮೋಹನ ಧರಿಸಿದ್ದರೆ, ಉಷಾ ಅದೇ ಬಣ್ಣದ ಚೂಡಿದಾರ್ ಧರಿಸಿದ್ದಳು. ಸಂಸ್ಥೆಯ ಇತರ ನೌಕರರಿಗೆ ಇದೊಂದು ಕೌತುಕವಾಗಿತ್ತು. ಅವರು ಪರಸ್ಪರ ಮಾತಾಡುವುದನ್ನು ನಗುವುದನ್ನು ಉಷಾ ಗಮನಿಸಿದಳು.

ಮೋಹನ ಮೆಚ್ಚಿದ ಬಣ್ಣವನ್ನು ನಾನೂ ಮೆಚ್ಚಿರುವುದು ನಮ್ಮಿಬ್ಬರ ಮೆಚ್ಚುಗೆಯ ಸಂಕೇತವಾಗಿ ಇತರರು ಗ್ರಹಿಸುತ್ತಾರೆ. ''ನಾನು ಇಷ್ಟಪಟ್ಟ ಬಣ್ಣವನ್ನೇ ಮೋಹನನೂ ಮೆಚ್ಚಿರುವುದರಿಂದ ನನ್ನನ್ನೂ ಮೋಹನ ಇಷ್ಟಪಟ್ಟಿರಬಹುದು ಎಂದು ನಾನು ಗ್ರಹಿಸಬಹುದೇ?'' ಎಂದು ಉಷಾ ನೇರವಾಗಿ ಮೋಹನನನ್ನು ಕೇಳಿದಳು.

''ಒಂದಾಗಿ ಜೀವಿಸಲು ನನಗೆ ಆಕ್ಷೇಪವೇನೂ ಇಲ್ಲ. ಆದರೆ ಮದುವೆಯಲ್ಲಿ ನನಗೆ ನಂಬಿಕೆ ಇಲ್ಲ. ಈಗ ಕಾಲ ಬದಲಾಗಿದೆ. ಲಿವ್ ಟುಗೆದರ್ ಎಂಬುದು ಈಗಿನ ರೀತಿ. ಯಾರೂ ಯಾರಿಗೂ ಮೇಲಲ್ಲ, ಕೀಳಲ್ಲ. ಉಷಾ ಮನೆಯರ ಒಪ್ಪಿಗೆ ಪಡೆದರೆ ಒಳ್ಳೆಯದು'' ಎಂದ.

ಉಷಾ ತಾಯಿಯೊಡನೆ ಮೋಹನನ ಲಿವಿಂಗ್ ಟುಗೆದರ್ ಪ್ರಸ್ತಾವದ ಬಗ್ಗೆ ತಿಳಿಸಿದಳು. ''ಹಾಗೆಂದರೆ ಏನು?'' ತಾಯಿ ಲಕ್ಷ್ಮಮ್ಮ ಕೇಳಿದರು. ''ನಾವಿಬ್ಬರೂ ಒಟ್ಟಿಗೆ ಬದುಕುವುದು, ನಮಗಿಬ್ಬರಿಗೂ ಸಂಬಳವಿದೆ, ನಾನು ಗಂಡನಿಗೆ ಕೀಳಾಗಿ ಬದುಕು ಸಾಗಿಸಬೇಕಿಲ್ಲ. ಹಂಗಿಲ್ಲದ ಬಾಳು'' ಎಂದಳು ಉಷಾ.

ಲಕ್ಷ್ಮಮ್ಮನಿಗೆ ಒಂದಾಗಿ ಬದುಕುವ ಬಾಳು ಕಲ್ಪಿಸಲು ಆಗಲಿಲ್ಲ. ಮನುಷ್ಯರು ಈ ಮಟ್ಟಕ್ಕೆ ಇಳಿಯಬಹುದೇ? ತಾಳಿ ಕಟ್ಟುವುದು ಪವಿತ್ರ ದಾಂಪತ್ಯದ ಸಂಕೇತ. ಇದು ನಮ್ಮ ಸಂಸ್ಕೃತಿಯ ಪ್ರತೀಕ . ಪಾಶ್ಚಾತ್ಯರು ಬೇಕೆಂದಾಗ ಮದುವೆಯಾಗಿ ಬೇಡವೆಂದಾಗ ಡೈವರ್ಸ್ ಮಾಡಿ ಇನ್ನೊಂದು ಮದುವೆಯಾಗುತ್ತಾರೆ. ಆದರೆ ಇಲ್ಲಿ ಮದುವೆಯೇ ಇಲ್ಲದಿರುವಾಗ ವಿಚ್ಛೇದನ ಎಲ್ಲಿ ಬಂತು.

ತಂದೆ-ತಾಯಿಯರು ಮಕ್ಕಳನ್ನು ಕಷ್ಟಪಟ್ಟು ಬೆಳೆಸಿ ಶಿಕ್ಷಣ ಕೊಡಿಸಿ ಅವರ ಕಾಲಮೇಲೆ ಅವರು ನಿಂತಾಗ ಸಾಕಿ ಸಲಹಿದವರನ್ನು ಮರೆತು ಅವರ ಮನಸ್ಸಿಗೆ ನೋವುಂಟು ಮಾಡಿ ಸ್ವಂತ ನಿರ್ಧಾರ ತೆಗೆದುಕೊಳ್ಳುವುದು ಸರಿಯೇ?

''ಈಗಿನ ಕಾಲಕ್ಕೆ ತಕ್ಕಂತೆ ಜೀವನ ನಡೆಸಲು ಮೋಹನನೇ ಪ್ರೇರಣೆ. ನಾನು ಅವನ ಸಹೋದ್ಯೋಗಿ. ಅವನನ್ನು ಬಲ್ಲವಳು ನಾನು. ಜೀವನದ ಸಂಗಾತಿಯಾಗಲು ಒಪ್ಪಿಗೆ ನೀಡಿರುತ್ತೇನೆ. ತಂದೆ-ತಾಯಿಯರು ಯಾವನೋ ಒಬ್ಬನನ್ನು ನನ್ನ ಕುತ್ತಿಗೆಗೆ ಗಂಟು ಹಾಕಲು ಬಯಸಿದರೆ, ನನ್ನ ಒಪ್ಪಿಗೆ ಇಲ್ಲ ಇದು ಉಷಾ ನಿರ್ಧಾರ. ಮೋಹನನಿಗೆ ನನ್ನ ಒಟ್ಟಿಗೆ ಬಾಳು ಇಷ್ಟವಾದರೆ ನನ್ನ ಕುಟುಂಬದ ಇಷ್ಟ ನೋಡಬೇಕಾಗಿಲ್ಲ ಬಾಳು ನಮ್ಮದು.''

''ಬ್ಯಾಂಕ್ ಲೋನ್ ಮಾಡಿ, ನಮ್ಮಿಬ್ಬರ ಹೆಸರಿನಲ್ಲಿ ಒಂದು ಅಪಾರ್ಟ್‌ಮೆಂಟ್ ಖರೀದಿಸಿದರೆ ಇಬ್ಬರ ಸಂಬಳದಿಂದ ಲೋನ್ ಸಂದಾಯ ಮಾಡಬಹುದು.'' ಪ್ರಾಯಪೂರ್ತಿಯಾದ ಸ್ತ್ರೀ , ಪುರುಷನಿಗೆ ಬಾಳ್ವೆಗೆ ಕಾನೂನಿನ ರಕ್ಷಣೆ ಇದೆ.

ಇಬ್ಬರ ತೀರ್ಮಾನದಂತೆ ಸಂಸ್ಥೆಯ ಒಂದು ಕಿ.ಮೀ. ಸನಿಹವೇ ಎರಡು ಬೆಡ್‌ರೂಂ ಇರುವ ಅಪಾರ್ಟ್‌ಮೆಂಟ್ 60 ಲಕ್ಷಕ್ಕೆ ಖರೀದಿಸಿ ಗೃಹಪ್ರವೇಶವೂ ಆಯಿತು.

ತಾಯಿಯು ಉಷಾಳೊಂದಿಗೆ ಫೋನ್ ಸಂಪರ್ಕದಲ್ಲಿದ್ದರು. ಆದರೆ ತಂದೆಯ ಸಂಪರ್ಕವಿಲ್ಲ. 'ಅವಳಿಷ್ಟಕ್ಕೆ ಹೋದವಳು ಹಾಗೆಯೇ ಬದುಕಲಿ. ನನಗೂ ಅವಳಿಗೂ ಯಾವುದೇ ಸಂಬಂಧವಿಲ್ಲ' ಎಂಬ ಬಿಗು ನಿಲುವು ತಂದೆಯದು.

ಎರಡು ತಿಂಗಳಾದ ಮೇಲೆ ಉಷಾ, ತಾಯಿಗೆ 'ನಾನು ಪ್ರೆಗ್ನೆಂಟ್' ಎಂದು ತಿಳಿಸಿದಳು. ತಾಯಿ ಮನೆಯಲ್ಲಿ ತಿಂಡಿ ತಿನಿಸುಗಳನ್ನು ಮಾಡಿ ತಂದೆ ಮನೆಯಲ್ಲಿಲ್ಲದ ಸಮಯದಲ್ಲಿ ಉಷಾಳನ್ನು ಕಾಣಲು ಹೋದರು. ಭಾವೋದ್ವೇಗದ ಸಮ್ಮಿಲನ, ಕಣ್ಣೀರಧಾರೆ. ''ತಂದೆ ಮನೆಗೆ ಬರುವ ಮೊದಲು ನಾನು ಹೋಗಬೇಕಾಗಿದೆ. ನಿನಗೆ ಏನಾದರೂ ತೊಂದರೆ ಇದ್ದರೆ ಯಾವುದೇ ಅಗತ್ಯವಿದ್ದರೂ ನನಗೆ ತಿಳಿಸು. ನಾನು ಬಂದೇ ಬರುತ್ತೇನೆ'' ಎಂದು ಹೇಳಿ ನಿರ್ಗಮಿಸಿದರು.

ಮೋಹನ ರಾತ್ರಿ ಕ್ಲಬ್‌ಗೆ ಹೋಗಿ ತಡವಾಗಿ ಬರಲಾರಂಭಿಸಿದ. ರಜಾ ದಿನಗಳಲ್ಲಿ ಡಾಕ್ಟರ್ ಭೇಟಿ. ಅವರ ಸಲಹೆಯಂತೆ ವೈದ್ಯೋಪಚಾರ ಹಾಗೂ ಮಧ್ಯಾಹ್ನ ಸೇವನೆ. ಎಂಟು ತಿಂಗಳು ಕಳೆದ ಮೇಲೆ ಬೇಕೆಂದಾಗ ಆಸ್ಪತ್ರೆ ದಾಖಲಾತಿಗೆ ಸಲಹೆ ನೀಡಿದರು.

ನೋವು ಕಾಣಿಸಿದ ಕೂಡಲೇ ಆಸ್ಪತ್ರೆಗೆ ದಾಖಲು ಮಾಡಲಾಯಿತು. ಡಾಕ್ಟರರು ಪರೀಕ್ಷಿಸಿ ''ಮೋಹನ್ ನಾರ್ಮಲ್ ಡೆಲಿವರಿ ಅಸಾಧ್ಯ, ಸಿಸೇರಿಯನ್ ಅನಿವಾರ್ಯ'' ಎಂದರು. ಸಿಸೇರಿಯನ್ ಎಡವಟ್ಟಾಗಿ ಗಾಯ ಆಳವಾದರೂ ಹೆಣ್ಣು ಮಗುವಿನ ಜನನವಾಯಿತು. ದೀರ್ಘಕಾಲದ ವಿಶ್ರಾಂತಿಗೆ ಡಾಕ್ಟರ್ ಸಲಹೆ ಮಾಡಿದರು. ''ಉಷಾ ಮಲಗಿದಲ್ಲಿಂದ ಎದ್ದು ತಿರುಗಾಡುವುದು ಅಸಾಧ್ಯ. ಆರು ತಿಂಗಳಾದರೂ ಬೆಡ್ ರೆಸ್ಟ್ ಬೇಕಾದೀತು'' ಎಂದರು ಡಾಕ್ಟರ್.

ಕೆಲವು ತಿಂಗಳುಗಳು ಕಳೆದುಹೋದವು. ಒಂದು ದಿನ ರಾತ್ರಿ ಮೋಹನ ಬರುವಾಗ ಒಟ್ಟಿಗೆ ಒಬ್ಬಳು ಲೇಡಿಯನ್ನು ಕರೆದುಕೊಂಡು ಬಂದಿದ್ದ.

''ಉಷಾ, ಇವಳು ನನ್ನ ಕ್ಲಾಸ್‌ಮೇಟ್. ಬಾಲ್ಯದ ಗೆಳತಿ. ಇವಳಿಗೆ ನಮ್ಮ ಕುಟುಂಬದ ಪರಿಸ್ಥಿತಿಯನ್ನು ಎಲ್ಲಾ ವಿವರಿಸಿದಾಗ ನಮ್ಮೊಂದಿಗೆ ಲಿವಿಂಗ್ ಟುಗೆದರ್‌ಗೆ ಒಪ್ಪಿರುತ್ತಾಳೆ. ನಿನ್ನ ಕಷ್ಟ ನನಗೆ ಗೊತ್ತು. ನನ್ನ ಸಮಸ್ಯೆ ನಿನಗೂ ಗೊತ್ತು. ನೀನು ಸಹಕರಿಸಿದರೆ ನಮಗೆ ಎಲ್ಲರಿಗೂ ಒಳಿತು. ಇಲ್ಲದಿದ್ದರೆ ನನ್ನ ದಾರಿ ನನಗೆ, ನಿನ್ನ ದಾರಿ ನಿನ್ನದು'' ಎಂದ. ■

ಕಾಮಿ ರೀಟಾ ಶೆರ್ಪಾ

‘ಎವರೆಸ್ಟ್ ಮ್ಯಾನ್’

ಕಾಮಿ ರೀಟಾ ಶೆರ್ಪಾ

ಅಸಾಮಾನ್ಯ ಸಾಧನೆ

❑ ಬಾಲಾಜಿ

ವಿಶ್ವದ ಅತ್ಯುನ್ನತ ಶಿಖರ ಮೌಂಟ್ ಎವರೆಸ್ಟ್ ಪರ್ವತವನ್ನು ನೇಪಾಳದ ಪರ್ವತಾರೋಹಿ ಕಾಮಿ ರೀಟಾ ಶೆರ್ಪಾ ಯಶಸ್ವಿಯಾಗಿ 32 ಬಾರಿ ಏರಿ ಇತಿಹಾಸ ಸೃಷ್ಟಿಸಿದ್ದಾರೆ. ಇದೇ ಕಾರಣಕ್ಕೆ ಅವರನ್ನು ‘ಎವರೆಸ್ಟ್ ಮ್ಯಾನ್’ ಎಂದೇ ಕರೆಯಲಾಗುತ್ತಿದೆ.

ಜೀವನದಲ್ಲಿ ಒಮ್ಮೆಯಾದರೂ ಮೌಂಟ್ ಎವರೆಸ್ಟ್ ಶಿಖರದ ತುತ್ತ ತುದಿ ಮುಟ್ಟಬೇಕು ಎಂಬುದು ಪರ್ವತಾರೋಹಿಗಳ ಬಹು ದೊಡ್ಡ ಕನಸು. ಆದರೆ ಅದು ಸುಲಭದಲ್ಲಿ ಕೈಗೂಡುವ ಕನಸಲ್ಲ. ಆರಂಭದ ಬೇಸ್‌ಕ್ಯಾಂಪ್ ದಾಟಿದ ಬಳಿಕ ಅಡಿಗಡಿಗೂ ಅಂಗೈಯಲ್ಲಿ ಜೀವ ಹಿಡಿದುಕೊಂಡೇ ಹೆಜ್ಜೆ ಹಾಕಬೇಕು. ಕೊಂಚ ಎಚ್ಚರ ತಪ್ಪಿದರೂ ಜೀವ ತಣ್ಣಗಾಗುತ್ತದೆ, ಇಲ್ಲವೇ ಎಂದಿಗೂ ಸಿಗದ ಆಳ ಕಂದರದ ಪಾಲಾಗುತ್ತದೆ. ಇಂಥ ಹಲವು ಸವಾಲುಗಳನ್ನು ಮೀರಿ ನೇಪಾಳದ ‘ಎವರೆಸ್ಟ್ ಮ್ಯಾನ್’ 56 ವರ್ಷದ ಕಾಮಿ ರೀಟಾ ಶೆರ್ಪಾ 32ನೆಯ ಬಾರಿಗೆ ಎವರೆಸ್ಟ್ ಹತ್ತಿದ ದಾಖಲೆ ಬರೆದಿದ್ದಾರೆ.

ಕಳೆದ ಮೇ 17ರಂದು ಬೆಳಿಗ್ಗೆ 10:12ಕ್ಕೆ 8,849 ಮೀಟರ್ (29,032 ಅಡಿ) ಎತ್ತರದ ಮಹೋನ್ನತ ಶಿಖರದ ತುದಿಯೇರಿ ಮಂದಹಾಸ ಚೆಲ್ಲಿದ್ದಾರೆ. ಆ ಮೂಲಕ 32 ಬಾರಿ ಎವರೆಸ್ಟ್ ಹತ್ತಿದ ವಿಶ್ವದ ಏಕೈಕ ವ್ಯಕ್ತಿ ಎಂಬ ಹಿರಿಮೆಗೆ ಪಾತ್ರರಾಗಿದ್ದಾರೆ.

‘ಹೆಜ್ಜೆ ಊರಿದ್ದಕ್ಕೆ ಮನ್ನಿಸು’

ಈ ದಾಖಲೆ ಶಾಶ್ವತವಾದ ಕ್ಷಣದಲ್ಲಿ ಅವರು ಉಬ್ಬಿ ಬೊಬ್ಬಿರಿಯಲಿಲ್ಲ ಬದಲು ಅತ್ಯಂತ ವಿನೀತಭಾವದಿಂದ ಬಾಗಿ ಮಂಜನ್ನು ಮುಟ್ಟಿ ನಮಸ್ಕರಿಸಿ, ‘ನಿನ್ನ ಮೇಲೆ ಹೆಜ್ಜೆ ಊರಿದ್ದಕ್ಕೆ ಕ್ಷಮಿಸು’ ಎಂದರು! ಏಕೆಂದರೆ ಶೆರ್ಪಾಗಳು ಈ ಪರ್ವತವನ್ನು ‘ಮಿಯೋಲಾಂಗ್ಸಮಾ’ ಅಥವಾ ‘ಚೋಮೋಲುಂಗ್ಮಾ’ ಎನ್ನುತ್ತಾರೆ. ಇದು ಅವರ ಪಾಲಿಗೆ ‘ರಕ್ಷಾ ದೇವತೆ’. ನೇಪಾಳದಲ್ಲಿ ಇದನ್ನು ‘ಸಾಗರಮಾತಾ’ ಎಂದು ಕರೆಯಲಾಗುತ್ತದೆ.

‘ನಾನು ಆರೋಹಣವನ್ನು ಪ್ರಾರಂಭಿಸುವ ಕೆಲವು ತಿಂಗಳ ಮೊದಲೇ, ಆಕೆಯನ್ನು ಆರಾಧಿಸಲು ಮತ್ತು ಕ್ಷಮೆಯಾಚಿಸಲು ಪ್ರಾರಂಭಿಸುತ್ತೇನೆ. ಏಕೆಂದರೆ, ನಾನು ನನ್ನ ಪಾದಗಳನ್ನು ಆಕೆಯ ದೇಹದ ಮೇಲೆ ಇಡಬೇಕಾಗುತ್ತದೆ. ನಾನು ದಾಖಲೆ ಮಾಡಿರುವೆ ಎಂದೂ ಹೇಳಿಕೊಳ್ಳಲಾರೆ. ಇದು ನನ್ನ ಕಾಯಕ ಅಷ್ಟೆ’ ಎಂದು ನಮ್ರತೆಯಿಂದ ಹೇಳಿಕೊಂಡಿದ್ದಾರೆ ಕಾಮಿ.

ಅವರ ಮಾತು ಕೇಳುವವರಿಗೆ ಸದಾ ಕುತೂಹಲ ಮತ್ತು ಬೆರಗು. ಎತ್ತರ ಎಷ್ಟು? ಕಣಿವೆ ಯಾವ ರೀತಿ ಇರುತ್ತದೆ? ಆಪಾಯಗಳೇನು? ಉಸಿರಾಟದ ಸಮಸ್ಯೆಗೆ ಏನು ಪರಿಹಾರ – ಇಂಥ ಹಲವು ಪ್ರಶ್ನೆಗಳು ಕಾಡುತ್ತಿರುತ್ತವೆ. ಆದರೆ ಈ ಪರ್ವತದೊಂದಿಗೆ ಒಡನಾಡುವ ಕಾಮಿ ರೀಟಾ ಶೆರ್ಪಾರಂಥ ಬೆಟ್ಟದ ಜೀವಗಳಿಗೆ ಅದು ನಿಕಟ ದೈವ. ಸದಾ ಒಡನಾಡುವ ಆಪ್ತ. ಹೀಗಾಗಿ ಮೌಂಟ್ ಎವರೆಸ್ಟ್ ಮುಂದೆ ಅವರು ವಿನೀತರಾಗಿಯೇ ನಡೆದುಕೊಳ್ಳುತ್ತಾರೆ.

ಕಾಮಿಯ ಶಿಖರ ಮೋಹ

ಕಾಮಿ ಮೊತ್ತ ಮೊದಲ ಬಾರಿಗೆ ಎವರೆಸ್ಟ್ ಏರಿದ್ದು 1994ರಲ್ಲಿ. ಆ ಬಳಿಕ ಬಹುತೇಕ ಪ್ರತಿ ವರ್ಷ ಈ ಸಾಧನೆ ಮಾಡುತ್ತಲೇ ಇದ್ದಾರೆ. ಕೆಲವು ಬಾರಿ ಒಂದೇ ವರ್ಷದಲ್ಲಿ ಎರಡು ಬಾರಿ ತುದಿ ಮುಟ್ಟಿ ಬಂದದ್ದೂ ಇದೆ. 2018ರಲ್ಲಿ 22 ಬಾರಿ ಮೌಂಟ್ ಎವರೆಸ್ಟ್ ಏರಿದ ಏಕೈಕ ವ್ಯಕ್ತಿ ಎನ್ನಿಸಿಕೊಂಡರು. ಆಗ ಅವರು 21 ಬಾರಿ ಈ ಮಹೋನ್ನತ ಶಿಖರ ಏರಿದ್ದ ಅಪಾ ಶೆರ್ಪಾ ಹಾಗೂ ಪುರ್ಬಾ ತಾಶಿ ಶೆರ್ಪಾ ಎಂಬ ಇಬ್ಬರ ದಾಖಲೆಯನ್ನು ಅಳಿಸಿ ಹಾಕಿದ್ದರು.

ಕೇವಲ ಮೌಂಟ್ ಎವರೆಸ್ಟ್ ಅಷ್ಟೇ ಅಲ್ಲ ಎಂಟು ಸಾವಿರ ಮೀಟರ್ ಎತ್ತರವಿರುವ ಚೋ ಓಯು (8 ಬಾರಿ), ಮನಾಸ್ಲು (3 ಬಾರಿ), ಕೆ2 (1 ಬಾರಿ), ಮತ್ತು ಲಹೋತ್ಸೆ (1 ಬಾರಿ) ಶಿಖರಗಳನ್ನೂ ಮುಟ್ಟಿ ಬಂದಿದ್ದಾರೆ. ಎಂಟು ಸಾವಿರ ಮೀಟರ್ ಎತ್ತರವಿರುವ ಶಿಖರಗಳನ್ನು ಒಟ್ಟು 46 ಬಾರಿ ಸ್ಪರ್ಶಿಸಿದ್ದಾರೆ. ಕಾಮಿ ರೀಟಾ ಶೆರ್ಪಾ ಅವರಿಗೆ ಪೈಪೋಟಿ ನೀಡುತ್ತಿರುವ ಇನ್ನೋರ್ವ ಪಸಂಗ್ ದಾವಾ ಶೆರ್ಪಾ (49 ವರ್ಷ) 31 ಬಾರಿ ಎವರೆಸ್ಟ್ ಆರೋಹಣ ಮಾಡಿದ್ದಾರೆ. ಮುಂದೊಂದು ದಿನ ಮೌಂಟ್ ಎವರೆಸ್ಟ್ ಏರಿಕೆಯಲ್ಲಿ ಇವರು ಕಾಮಿಯನ್ನು ಹಿಮ್ಮೆಟ್ಟಿಸಬಹುದು. ಕಾಮಿಗೆ ಹೋಲಿಸಿದರೆ ಇವರ ವಯಸ್ಸೂ ಚಿಕ್ಕದು. ಒಟ್ಟಿನಲ್ಲಿ ಇವರಿಬ್ಬರ ನಡುವಿನ ಪೈಪೋಟಿ ತೀವ್ರವಾಗಿದೆ.

ಕಾಮಿ ರೀಟಾ ಕೇವಲ ಆರೋಹಣ, ಅವರೋಹಣ ಮಾಡುವವರಲ್ಲ ಮಾರ್ಗದರ್ಶಿ ಕೂಡ ಆಗಿದ್ದಾರೆ. ಅವರ ವೃತ್ತಿಯೂ ಇದೇ ಆಗಿದೆ. ಈ ಕಾರಣದಿಂದ ಹಿಮಾಲಯದೊಂದಿಗೆ ಬಿಡಲಾರದ ಬಂಧ. ‘ನನ್ನ ದೇಹದಲ್ಲಿ ಶಕ್ತಿ ಇರುವ ತನಕ ಎವರೆಸ್ಟ್ ಹತ್ತಿ ಇಳಿಯುವುದನ್ನು ನಿಲ್ಲಿಸಲಾರೆ’ ಎಂದು ಘೋಷಿಸಿದ್ದಾರೆ ಕಾಮಿ.

31 ಬಾರಿ ಎವರೆಸ್ಟ್ ಏರಿರುವ ಪಸಂಗ್ ದಾವಾ ಶೆರ್ಪಾ.

'ಮೌಂಟೇನ್ ಕ್ವೀನ್' ಲ್ಹಕ್ಪಾ ಶೆರ್ಪಾ

ಹಿಮಾಲಯದ ನಂಟು

1970ರ ಜನವರಿಯಲ್ಲಿ ಕೋಶಿ ಪ್ರಾಂತ್ಯದ ಸೋಲುಖುಂಬು ಎಂಬ ಜಿಲ್ಲೆಯ ಥಾಮೆ ಎಂಬ ಪುಟ್ಟ ಹಳ್ಳಿಯಲ್ಲಿ ಹುಟ್ಟಿದ ಕಾಮಿ ರೀಟಾ 1992ರಲ್ಲಿ ವೃತ್ತಿಪರ ಪರ್ವತಾರೋಹಿಯಾದರು. 1994ರಲ್ಲಿ ಮೊದಲ ಬಾರಿ ಈ ಅತ್ಯುನ್ನತ ಶಿಖರ ಏರಿದರು. 20ನೆಯ ಶತಮಾನದ ಮಧ್ಯಭಾಗದಲ್ಲಿ ಅಂತಾರಾಷ್ಟ್ರೀಯ ಪರ್ವತಾರೋಹಿಗಳಿಗಾಗಿ ಎವರೆಸ್ಟ್ ಮುಕ್ತಗೊಂಡಿತು. ಈ ಅವಧಿಯಲ್ಲಿ ಕಾಮಿ ರೀಟಾ ಶೆರ್ಪಾ ತಂದೆ ಮಿಂಗ್ಮಾ ತೈರಿಂಗ್ ಶೆರ್ಪಾ ಆರಂಭಿಕ ಹಂತದಲ್ಲಿ ಮಾರ್ಗದರ್ಶಿಯಾಗಿದ್ದರು. ಅಪ್ಪನ ಜತೆ ಸದಾಕಾಲ ಇದ್ದ ಬಾಲಕ ಕಾಮಿಗೆ ಹಿಮದ ಗಡ್ಡೆಗಳನ್ನು ಚೆಂಡಾಗಿಸುವುದು, ಜಾರುವುದು ಬಾಲ್ಯದ ಆಟವಾಗಿತ್ತು.

12ನೆಯ ವಯಸ್ಸಿಗೆ ಎವರೆಸ್ಟ್ ಬೇಸ್ ಕ್ಯಾಂಪ್ ಪರ್ವತಾರೋಹಿಗಳ ಅಗತ್ಯ ಸಾಮಗ್ರಿಗಳ ಸಾಗಣೆಗಾರನಾಗಿದ್ದ ಕಾಮಿ ವಯಸ್ಕರಾದಾಗ ಮಾರ್ಗದರ್ಶಿಯಾದರು. 2019ರಲ್ಲಿ ಆರೋಹಣ ಸಾಹಸ ಯಾನ ಏರ್ಪಡಿಸುವ ಸವೆನ್ ಸಮ್ಮಿಟ್ ಟ್ರೆಕ್ಸ್ ಕಂಪೆನಿ ಉದ್ಯೋಗಿಯಾದರು. ಕೆಲವೊಂದು ಕಂಪೆನಿಗಳಿಗೆ ಪ್ರಚಾರ ರಾಯಭಾರಿಯಾಗಿಯೂ ಕಾರ್ಯನಿರ್ವಹಿಸಿದರು.

ನಾ ನಿನ್ನ ಬಿಡಲಾರೆ

ಎವರೆಸ್ಟ್ ಸಾಹಸ ಯಾತ್ರೆಗಳನ್ನು ಸಾಧ್ಯವಾಗಿಸುವಲ್ಲಿ ಶೆರ್ಪಾಗಳು ಪ್ರಮುಖ ಪಾತ್ರ ವಹಿಸುತ್ತಾರೆ. ಬಲು ಅಪಾಯಕಾರಿ ತಾಣಗಳಲ್ಲಿ ಆಮ್ಲಜನಕದ ಸಿಲಿಂಡರ್‌ಗಳು, ಡೇರೆಗಳು, ಹಗ್ಗಗಳು ಮತ್ತು ಅಗತ್ಯ ಸಾಮಗ್ರಿಗಳನ್ನು ಹೊತ್ತೊಯ್ಯುತ್ತಾರೆ. ಅಗತ್ಯ ಬಿದ್ದಾಗ ಹಗ್ಗಗಳನ್ನು ಜೋಡಿಸುತ್ತಾರೆ, ಸುರಕ್ಷಿತ ಮಾರ್ಗಗಳನ್ನು ಸಿದ್ಧಪಡಿಸುತ್ತಾರೆ. ಪರ್ವತಾರೋಹಿಗಳಿಗೆ ಒತ್ತಾಸೆಯಾಗಿ ನಿಲ್ಲುತ್ತಾರೆ. ಈ ಕೌಶಲಗಳನ್ನು ಕಾಮಿ ತಂದೆಯಿಂದ ಬಳುವಳಿಯಾಗಿ ಪಡೆದರು.

ಶೆರ್ಪಾಗಳಿಗೆ ತುದಿಯನ್ನು ನೋಡಿದರೆ ಸಾಕು, ಬುಡದ ಮರ್ಮ ಗೊತ್ತಾಗುತ್ತದೆ! ನೀರ್ಗಲ್ಲುಗಳ ಲಕ್ಷಣ ಅಂಗೈ ಗೆರೆಗಳಷ್ಟೇ ಸ್ಪಷ್ಟವಾಗಿ ತಿಳಿಯುತ್ತದೆ. ಇವುಗಳಲ್ಲಿ ಕಾಮಿ ಅಸಾಧಾರಣ ಪರಿಣತರಾದರು. ವಿವಾಹವಾಗಿ ಎರಡು ಮಕ್ಕಳ ತಂದೆಯಾದ ಬಳಿಕವೂ ಅವರ ಉತ್ಸಾಹ ಕಡಿಮೆಯಾಗಲಿಲ್ಲ. ಇವರ ಪತ್ನಿ ಲಕ್ಪಾ ಜಂಗ್ಮು 'ನನ್ನ ಗಂಡ ಪರ್ವತಾರೋಹಣದಿಂದ ನಿವೃತ್ತರಾಗಬೇಕು ಎಂದು ಬಯಸುವೆ. ಸಣ್ಣ ವ್ಯಾಪಾರದಿಂದ ನಾವು ಹೊಸ ಬದುಕು ಕಟ್ಟಿಕೊಳ್ಳೋಣ ಎಂದು ಹೇಳುತ್ತಲೇ ಇರುತ್ತೇನೆ. ಆದರೆ ಕಾಮಿ ನನ್ನ ಮಾತು ಕೇಳುವುದಿಲ್ಲ' ಎಂದು ಸಂದರ್ಶನಗಳಲ್ಲಿ ಹೇಳುತ್ತಿರುತ್ತಾರೆ.

ಕಳೆದ ಕೆಲವು ದಶಕಗಳಿಂದ ಎವರೆಸ್ಟ್ ಪರ್ವತಾರೋಹಣ ಉದ್ಯಮವಾಗಿ ಬದಲಾಗಿದೆ. ಪ್ರತಿ ವರ್ಷ ವಸಂತ ಕಾಲದ ಅಲ್ಪಾವಧಿಯ ಹವಾಮಾನದ ಅನುಕೂಲದ ಸಮಯದಲ್ಲಿ ನೂರಾರು ಪರ್ವತಾರೋಹಿಗಳು ಶಿಖರವನ್ನು ಏರಲು ತಯಾರಾಗಿರುತ್ತಾರೆ. ವಾಣಿಜ್ಯ ಸಾಹಸ ಯಾತ್ರೆಗಳು ಎವರೆಸ್ಟ್ ಪ್ರವೇಶವನ್ನು ಹೆಚ್ಚಿಸಿವೆಯಾದರೂ, ಅತಿಯಾದ ಜನದಟ್ಟಣೆ, ಪರಿಸರ ಹಾನಿ ಮತ್ತು ಪರ್ವತಾರೋಹಣದ ಸುರಕ್ಷತೆಯ ಬಗ್ಗೆ ಕಳವಳ ಹುಟ್ಟುಹಾಕಿವೆ. ಈ ಬದಲಾವಣೆಗಳ ಹೊರತಾಗಿಯೂ, ಕಾಮಿ ರೀಟಾ ಅವರಂತಹ ಅನುಭವಿ ಶೆರ್ಪಾ ಪರ್ವತಾರೋಹಿಗಳು ಶಿಖರವನ್ನು ಏರಲು ಪ್ರಯತ್ನಿಸುವ ಪ್ರತಿಯೊಬ್ಬ ಪ್ರವಾಸಿಗರಿಗೂ ಅತ್ಯಗತ್ಯವಾಗಿದ್ದಾರೆ.

ಲ್ಹಕ್ಪಾ ಶೆರ್ಪಾ ಎಂಬ ವಿಕ್ರಮ

ಲ್ಹಕ್ಪಾ ಶೆರ್ಪಾ ಎಂಬ 52 ವರ್ಷದ ಮಹಿಳಾ ಪರ್ವತಾರೋಹಿ 11ನೆಯ ಬಾರಿ ಮೌಂಟ್ ಎವರೆಸ್ಟ್ ಶಿಖರವನ್ನು ಮುಟ್ಟಿ ಮತ್ತೊಂದು ಸಾಧನೆ ಮಾಡಿದ್ದಾರೆ. 'ಮೌಂಟೇನ್ ಕ್ವೀನ್' ಎಂದು ಹೆಸರಾಗಿರುವ ಈಕೆ 2000ದಲ್ಲಿ ಮೊದಲ ಬಾರಿಗೆ ಎವರೆಸ್ಟ್ ಮೇಲೇರಿ ನೇಪಾಳದ ನಾರಿಯರ ಬಲವನ್ನು ಜಗತ್ತಿಗೆ ತೋರಿದ್ದರು. ಮೂರು ವರ್ಷಗಳ ಹಿಂದೆ ತಯಾರಾದ 'ಮೌಂಟೇನ್ ಕ್ವೀನ್' ಎಂಬ ಸಾಕ್ಷ್ಯ ಚಿತ್ರ ಈಕೆಯ ಸಾಧನೆಯನ್ನು ಬಿಡಿಸಿಡುತ್ತದೆ.

ಬಲು ದುರ್ಗಮ ಎವರೆಸ್ಟ್ ಹಾದಿ

ಕಥೆ

❑ ಗಾಯತ್ರಿ

ಕೂಪ ಮಂಡೂಕ

ಕೃತಜ್ಞತೆಯಿಂದ ಕೈ ಮುಗಿದ ದಂಪತಿ ತನ್ನ ಮುಂದೆ ಎತ್ತರೆತ್ತರಕ್ಕೆ ಬೆಳೆದು ನಿಂತಂತೆಯೂ ತಾನು ಅವರ ಮುಂದೆ ಅತೀ ಕುಬ್ಜನಾದಂತೆಯೂ ಭಾಸವಾಯಿತು ಅವನಿಗೆ...!



''ಒಳಕ್ಕೂ ಹೊರಕ್ಕೂ ಅದೆಷ್ಟು ಬಾರಿ ಓಡಾಡುತ್ತೀಯೆ ಕುಸುಮಾ, ಊರಿಗೆ ಬಂದವನು ಮನೆಗೆ ಬರಲಾರನೆ. ಅವನ ಸ್ನೇಹಿತ ಹೋಗಿದ್ದಾನಲ್ಲ ಕರೆತರೋಕೆ. ಅವನು ಬರಲು ಇನ್ನೂ ಒಂದು ತಾಸಾದರೂ ಆದೀತು, ಸುಮ್ಮನೆ ಆಯಾಸ ಮಾಡಿಕೊಳ್ಳದೆ ಒಂದು ಕಡೆ ಕೂರಬಾರದೆ'' ವಾದಿರಾಜರಿಗೆ ಮಡದಿಯ ಬಗ್ಗೆ ಕಾಳಜಿ. ಗಂಡನ ಮಾತಿಗೆ ಬೆಲೆ ಎಂಬಂತೆ ಕುಸುಮಾ ಸೋಪಾದ ಮೂಲೆಯಲ್ಲಿ ಕುಳಿತರು. ಮನೆಯಲ್ಲಿ ಹಬ್ಬದ ವಾತಾವರಣ. ಹೆಣ್ಣುಮಕ್ಕಳೂ ಅಳಿಯಂದಿರು ಒಂದೆಡೆ ಕುಳಿತು ಹರಟುತ್ತಿದ್ದರೆ, ಮೊಮ್ಮಕ್ಕಳು ಸಂತಸದಿಂದ ಆಚೀಚೆ ಓಡಾಡಿಕೊಂಡಿದ್ದರು. ಮನೆಯಲ್ಲೇ ಘಮಘಮಿಸುವ ಹಬ್ಬದ ಅಡುಗೆ. ನಸುಕಿನ ನಾಲ್ಕು ಗಂಟೆಗೇ ಎದ್ದದ್ದು ಮಗನಿಗಿಷ್ಟವಾದ ತಿಂಡಿಯನ್ನೆಲ್ಲಾ ತಯಾರಿಸಿದ್ದರು.

ಮಗ, ವಿದೇಶಕ್ಕೆ ಹೋಗಿ ವರ್ಷವಾಗಿತ್ತು. ಅಲ್ಲಿ ಅದೇನು ತಿಂದಿರ್ತಾನೋ ಏನೋ. ಅವನಿಗೆ ಮನೆ ಊಟವೆಂದರೆ ಪ್ರಾಣ. 'ಅಮ್ಮ ನಿನ್ನ ಕೈಯಿನ ಹೋಳಿಗೆ, ಪುಳಿಯೋಗರೆಯ ರುಚಿಯೇ ರುಚಿ ನೋಡು. ಅದಕ್ಕೆ ಸರಿಸಾಟಿಯೇ ಇಲ್ಲ ನಿನ್ನ ಕೈನಲ್ಲಿ ಅದ್ಭುತ ಶಕ್ತಿಯಿದೆ. ಅದಕ್ಕೆ ಆ ರುಚಿ.' ಅಮ್ಮ ಮಾಡಿದ ಒಂದೊಂದು ಅಡುಗೆಯನ್ನು ಅನುಭವಿಸಿ ತಿನ್ನುತ್ತಿದ್ದ ಹುಡುಗ ಈಗಂತೂ ಬಾಯಿ ಕೆಟ್ಟಿರಬೇಕು. ಅದಕ್ಕಾಗಿ ನಸುಕಿನಲ್ಲೇ ಎದ್ದು ಅವನಿಗಿಷ್ಟವಾದ ಅಡುಗೆಯನ್ನೆಲ್ಲಾ ಮಾಡಿದ್ದರು. ಸೋಫಾದಲ್ಲಿ ಕುಳಿತು ಯೋಚಿಸುತ್ತಿದ್ದ ಕುಸುಮಾರ ಮನಸ್ಸು ಗತಕ್ಕೆ ಇಳಿದಿತ್ತು.

ಎರಡು ಹೆಣ್ಣುಮಕ್ಕಳ ಅನಂತರ ಎಂಟು ವರ್ಷಕ್ಕೆ ಹುಟ್ಟಿದವನು ಸುಧಾಕರ. ಹೀಗಾಗಿ ಎಲ್ಲರಿಗೂ ಅತಿಮುದ್ದು. ಸದಾ ತಾಯಿಯ ಸೆರಗ್ಹಿಡಿದು ಓಡಾಡಿಕೊಂಡಿದ್ದವ. ಹೆಣ್ಣುಮಕ್ಕಳು ಮದುವೆಯಾಗಿ ಗಂಡನ ಮನೆಗೆ ಹೋದ ಮೇಲಂತೂ, ಮನೆಯನ್ನೂ ಮನಸ್ಸನ್ನೂ ಒಬ್ಬನೇ ಆವರಿಸಿಕೊಂಡಿದ್ದ. ಪದವಿ ಮುಗಿಸುತ್ತಿದ್ದಂತೆ ಕೆಲಸ ಸಿಕ್ಕಿತ್ತು. ಮಗ ನೆಲೆ ನಿಂತಿದ್ದಾನೆ. ಅವನಿಗೊಂದು ಮದುವೆ ಮಾಡಿಬಿಟ್ಟರೆ ಜವಾಬ್ದಾರಿ ಮುಗಿದಂತೆ. ವಧುವಿನ ತಪಾಸಣೆಯಲ್ಲಿದ್ದಾಗಲೇ ಕಂಪೆನಿ ಕಡೆಯಿಂದ ಹನ್ನೊಂದು ತಿಂಗಳ ಮಟ್ಟಿಗೆ ಟ್ರೈನಿಂಗ್ ಗೆಂದು ಲಂಡನ್ನಿಗೆ ಹೋಗುವ ಅವಕಾಶ ಬಂದಿತ್ತು. ಕುಸುಮಾರಿಗೆ ಒಂದೇ ಆತಂಕ-ಹುಟ್ಟಿದಾಗಿನಿಂದ ಮಗನನ್ನು ಎಂದೂ ಬಿಟ್ಟಿದ್ದವರಲ್ಲ, ದೂರದ ದೇಶ ಕಾಣದ ಜನ ಅಲ್ಲಿ ಹೇಗೋ ಏನೋ ಕಂಗಾಲಾದರು. ಗಂಡನ ಬಳಿ ಅಲವತ್ತುಕೊಂಡಿದ್ದರು. ''ಏನೂಂದ್ರೆ ಈ ಪ್ರವಾಸ ಆಗಲೇಬೇಕೆ ಇಷ್ಟು ವರ್ಷದಲ್ಲಿ ಅವನು ನಮ್ಮಿಂದ ದೂರ ಇದ್ದವನಲ್ಲ.''

ವಾದಿರಾಜರು ಮಡದಿಯನ್ನು ಸಮಾಧಾನಿಸಿದರು ''ಕುಸುಮಾ, ನಿನ್ನ ಮಗ ನೀನಂದುಕೊಂಡಂತೆ ಮುಗ್ಧನೇನೂ ಅಲ್ಲ, ಓದಿಕೊಂಡವನು. ಅವನಿಗೂ ಧೈರ್ಯವಿದೆ. ಇದೆಲ್ಲ ಜೀವನದಲ್ಲಿ ಒಂದು ಬಾರಿ ಬರುವ ಅವಕಾಶ. ಹೋಗಿಬರಲಿ ಬಿಡು. ಒಂದೊಮ್ಮೆ ನಾವು ಬೇಡಾಂದ್ರೆ ಅವನು ನಿಲ್ತಾನೆ ಅಂದುಕೊಂಡಿದ್ದೀಯಾ. ನಿನಗೆ ಸಮಾಧಾನವಾಗುವುದಿದ್ದರೆ ನೀನೇ ಅವನ ಬಳಿ ಮಾತನಾಡು.'' ಕುಸುಮಾ ಮಗನ ಬಳಿ ಬೇಡಿದ್ದರು. ''ಇದಕ್ಕೆ ನೀನೇ ಯಾಕಾಗಬೇಕು. ಬೇರೆ ಯಾರಾದರೂ ಹೋದರೆ ಆದೀತಲ್ಲವಾ. ಆದಾಗದಿದ್ದರೆ ಆ ಕೆಲಸವೇ ಬೇಡಬಿಡು ಬೇರೇ ನೋಡಿಕೊಂಡರಾಯಿತು. ನನಗಂತೂ ನಿನ್ನನ್ನು ಬಿಟ್ಟಿರೋಕಾಗೊಲ್ಲ ಗೊತ್ತ'' ಕಣ್ಣಲ್ಲಿ ನೀರಾಡಿತ್ತು.

ಅಮ್ಮನನ್ನು ತಬ್ಬಿ ಹೇಳಿದ್ದ ಸುಧಾಕರ ''ನನಗೆ ಮಾತ್ರ ನಿಮ್ಮನ್ನೆಲ್ಲಾ ಬಿಟ್ಟು ಹೋಗುವುದು ಸುಲಭ ಸಾಧ್ಯನಾ, ಆದರೇನು ಮಾಡುವುದಮ್ಮ ಇದು ತಾನಾಗೇ ಒದಗಿ ಬಂದ ಸದಾವಕಾಶ. ಇದೊಂದು ಬಾರಿ ನಾನು ಹೋಗಿ ಬಂದರೆ ನನ್ನ ಜೀವನಶೈಲಿಯೇ ಬದಲಾಗುತ್ತೆ. ವಿಶೇಷವಾದ ಗೌರವ, ಮನ್ನಣೆ ಸಿಗುತ್ತದೆ. ಮುಂದಿನ ಜೀವನಕ್ಕೆ ಯಶಸ್ಸಿನ ಮೆಟ್ಟಿಲಾಗುತ್ತೆ. ಕೇವಲ ಹನ್ನೊಂದು ತಿಂಗಳು ಹೀಗೆ ಹೋಗಿ ಹಾಗೆ ಬಂದು ಬಿಡುತ್ತಮ್ಮ. ನಿನ್ನ ಮನಸ್ಸು ನನಗೆ ಅರ್ಥವಾಗುತ್ತೆ. ಈಗೆಲ್ಲಾ ವ್ಯವಸ್ಥೆ ಚೆನ್ನಾಗಿದೆ ಬೇಕೆನಿಸಿದಾಗೆಲ್ಲಾ ನೋಡಬಹುದು ಮಾತಾಡಬಹುದು.''

''ಏನಾದರೇನು ಹತ್ತಿರ ಇದ್ದಂತಾಗುತ್ತೇನು'' ಭಾವುಕರಾಗಿದ್ದರು ಕುಸುಮಾ.

''ದಯವಿಟ್ಟು ನೊಂದುಕೊಳ್ಳಬೇಡಮ್ಮ. ಮುಂದೆ ನಾನು ಬೆಳೆಯುವುದನ್ನು ನೋಡಿ ನೀನೇ ಸಂತೋಷ ಪಡ್ತಿಯ, ಆಶೀರ್ವಾದ ಮಾಡಿ ಒಪ್ಪಿಗೆ ಕೊಡಮ್ಮ'' ಮಗನ ದೈನ್ಯತೆಯ ಮುಂದೆ ಸೋತಿದ್ದರು ಕುಸುಮಾ. ಆದರೂ ಮಗನಿಂದ ದೂರ ಇರಬೇಕೆಂಬ ಕೊರಗಂತೂ ಇದ್ದೇ ಇತ್ತು. ಮಡದಿಯ ಆತಂಕ ವಾದಿರಾಜರ ಅರಿವಿಗೆ ಬಂದಿತ್ತು.

''ಇಲ್ನೋಡು ಕುಸುಮಾ, ಕೇವಲ ಹನ್ನೊಂದು ತಿಂಗಳು ಹೋಗಿಬರಲಿ ಬಿಡು. ನೀನೇ ಅಧೀರಳಾದರೆ ಹೇಗೆ, ಹುಟ್ಟಿದಾಗಿನಿಂದ ಅಂಗೈಲಿಟ್ಟು ಗಿಳಿಗಳಂತೆ ಸಾಕಿದ ಹೆಣ್ಣುಮಕ್ಕಳನ್ನು ಧಾರೆಯೆರೆದು ಕೊಟ್ಟಿಲ್ಲವಾ ಹಾಗೇ ಇದು. ಒಂದೊಮ್ಮೆ ಅಲ್ಲಿನ ಪರಿಸರಕ್ಕೆ ಸೋತು ಅಲ್ಲಿಯೇ ಉಳಿಯುವ ನಿರ್ಧಾರ ಮಾಡಿದರೆ ಏನು ಮಾಡ್ತೀಯೆ. ಎಷ್ಟೋ ಜನ ತಂದೆ, ತಾಯಂದಿರು ಮಕ್ಕಳನ್ನು ವಿದೇಶದಲ್ಲಿ ಬಿಟ್ಟು ಇಲ್ಲಿ ಅನಿವಾರ್ಯವಾಗಿ ಒಂಟಿಯಾಗಿರುವವರನ್ನು ನಾವೇ

ನೋಡಿದ್ದೀವಿಯಲ್ಲವಾ, ನಮಗೆ ವಯಸ್ಸಾದಂತೆಲ್ಲ ಒಂದೊಂದಾಗಿ ಬಿಟ್ಟುಕೊಡುವುದನ್ನು ಅಭ್ಯಾಸ ಮಾಡಿಕೊಂಡು ಗಟ್ಟಿಯಾಗಬೇಕು. ಇದು ಜೀವನದ ಪಾಠ. ಧೈರ್ಯದಿಂದಿದ್ದು ಅವನು ಹೋಗಿಬರಲು ಅವಕಾಶ ಮಾಡಿಕೊಡು.'' ಇಡೀ ರಾತ್ರಿ ನಿದ್ರೆಯಿಲ್ಲದೆ ಹೊರಳಾಡಿದ್ದರು ಕುಸುಮಾ. ಒಂದೊಮ್ಮೆ ಗಂಡ ಹೇಳಿದಂತೆ ಅಲ್ಲಿನ ವ್ಯವಸ್ಥೆಗೆ ಮನಸೋತು ಅಲ್ಲಿಯೇ ಉಳಿದುಬಿಟ್ಟರೆ, ಅಲ್ಲಿದ್ದೇ ಹುಡುಗಿಯನ್ನು ಮದುವೆ ಮಾಡಿಕೊಂಡು ಕರೆತಂದರೆ, ಸಣ್ಣಗೆ ನಡುಗಿದ್ದರು ಕುಸುಮಾ. ಯಾವುದೂ ಆಶ್ಚರ್ಯವಲ್ಲ. ಇಲ್ಲಿ, ಇದ್ಯಾವುದಕ್ಕು ಅವಕಾಶ ಕೊಡಬಾರದು. ತಾಯಿಯಾಗಿ ಮಗನ ಬದುಕನ್ನು ಕಟ್ಟಿಕೊಡುವುದು ನನ್ನ ಜವಾಬ್ದಾರಿ. ಮಕ್ಕಳ ಆಶಯಕ್ಕೆ ಎಲ್ಲವನ್ನೂ ಬಿಟ್ಟು ಕೊಡುವುದು ಎಷ್ಟು ಸರಿ. ನಾನು ತಾಯಿ, ಅವನು ಮಗ. ಇಲ್ಲಿಯವರೆಗೂ ಅವನ ಬೆನ್ನಿಗೆ ನಿಂತು ಅವನ ಬೇಕು ಬೇಡಗಳನ್ನು ಪೂರೈಸಿದ್ದಿದೆ. ಈಗ ಬಿಟ್ಟು ಕೊಟ್ಟರೆ ಬಾಂಧವ್ಯ ಹೇಗೆ ಉಳಿಯುತ್ತದೆ. ಅಂದರೆ ಬೆಳೆಸುವವರೆಗಷ್ಟೇ ನಾವು ಎಂದಾಗಬಾರದು. ಮಗನಿಗೆ ಹೊಂದಿಕೆಯಾಗುವ ಹುಡುಗಿಯನ್ನು ನೋಡಿ ಅವನಿಗೆ ಮದುವೆ ಮಾಡುವ ಹಕ್ಕು ನನ್ನದೆ.

ಆಗಲೇ ಭಾರತಿಯ ನೆನಪಾದದ್ದು. ಎರಡು ತಿಂಗಳ ಹಿಂದೆ ಗೆಳತಿ ಭವಾನಿಯ ಮಗಳ ಮದುವೆಗೆಂದು ಹೋಗಿದ್ದ ಸಂದರ್ಭ. ಮದುವೆ ಮನೆಯಲ್ಲಿ ನಗುನಗುತ್ತಾ ಬಂದವರನ್ನು ವಿನಯದಿಂದ ಸ್ವಾಗತಿಸುತ್ತಾ, ಬೇಕು ಬೇಡಗಳನ್ನು ಕೇಳಿ ಉಪಚರಿಸುತ್ತಾ ಓಡಾಡಿಕೊಂಡಿದ್ದ ಹುಡುಗಿ ಕುಸುಮಾರ ಮನಸೆಳೆದಿದ್ದಳು. ಯಾವುದೇ ಅಲಂಕಾರವಿಲ್ಲ, ಆಡಂಬರವಿಲ್ಲ. ನಿರಾಡಂಬರ ವ್ಯಕ್ತಿತ್ವ, ಮುಗುಳು ನಗೆಯೇ ಆಭರಣವೆನ್ನುವಂತಿದ್ದಳು.

ಕುಸುಮಾ, ಗೆಳತಿ ಭವಾನಿಯಲ್ಲಿ ಹುಡುಗಿಯ ಬಗ್ಗೆ ವಿಚಾರಿಸಿದ್ದರು. ''ಒಂದೂವರೆ ವರ್ಷದ ಹಿಂದೆ ಪಕ್ಕದ ಮನೆಗೆ ಬಾಡಿಗೆಗೆ ಬಂದವರು. ಅಪ್ಪ-ಮಗಳು ಇಬ್ಬರೇ ಇರೋದು. ಹೆಸರು ಭಾರತಿ. ಮಿತಭಾಷಿ. ಅವರ ಪೂರ್ವಾಪರ ಏನೂ ಗೊತ್ತಿಲ್ಲೆ. ತುಂಬಾ ಓದಿಕೊಂಡಿರಬೇಕು. ಹಾಗಂತ ಮಗಳು ಸುಧಾ ಹೇಳಿದ್ದು. ಆರು ತಿಂಗಳ ಹಿಂದೆಯಷ್ಟೆ ಮಗಳಿಗೆ ಪರಿಚಯವಾದದ್ದು. ಆದರ್ಶವಾದಿ. 'ಮದುವೆ ಅಂತ ಗೊತ್ತಾದಾಗ ಇದೆಲ್ಲ ಸುಮ್ಮನೆ ಖರ್ಚು. ಮನಸು ಮನಸು ಒಪ್ಪಿಗೆ ಅಂತಾದಾಗ ದೇವಸ್ಥಾನದಲ್ಲಿ ಮಂತ್ರ ಮಾಂಗಲ್ಯ ಆದರೆ ಆಯಿತು. ವರದಕ್ಷಿಣೆ, ವರೋಪಚಾರ ಇದಕ್ಕೆಲ್ಲ ಅರ್ಥವಿಲ್ಲ.' ಇದು ಅವಳ ಅಭಿಪ್ರಾಯ. ನಮ್ಮವಳೂ ಅವಳ ತಾಳಕ್ಕೆ ಕುಣಿದದ್ದೇ. ನಾವು ಅವಳನ್ನು ಒಪ್ಪಿಸುವಷ್ಟರಲ್ಲಿ ಸಾಕೋಸಾಕಾಯಿತು. ಅಲ್ಲವೆ ಕುಸುಮಾ ನಮ್ಮಲ್ಲಿ ಇದೆಲ್ಲಾ ನಡೆಯೋ ಮಾತಾ. ನೆಂಟರೂ, ಇಷ್ಟರೂ ಏನೆಂದುಕೊಂಡಾರು. ಆಡಿಕೊಂಡು ನಗೋಲ್ಲವಾ, ನಮಗಾದರೂ ಎಷ್ಟು ಜನಕ್ಕೆ ಮಾಡಬೇಕಿದೆ ಹೇಳು. ಇರುವವಳು ಒಬ್ಬಳೇ ಮಗಳು ಅದ್ಧೂರಿಯಾಗಿಯೇ ಆಗಬೇಕು. ನಾವ್ಯಾರು ತಲೆಕೆಡಿಸಿಕೊಂಡಿಲ್ಲಪ್ಪ ಮಿಕ್ಕ ವಿಷಯದಲ್ಲಿ ನನ್ನ ಮಗಳಿಗೆ ಒಳ್ಳೆಯ ಸ್ನೇಹಿತೆ. ಪರಿಚಯವಾಗಿ ಆರೇ ತಿಂಗಳಾದರೂ ಮನೆಯವಳಂತೆ ಆಗಿಬಿಟ್ಟಿದ್ದಾಳೆ ನೋಡು. ಒಳ್ಳೆಯ ಮನಸ್ಸಿನ ಹುಡುಗಿ. ಸುಧಾಕರನಿಗೆ ನೋಡುವುದಾದರೆ ಹೇಳು ನಾನೇ ಮುಂದೆ ನಿಂತು ವಿಚಾರಿಸುತ್ತೇನೆ. ಆದರೆ ವರದಕ್ಷಿಣೆ, ಆಡಂಬರದ ಮದುವೆ ಇದು ಯಾವುದನ್ನೂ ನಿರೀಕ್ಷಿಸುವಂತಿಲ್ಲಮ್ಮ'' ನಕ್ಕಿದ್ದರು ಭವಾನಿ.

''ಅಯ್ಯೋ ಹಣ ಕಟ್ಟಿಕೊಂಡು ಏನಾಗಬೇಕಿದೆ. ಮನೆಗೂ, ಮಗನಿಗೂ ಹೊಂದಿಕೆಯಾಗುವ ಹುಡುಗಿಯಾದರೆ ಸಾಕು'' ನೆನಪಾದೊಡನೆ ಥಟ್ಟನೆ ಎದ್ದು ಕುಳಿತರು ಕುಸುಮಾ.

ಇಲ್ಲ ನಾಳೆಯೇ ಹೋಗಿ ಮಾತಾಡಿಕೊಂಡು ಬರಬೇಕು. ಪ್ರಯತ್ನಪಡುವುದರಲ್ಲಿ ತಪ್ಪೇನಿದೆ. ಮಗ ಹೊರಡಲು ಇನ್ನೂ ತಿಂಗಳಿದೆ ನೋಡೋಣ. ಗಂಡನನ್ನು ಎಬ್ಬಿಸಿ ವಿಷಯವನ್ನೆಲ್ಲಾ ಅರುಹಿದ್ದರು.

''ಕುಸುಮಾ, ಇದೆಲ್ಲಾ ನಿಂತಲ್ಲಿ ಆಗುವ ಕೆಲಸವಾ, ಇದು ಅವನ ಜೀವನದ ಪ್ರಶ್ನೆ. ಅವನಿಗೆ ಅವನದ್ದೇ ಆದ ಕೆಲಸಗಳಿರುತ್ತೆ. ಹೊರಡುವ ತಯಾರಿ ಆಗಬೇಕಿದೆ. ಈ ವಿಷಯವನ್ನು ಅವನು ಹೇಗೆ ತಗೋತಾನೋ ಏನೋ'' ವಾದಿರಾಜರ ಆತಂಕ.

''ನಾನೀಗಲೇ ಮದುವೆ ಮಾಡಿಬಿಡೋಣಾಂತ ಹೇಳಿದ್ದ, ಸುಮ್ಮನೆ ನೋಡಿಬರೋಣ. ಸುಧಾಕರನಿಗೂ ಹೇಳ್ತೇನೆ. ಒಳ್ಳೆಯ ಕೆಲಸಕ್ಕೆ ಯಾವಾಗಲೂ ಮೀನ ಮೇಷ ಎಣಿಸಬಾರದು.''

ಅಪ್ಪ ಮಗಳ ಜೊತೆ ಮಾತಾಡುವ ಕೆಲಸವನ್ನು ಗೆಳತಿಗೇ ಬಿಟ್ಟಿದ್ದರು ಕುಸುಮಾ. ಅವರು ಒಪ್ಪಿದ ಆನಂತರ ಮಗನಿಗೆ ಹೇಳಿದರಾಯಿತು ಎನಿಸುತ್ತ ಭವಾನಿಯೂ ತಡಮಾಡಿರಲಿಲ್ಲ. ಅವರೊಡನೆ ಮಾತಾಡಿ, ''ನಿಮ್ಮ ಮನೆ ಬಗ್ಗೆ ಎಲ್ಲಾ ಹೇಳಿದ್ದೀನಮ್ಮ. ನಿನ್ನ ಯಜಮಾನರನ್ನು, ಮಗನನ್ನು ಕರೆ ತಂದರೆ ಹುಡುಗಿ ನೋಡುವ ಶಾಸ್ತ್ರ ಮಾಡಿಬಿಡೋಣ'' ಎಂದರು.

ಕುಸುಮಾ, ಮಗನಿಗೆ ಸೂಕ್ಷ್ಮವಾಗಿ ವಿಷಯ ತಿಳಿಸಿ ಹೇಳಿದ್ದರು. ''ನೋಡಿ ಬರುವುದಕ್ಕೇನಿದೆ. ಹೇಗಿದ್ದರೂ ನೀನು ಬರೋದು ಮುಂದಿನ ವರ್ಷವೇ. ಆನಂತರವೇ ಮುಂದಿನದ್ದು ನೋಡೋಣ. ಸುಮ್ಮನೆ ನಮ್ಮ ಜತೆ ಬಂದುಬಿಡು.'' ಸುಧಾಕರನಿಗಿದು ಫಜೀತಿಗಿಟ್ಟುಕೊಂಡಿತು. ಮೊದಲೇ ನನ್ನ ಕಳಿಸಿಕೊಡುವ ವಿಷಯಕ್ಕೆ ಬೇಸರದಿಂದಿರುವ ಅಮ್ಮನ ಮನಸ್ಸಿಗೆ ಸ್ವಲ್ಪ ಸಮಾಧಾನವಾಗುವುದಿದ್ದರೆ ಸಾಕು. ಒಪ್ಪಿಗೆ ಕೊಟ್ಟಿದ್ದ. ಹುಡುಗ-ಹುಡುಗಿ ಪರಸ್ಪರ ನೋಡಿ 'ಹೂಂ' ಎಂದಿದ್ದೇ ತಡ ತಮ್ಮ ಕೈಯಲ್ಲಿದ್ದ ಹೊಸ ಚಿನ್ನದ ಉಂಗುರವನ್ನು ಮಗನ ಕೈಗಿತ್ತು ಭಾರತಿಯ ಬೆರಳಿಗೆ ತೊಡಿಸಿಯೇ ಬಿಟ್ಟಿದ್ದರು, ಸಂಬಂಧ ಗಟ್ಟಿಯಾಯಿತು ಎನ್ನುವಂತೆ.

ಸುಧಾಕರ ವಿದೇಶಕ್ಕೆ ಹೊರಡುವ ತಯಾರಿಯಲ್ಲಿದ್ದವನಿಗೆ ಉತ್ಸಾಹದ ಅಲೆಯಲ್ಲಿ ತೇಲುತ್ತಿದ್ದವನಿಗೆ ಇದು ಅಷ್ಟೊಂದು ಮಹತ್ವದ ವಿಷಯ ಆಗಿರಲಿಲ್ಲ. ಆದರೆ ಕುಸುಮಾಗೆ ಮಾತ್ರ ಒಂದು ರೀತಿಯ ನೆಮ್ಮದಿ. ಹೊರಗೆ ಕಾರಿನ ಹಾರನ್ ಕೇಳಿಸಿದೊಡನೆ ವಾಸ್ತವಕ್ಕೆ ಬಂದವರು ಒಂದೇ ನೆಗೆತಕ್ಕೆ ಹಾರಿ ಬಾಗಿಲಿಗೆ ಬಂದಿದ್ದರು. ''ವಿದ್ಯಾ, ನಿತ್ಯಾ, ಆರತಿ ತಟ್ಟೆ ತಂಗೊಂಬನ್ರೇ ಸುಧಾಕರ ಬಂದಾಯ್ತು''

ಸಂಭ್ರಮದಿಂದ ಮಕ್ಕಳನ್ನು ಕೂಗಿದ್ದರು. ಹೆಣ್ಣು ಮಕ್ಕಳಿಬ್ಬರೂ ಆರತಿ ತಟ್ಟೆ ಹಿಡಿದು ಬಾಗಿಲಿಗೆ ಬಂದರು. ಕಾರಿನಿಂದಿಳಿದ ಸುಧಾಕರನ ಮುಖದಲ್ಲಿ ಆಸಹನೆ ತಾಂಡವವಾಡುತ್ತಿತ್ತು. ''ಇದೆಂಥದ್ದು ಹಳೆಯ ಸಂಪ್ರದಾಯ. ಬೇಕಾ ಇದೆಲ್ಲ, '' ತಟ್ಟೆಯನ್ನು ತಳ್ಳಿ ಒಳಗೆ ಬಂದವ ಸಿಡಿಮಿಡಿಗೊಂಡಿದ್ದ.

ಕುಸುಮಾ ಪೆಚ್ಚಾಗಿದ್ದ ಹೆಣ್ಣುಮಕ್ಕಳಿಗೆ ಸಾಂತ್ವನ ಹೇಳಿದ್ದರು. ಸಾವಿರಾರು ಮೈಲಿ ದೂರದ ಪ್ರಯಾಣ ಆಯಾಸವಾಗಿರಲಿಕ್ಕೆ ಸಾಕು . ಮಗನನ್ನು ಕಕ್ಕುಲತೆಯಿಂದ ಕೇಳಿದ್ದರು. ''ಸುಸ್ತಾಯಿತೇನೋ.''

''ಅಷ್ಟು ದೂರದಿಂದ ಬಂದಿದ್ದು ಆಯಾಸವೆನಿಸಲಿಲ್ಲ. ಏರ್‌ಪೋರ್ಟ್‌ನಿಂದ ಮನೆಗೆ ಬರುವಷ್ಟರಲ್ಲಿ ದೇಹ ನಜ್ಜುಗುಜ್ಜಾಯಿತು. ಏನು ದರಿದ್ರ ರಸ್ತೆಗಳೋ ಏನೋ, ಬರೀ ಹಳ್ಳಗುಂಡಿಗಳ ಆಗರ. ಈ ಕಾಲಕ್ಕೆ ಈ ದೇಶ ಉದ್ಧಾರವಾಗೋಲ್ಲ.'' ಬಂದ ಕೂಡಲೇ ದೇಶವನ್ನು ತೆಗಳಿ ಮಾತಾಡಿದ್ದು ವಾದಿರಾಜರಿಗೆ ಸರಿ ಕಂಡಿರಲಿಲ್ಲ. ಆದರೂ ಮಗನ ಮೇಲೆ ಕೋಪಗೊಳ್ಳುವ ಸಮಯ ಇದಲ್ಲ. ''ಆಯಿತಪ್ಪ ಸಾಕಾಗಿರಬೇಕು, ಹದವಾದ ಬಿಸಿ ನೀರಿದೆ. ಮೊದಲು ಸ್ನಾನ ಮಾಡಿ ಬಾ, ಊಟಕ್ಕೆ ಎಲ್ಲರೂ ಕಾಯ್ತಾ ಇದಾರೆ.''

ಊಟಕ್ಕೆ ಕುಳಿತ ಸುಧಾಕರ ಕಾಟಾಚಾರಕ್ಕೆಂಬಂತೆ ಉಂಡು ಮುಗಿಸಿದ್ದ. ಊಟ ಮುಗಿಸಿ ತನ್ನ ಕೋಣೆಗೆ ಹೋಗಿ ಕದವಿಕ್ಕಿಕೊಂಡಿದ್ದ. ಒಳಗೆ ಬಂದವನೇ ನನ್ನನ್ನು ತಬ್ಬಿ ಹಿಡಿದು ''ಎಷ್ಟು ದಿನವಾಯ್ತಮ್ಮ ನೋಡಿ ಎಂದು ಪರಿತಪಿಸಬಹುದು, ಮಾಡಿದ ಒಂದೊಂದು ಅಡುಗೆಯನ್ನು ಚಪ್ಪರಿಗೆ ತಿನ್ನತ್ತಾ, ಎಷ್ಟು ದಿನವಾಯ್ತು ಇಂಥಾ ಅಡುಗೆ ತಿಂದು ಬಾಯಿ ಕೆಟ್ಟಿತ್ತಮ್ಮ. ಊಟ ಅಂದರೆ ಇದು ನೋಡು ಹೊಗಳಬಹುದು'' ಕನಸು ಕಂಡಿದ್ದ ಕುಸುಮಾರ ಕರುಳು ಕೂಗಿ ಹೇಳಿತ್ತು. ಮಗ ಮೊದಲಿನಂತಿಲ್ಲ. ಕಣ್ಣು ಹನಿಗೂಡಿತ್ತು. ಸಂಜೆ ಅಕ್ಕ-ಭಾವಂದಿರ ಜೊತೆಗೆ ಕುಳಿತು ಹರಟುತ್ತಾ ಪರದೇಶವನ್ನು ಸ್ವರ್ಗಕ್ಕೆ ಹೋಲಿಸಿ ಮಾತನಾಡುವಾಗ ಮುಖದಲ್ಲಿ ಸಂತಸ ಇಮ್ಮಡಿಯಾಗುತ್ತಿತ್ತು. ''ಆದೆಷ್ಟು ಸ್ವಚ್ಛತೆ ಇದೆ ಗೊತ್ತಾ. ಅಲ್ಲಿ ರಸ್ತೆಯಲ್ಲಿ ಕುಳಿತು ಊಟಮಾಡಬಹುದು. ಯಾವುದೇ ಕೆಲಸ ಗಂಟೆಗಳಲ್ಲಿ ಆಗಿಬಿಡುತ್ತೆ. ಇಲ್ಲಿನ ಹಾಗೆ ದಿನಗಟ್ಟಲೆ, ವರ್ಷಗಟ್ಟಲೆ ಆಲೆಯುವ ಪ್ರಮೇಯವೇ ಇರೋಲ್ಲ, ಅಲ್ಲಿನ ವ್ಯವಸ್ಥೆಯೇ ಹಾಗೆ. ಪುಣ್ಯ ಮಾಡಿರಬೇಕು ಆ ದೇಶದಲ್ಲಿ ಹುಟ್ಟೋಕೆ'' ಮಗ ಬಣ್ಣ ಬಣ್ಣವಾಗಿ ವರ್ಣಿಸುತ್ತಿದ್ದ ರೀತಿ ವಾದಿರಾಜರಿಗೆ ಮುಜುಗರ ಎನಿಸಿತ್ತು.

ಸುಧಾಕರ ಬಂದು ನಾಲ್ಕು ದಿನ ಕಳೆದಿತ್ತು. ಅವನಲ್ಲಿ ಯಾವ ಬದಲಾವಣೆಯೂ ಕಂಡಿರಲಿಲ್ಲ. ಕೆಲಸದ ನಿಮಿತ್ತ ಹೊರಗೆ ಹೋಗಿದ್ದ. ಅಂದು ಹುಣ್ಣಿಮೆ ''ಅಮ್ಮಾ, ಇವತ್ತು ಬೆಳದಿಂಗಳೂಟ ಮಾಡೋಣ್ವೆ. ಎಷ್ಟು ದಿನಗಳಾದುವು ನಿನ್ನ ಕೈ ತುತ್ತು ತಿಂದು. ಗಂಡ, ಮಕ್ಕಳಿಗಂತೂ ಅದರ ಗಮ್ಮತ್ತು ಗೊತ್ತೇ ಇಲ್ಲ, ಏನಂತೀಯಮ್ಮ'' ಹೆಣ್ಣು ಮಕ್ಕಳು ಅಮ್ಮನ ದುಂಬಾಲು ಬಿದ್ದಿದ್ದರು. ತಾಯಿಗೆ ಮಕ್ಕಳ ಆಸೆ ಪೂರೈಸುವುದರಲ್ಲೇ ಖುಷಿ. ಕುಸುಮಾ ಆಸ್ತೆಯಿಂದ ಸಂಜೆಯ ಅಡುಗೆಗೆ ತಯಾರಿ ನಡೆಸಿದ್ದರು. ರಾತ್ರಿಯಾಗಿ ಚಂದ್ರ ಆಗಸದಲ್ಲಿ ಮೂಡುತ್ತಿದ್ದಂತೆ ಮಹಡಿ ಮೇಲಿನ ತಾರಸಿಯಲ್ಲಿ ಎಲ್ಲರೂ ಸಂಭ್ರಮದಿಂದ ಕೂಡಿದ್ದರು. ಅಳಿಯಂದಿರೂ, ಮೊಮ್ಮಕ್ಕಳಿಗಂತೂ ಇದು ಹೊಸ ಅನುಭವ. ಕಲಸನ್ನ ಮೊಸರನ್ನವನ್ನು ಎಲ್ಲರಿಗೂ ಪ್ರೀತಿಯಿಂದ ಕೈ ತುತ್ತು ನೀಡುತ್ತಿದ್ದರು ಕುಸುಮಾ. ಕೆಳಗೆ ಕಾರಿನ ಹಾರನ್ ಕೇಳಿದ ಕೂಡಲೇ ವಾದಿರಾಜರು ಓಡಿಹೋಗಿ ಮೇಲಿಂದ ಇಣುಕಿ ಮಗನನ್ನು ಕರೆದಿದ್ದರು. ''ಸುಧಾಕರ, ಕೈಕಾಲು ತೊಳೆದು ನೇರ ಮೇಲೆ ಬಂದುಬಿಡು. ಬೆಳದಿಂಗಳೂಟ ನಡೀತಾ ಇದೆ. ಎಲ್ಲರೂ ಇಲ್ಲೇ ಇದ್ದೇವೆ.''

ಮೇಲೆ ಬಂದ ಸುಧಾಕರ. ''ಚಂದ್ರನಿಗೆ ಮೊಸರು ಪ್ರಿಯವಂತೆ. ಹಾಗಾಗಿ ಚಂದ್ರನನ್ನು ನೋಡುತ್ತಾ ಮೊಸರನ್ನು ತಿಂದರೆ ಮೈ, ಮನಸ್ಸು ಮನೆ ಎಲ್ಲಾ ತಂಪಾಗಿರುತ್ತಂತೆ.'' ಸುಧಾಕರ ಮುಖ ಕಿವುಚಿದ್ದ. ಅಕ್ಕಂದಿರನ್ನು ಉದ್ದೇಶಿಸಿ ರೇಗಿದ್ದ ''ಅಮ್ಮ ಹಳೆಯ ಕಾಲದವಳು, ಅವಳಿಗಂತೂ ಬುದ್ಧಿ ಇಲ್ಲ. ವಿದ್ಯಾವಂತರಾದ ನಿಮಗಾದರೂ ಗೊತ್ತಾಗೋದು

ಬೇಡವಾ, ಮಕ್ಕಳನ್ನು ಕೂರಿಸಿಕೊಂಡು ಈ ಧೂಳಿನಲ್ಲಿ ಊಟ ಮಾಡಿಸ್ತಾ ಇದ್ದೀರಲ್ಲ ಅದೂ ಕೈನಲ್ಲಿ. ನಿಮಗೆಲ್ಲಾ ಯಾವಾಗ ಬುದ್ಧಿ ಬರುತ್ತೋ ಏನೋ'' ದರದರನೇ ಕೆಳಗಿಳಿದಿದ್ದ. ಎಲ್ಲರ ಮುಖ ಕಪ್ಪಿಟ್ಟಿತ್ತು. ಬೆಳದಿಂಗಳೂಟ ಹೋಗಿ ಅಮಾವಾಸ್ಯೆ ಊಟದಂತಾಗಿತ್ತು. ಮಗ ಯಾಕೋ ದಿನೇ ದಿನೇ ಪರಕೀಯನಾಗುತ್ತಿದ್ದಾನೆ ಎನಿಸಿತ್ತು. ಮೊದಲೆಲ್ಲಾ ಬೆಳದಿಂಗಳೂಟ ಎಂದರೆ ಅದೆಷ್ಟು ಸಂತಸ ಇವನಿಗೆ. ಅಂತ್ಯಾಕ್ಷರಿ ಹಾಡುತ್ತಾ ಅಕ್ಕಂದಿರನ್ನು ರೇಗಿಸುತ್ತಾ ನಾಲ್ಕು ತುತ್ತು ಹೆಚ್ಚಿಗೆ ತಿನ್ನುತ್ತಿದ್ದವ. ಅಡುಗೆ ಮನೆಗೆ ಕೈ ತೊಳೆಯಲು ಬಂದ ಮಗಳು ತಮ್ಮನನ್ನು ದೂರಿದ್ದಳು.

''ಏನಮ್ಮಾ, ನಿನ್ನ ಮಗ ಹುಟ್ಟಿದಾರಭ್ಯ ಥೇಮ್ಸ್ ನದಿ ನೀರು ಕುಡಿದೇ ಬೆಳೆದಿದ್ದ. ಆತಿಯಾಯಿತು ಇವನದ್ದು'' ಜೊತೆಗೆ ಕಿರಿಮಗಳೂ ದನಿಗೂಡಿಸಿದ್ದಳು.

''ಏನೋ ವಿದೇಶದಿಂದ ತಮ್ಮ ವರ್ಷದ ಅನಂತರ ಬರ್ತಾ ಇದಾನೆ, ಜೊತೆಗೆ ಅವನಿಗಾಗುವ ಹುಡುಗಿಯನ್ನು ನೋಡುವ ಆಸೆಯಿಂದ ಬಂದದ್ದು. ನಿನ್ನ ಮಗ ಆಕಾಶದಲ್ಲಿ ಹಾರಾಡ್ತಾ ಇದ್ದಾನೆ. ಮೊದಲು ಅವನನ್ನು ಭೂಮಿಗಿಳಿದು ಮಾತಾಡು. ಇವರ ಕೆಲಸ, ಮಕ್ಕಳ ಶಾಲೆ ಎಲ್ಲಾ ಬಿಟ್ಟು ಇಲ್ಲಿ ಕೂರಲಿಕ್ಕೆ ಆಗೊಲ್ಲ. ನಾವಂತೂ ನಾಳೆ ಹೊರಡುವವರೇ.'' ಕುಸುಮಾ ಸೆರಗಿನ ತುದಿಯನ್ನು ಕಣ್ಣಿಗೆ ಹಚ್ಚಿದ್ದರು. ಮಕ್ಕಳು ಹೊರಟಾಗಿತ್ತು. ಮನೆಯೆಲ್ಲಾ ಖಾಲಿ ಖಾಲಿ. ಮನೆ ಮಾತ್ರವಲ್ಲ, ಮನಸ್ಸು ಖಾಲಿ ಅನಿಸಿತ್ತು. ಅಂದು ಸಂಜೆ ವಿದೇಶದಿಂದ ಬಂದ ಗೆಳೆಯನನ್ನು ನೋಡಲು ಸುಧಾಕರನ ಆಪ್ತ ಸ್ನೇಹಿತ ಬಂದಿದ್ದ. ಅವನ ಜೊತೆ ಮಾತನಾಡುತ್ತಾ ಕುಳಿತ ಸುಧಾಕರ ಮತ್ತದೇ ದೇಶವನ್ನು ಹೊಗಳುತ್ತಾ, ''ನೀನೇನೆ ಹೇಳು ಆ ದೇಶದಲ್ಲಿ ಹುಟ್ಟೋಕೆ ಪುಣ್ಯ ಮಾಡಿರಬೇಕು. ನೋಡಿ, ಅಲ್ಲೆಲ್ಲಾ ಹತ್ತು ವರ್ಷಕ್ಕೆ ಮಕ್ಕಳು ಸ್ವತಂತ್ರರಾಗಿ ಬಿಡ್ತಾರೆ. 80 ವರ್ಷದವರು ದುಡೀತಾರೆ. ಅವರ ಕೆಲಸ ಅವರೇ ಮಾಡಿಕೊಳ್ತಾರೆ. ಯಾರ ಹಂಗಿನಲ್ಲೂ ಬದುಕುವುದಿಲ್ಲ. ಇಲ್ಲಿನವರ ಹಾಗೆ 60 ವರ್ಷಕ್ಕೆ ನಿವೃತ್ತಿಯಾಗಿ ಸೋಮಾರಿಗಳ ಹಾಗೆ ಮನೇಲಿ ಕೂತು ಮಲಗಿ ಕಾಲ ಕಳೆಯುವುದಿಲ್ಲ. ''

ದಿವಾನ ಮೇಲೆ ಮಲಗಿದ್ದ ವಾದಿರಾಜರಿಗೆ ಮಗ ಬಡಿಗೆಯನ್ನು ಬಟ್ಟೆಯಲ್ಲಿ ಸುತ್ತಿ ಹೊಡೆಂತಾಯಿತು. ಗಾಬರಿಯಿಂದ ದಿಗ್ಗನೆ ಎದ್ದು ಕುಳಿತಿದ್ದರು. ಮಗನ ಮಾತಿನಿಂದ ಮೈಯಲ್ಲಿ ವಿದ್ಯುತ್ ಹರಿದಂತಾಗಿ ಅಡುಗೆ ಮನೆಯಿಂದ ಓಡಿಬಂದಿದ್ದರು ಕುಸುಮಾ. ಗಂಡನ ಮುಖದಲ್ಲಿದ್ದ ಭಾವನೆಯನ್ನು ಗುರುತಿಸಿ ದೈನ್ಯತಾಭಾವದಿಂದ ಕೈ ಸನ್ನೆ ಮಾಡಿ ಬೇಡಿದ್ದರು ''ದಯವಿಟ್ಟು ಸುಮ್ಮನಿದ್ದು ಬಿಡಿ.'' ದಿನೇ ದಿನೇ ಮಗ ಕಗ್ಗಂಟಾಗುತ್ತಿದ್ದ. ಅದೊಂದು ದಿನ ಭವಾನಿ ಕುಸುಮಾಗೆ ಫೋನಾಯಿಸಿ ಬೆವರಿಳಿಸಿದ್ದರು.

''ಏನೇ ಕುಸುಮಾ ಮಗ ಬಂದು 15 ದಿನಗಳ ಮೇಲಾಯ್ತಂತೆ. ಸುದ್ದಿ, ಸಮಾಚಾರ ಏನೂ ಇಲ್ವಲ್ಲ. ಅಲ್ಲ ವಿದೇಶದಲ್ಲೇನೋ ಕೆಲಸದ ಒತ್ತಡ ಸರಿ, ಬಂದ ಮೇಲಾದರೂ ನಿನ್ನ ಮಗ ಹುಡುಗಿಯ ಹತ್ತಿರ ಬಂದು ಮಾತಾಡದಿದ್ದರೆ ಹೇಗೆ, ಉಂಗುರ ತೊಡಿಸಿ ವರ್ಷವಾಗ್ತಾ ಇದೆ. ಮದುವೆ ಅಂದರೆ ಹುಡುಗಾಟಿಕೆಯಾ, ಯಾವ ಕಾಲದಲ್ಲಿದ್ದೀರಿ ನೀವೆಲ್ಲಾ ಏನೋಮ್ಮಾ, ನನಗಂತು ಒಂಚೂರೂ ಸರಿಕಾಣ್ತಾ ಇಲ್ಲ. ನೋಡು ಸಂಬಂಧ ಬೆಳೆಸುವ ಲಕ್ಷಣವಾ ಇದು. ಅಪ್ಪ, ಮಗಳು ಏನೆಂದುಕೊಂಡಾರು ನಿಮ್ಮಗಳ ಬಗ್ಗೆ ಏನೆಲ್ಲಾ ಹೇಳಿಕೊಂಡಿದ್ದೆನಾನು'' ಗೆಳತಿ ಬೇಸರ ಮಾಡಿಕೊಂಡ ಬಗ್ಗೆ ವಾದಿರಾಜರಲ್ಲಿ ಹೇಳಿಕೊಂಡಿದ್ದರು.

''ಕುಸುಮಾ, ಅವರ ಆಪಾದನೆಯಲ್ಲೂ ಹುರುಳಿದೆ ಅಲ್ಲವೇ ಕುಸುಮಾ. ಇವತ್ತು ಸಂಜೆ ಅವನು ಮನೆಗೆ ಬರಲಿ, ಕೂರಿಸಿಕೊಂಡು ಮಾತಾಡಿ ಬಿಡ್ತೇನೆ. ಹೀಗೇ ಬಿಟ್ಟರೆ ಆಗುವ ಕೆಲಸವಲ್ಲ ಇದು.'' ಮಗ ಮನೆಗೆ ಬಂದೊಡನೆ ಮಾತಿಗೆ ಶುರುವಿಟ್ಟುಕೊಂಡಿದ್ದರು. ''ಸುಧಾಕರ ನಿನ್ನೊಡನೆ ಮಾತಾಡುವುದಿದೆ. ನಾಳೆ ಹುಡುಗಿಯ ಮನೆಯವರನ್ನು ಮನೆಗೆ ಕರೆಸೋಣ ಎಂದುಕೊಂಡಿದ್ದೇವೆ. ಮದುವೆ, ಮಾತುಕತೆ ಆಗೋದಿದೆ. ನೀನು ರಜೆ ಹಾಕಿ ಮನೆಯಲ್ಲಿರು.''

''ಈಗ ಅದಕ್ಕೇನಪ್ಪ ಅವಸರ ನನಗೆ ಬೇಕಾದಷ್ಟು ಕೆಲಸ ಇದೆ'' ಅಪಸ್ವರವೆತ್ತಿದ ಸುಧಾಕರ.

''ನಿನಗೆ ಅವಸರವಿಲ್ಲಪ್ಪಾ, ಆದರೆ ಹೆಣ್ಣು ಹೆತ್ತವರು ಅವರು ಅವರಿಗಿರುತ್ತಲ್ಲ ಅವಸರ. ಅವರ ಪಾಡಿಗೆ ಅವರಿದ್ದರು. ನಿಮ್ಮಮ್ಮನ ಆತುರಕ್ಕೆ ಮೇಲೆ ಬಿದ್ದು ಹೋದವರು ನಾವು. ಹೀಗೆ ಉದಾಸೀನ ಮಾಡಿದರೆ ಹೇಗೆ.'' ಕೆರಳಿದ್ದ ಸುಧಾಕರ ''ಮೇಲೆ ಬಿದ್ದು ಹೋಗುವಂಥದ್ದು ನಮಗೇನು ಇರಲಿಲ್ಲ. ವಿದೇಶಕ್ಕೆ ಹೋಗಿ ಬಂದವನು ನಾನು. ನನಗೆ ನನ್ನದೇ ಆದ ಗೌರವ, ಪ್ರತಿಷ್ಠೆ ಇದೆ. ನಾನು ಹ್ಞೂ ಅಂದರೆ ಹೆಣ್ಣು ಕೊಡುವವರು ಸರತಿ ಸಾಲಿನಲ್ಲಿ ನಿಲ್ತಾರೆ. ನೀವೇ ಎಲ್ಲವನ್ನೂ ನಿರ್ಧಾರ ಮಾಡಿಬಿಟ್ಟರೆ ಹೇಗೆ. ನನಗೆ ಸಮಯ ಬೇಕು'' ಎನ್ನುತ್ತಾ ದುಡುದುಡನೆ ಹೋಗಿ ಬಾಗಿಲು ಹಾಕಿಕೊಂಡಿದ್ದ.

ಕುಸುಮಾ, ವಾದಿರಾಜರ ಎದೆ ಧಸಕ್ಕೆಂದಿತು. ''ಇದೇನೂಂದ್ರೆ ಕೇವಲ ಹನ್ನೊಂದು ತಿಂಗಳ ವಿದೇಶ ಪ್ರವಾಸ ಇಪ್ಪತ್ತೆಂಟು ವರ್ಷಗಳ ಜೀವನದ ದಿಕ್ಕನ್ನೇ ಬದಲಿಸಿ ಬಿಟ್ಟಿತಾ'' ಕಣ್ಣೀರು ತುಂಬಿದ ಮಡದಿಯನ್ನು ಸಂತೈಸುತ್ತಾ ಹೇಳಿದರು.

''ಕುಸುಮಾ, ನಿನ್ನ ಮಗನಿಗೆ ವಿದೇಶಿ ಜ್ವರ ಅಂಟಿಕೊಂಡಿದೆ. ಇದರಿಂದ ಅವನನ್ನು ಹೇಗೆ ಹೊರತರಬೇಕು ಅಂತ ಯೋಚಿಸೋಣ. ಇದು ಮಧ್ಯದಲ್ಲಿ ಬಂದದ್ದು ಹಾಗೇ ಹೋಗುತ್ತೆ. ನೀನು ತಲೆ ಕೆಡಿಸಿಕೊಳ್ಳಬೇಡ ಸಮಾಧಾನದಿಂದಿರು.''

''ಏನೋಪ್ಪ ನನಗೊಂದೂ ಅರ್ಥ ಆಗ್ತಾ ಇಲ್ಲ ಸದ್ಯಕ್ಕೆ ಈ ಮದುವೆಯೊಂದು ಆದರೆ ಸಾಕು ಎಣಿಸಿದೆ'' ಎನ್ನುತ್ತಾ ಕಾಫಿಯ ತಯಾರಿಗೆ ಅಡುಗೆ ಮನೆ ಕಡೆ ಹೊರಟರು ಕುಸುಮಾ.

ಯಾರೋ ಬಾಗಿಲು ಬಡಿದ ಸದ್ದು. ವಾದಿರಾಜರು ಎದ್ದು ಹೋಗಿ ಬಾಗಿಲು ತೆರೆದರು. ನೋಡಲು ಸುಶಿಕ್ಷಿತರೂ, ವಿದ್ಯಾವಂತರೂ, ಸಂಸ್ಕಾರವಂತರಂತೆ ಕಾಣುತ್ತಿದ್ದ ದಂಪತಿ ಮುಗುಳು ನಗುತ್ತಾ ನಿಂತಿದ್ದರು.

''ಯಾರು ಅಂತ ಗೊತ್ತಾಗಲಿಲ್ಲ''

''ನಿವೃತ್ತ ಶಿಕ್ಷಕರು ವಾದಿರಾಜರ ಮನೆ ಇದೇ ಏನು? ಒಳಗೆ ಬರಬಹುದೆ'' ದಂಪತಿ ಪ್ರಶ್ನೆಗೆ, ನಗುತ್ತಾ ಎತ್ತಿ ಕಟ್ಟಿದ್ದ ಪಂಚೆಯನ್ನು ಇಳಿಬಿಡುತ್ತಾ ,

''ಅಯ್ಯೋ ಧಾರಾಳವಾಗಿ ಬನ್ನಿ'' ಸ್ವಾಗತಿಸಿದ್ದರು.

ಬಂದವರು ಸೋಪಾದ ಮೇಲೆ ಕುಳಿತು ತಮ್ಮ ಪರಿಚಯ ಮಾಡಿಕೊಂಡಿದ್ದರು. ''ನಾನು ಮೋಹನರಾಯ. ಆಕೆ ನನ್ನ ಕುಟುಂಬ ರಾಧಾ. ನಾವು ನಿಮ್ಮ ಸಂಬಂಧಿಕರು ಅಂದರೆ, ಈ ಮನೆಗೆ ಸೊಸೆಯಾಗಿ ಬರುವ ಭಾರತಿಯ ಚಿಕ್ಕಪ್ಪ ಭಾರತಿ ನನ್ನ ಸ್ವಂತ ಅಣ್ಣನ ಮಗಳು.''

ಬಂದವರು ಯಾರೆಂದು ನೋಡಲು ಬಂದ ಕುಸುಮಾಗೆ ಎದ್ದು ನಿಂತು ಕೈ ಮುಗಿದರು.

''ಹೇಳದೆ ಬಂದದ್ದಕ್ಕೆ ಕ್ಷಮೆಯಿರಲಿ. ತಿಳಿಸದೇ ಒಬ್ಬರ ಮನೆಗೆ ಬರುವುದು ಸಾಧುವಲ್ಲ. ಅಳಿಯನಾಗುವವರನ್ನು ನೋಡುವ ಆತುರದಲ್ಲಿ ಅಮೆರಿಕಾದಿಂದ ಹಾರಿಕೊಂಡೇ ಬಂದದ್ದು. ನಿಮ್ಮ ಮಗನ ಪರಿಚಯವಾಗಬಹುದೇ'' ವಿನಮ್ರತೆಯಿತ್ತು ಕೋರಿಕೆಯಲ್ಲಿ. ''ನಾನು ಕರೆ ತರ್ತೇನೆ'' ಎನ್ನುತ್ತಾ ರೂಮಿಗೆ ಹೋದ ಕುಸುಮಾ ಬಂದವರ ವಿವರ ಹೇಳಿ ಅವರೆದುರು ಏನೂ ಮಾತನಾಡದಂತೆ ಆಣೆ ಮಾಡಿಸಿಕೊಂಡು ತಾಕೀತು ಮಾಡಿ ಕರೆ ತಂದಿದ್ದರು.

ಸುಧಾಕರನನ್ನು ನೋಡಿದ ಮೋಹನರಾಯರು ಕೈ ಕುಲುಕಿ ಪ್ರೀತಿಯಿಂದ ಅಪ್ಪಿಕೊಂಡಿದ್ದರು. ಪಕ್ಕದಲ್ಲೇ ಕೂರಿಸಿಕೊಂಡು ಮಾತಿಗೆ ಶುರುವಿಟ್ಟಿದ್ದರು. ''ಅಣ್ಣನಿಗೆ ಊರು ಸುತ್ತುವ ಕೆಲಸ. ದೇಶಪ್ರೇಮಿ ಆದ್ದರಿಂದಲೇ ಮಗುವಿಗೆ ಭಾರತಿ ಎಂದು ಹೆಸರಿಟ್ಟದ್ದು. ಮಗು ಮೂರು ವರ್ಷದವಳಿದ್ದಾಗ ಅತ್ತಿಗೆ ಅಕಾಲ ಮರಣಕ್ಕೆ ತುತ್ತಾದದ್ದು. ಅಣ್ಣ ಒಂಟಿ. ನಮಗೆ ಸಂತಾನ ಭಾಗ್ಯವಿರಲಿಲ್ಲ. ಹಾಗಾಗಿ ನಮ್ಮಿಬ್ಬರಿಗೂ ಅಮೆರಿಕಾದಲ್ಲೇ ಕೆಲಸ ಇದ್ದುದರಿಂದ ಭಾರತಿಯನ್ನು ನಮ್ಮ ಜತೆ ಅಮೆರಿಕಾಗೆ ಕರೆದೊಯ್ದದ್ದು, ಮಕ್ಕಳಿಲ್ಲದ ನಮ್ಮ ಬಾಳಿನಲ್ಲಿ ಭಾರತಿ ಬೆಳಕು ತಂದವಳು. ನಮ್ಮಿಬ್ಬರಿಗೂ ಪ್ರೀತಿಯ ಹೊಳೆ ಹರಿಸಿ ಬದುಕನ್ನು ಸಾರ್ಥಕವಾಗಿಸಿದವಳು. ಅವಳ ವಿದ್ಯಾಭ್ಯಾಸವೆಲ್ಲಾ ಅಲ್ಲೇ ನಡೆದದ್ದು. ನಾವಿಬ್ಬರೂ ದುಡಿದದ್ದು ಹತ್ತಾರು ಕೋಟಿ. ಮಗಳಿಗೆ ಅಲ್ಲಿಯೇ ಗಂಡು ನೋಡಿ ವಿಜೃಂಭಣೆಯಿಂದ ಮದುವೆ ಮಾಡುವ ಅದಮ್ಯ ಬಯಕೆ. ಅವಳ ಮದುವೆಯ ಕನಸು ಕಾಣುತ್ತಿರುವಾಗಲೇ ಅವಳು ಭಾರತಕ್ಕೆ ವಾಪಾಸು ಬರುವ ನಿರ್ಧಾರ ಮಾಡಿದ್ದು. ಇಪ್ಪತ್ತಮೂರು ವರ್ಷ ಅಮೆರಿಕಾದಲ್ಲಿದ್ದರೂ ಅಲ್ಲಿನ ರೀತಿ ರಿವಾಜುಗಳೊಂದೂ ಅವಳಿಗೆ ಪಥ್ಯವಾಗಲೆ ಇಲ್ಲ. ಅಣ್ಣ ಅವಳಿಗೆ ಭಾರತಿ ಎಂದು ಹೆಸರಿಟ್ಟ ಪ್ರಭಾವವೋ ಏನೋ, ಕಳೆದ ಎರಡು ವರ್ಷಗಳ ಹಿಂದೆ ಅವಳು ಇಲ್ಲಿಗೆ ವಾಪಸಾದದ್ದು ನಮಗೆ ತೀರ ನೋವುಂಟು ಮಾಡಿತ್ತು. ಮಗಳ ಮೇಲೆ ಹುಸಿ ಕೋಪ. ಎಷ್ಟಾದರೂ ಸಾಕಿದ ಕರುಳು, ಮದುವೆ ಎಂದ ಕೂಡಲೇ ಆಸೆಗಳು ಗರಿಗೆದರಿದ್ದವು. ಮಗಳ ಪ್ರೀತಿಯ ಮುಂದೆ ನಮ್ಮ ಕೋಪ ಮಂಡಿಯೂರಿತ್ತು. ಇವಳಂತೂ ಕುಣಿದಾಡಿದ್ದಳು.

ನಿಮ್ಮ ಮಗ ವರ್ಷದ ಮಟ್ಟಿಗೆ ಹೊರಗೆ ಹೋಗುವ ವಿಷಯ ತಿಳಿದು ಇಲ್ಲಿಗೆ ಬರುವ ಆಸೆಯನ್ನು ಹತ್ತಿಕ್ಕಿಕೊಂಡು ಅಲ್ಲಿಯೇ ಉಳಿದದ್ದು, ಈ ಒಂದು ವರ್ಷದಲ್ಲಿ ಅಲ್ಲಿನ ವ್ಯವಸ್ಥೆಗಳಿಗೆಲ್ಲಾ ಇತಿಶ್ರೀ ಹಾಡಿ ಶಾಶ್ವತವಾಗಿ ಇಲ್ಲಿಗೇ ಬಂದುಬಿಟ್ಟೆವು. ಎಷ್ಟು ಆಸ್ತಿ ಇದ್ದರೇನು ಮನಸ್ಸಿಗೆ ನೆಮ್ಮದಿಯಿಲ್ಲದಿದ್ದ ಮೇಲೆ ಒಂದು ವರ್ಷ ನಾವು ನಾವಾಗಿ ಉಳಿದಿರಲಿಲ್ಲ. ನಿಮ್ಮನ್ನೆಲ್ಲಾ ನೋಡಿದ ಮೇಲೆ ಜೀವ ಹಗುರಾದ ಭಾವ. ಮದುವೆಯ ಅನಂತರ ನಾವೆಲ್ಲರೂ ಒಟ್ಟಾಗಿ ಇರಬಹುದಾ.'' ಸುಧಾಕರನ ಎರಡೂ ಕೈ ಹಿಡಿದು ಕಳಕಳಿಯಿಂದ ಕೇಳಿದ್ದರು ಮೋಹನರಾಯರು.

ವಾದಿರಾಜರು ಕುಡಿಗಣ್ಣಿನಿಂದ ಮಗನತ್ತ ನೋಡಿದರು. ಮಗ ನಾಚಿಕೆಯಿಂದ ಭೂಮಿಗಿಳಿದು ಹೋಗಿದ್ದ. ''ಅವರು ಅಷ್ಟೊಂದು ಕೇಳ್ತಿದಾರೆ ಏನಾದರೂ ಮಾತಾಡೋ'' ಎಂದು ವಾದಿರಾಜರ ಪ್ರಶ್ನೆಗೆ ''ನನ್ನದೇನಿದೆಯಪ್ಪಾ, ನೀವು ದೊಡ್ಡವರು ನೀವುಗಳು ಏನೇ ತೀರ್ಮಾನ ತೆಗೆದುಕೊಂಡರೂ ನನಗದು ಸಮ್ಮತವೇ'' ಎಂದಿದ್ದ.

ಕೃತಜ್ಞತೆಯಿಂದ ಕೈ ಮುಗಿದ ದಂಪತಿ ತನ್ನ ಮುಂದೆ ಎತ್ತರೆತ್ತರಕ್ಕೆ ಬೆಳೆದು ನಿಂತಂತೆಯೂ ತಾನು ಅವರ ಮುಂದೆ ಅತೀ ಕುಬ್ಜನಾದಂತೆಯೂ ಭಾಸವಾಗಿತ್ತು ಸುಧಾಕರನಿಗೆ... ■

ಜಿರಳೆ ಜಂಜಾಟ

❑ ಶ್ರೀನಿವಾಸ ಸಿರನೂರಕರ್

ಕಾಕ್ರೋಚ್ ಪಕ್ಷ ತನ್ನ ಅಸ್ತಿತ್ವವನ್ನು ಪ್ರಕಟಪಡಿಸಿದ್ದರ ಹಿಂದೆ ನಾನಾ ಕಾರಣಗಳಿವೆ. ಯುವಜನತೆಯ ಆಶೋತ್ತರಗಳು ಈಡೇರದೆ ಹೋದಾಗ, ಅವರನ್ನು ಕೇವಲ ಗೇಲಿಮಾಡುವ ಧೋರಣೆ ಕಾಣಿಸಿಕೊಂಡಾಗ ಇಂಥ 'ರಾಜಕೀಯೇತರ' ವೇದಿಕೆಗಳು ಉದ್ಭವವಾಗುತ್ತವೆ. ಈ ಆಂದೋಲನವನ್ನು ಹತ್ತಿಕ್ಕಲು ಹೊರಟರೆ ಇನ್ನಷ್ಟು ಅಪಾಯವಿದೆ ಎನ್ನುವುದು ಸರಕಾರಕ್ಕೆ ಗೊತ್ತಾಗುವುದು ಯಾವಾಗ?

ತೀರಾ ಗಂಭೀರವೂ, ಕೆಲವೊಂದು ಬಾರಿ ಅಸಂಗತವೂ, ಕ್ಷುಲ್ಲಕವೂ, ದ್ವೇಷಾಸೂಯೆಗಳಿಂದ ಕೂಡಿದ್ದೂ ಆದ ಭಾರತದ ರಾಜಕಾರಣಕ್ಕೆ ಇದೀಗ ಹೊಸದೊಂದು ತಿರುವು ದೊರಕಿರುವಂತೆ ಕಾಣುತ್ತಿದೆ. ಅದನ್ನು ಗಂಭೀರವಾಗಿ ಪರಿಗಣಿಸುವಂಥದೇ ಅಲ್ಲ ಎಂದು ರಾಜಕಾರಣವನ್ನು ಗಂಭೀರವಾಗಿ ತೆಗೆದುಕೊಂಡವರು ಕನವರಿಸುವುದುಂಟು. ಇನ್ನು ಕೆಲವರು ಪ್ರಸ್ತುತ ರಾಜಕಾರಣದ ಬಗ್ಗೆ ಬೇಸತ್ತಿರುವ, ಅದರಿಂದ ರೋಸಿಹೋಗಿರುವ, ಶಿಕ್ಷಣ, ಉದ್ಯೋಗ ಮುಂತಾದ ಕ್ಷೇತ್ರಗಳಲ್ಲಿ ಉಂಟಾಗಿರುವ ಅರಾಜಕತೆಯಿಂದ ಕ್ಷುಬ್ಧಗೊಂಡಿರುವ ಯುವಶಕ್ತಿಯ ಪ್ರತೀಕವೆಂದೂ ವಾದಿಸುವುದುಂಟು. ಯುವಜನತೆಯ ಆಕ್ರೋಶ ಹೊರಹಾಕಲಿಕ್ಕೆ ಇದೊಂದು ವೇದಿಕೆಯಾಗಿದ್ದು ಅದನ್ನು ಯಾವ ಕಾರಣದಿಂದಲೂ ನಿರ್ಬಂಧಿಸಬಾರದೆಂದು ಇನ್ನೂ ಕೆಲವರು ಸಲಹೆ, ಸೂಚನೆಗಳನ್ನು ನೀಡುತ್ತಾರೆ. ಕೆಲವು ಪ್ರತಿಷ್ಠಾಪಿತ ಪೂರ್ಣಾವಧಿಯ ಪುಢಾರಿಗಳು ಇದರ ಹಿಂದೆ ಭಾರತದಲ್ಲಿ ಅರಾಜಕತೆ ಸೃಷ್ಟಿಸಿರುವ ಜಾಗತಿಕವಾಗಿ ಸಕ್ರಿಯವಾಗಿರುವ ಭಾರತವಿರೋಧಿ ಶಕ್ತಿಗಳ ಹುನ್ನಾರವೆಂದೂ ದೂರುವುದೂ ಇಲ್ಲದಿಲ್ಲ. ಇದರ ವಿರುದ್ಧ ರಾಷ್ಟ್ರೀಯ ತನಿಖಾ ಸಂಸ್ಥೆ (ಎನ್.ಐ.ಎ.)ಯಿಂದ ತನಿಖೆ ನಡೆಸಬೇಕೆಂಬ ಆಗ್ರಹಗಳು ಕೇಳಿಬರುತ್ತಿವೆ. ಹೀಗೆ ಇದ್ದಕ್ಕಿದ್ದ ಹಾಗೆ ಚಿತ್ರ-ವಿಚಿತ್ರವಾದ ಸನ್ನಿವೇಶಗಳಿಗೆ ಹಾದಿಮಾಡಿಕೊಟ್ಟಿರುವ ಆ ಬೆಳವಣಿಗೆಯಾದರೂ ಯಾವುದು ಎಂಬ ಕುತೂಹಲ ತಾಳುವುದು ಸಹಜವೇ ಆಗಿದೆ. ಇದರ ಹಿಂದೆ ಅಡಗಿರುವುದು ಸಾಮಾನ್ಯವಾಗಿ ಎಲ್ಲರ ಮನೆಗಳಲ್ಲಿ ಕಂಡುಬರುವ ಕೀಟವಾದ 'ಜಿರಳೆ' ಹೆಸರಿನಲ್ಲಿ ಆನ್‌ಲೈನ್‌ನಲ್ಲಿ ಪ್ರಾರಂಭವಾಗಿರುವ ಒಂದು ವಿಡಂಬನಾತ್ಮಕ ರಾಜಕೀಯ ಆಂದೋಲನ.

ಮೇ 16ರಂದು ರಾಜಕೀಯ ಕಾರ್ಯಕರ್ತ ಅಭಿಜಿತ್ ದೀಪ್ಕೆ ಎಂಬವರಿಂದ ಆನ್‌ಲೈನ್ ವಿಡಂಬನಾತ್ಮಕ ರಾಜಕೀಯ ಚಳವಳಿಯಾಗಿ ಹೊರಹೊಮ್ಮಿರುವ 'ಕಾಕ್ರೋಚ್ (ಜಿರಳೆ) ಜನತಾಪಕ್ಷ' ಭಾರತದಲ್ಲಿನವ ಸಂಚಲನವನ್ನುಂಟುಮಾಡಿದೆ. ಅದು ತನ್ನಷ್ಟಕ್ಕೆ ತಾನೇ 'ಸೋಮಾರಿಗಳಿಗಾಗಿ, ನಿರುದ್ಯೋಗಿಗಳಿಗಾಗಿ ಮತ್ತು ಕಡೆಗಣಿತರಾದ ನಾಗರಿಕರಿಗಾಗಿ ಆರಂಭವಾದ ಭಾರತದ ಅತ್ಯಂತ ಪ್ರಾಮಾಣಿಕ ರಾಜಕೀಯ ಪಕ್ಷ' ಎಂದು ಘೋಷಿಸಿಕೊಂಡಿದೆ. ಈ ನೂತನ ರಾಜಕೀಯ ಪಕ್ಷಕ್ಕೆ ಜಿರಳೆಯ ನಂಟು ಇರುವುದರಿಂದಲೇ ಅಷ್ಟೊಂದು ಸಂಚಲನ, ಅಷ್ಟೊಂದು ಯುವಶಕ್ತಿಯ ಆನ್‌ಲೈನ್ ಬೆಂಬಲ. ಇದು ಪ್ರಾರಂಭವಾದ ಎರಡೇ ದಿನಗಳಲ್ಲಿ ಎರಡು ಕೋಟಿಗೂ ಮಿಕ್ಕು ಯುವಕರು ಅದನ್ನು ಅನುಸರಿಸಿದ್ದಾರೆ. ವಿಶ್ವದಲ್ಲೇ ಅತ್ಯಂತ ದೊಡ್ಡ ರಾಜಕೀಯ ಪಕ್ಷ ಎನಿಸಿಕೊಂಡು ಕಳೆದ ಹನ್ನೆರಡು ವರುಷಗಳಿಂದ ಭಾರತವನ್ನು ಆಳುತ್ತಿರುವ ಮತ್ತು ಇಪ್ಪತ್ತಕ್ಕೂ ಹೆಚ್ಚು ರಾಜ್ಯಗಳಲ್ಲಿ ಅಧಿಕಾರದಲ್ಲಿರುವ ಭಾರತೀಯ ಜನತಾಪಕ್ಷದ ಬೆಂಬಲಿಗರ ಸಂಖ್ಯೆಯನ್ನು ದಾಟಿ ಮುನ್ನಡೆದಿರುವ ಜಿರಳೆಯ ಪರಿ ಅತ್ಯಪೂರ್ವವಾದದ್ದು. ಮೊಬೈಲ್, ವಾಟ್ಸಾಪ್, ಇಂಟರ್‌ನೆಟ್, ಇನ್‌ಸ್ಟಾಗ್ರಾಂ, ಟೆಲಿಗ್ರಾಂ, ಎಕ್ಸ್ ಮುಂತಾದ ಸಾಮಾಜಿಕ ಜಾಲತಾಣಗಳೊಂದಿಗೆ ತನ್ಮಯತೆ ಸಾಧಿಸಿ, ಹಗಲಿರುಳೂ ಅವುಗಳೊಂದಿಗೆ ಒಡನಾಟ ಹೊಂದಿರುವ ಇಂದಿನ ಯುವಜನಾಂಗ ಜಿರಳೆ ಜನತಾಪಕ್ಷದ ಚಳವಳಿಯೊಂದಿಗೆ ಗುರುತಿಸಿಕೊಂಡಿರುವುದು ಭಾರತದ ಪ್ರತಿಷ್ಠಾಪಿತ ರಾಜಕೀಯ ಪಕ್ಷಗಳಿಗೆ, ಅದರಲ್ಲೂ ವಿಶೇಷವಾಗಿ ಬಿಜೆಪಿಗೆ ತಲೆನೋವಾಗಿ ಪರಿಣಮಿಸಿರುವಂತೆ ಕಾಣುತ್ತದೆ. ಬಿಜೆಪಿಯ ಅನೇಕ ನಾಯಕರು ಅತ್ಯಂತ ಆಕ್ಷೇಪಾರ್ಹವಾಗಿ ಪ್ರತಿಕ್ರಿಯಿಸಿರುವುದೇ ಪಕ್ಷದ ಯಾವುದೋ ಒಂದು ಮೂಲೆಯಲ್ಲಿ ಅಭದ್ರತೆ ಉಂಟಾಗಿರಬಹುದಾದ ಸಾಧ್ಯತೆಯನ್ನು ಸೂಚಿಸುತ್ತದೆ.

ಒಂದು ಹೇಳಿಕೆಯ ಹಿಂದೆ-ಮುಂದೆ

ಯಾವುದೇ ದಿಢೀರಾದ ಆಂದೋಲನಕ್ಕೆ ತತ್‌ಕ್ಷಣದ ಕಾರಣಗಳು ಇದ್ದೇ ಇರುತ್ತವೆ. ಕಾಕ್ರೋಚ್ ಆಂದೋಲನವೂ ಇದಕ್ಕೆ ಹೊರತಾಗಿಲ್ಲ. ಸುಪ್ರೀಂಕೋರ್ಟ್ ಪ್ರಕರಣವೊಂದರ ವಿಚಾರಣೆಯಲ್ಲಿ ಮೇ 15ರಂದು ಭಾರತದ ಮುಖ್ಯ ನ್ಯಾಯಾಧೀಶ ಸೂರ್ಯಕಾಂತ್ ಅವರು 'ಕೆಲವು ನಿರುದ್ಯೋಗಿ ಯುವಕರು ಜಿರಳೆಗಳಂತೆ, ಪರಾವಲಂಬಿ ಜೀವಿಗಳಂತೆ ಇದ್ದು, ಅವರೇ ಮಾಹಿತಿ ಹಕ್ಕು ಕಾರ್ಯಕರ್ತರಾಗಿ, ಸಾಮಾಜಿಕ ಜಾಲತಾಣ ಮಾಧ್ಯಮಗಳಲ್ಲಿ ಆಕ್ರಮಣಕಾರರಾಗಿ ರೂಪುಗೊಳ್ಳುತ್ತಾರೆ' ಎಂದು ಮೌಖಿಕವಾಗಿ ಹೇಳಿದ್ದರು. ಅವರ ಈ ಹೇಳಿಕೆಯೇ ಜಿರಳೆಗಳನ್ನು ಬಡಿದೆಬ್ಬಿಸಲಿಕ್ಕೆ ಕಾರಣವಾಯಿತು! ಮರುದಿನ ಮುಖ್ಯ ನ್ಯಾಯಮೂರ್ತಿಗಳು ನ್ಯಾಯಾಲಯದಲ್ಲಿಯೇ ಸ್ಪಷ್ಟೀಕರಣ ನೀಡಿ ತಮಗೆ ಯುವಕರ ಬಗ್ಗೆ ಅಪಾರ ಕಾಳಜಿ ಇರುವುದಾಗಿಯೂ, ತಾವು ಹೇಳಿದ್ದು ಖೊಟ್ಟಿ ಕಾನೂನು ಪದವಿಗಳನ್ನು ಪಡೆದವರ ಕುರಿತಾಗಿ ಎಂದೂ ಹೇಳಿದರು. ಆದರೆ ಅದಾಗಲೇ ಲಕ್ಷಾವಧಿ, ಕೋಟ್ಯವಧಿ ಜಿರಳೆಗಳು ಸಕ್ರಿಯವಾಗಿ ಜಾಗೃತಗೊಂಡು ಜಿರಳೆ ಜನತಾ ಪಕ್ಷಕ್ಕೆ ಜೈಕಾರ ಹಾಕಿದ್ದವು. ಜಿರಳೆಪಕ್ಷ ಯುವಕರಲ್ಲಿ ಸಂಚಲನವನ್ನುಂಟುಮಾಡಿದ್ದು ನಿಜ. ಆದರೆ ಅದರಿಂದ ಉಂಟಾಗಬಹುದಾದ ಪರಿಣಾಮದ ಬಗ್ಗೆ ಏನನ್ನೇ ಆಗಲಿ ಖಚಿತವಾಗಿ ಹೇಳಲು ಸಾಧ್ಯವಿಲ್ಲ.

ಆನ್‌ಲೈನ್ ಚಳವಳಿಗೂ, ಆಫ್‌ಲೈನ್ ಚಳವಳಿಗೂ ಸಾಕಷ್ಟು ವ್ಯತ್ಯಾಸವಿರುತ್ತದೆ. ಆನ್‌ಲೈನ್‌ನವರು ರಸ್ತೆಗೆ ಬಂದು ತಮ್ಮ ಶಕ್ತಿ ಪ್ರದರ್ಶಿಸಿದಾಗಲೇ ಅದಕ್ಕೊಂದು ಮೌಲ್ಯಬರಲು ಸಾಧ್ಯ. ಈಗ ಉಂಟಾಗಿರುವ ಜಿರಳೆ ಆಂದೋಲನ ವ್ಯವಸ್ಥೆಯ ವಿರುದ್ಧವೇ ಹೊರತು ಯಾವುದೇ ರಾಜಕೀಯ ಪಕ್ಷದ ವಿರುದ್ಧ ಅಲ್ಲ ಎಂಬುದು ಗಮನಾರ್ಹ. ಹಾಗೆಂದು ಆಡಳಿತಾರೂಢ ಬಿಜೆಪಿ ಅದನ್ನು ನಿರ್ಲಕ್ಷಿಸುವಂತಿಲ್ಲ. ವೈದ್ಯಕೀಯ ಕಾಲೇಜು ಪದವಿಗಳ ಪ್ರವೇಶಾರ್ಥಿ ವಿದ್ಯಾರ್ಥಿಗಳಿಗೆ ಕೇಂದ್ರ ಸರಕಾರದ ಶಿಕ್ಷಣ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ರಾಷ್ಟ್ರೀಯ ಪರೀಕ್ಷಾ ಸಂಸ್ಥೆ (ಎನ್.ಟಿ.ಎ.) ನಡೆಸುವ ಪರೀಕ್ಷೆಗಳಲ್ಲಿ ಪ್ರಶ್ನೆಪತ್ರಿಕೆಗಳು ಬಹಿರಂಗಗೊಂಡ ಅನಂತರ ಪರೀಕ್ಷೆಯನ್ನೇ ರದ್ದುಪಡಿಸಿ ಮತ್ತೊಮ್ಮೆ ಪರೀಕ್ಷೆ ನಡೆಸುವ ನಿರ್ಧಾರದಿಂದ ವಿದ್ಯಾರ್ಥಿಗಳಿಗೆ ಮತ್ತು ಅವರ ಪಾಲಕರಿಗೆ ಉಂಟಾಗಿರುವ ಮಾನಸಿಕ ಒತ್ತಡ ಮತ್ತು ಕ್ಷೋಭೆಯನ್ನು ಯಾವುದೇ ಸರಕಾರ ಅರ್ಥಮಾಡಿಕೊಳ್ಳಲು ಸಾಧ್ಯವೇನು? ಎನ್.ಟಿ.ಎ. ನಡೆಸುವ ಪರೀಕ್ಷೆಗಳಲ್ಲಿ ಗೊಂದಲ ಉಂಟಾಗಿರುವುದು ಇದೇ ಮೊದಲ ಸಲವೇನಲ್ಲ. ಈ ಹಿಂದೆ ಮೂರು-ನಾಲ್ಕು ಬಾರಿ ಆಗಿದೆ. ಆದರೆ ಅದಕ್ಕೆ ಯಾರನ್ನೂ ಜವಾಬ್ದಾರರನ್ನಾಗಿ ಮಾಡದಿರುವ ನರೇಂದ್ರ ಮೋದಿ ಸರಕಾರ ಸಂವೇದನೆಯನ್ನು ಕಳೆದುಕೊಂಡಂತೆ ವರ್ತಿಸುತ್ತಿರುವುದು ಅಪಾಯಕಾರಿಯಾಗಿದೆ. ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಅವರನ್ನು ಸಚಿವ ಸಂಪುಟದಿಂದ ವಜಾ ಮಾಡಿದರೆ ಅದರಿಂದ ಕನಿಷ್ಠ ಸಮಾಧಾನವಾದರೂ ಉಂಟಾಗುತ್ತಿತ್ತು. ಭ್ರಷ್ಟಾಚಾರ, ಅಕ್ರಮ ಮುಂತಾದುವುಗಳು ತುಂಬಿ ತುಳುಕಾಡುತ್ತಿರುವ ಎನ್.ಟಿ.ಎ. ಪರೀಕ್ಷಾ ವ್ಯವಸ್ಥೆ ವಿದ್ಯಾರ್ಥಿ ಮತ್ತು ಯುವ ಸಮುದಾಯವನ್ನು ರೊಚ್ಚಿಗೆಬ್ಬಿಸಿರುವುದು ದಿಟವೇ ಆಗಿದೆ. ತಪ್ಪಿತಸ್ಥರಿಗೆ ಶಿಕ್ಷೆಯೇ ಇಲ್ಲವೆಂದರೆ ಅಂಥ ವ್ಯವಸ್ಥೆಯ ನಾಗರಿಕ ಔಚಿತ್ಯವನ್ನು ಪ್ರಶ್ನಿಸಬೇಕಾಗುತ್ತದೆ.

ಇವೆಲ್ಲದರ ಜೊತೆಗೆ ಸೇರಿಕೊಂಡಿರುವುದು ದಿನೇದಿನೇ ವೃದ್ಧಿಸುತ್ತಿರುವ ನಿರುದ್ಯೋಗ ಸಮಸ್ಯೆ. ಕೆಲವು ವರದಿಗಳ ಪ್ರಕಾರ ಭಾರತದಲ್ಲಿ ವಿದ್ಯಾವಂತ ನಿರುದ್ಯೋಗಿಗಳ ಪ್ರಮಾಣ ಶೇ. 15ರಿಂದ 40ರಷ್ಟಿದೆ. ಕೃತಕ ಬುದ್ಧಿಮತ್ತೆಯ ಅಳವಡಿಕೆಯಿಂದಾಗಿ ಅನೇಕ ಕ್ಷೇತ್ರಗಳಲ್ಲಿ ಉದ್ಯೋಗಿಗಳು ಕೂಡ ತಮ್ಮ ಕೆಲಸವನ್ನು ಕಳೆದುಕೊಳ್ಳುತ್ತಿದ್ದಾರೆ. ಶಿಕ್ಷಣ ಕ್ಷೇತ್ರವಂತೂ ದಿನೇ ದಿನೇ ಅಧೋಗತಿಗೆ ಹೋಗುತ್ತಿದೆ. ಈ ಎಲ್ಲ ಸಮಸ್ಯೆಗಳಿಗೆ ಕೇಂದ್ರ ಹಾಗೂ ರಾಜ್ಯ ಸರಕಾರಗಳು ಸಮನಾಗಿ ಭಾಜನವಾಗುತ್ತವೆ.

ಈಗ ಉಂಟಾಗಿರುವ 'ಜಿರಳೆ ಆಂದೋಲನ' ಸರಕಾರವನ್ನು ಬುಡಮೇಲು ಮಾಡುತ್ತದೆ ಎಂದಾಗಲಿ, ಅದು ದೇಶದ ಅರಾಜಕತೆಗೆ ಕಾರಣವಾಗುತ್ತದೆ ಎಂದಾಗಲಿ ಭಾವಿಸುವುದು ಅತಿರೇಕದ ನಡೆಯಾಗಬಹುದು. ಯುವಕರ ಆಶೋತ್ತರಗಳು ಈಡೇರದಿದ್ದಾಗ ಅದು ಯಾವುದೇ ರೂಪದಲ್ಲಿ ಅಭಿವ್ಯಕ್ತಗೊಳ್ಳಬಹುದು. 'ಕಾಕ್ರೋಚ್' ಜನತಾ ಪಕ್ಷ ನಿಜಾರ್ಥದಲ್ಲಿ ರಾಜಕೀಯ ಪಕ್ಷವೇ ಅಲ್ಲ. ಈ ಆಂದೋಲನವನ್ನು ಸರಕಾರಿ ಬಲದಿಂದ ಹತ್ತಿಕ್ಕುವ ಪ್ರಯತ್ನಗಳು ಇನ್ನಷ್ಟು ಅಪಾಯಕಾರಿ. ಆದರೆ ಸರಕಾರಗಳು ಸಂವೇದನಾಶೀಲವಾಗುವುದಕ್ಕೆ, ಯುವಕರ ಸಮಸ್ಯೆಗಳಿಗೆ ಸಕಾರಾತ್ಮಕವಾಗಿ ಸ್ಪಂದಿಸಲು ಇದೊಂದು ಸದವಕಾಶ ಎಂದೇ ಭಾವಿಸಬೇಕು. ■

ಪಿತ್ತ ಕಲ್ಲು ಏನು ಕಾರಣ? ಹೇಗೆ ನಿಯಂತ್ರಣ?

❑ಡಾ. ಸಿ.ಜಿ. ಕೇಶವಮೂರ್ತಿ

ಪಿತ್ತಕೋಶದಲ್ಲಿ ಕಲ್ಲುಗಳು ಉಂಟಾಗಲು ಹಲವು ಕಾರಣಗಳಿವೆ. ನಮ್ಮ ಜೀವನಶೈಲಿಯೂ ಅವುಗಳಲ್ಲೊಂದು! ಈ ವ್ಯಾಧಿಯ ಆತಂಕಕಾರಿ ಅಂಶಗಳೇನು? ರೋಗ ನಿಯಂತ್ರಣ ಹೇಗೆ?

ಪಿತ್ತಜನಕಾಂಗದ ಕೆಳಗಿರುವ ಪಿತ್ತಕೋಶದಲ್ಲಿ ಕಲ್ಲು-ಹರಳುಗಳು ಉಂಟಾಗುವುದು ಸಹಜ ವಿದ್ಯಮಾನ. ಶೇ. ಐದರಿಂದ 10ರಷ್ಟು ಜನರು ಈ ವ್ಯಾಧಿಯಿಂದ ನರಳುತ್ತಾರೆ; ಇದರ ಸಂಭವನೀಯತೆ ಹೆಂಗಸರಲ್ಲಿ ಐದು ಪಟ್ಟು ಅಧಿಕ. ಪಾಶ್ಚಾತ್ಯರಲ್ಲಿ ಹೆಚ್ಚು, ಏಷ್ಯಾ ಖಂಡ ನಿವಾಸಿಗಳಲ್ಲಿ ಕಡಿಮೆ. ಪಾಶ್ಚಾತ್ಯರ ಆಹಾರ ಪದ್ಧತಿಯೇ ಇದಕ್ಕೆ ಕಾರಣ. ಅವರು ಮಾಂಸಾಹಾರವನ್ನು ಹೆಚ್ಚಾಗಿ ಬಳಸುತ್ತಾರೆ.

ಅಮೆರಿಕಾದಲ್ಲಿ 20 ದಶಲಕ್ಷ ಜನರು ಇಂಥ ಕಲ್ಲುಗಳನ್ನು ಹೊಂದಿದ್ದು ಆ ಪೈಕಿ ಐದು ಲಕ್ಷ ಜನರು ಪ್ರತಿವರ್ಷ ಪಿತ್ತಕೋಶವನ್ನು ತೆಗೆಸುವ ಶಸ್ತ್ರಚಿಕಿತ್ಸೆಗೆ ಒಳಗಾಗುತ್ತಾರೆ; 'ಕೋಲಿ ಸಿಸ್ಟೆಕ್ಟಮಿ' ಎಂದು ಇದಕ್ಕೆ ಹೆಸರು. ಪಿತ್ತಕೋಶದ ವ್ಯಾಧಿಯಿಂದ ಮತ್ತು ಅದರ ಉಲ್ಬಣ ಪರಿಣಾಮಗಳಿಂದ ಸಾವಿಗೀಡಾಗುವುದೂ ಉಂಟು.

ವ್ಯಾಧಿ ಉತ್ಪತ್ತಿಯ ಕಾರಣಗಳು

ಕಾರಣಗಳು ಸ್ಪಷ್ಟವಿಲ್ಲ; ಹಾಗಾಗಿ ಇದನ್ನು ತಡೆಯುವುದು ಕಷ್ಟ. ವಯಸ್ಸು, ಆಹಾರಾಭ್ಯಾಸ, ಸ್ತ್ರೀ ಹಾರ್ಮೋನುಗಳು, ಜನನ ನಿಯಂತ್ರಣದ ಔಷಧಿ ಗುಳಿಗೆಗಳ ಸೇವನೆ, ಆಲಸೀಜೀವನ, ವಿವಿಧ ಔಷಧಿಗಳ ಬಳಕೆ, ಮಧುಮೇಹ ಕಾಯಿಲೆ, ಪಿತ್ತಕೋಶದ ಸೋಂಕು, ಪಿತ್ತರಸದ ಹರಿವು ನಿಧಾನವಾಗುವುದು, ಪಿತ್ತರಸದ ರಾಸಾಯನಿಕ ಮತ್ತು ಭೌತಿಕ ಗುಣಗಳು, ಲಿವರ್ ಕಣಗಳಿಂದ ಪಿತ್ತರಸ ಉತ್ಪಾದನೆಯಲ್ಲಿ ಕೊರತೆ – ಇವೆಲ್ಲವೂ ಪಿತ್ತಕಲ್ಲು ಉತ್ಪಾದನೆಗೆ ಕಾರಣವಾಗುವ ಅಂಶಗಳೇ ಆಗಿವೆ.

ಪಿತ್ತಕಲ್ಲು ಹುಟ್ಟುವ ಬಗೆ ಹೇಗೆ?

ಪಿತ್ತಕೋಶ ಕಲ್ಲುಗಳೆಂದರೆ ಪಿತ್ತರಸದಲ್ಲಿರುವ ವಿವಿಧ ರಾಸಾಯನಿಕ ವಸ್ತುಗಳು, ಲವಣಗಳು ಒಗ್ಗೂಡಿ ಹರಳು ರೂಪವನ್ನು ಹೊಂದಿ, ತಳಸೇರಿ ಬೆಳೆಯುತ್ತವೆ. ಈ ಪ್ರಕ್ರಿಯೆಗೆ ಲವಣಗಳ ಜೊತೆಗಿರುವ ದ್ರವವಸ್ತುವೂ ಸಹಕಾರ ನೀಡುತ್ತದೆ.

ಪಿತ್ತರಸವು ಕ್ಲಿಷ್ಟ ರಾಸಾಯನಿಕ ವಸ್ತುಗಳನ್ನು ಹೊಂದಿರುವ ಸ್ರವಿಕೆಯಾಗಿದೆ; ಕೊಬ್ಬು ಪಚನವಾಗಲು ಮತ್ತು ಕರುಳು ಹೀರಿಕೊಳ್ಳಲು ಅದು ಸಹಕಾರಿ. ಪಿತ್ತಜನಕಾಂಗದಿಂದ ನಿರಂತರವಾಗಿ ಅದು ಸ್ರವಿಸುತ್ತಲೇ ಇರುತ್ತದೆ. ರಸವು ಪಿತ್ತಕೋಶದಲ್ಲಿ ಸಂಗ್ರಹಗೊಳ್ಳುತ್ತದೆ. ಅಗತ್ಯವಿದ್ದಾಗ, ಅಂದರೆ ಊಟದ ಅನಂತರ ಪಿತ್ತಕೋಶವು ಸಂಕುಚಿಸಿ, ಸ್ವಲ್ಪ ರಸವನ್ನು ಸಣ್ಣ ಕರುಳಿಗೆ ಬಿಡುಗಡೆ ಮಾಡುತ್ತದೆ.

ಪಿತ್ತಕೋಶದ (ಗಾಲ್ ಬ್ಲಾಡರ್) ಒಳ ಪರಿಸರವೇ ಕಲ್ಲುಗಳ ಉತ್ಪಾದನೆಗೆ ಪೂರಕವಾಗಿದೆ. ಈ ಪ್ರಕ್ರಿಯೆಯಲ್ಲಿ ಮೂರು ಹಂತಗಳಿವೆ.

- **ಪಿತ್ತರಸ (ಬೈಲ್)ದಲ್ಲಿ ಕೊಲೆಸ್ಟರಾಲ್ ಹೆಚ್ಚಾಗಿ ಸೇರಿಕೊಂಡಿರುವುದು.**
- **ಕಲ್ಲುಗಳ ಬೆಳವಣಿಗೆಗೆ ಪೂರಕವಾಗಿ ಒಂದು ಬೀಜಸ್ವರೂಪಿ ಚಿಕ್ಕ ಹರಳು ಉತ್ಪಾದನೆಗೊಂಡು ತಳಸೇರುವುದು.**
- **ಬೀಜ ರೂಪದ ಈ ಹರಳಿನ ಮೇಲೆ ಉಪ್ಪಿನಂಶವು ಮತ್ತೆ ಮತ್ತೆ ಶೇಖರಗೊಳ್ಳುವುದು.**

ಕೊಲೆಸ್ಟರಾಲ್ ಮತ್ತು ಪಿತ್ತಲವಣಗಳ ಅನುಪಾತವು ಅವು ನೀರಿನಲ್ಲಿ ಕರಗುವುದರಲ್ಲಿ ಪ್ರಮುಖ ಪಾತ್ರವನ್ನುವಹಿಸುತ್ತದೆ. ಅನುಪಾತವು ಏರುಪೇರಾದರೆ – ಅಂದರೆ ಲವಣಗಳಿಗಿಂತ ಕೊಲೆಸ್ಟರಾಲ್ ಹೆಚ್ಚಿನ ಪ್ರಮಾಣದಲ್ಲಿದ್ದಾಗ – ಅದು ಕಲ್ಲುಗಳ ಹುಟ್ಟಿಗೆ ದಾರಿ ಮಾಡಿಕೊಡುತ್ತದೆ.

ಕಲ್ಲುಗಳಲ್ಲಿ ವೈವಿಧ್ಯ

ರಾಸಾಯನಿಕವಾಗಿ ಪಿತ್ತಕಲ್ಲುಗಳು ಮೂರು ಧಾತುಗಳಿಂದ ರೂಪುಗೊಳ್ಳುತ್ತವೆ. ಅವು **ಕೊಲೆಸ್ಟರಾಲ್, ಬಿಲಿರುಬಿನ್ ಮತ್ತು ಕ್ಯಾಲ್ಸಿಯಂ.** ಇವುಗಳ ಪ್ರಮಾಣವು ಬದಲಾದಂತೆ ಕಲ್ಲುಗಳ ಭೌತಿಕ ಗುಣಗಳೂ ಬದಲಾಗುತ್ತವೆ.

ಕೊಲೆಸ್ಟರಾಲ್ ಕಲ್ಲುಗಳು: ಇವುಗಳಿಗೆ 'ಮೆಟಬಾಲಿಕ್ ಸ್ಟೋನ್'ಗಳೆಂಬ ಹೆಸರಿದೆ. ಕೊಲೆಸ್ಟರಾಲ್ ಚಯಾಪಚಯದ ಏರುಪೇರೇ ಇದಕ್ಕೆ ಕಾರಣ. ಇದು ಸಾಧಾರಣವಾಗಿ ಒಂದೇ ಒಂದು ಉತ್ಪತ್ತಿಯಾಗಿರುತ್ತದೆ. ಮೂರರಿಂದ ನಾಲ್ಕು ಸೆಂಟಿಮೀಟರ್ ಗಾತ್ರದ ಅಂಡಾಕೃತಿಯ, ಬಿಳಿಬಣ್ಣದ, ಹಗುರವಾದ ಕಲ್ಲು ಇದು.
ಅಡ್ಡಡ್ಡ ಕತ್ತರಿಸಿದಾಗ ಫಳಫಳ ಹೊಳೆಯುತ್ತಿರುತ್ತದೆ. ಪಾಶ್ಚಾತ್ಯರಲ್ಲಿ ಈ ತರಹ ಕಲ್ಲುಗಳೇ ಸಾಮಾನ್ಯವಾಗಿ ಕಂಡುಬರುತ್ತವೆ.

ಬಿಲಿರುಬಿನ್ ಕಲ್ಲುಗಳು (ಬಣ್ಣದ ಕಲ್ಲುಗಳು ಅಥವಾ ಪಿಗ್‌ಮೆಂಟ್ ಸ್ಟೋನ್ಸ್)

ಇವು ಹತ್ತಾರು ಸಂಖ್ಯೆಯಲ್ಲಿ ಉತ್ಪಾದನೆಯಾಗುತ್ತವೆ. ಬಹು ಸಣ್ಣ ಗಾತ್ರ, ಕಪ್ಪು ಬಣ್ಣ, ಒತ್ತಿದರೆ ಪುಡಿಯಾಗುವ ಗುಣಗಳನ್ನು ಹೊಂದಿವೆ. ಕೆಂಪು ರಕ್ತಕಣಗಳು ಅತಿಯಾಗಿ ನಾಶಹೊಂದಿ ಒಡೆದಾಗ ಈ ಬಣ್ಣದ ಕಲ್ಲುಗಳು ಹುಟ್ಟುತ್ತವೆ. ಕೆಲವು ಬಾರಿ, ಇಡೀ ಕೋಶವೇ ಕಲ್ಲಿನಿಂದ ತುಂಬುವ ಸಾಧ್ಯತೆಯಿದೆ.

ಮಿಶ್ರ ಬಣ್ಣದ ಕಲ್ಲುಗಳು

ಭಾರತೀಯರಲ್ಲಿ ಶೇ. 80ರಷ್ಟು ಪ್ರಕರಣಗಳಲ್ಲಿ ಕಂಡುಬರುವುದು ಇಂಥ ಕಲ್ಲುಗಳೇ. ಅರ್ಧದಿಂದ ಒಂದೂವರೆ ಸೆಂಟಿಮೀಟರ್ ಗಾತ್ರದ ಹಲವು ಮುಖಗಳುಳ್ಳ, ಹಳದಿ – ನಸುಕಂದು ಅಥವಾ ಕಡು ಕಂದು ಬಣ್ಣದ ಕಲ್ಲುಗಳು ಇವು. ಅಡ್ಡಡ್ಡ ಕತ್ತರಿಸಿದಾಗ ಕೊಲೆಸ್ಟರಾಲ್, ಕ್ಯಾಲ್ಸಿಯಂ ಮತ್ತು ಬಿಲಿರುಬಿನ್‌ಗಳು ಹಂತ ಹಂತವಾಗಿ ಶೇಖರವಾಗಿರುವುದನ್ನು ಕಾಣಬಹುದು.

ಬಿಲಿಯರಿ ಸ್ಲಡ್ಜ್: ಇದೊಂದು ತರಹದ ಲೋಳೆಯಂಥ ವಸ್ತು. ಕ್ಯಾಲ್ಸಿಯಂ, ಬಿಲಿರುಬಿನ್ ಮತ್ತು ಕೊಲೆಸ್ಟರಾಲ್‌ಗಳು ವಿವಿಧ ರೂಪದಲ್ಲಿ ಗ್ಲೈಕೋ ಪ್ರೊಟೀನುಗಳೊಡನೆ ಬೆರೆತು ಬೈಲ್ ದ್ರವ (ಪಿತ್ತರಸ)ದಲ್ಲಿತೇಲುತ್ತಿರುತ್ತವೆ. ಇದರಿಂದಲೇ ಮುಂದೆ ಕಲ್ಲು ಉಂಟಾಗುತ್ತದೆ.

ರೋಗ ಲಕ್ಷಣಗಳು

- **ಏನೊಂದು ಲಕ್ಷಣಗಳನ್ನೂ ಬಿಂಬಿಸದೇ ಇರುವ ಸಾಧ್ಯತೆಯಿದೆ.** ಕಲ್ಲುಗಳಿದ್ದರೂ ಬೈಲ್‌ದ್ರವವು ಸರಾಗವಾಗಿ ಹರಿಯಲು ಸಾಧ್ಯವಾಗುತ್ತಿದ್ದರೆ ನೋವೇ ಕಂಡುಬಾರದು.
- **ಅಜೀರ್ಣ:** ಬಹಳಷ್ಟು ಪ್ರಕರಣಗಳಲ್ಲಿ ಪಿತ್ತಕೋಶವು ಉರಿಯೂತಕ್ಕೆ ಮತ್ತು ಸೋಂಕಿಗೆ ಈಡಾಗಿ ಅಜೀರ್ಣದ ಲಕ್ಷಣಗಳು ಗೋಚರಿಸುತ್ತವೆ. ಜಠರ ಪ್ರದೇಶದಲ್ಲಿ ಊತ, ಭಾರದ ಅನುಭವ, ಆಹಾರ ಸೇವನೆಯ ಅನಂತರ, ಅದರಲ್ಲೂ ಕರಿದ ತಿಂಡಿಗಳನ್ನು ಸೇವಿಸಿದ ಅನಂತರ ಕಮರು ತೇಗು ಬರುವುದು – ಇವೆಲ್ಲ ವ್ಯಾಧಿಯ ಲಕ್ಷಣಗಳಾಗಿವೆ.
- **ಪಿತ್ತಕೋಶದ ಭಾಗದಲ್ಲಿ ಹೊಟ್ಟೆ ಹಿಂಡಿದಂತೆ ನೋವು:** ಇದೇ ಈ ವ್ಯಾಧಿಯ ಮೊದಲ ಹಾಗೂ ಪ್ರಮುಖ ಲಕ್ಷಣ. ಕಲ್ಲು ಪಿತ್ತನಾಳದಲ್ಲಿ ಸಿಕ್ಕಿಹಾಕಿ ಕೊಂಡಾಗ, ಅಡ್ಡ ಕುಳಿತಾಗ, ಪಿತ್ತರಸ ಹರಿಯಲಾರದೆ, ಕೋಶ ಸಂಕುಚಿಸಿ ವಿಪರೀತ ನೋವುಂಟಾಗುತ್ತದೆ. ಹೊಟ್ಟೆಯ ಬಲ ಮೇಲ್ಭಾಲೆಯಲ್ಲಿ ಪ್ರಾರಂಭವಾಗುವ ನೋವು ಬಲಭುಜ ಮತ್ತು ಬೆನ್ನಿಗೆ ಹರಿಯುತ್ತದೆ. ಜೊತೆಯಲ್ಲಿವಾಕರಿಕೆ, ವಾಂತಿಯೂ ಇರುತ್ತದೆ. ದೀರ್ಘಕಾಲದ ಅನಂತರ ಅರಿಸಿನ ಕಾಮಾಲೆ ಕೂಡ ಕಂಡುಬರಬಹುದು.

ಅಲ್ಪಕಾಲಿಕ ಪಿತ್ತಕೋಶದ ಸೋಂಕು

ಪಿತ್ತರಸದ ಹರಿವಿಗೆ ಅಡಚಣೆಯುಂಟಾದಾಗ ಅದು ಸೋಂಕಿಗೀಡಾಗುತ್ತದೆ. ಆ ಭಾಗದ ಚರ್ಮವನ್ನು ಒತ್ತಿದರೆ ವಿಪರೀತ ನೋವು, ಜ್ವರ, ವಾಕರಿಕೆ, ವಾಂತಿ,

ರಕ್ತದಲ್ಲಿ ಬಿಳಿರಕ್ತ ಕಣಗಳ ಏರಿಕೆ ಉಂಟಾಗುತ್ತದೆ. ಈ ಹಂತದಲ್ಲಿ ಸೂಕ್ತ ಚಿಕಿತ್ಸೆ ದೊರೆಯದಿದ್ದರೆ ಜೀವಕ್ಕೇ ಅಪಾಯ ಉಂಟಾಗಬಹುದು.

ಕಾಯಿಲೆಯ ವಿಷಮ ಪರಿಣಾಮಗಳು

- ಪಿತ್ತಕೋಶದಲ್ಲಿ ಕೀವು ತುಂಬುವುದು, ರಕ್ತ ಪೂರೈಕೆಯಿಲ್ಲದೆ ಕೋಶವು ನಿರ್ಜೀವವಾಗುವುದು, ಒಡೆದು ಅಥವಾ ರಂಧ್ರವುಂಟಾಗಿ ಪಿತ್ತರಸ ಹೊರಚೆಲ್ಲಿ ವಿಸ್ತೃತ ಸೋಂಕು ಉಂಟಾಗುವುದು ಮುಂತಾದ ತೊಂದರೆಗಳು ಉಂಟಾಗಬಹುದು.
- **ಪಿತ್ತಜನಕಾಂಗದಲ್ಲಿ ಕೀವು ಗೆಡ್ಡೆ:** ವಪೆಯ ಕೆಳಗೆ ಕೀವು ತುಂಬಿ, ಮೇದೋಜೀರಕ ಗ್ರಂಥಿಯು ಸೋಂಕಿಗೆ ಈಡಾಗುತ್ತದೆ. ಪಿತ್ತಜನಕಾಂಗದಲ್ಲಿ ಕಿರು ಪಿತ್ತನಾಳಗಳು ಸೋಂಕಿಗೀಡಾಗುತ್ತವೆ. ಅಡಚಣೆಯುಂಟಾದಾಗ ಜಾಂಡೀಸ್ ಉಂಟಾಗಬಹುದು.

ಇಂಥ ಪ್ರಕರಣಗಳು ಮತ್ತೆ ಮತ್ತೆ ಉಂಟಾದಾಗ ದೀರ್ಘಕಾಲೀನ ಪಿತ್ತಕೋಶದ ಸೋಂಕು ಉಂಟಾಗಿ ಪಿತ್ತಕೋಶವು ನಿಷ್ಕ್ರಿಯಗೊಳ್ಳಬಹುದು; ಕ್ಯಾನ್ಸರ್ ಕೂಡ ಬರಬಹುದು.

ರೋಗಪತ್ತೆಗಾಗಿ ಪರೀಕ್ಷೆಗಳು

ಹೊಟ್ಟೆಯ ಅಲ್ಟ್ರಾಸೌಂಡ್ ಪರೀಕ್ಷೆ, ಎಕ್ಸ್‌ರೇ ಪರೀಕ್ಷೆ, ಬಾಯಿಯ ಮೂಲಕ ಪಿತ್ತಕೋಶವನ್ನು ಪರೀಕ್ಷಿಸುವ ಕೋಲಿಸಿಸ್ಟೋಗ್ರಫಿ, ರಕ್ತದ ಸಕ್ಕರೆ ಮಟ್ಟದ ಪರೀಕ್ಷಣೆ, ಲಿವರ್ ಫಂಕ್ಷನ್ ಟೆಸ್ಟ್ ಮುಂತಾದವು ಅಗತ್ಯ.

ಚಿಕಿತ್ಸೆಯೇನು?

ನೋವು ತುಂಬಿದ ಪಿತ್ತಕೋಶ ಪ್ರಕರಣದಲ್ಲಿ ಶಸ್ತ್ರಚಿಕಿತ್ಸೆಯಿಂದ ಪಿತ್ತಕೋಶವನ್ನು ತೆಗೆದುಹಾಕುವ ಚಿಕಿತ್ಸೆ ಸೂಕ್ತ.

ಇಂದು ಲಭ್ಯವಿರುವ 'ಲೆಪ್ರೋಸ್ಕೋಪಿಕ್ ಸರ್ಜರಿ'-ಕೀ ಹೋಲ್ ಶಸ್ತ್ರಚಿಕಿತ್ಸೆಯಿಂದ ಇದು ಸುಲಭ; ರೋಗಿಯ ಆಸ್ಪತ್ರೆವಾಸದ ಅವಧಿ ಬಹು ಕಡಿಮೆ. ಮಾರನೆಯ ದಿನವೇ ರೋಗಿ ಮನೆಗೆ ಹೋಗಬಹುದು. (ನೋವು, ಜಾಂಡೀಸ್, ಸೋಂಕು, ಜಠರದ ತೊಂದರೆ ಇಲ್ಲದಿರುವ ಪ್ರಸಂಗಗಳಲ್ಲಿ ಶಸ್ತ್ರ ಚಿಕಿತ್ಸೆ ಮಾಡುವ ಅಗತ್ಯವಿಲ್ಲ.)

ಇತ್ತೀಚೆಗೆ ಕಲ್ಲುಗಳನ್ನು ಕರಗಿಸುವ ಮಾತ್ರೆಗಳೂ ಲಭ್ಯವಿವೆ. ಅವು ನಿಧಾನವಾಗಿ ಕೆಲಸ ನಿರ್ವಹಿಸುತ್ತವೆ.

ನಿಯಂತ್ರಣ ಹೇಗೆ?

ಆತಂಕಕಾರಿ ಅಂಶಗಳನ್ನು ನಿವಾರಿಸಿಕೊಳ್ಳುವುದೇ ರೋಗ ನಿಯಂತ್ರಣಕ್ಕೆ ದಾರಿ.

ಭಾರತದ ಉತ್ತರ ಪೂರ್ವ ರಾಜ್ಯಗಳಲ್ಲಿ ಪಿತ್ತಕಲ್ಲು ವ್ಯಾಧಿಯ ಸಂಭವನೀಯತೆ ಹೆಚ್ಚು. ಅದಕ್ಕೆ ಕಾರಣ ಅಲ್ಲಿ ಹೆಚ್ಚುತ್ತಿರುವ ಸ್ಥೂಲಕಾಯ ಸಮಸ್ಯೆ.

ಕ್ರಿ.ಶ. 1900ರ ವೇಳೆ 'ಪಿಮಾ' ಎಂಬ ಭಾರತೀಯ ಜನಾಂಗವೊಂದರಲ್ಲಿ ಈ ಮಾದರಿ ಕಂಡುಬಂದಿತ್ತು. ಕಷ್ಟಪಟ್ಟು ನಾಲ್ಕಾರು ಮೈಲಿ ತಿರುಗಿ, ಓಡಿ, ಬೆವರು ಸುರಿಸಿ ಬೇಟೆಯಾಡುತ್ತಿದ್ದ ಜನರು, ಆನಂತರ ಆಲಸೀ ಜೀವನ ಮತ್ತು ಅತಿಯಾದ ಮಾಂಸಾಹಾರ ಸೇವನೆ ಮಾಡಿರುವುದೇ ಇದಕ್ಕೆ ಕಾರಣವಾಗಿತ್ತು.

ಕೆಲವು ಶಸ್ತ್ರಚಿಕಿತ್ಸಕರ ಅನುಭವ-ಅಭಿಪ್ರಾಯ ಹೀಗಿವೆ:

- **ಗರ್ಭಿಣಿ ಸ್ತ್ರೀಯರಲ್ಲಿ ಹಾರ್ಮೋನ್ ವ್ಯತ್ಯಾಸದಿಂದಾಗಿ ಅಜೀರ್ಣಕ್ಕೆ ಸಂಬಂಧಿಸಿದ, ಆಮ್ಲೀಯತೆಗೆ ಸಂಬಂಧಿಸಿದ ವ್ಯಾಧಿಗಳು ಹೆಚ್ಚಾಗುತ್ತವೆ.**
- **ಬುಡಕಟ್ಟಿನ ಜನರು 'ಫಾಸ್ಟ್ ಫುಡ್' ಸೇವಿಸಲಾರಂಭಿಸಿದ ಮೇಲೆ ಅವರ ಪಿತ್ತರಸದಲ್ಲಿ ಕೊಲೆಸ್ಟರಾಲ್ ಹೆಚ್ಚಾಗಿರುವುದು ಕಂಡುಬಂದಿದೆ.**
- **ಪಿತ್ತಕಲ್ಲುಗಳು 'ಸತ್ತ' ಬ್ಯಾಕ್ಟೀರಿಯಾಗಳ ಸಮಾಧಿ ಎಂದು ವೈದ್ಯರು ಹೇಳುತ್ತಾರೆ. ಈ ಸಮಾಧಿ ನಿಧಾನವಾಗಿ ಬೆಳೆಯುತ್ತದೆ.**
- **ಸಾಸಿವೆ ಎಣ್ಣೆ ಬಳಸುವವರಲ್ಲಿ ಇದರ ಸಂಭಾವ್ಯತೆ ಹೆಚ್ಚು, ತೆಂಗಿನೆಣ್ಣೆ ಬಳಸುವವರಲ್ಲಿ ಕಡಿಮೆ. ಹಾಗಾಗಿ ದಕ್ಷಿಣ ಭಾರತೀಯರಲ್ಲಿ ವ್ಯಾಧಿ ಕಡಿಮೆ.**

ಅಳುತ್ತಿರುವವು ಇಂದು

*ಉ*ಣಿಸುವವರೆಲ್ಲ
ಉಣಿಸುತ್ತಿರುವರು ಮಕ್ಕಳಿಗೆ
ಮೊಬೈಲ್ ತೋರಿಸುತ
ಅಳುತ್ತಿರುವನಿಂದು ಚಂದ್ರ
ತನ್ನ ತೋರಿಸುವವರಿಲ್ಲದೆ

ಬರೆಯುವವರೆಲ್ಲ
ಬರೆಯುತ್ತಿರುವರಿಂದು
ಕಂಪ್ಯೂಟರಿನಲ್ಲಿ
ಅಳುತ್ತಿರುವವಿಂದು ಪೆನ್ನುಗಳು
ತನ್ನ ಬಳಸುವವರಿಲ್ಲದೆ

ಧಾವಿಸುವವರೆಲ್ಲ
ಧಾಸುತ್ತಿರುವರಿಂದು
ಟ್ಯೂಷನ್ ಕ್ಲಾಸಿಗೆ
ಅಳುತ್ತಿವೆ ಇಂದು
ಮೈದಾನಗಳು
ತನ್ನಲಿ ಆಡುವವರಿಲ್ಲದೆ

ವೀಕ್ಷಿಸುವವರೆಲ್ಲ
ವೀಕ್ಷಿಸುತ್ತಿರುವರು ಇಂದು
ಕಾರ್ಯಕ್ರಮ ಮೊಬೈಲಿನಲ್ಲಿ
ಅಳುತ್ತಿರುವವು ಇಂದು
ಟಿವಿಗಳು
ತನ್ನ ವೀಕ್ಷಿಸುವವರಿಲ್ಲದೆ

ಮುಚ್ಚುವವರೆಲ್ಲ
ಮುಚ್ಚುತ್ತಿರುವರು ಇಂದು
ಗದ್ದೆಗಳನು ಮನೆಕಟ್ಟಲು
ಅಳುತ್ತಿರುವವಿಂದು
ಗದ್ದೆಗಳು
ಉಸಿರಾಟ ಮಾಡಲಾಗದೆ

ವ್ಯವಹರಿಸುವವರೆಲ್ಲ
ವ್ಯವಹರಿಸುತ್ತಿರುವರಿಂದು
ಫೋನ್ ಪೇ ಮೂಲಕ
ಅಳುತ್ತಿವೆ ಇಂದು
ಕೆಸೆಗಳು
ತನ್ನಲಿ ಹಣವಿಲ್ಲದೆ

❑ ದೇವಿದಾಸ ಸುವರ್ಣ

❑ ಡಾ. ಆರತಿ ವೆಂಕಟೇಶ್

ಧಾರಾವಾಹಿ

ಹಿಂದಿನ ಸಂಚಿಕೆಯಿಂದ...

ವಾಸಂತಿಯವರು ತಮ್ಮ ಮಗನಿಗೆ ಸೌಜನ್ಯಳನ್ನು ಪರಿಚಯ ಮಾಡಿಸಿ, ಮದುವೆಯಾಗುವಂತೆ ಹೇಳುತ್ತಿರುವಾಗಲೇ , ಪ್ರಾಂಜಲಿ ತನ್ನ ಮರುಮದುವೆಯ ಆಮಂತ್ರಣಪತ್ರವನ್ನು ಕಳುಹಿಸಿಕೊಟ್ಟಳು. ಅದನ್ನು ನೋಡಿ ಸತ್ಯವೆಂದು ತಿಳಿದ ಆಲೋಕ್ ಶಾಕ್‌ನಿಂದ ಜ್ವರ ಬಂದು ಬಳಲಿದ. ಆದರೆ ಪ್ರಾಂಜಲಿ ಹೀಗಾದರೂ ಆಲೋಕ್ ಸಂಪೂರ್ಣವಾಗಿ ತನ್ನಿಂದ ದೂರವಾಗಲೆಂದು ಹೂಡಿದ ಉಪಾಯವಾಗಿತ್ತು ಅದು.

ಮುಂದೆ ಓದಿ...

ಆಲೋಕ್ ಆಸ್ಪತ್ರೆಯಿಂದ ಮನೆಗೆ ಬಂದ ಮೇಲೆ ಸೌಜನ್ಯಾ ತಮ್ಮ ಬಳಿ ಎಂದಿನಂತಿಲ್ಲವೆಂದು ಗಮನಿಸಿದರು ವಾಸಂತಿ. ಅವಳು ಶಾಲೆಯಲ್ಲಿ ಕೆಲಸ ಮಾಡುತ್ತಿದ್ದರೂ ಹಿಂದಿನಂತೆ ಆತ್ಮೀಯವಾಗಿ ಮಾತನಾಡುತ್ತಿರಲಿಲ್ಲ.

ಮೊದಲೇ ಮಿತಭಾಷಿ, ಈಗಂತೂ ವಾಸಂತಿಗೆ ವಿಶ್ ಮಾಡುವುದನ್ನು ಬಿಟ್ಟರೆ ಆಲೋಕ್ ಬಗ್ಗೆ ಅವಳು ಅಪ್ಪಿತಪ್ಪಿಯೂ ಮಾತನಾಡುತ್ತಿರಲಿಲ್ಲ.

ಕೊನೆಗೆ ತಡೆಯಲಾರದೇ ವಾಸಂತಿ ತಾವೇ ಅವಳನ್ನು ಛೇಂಬರಿಗೆ ಕರೆಸಿ, ''ಸೌಜನ್ಯಾ, ಏನಾಗಿದೆ ನಿಂಗೆ? ಆಲೋಕ್ ಡಿಸ್‌ಚಾರ್ಜ್ ಆದಾಗ್ಲಿಂದ ನಮ್ಮನೆಗೆ ಒಂದಿನ ಬಂದಿಲ್ಲ. ಅವನ ಬಗ್ಗೆ ವಿಚಾರಿಸಿಲ್ಲ. ನಂಜೊತೆ ಮೊದಲಿನ ಹಾಗೆ ಮಾತಾಡ್ತಿಲ್ಲ. ಯಾಕೆ? ಏನಾಯ್ತು? ನಿನ್ನ ಬಗ್ಗೆ ಎಷ್ಟು ಆಸೆ, ಕನಸು ಕಟ್ಕೊಂಡಿದ್ದೀನಿ. ನೀನೂ ನನಗೆ ನಿರಾಶೆ ಮಾಡ್ತಿದ್ದೀಯಾ?'' ಎನ್ನುವಾಗ ಅವರ ದನಿಯಲ್ಲಿ ನೋವು ತುಂಬಿತ್ತು.

ಸೌಜನ್ಯಾ ಯಾವುದನ್ನೂ ಮುಚ್ಚಿಟ್ಟುಕೊಳ್ಳದೆ ಅಂದು ಆಲೋಕ್ ಹೇಳಿದ ಮಾತುಗಳನ್ನು ತಿಳಿಸಿದಳು–

''ಮೇಡಂ, ಇನ್ನೊಬ್ಬರಿಗೆ ಹಿಂಸೆಕೊಟ್ಟು ಅವರ ಬದುಕಿನಲ್ಲಿ ಅತಿಕ್ರಮಿಸೋ ಆಸೆ ನನಗ್ಯಾವತ್ತೂ ಇಲ್ಲ. ನಿಜ ಹೇಳ್ಬೇಕೂಂದ್ರೆ, ನಾನು ಯಾವ ಸ್ವಾರ್ಥದಿಂದಾನೂ ಬಂದು ನಿಮಗೆ ಸಹಾಯ ಮಾಡ್ಲಿಲ್ಲ. ನೀವು ಒಂಟಿಯಾಗಿ ಹೆಲ್ಪ್‌ಲೆಸ್ ಆಗಿದ್ರಿ ಅನ್ನೋ ಒಂದೇ ಕಾರಣಕ್ಕೆ ನಾನು ಬಂದಿದ್ದು. ಈ ಮೂಲಕ ನಿಮ್ಮ ಮಗನ್ನ ಒಲಿಸ್ಕೊಂಡು ಅವರ ಮನಸ್ಸು ಗೆಲ್ಲೋಂಥ ದುರಾಲೋಚನೆ ಮಾಡುವವಳಲ್ಲ ನಾನು. ದಯವಿಟ್ಟು ನನ್ನನ್ನು ಕ್ಷಮಿಸಿ ಬಿಡಿ. ನಿಮ್ಮ ಆಸೆ, ಕನಸುಗಳಿಗೆ ಬೆಂಬಲ ನೀಡುವ ಪರಿಸ್ಥಿತಿಯಲ್ಲಿ ನಾನಿಲ್ಲ'' ಎಂದು ಕೈ ಮುಗಿದು ಅಲ್ಲಿಂದ ಹೊರಟು ಹೋದಾಗ ನಿರಾಶೆ, ನೋವಿನಿಂದ ಕಂಗಾಲಾದರು ವಾಸಂತಿ.

ಮನೆಗೆ ಹಿಂದಿರುಗಿದ ತಾಯಿಯ ಮುಖ ಧುಮುಗುಡುತ್ತಿರುವುದನ್ನು ಗಮನಿಸಿದ ಆಲೋಕ್,

''ಮಮ್ಮಿ, ಏನಾಯ್ತು? ಯಾಕೆ ಹೀಗಿದ್ದೀಯ?''

''ನಾನಿನ್ನೂ ಬದುಕಿದ್ದೀನಲ್ಲ, ಅದಕ್ಕೆ!'' ಕತ್ತಿಯ ಅಲುಗಿನಷ್ಟೇ ಹರಿತವಾಗಿ ಬಂದಿತ್ತು ಅವರ ಉತ್ತರ.

''ಮಮ್ಮಿ, ಯಾಕೆ ಹೀಗೆ ಮಾತಾಡ್ತಿದ್ದೀಯ?''

''ಇನ್ನೇನು ಮತ್ತೆ, ನನ್ನ ಮಗನ ಬಾಳು ಸರಿಹೋಗ್ಲಿ ಅಂತ ಹಗಲು–ರಾತ್ರಿ ನಿದ್ದೆಗೆಟ್ಟು ಒದ್ದಾಡ್ತಿದ್ದೀನಿ! ನೀನು ನೋಡಿದ್ರೆ ಅಂಥ ಒಳ್ಳೆ ಹುಡ್ಗಿಗೆ ಮನಸ್ಸು ಮುರಿಯೋ ಹಾಗೆ ಮಾತಾಡಿದ್ದೀಯ! ಅವಳೆಷ್ಟು ನೊಂದ್ಕೊಂಡಿದ್ದಾಳೆ ಗೊತ್ತಾ? ಅವಳೇನು ನಿನ್ನ ಸೇವೆ ಮಾಡೋಕೆ ಬಂದಿರೋ ಆಯಾ ಅಂದ್ಕೊಂಡಿದ್ದೀಯಾ? ನನ್ನ ಬಗ್ಗೆ ಇರೋ ಗೌರವ, ನಿನ್ಮೇಲಿರೋ ಪ್ರೀತಿ, ವಿಶ್ವಾಸಕ್ಕೆ ಬಂದಿದ್ದು. ಅದಕ್ಕೆ ನೀನು ಮಾಡಿದ್ದೇನು? ಬಾಯಿಗೆ ಬಂದ್ಹಾಗೆ ಮಾತಾಡಿ ಅವಳ್ನ ದೂರ ಮಾಡ್ಕೊಂಡಿದ್ದೀಯಲ್ಲ! ನಿನ್ನನ್ನೇನು ಅವಿವೇಕಿ ಅನ್ನಬೇಕಾ ಅಥವಾ ಮೂರ್ಖ ಅನ್ನಬೇಕೋ ನನಗೆ ಗೊತ್ತಾಗ್ತಾ ಇಲ್ಲ!'' ತಾಯಿಯ ಆಕ್ರೋಶಕ್ಕೆ ಮೂಲವೇನೆಂದು ಅವನಿಗೆ ಅರ್ಥವಾಯಿತು.

''ಮಮ್ಮಿ, ನನ್ನ ಮನಸ್ಸಲ್ಲಿರೋ ವಿಷಯ ಫ್ರಾಂಕ್ ಆಗಿ ಹೇಳ್ದೆ ಅಷ್ಟೆ. ಅದ್ರಲ್ಲಿ ತಪ್ಪೇನಿದೆ?''

ವಾಸಂತಿ ವ್ಯಂಗ್ಯವಾಗಿ,

''ಹೌದಪ್ಪ, ಏನೂ ತಪ್ಪಿಲ್ಲ, ಕೈಲಿರೋ ಬಂಗಾರ ಬಿಸಾಕಿ ಆಮೇಲೆ ಭಿಕ್ಷೆ ಬೇಡೋಕೆ ಹೋದಂತೆ, ಹಾಗಾಗಿದೆ ನಿನ್ನ ಪರಿಸ್ಥಿತಿ! ಚಿನ್ನದಂಥ ಸಂಬಂಧ ಬಿಟ್ಕೊಟ್ಟು ಇನ್ನೂ ಆ ಬಿಟ್ಟುಹೋದ ಹೆಂಡ್ತಿ ಬಗ್ಗೇನೇ ಯೋಚಿಸ್ಕೊಂಡು ಜೀವನ ಪೂರ್ತಿ ಒಂಟಿಯಾಗಿ ಬದುಕಬೇಕೂಂತಿದ್ದೀಯಾ? ಇರಪ್ಪಾ, ನಿನ್ನ ಜೀವನ, ನಿನ್ನಿಷ್ಟ, ನಿನ್ನ ನಿರ್ಧಾರ! ಆಫ್ಟರ್ ಆಲ್, ನಾನ್ಯಾರು ಹೇಳು? ನೀನು ಆ ಬಿಳಿ ತೊಗಲಿನ ಸುಂದರಿ ಪ್ರಾಂಜಲಿನ್ನ ಇಷ್ಟಪಟ್ಟು ಮದ್ವೆಯಾದಾಗ್ಲೂ ನನ್ನ ಮಾತಿಗೆ ಬೆಲೆ ಇರ್ಲಿಲ್ಲ, ಇನ್ನು ಈಗ ನನ್ನ ಮಾತಿಗೆ ಏನಿದೆ ಪ್ರಾಶಸ್ತ್ಯ? ನಿನಗೆ ಹೇಗೆ ಬೇಕೋ ಹಾಗೆ ಬದುಕ್ಕೋ! ಇರೋ ಆಸ್ತಿ ಎಲ್ಲ ದಾನ ಮಾಡಿ, ನಾನೂ ಯಾವುದಾದ್ರೂ ವೃದ್ಧಾಶ್ರಮ ಸೇರಿಬಿಡ್ತೀನಿ!'' ಮಾತಿನ ಕೊನೆಯಲ್ಲಿ ಕೋಪದ ಜೊತೆ ಅವರ ದನಿ ದುಃಖದಿಂದ ಗದ್ಗದವಾಯಿತು.

ತಾಯಿ ಅಳುತ್ತಾ ಹೋಗಿ ರೂಮು ಸೇರಿಕೊಂಡಾಗ ಆಲೋಕನಿಗೆ ದಿಕ್ಕು ತೋಚದಂತಾಯಿತು.

ವಾಸಂತಿ ಮಗನ ಜೊತೆ ಎರಡು ದಿನಗಳಾದರೂ ಮುಖಕೊಟ್ಟು ಮಾತನಾಡದೇ ರೂಮು ಸೇರಿ ಬಾಗಿಲು ಹಾಕಿಕೊಂಡಿದ್ದರು. ಆಲೋಕ್ ಎಷ್ಟು ಒತ್ತಾಯಿಸಿದರೂ ಅವರು ನಿಷ್ಠುರವಾಗಿ, ''ನನಗೆ ಊಟ, ತಿಂಡಿ ಏನೂ ಬೇಕಾಗಿಲ್ಲ! ಉಪವಾಸದಿಂದ ಪ್ರಾಣಹೋದ್ರೆ ನನಗಿನ್ನೂ ಸಂತೋಷ, ನಿನ್ನನ್ನ

ಕಾಡಿಸಿ, ಪೀಡಿಸೋ ತಾಯಿ ಇಲ್ಲಾಂತ ನೀನೂ ನೆಮ್ಮದಿಯಾಗಿರಬಹುದು'' ಎಂದು ಕಡ್ಡಿ ತುಂಡು ಮಾಡಿದಂತೆ ಹೇಳಿದಾಗ ಆಲೋಕ್ ತಬ್ಬಿಬ್ಬಾದ.

ಮೊದಮೊದಲು ತಾಯಿಯ ಹಠದ ಸ್ವಭಾವ ಎಂದುಕೊಂಡಿದ್ದು ತಪ್ಪಾಗಿತ್ತು. ನಿಜಕ್ಕೂ ವಾಸಂತಿ ಎರಡು ದಿನಗಳಾದರೂ ಹಠ ಹಿಡಿದು ರೂಮಿನಲ್ಲೇ ಬಂದಿಯಾದಾಗ ಆಲೋಕ್ ವಿಹ್ವಲನಾಗಿಬಿಟ್ಟ.

''ಮಮ್ಮಿ, ನಿನ್ನ ಕಾಲಿಗೆ ಬಿದ್ದು ಬೇಡ್ಕೊತೀನಿ! ಪ್ಲೀಸ್, ರೂಮಿನ ಬಾಗಿಲು ತೆರಿ. ಹೀಗೆ ಹಠ ಹಿಡಿದ್ರೆ ನಿನ್ನ ಜೀವಕ್ಕೆ ತೊಂದ್ರೆಯಾಗುತ್ತೆ! ದಯವಿಟ್ಟು ಅಂಥ ಶಿಕ್ಷೆ ನನಗೆ ಕೊಡ್ಬೇಡ ಮಮ್ಮಿ!'' ಎಂದು ಬಾಗಿಲ ಬಳಿಯೇ ನಿಂತು ಬೇಡಿಕೊಂಡ.

''ಜೀವ ಹೋದ್ರೆ ಹೋಯ್ತು ಬಿಡು, ನಿನ್ನಿಂದ ಏನಾಗ್ಬೇಕಾಗಿದೆ? ನೀನು ಒಂಟಿಯಾಗಿ ಕೊರಗೋದನ್ನ ನೋಡೋಕ್ಕಿಂತ ನಾನು ಸಾಯೋದೇ ಮೇಲು.'' ಆ ಬಳಲಿಕೆಯಲ್ಲೂ ಅವರ ಮಾತು ಕಠೋರವಾಗಿತ್ತು.

ಆಲೋಕ್ ತಾಯಿಯ ಆಪ್ತನ್ನೇಹಿತೆ ಶಶಿಕಲಾಗೆ ವಿಷಯ ತಿಳಿಸಿದ. ಆದರೆ ಶಶಿಕಲಾರ ಫೋನನ್ನು ವಾಸಂತಿ ತೆಗೆದುಕೊಳ್ಳಲಿಲ್ಲ.

ಅವನು ತನ್ನ ಕುಟುಂಬದ ವೈದ್ಯರಿಗೆ ಫೋನ್ ಮಾಡಿ ವಿಷಯ ತಿಳಿಸಿದಾಗ ಅವರು ವಾಸಂತಿಯ ಸತ್ಯಾಗ್ರಹದ ಬಗ್ಗೆ ಕೇಳಿ,

''ಇದು ನಿಮ್ಮ ಫ್ಯಾಮಿಲಿ ವಿಷಯ ಆಲೋಕ್, ನೀವಿಬ್ರೂ ತುಂಬಾ ಚೈಲ್ಡಿಶ್ ಆಗಿ, ಇಮ್ಮೆಚ್ಯೂರ್ ಆಗಿ ಬಿಹೇವ್ ಮಾಡ್ತಿದ್ದೀರಿ. ನಿಮ್ತಾಯಿಗೆ ಬಿ.ಪಿ. ಇದೆ. ನೀವೇ ಅವರಿಗೆ ಸಮಾಧಾನ ಮಾಡಿ, ಹೀಗೇ ಬಿಟ್ರೆ ಆಮೇಲೆ ಅವರನ್ನು ಅಡ್ಮಿಟ್ ಮಾಡ್ಬೇಕಾಗುತ್ತೆ ಅಷ್ಟೆ'' ಎಂದು ಅವನಿಗೇ ಬುದ್ಧಿ ಹೇಳಿದರು. ಶಶಿಕಲಾ ಅವರೂ ಆಲೋಕನನ್ನೇ ಆಕ್ಷೇಪಿಸುತ್ತ,

''ನೀನೂಂದ್ರೆ ಪ್ರಾಣ ನಿಮ್ಮಮ್ಮನಿಗೆ! ಗಂಡನ್ನ ಕಳ್ಕೊಂಡು ನಿನ್ನನ್ನು ಬೆಳೆಸೋಕೆ ಅವಳೆಷ್ಟು ಹೆಣಗಾಡಿದ್ದಾಳೆ ಅಂತ ಗೊತ್ತಾ ಆಲೋಕ್? ನಿನ್ನ ಮೊದಲ್ನೆ ಮದ್ವೆ ವಿಷಯದಲ್ಲಿ ನಿಂಗೆ ಸ್ವಾತಂತ್ರ್ಯ ಕೊಟ್ಟಿದ್ಲು. ನೀನು ಸಂತೋಷವಾಗಿರ್ತೀಯಾಂತ ಅವಳ್ಗೆ ಸಮಾಧಾನ ಆಗಿತ್ತು. ಆದ್ರೆ ಈಗ ಆ ಸಂಬಂಧ ಮುರಿದುಹೋಗಿರೋದೇ ಅವಳ ಮನಸ್ಸಿಗೆ ಎಷ್ಟು ಆಘಾತ ಗೊತ್ತಾ? ನಿನ್ನ ಹೆಂಡ್ತಿ ಮತ್ತೆ ಮದ್ವೆ ಬೇರೆ ಆಗಿದ್ಲಾಂತೆ! ಅಂದ್ಮೇಲೆ ನಿಮ್ಮಮ್ಮ ಹೇಳೋದ್ರಲ್ಲಿ ತಪ್ಪೇನಿದೆ? ಸೌಜನ್ಯಾ ಚಿನ್ನದಂಥ ಹುಡ್ಗಿ, ಅವಳ್ನ ಮದ್ವೆಯಾಗಿ ನಿಮ್ಮಮ್ಮನ ಜೊತೆ ಸಂತೋಷವಾಗಿರೋದು ಬಿಟ್ಟು ನೀನೂ ಹಠ ಮಾಡ್ಕೊಂಡಿದ್ರೆ ನಿನ್ನ ತಾಯಿನ್ನ ನೀನೇ ಕೈಯಾರೇ ಕಳ್ಕೋತೀಯ! ಆಮೇಲೆ ಪಶ್ಚಾತ್ತಾಪ ಪಟ್ರೆ ಏನೂ ಪ್ರಯೋಜನ ಆಗಲ್ಲ'' ಎಂದು ಮೂದಲಿಸಿದರು.

ಈಗಾಗಲೇ ಪ್ರಾಂಜಲಿಯ ವಿಷಯದಲ್ಲಿ ನೊಂದು ಬೆಂದು ಹೋಗಿದ್ದ ಆಲೋಕ್, ಮತ್ತೊಂದು ಪ್ರೀತಿಯ ಜೀವವನ್ನು ಕಳೆದುಕೊಳ್ಳಲು ಅವನಿಗೆ ಸಾಧ್ಯವಿರಲಿಲ್ಲ.

''ಮಮ್ಮಿ, ನೀನು ಹೇಳಿದ ಹಾಗೆ ಕೇಳ್ತೀನಿ! ನನ್ನ ಮೇಲಾಣೆ, ಅಪ್ಪನ ಮೇಲಾಣೆ! ಪ್ಲೀಸ್, ಬಾಗಿಲು ತೆರಿ'' ಎಂದು ಅವನು ಗೋಗರೆದ ಮೇಲೆ ವಾಸಂತಿ ಬಂದು ಬಾಗಿಲು ತೆರೆದರು.

ಬಡವಾಗಿದ್ದ ದೇಹ, ಕಂಗಾಲಾಗಿದ್ದ ತಾಯಿಯನ್ನು ಕಂಡೊಡನೆ ಅವನಿಗೆ ದುಃಖವುಕ್ಕಿ ಬಂತು.

''ಮಮ್ಮಿ, ನೀನೂ ನನ್ನಿಂದ ದೂರ ಹೋಗಿ ಅನಾಥ ಮಾಡ್ಬೇಡ ನನ್ನನ್ನ!'' ಎಂದು ಅವರನ್ನು ತಬ್ಬಿಕೊಂಡು ಅತ್ತುಬಿಟ್ಟ.

ವಾಸಂತಿಯ ಕಣ್ಣಲ್ಲೂ ನೀರುಕ್ಕಿ ಬಂತು.

''ಅಯ್ಯೋ ಕಂದಾ, ನೀನ್ಯಾಕಪ್ಪ ಅನಾಥ ಆಗ್ತೀಯಾ? ನಾನಿದ್ದೀನಿ, ಇನ್ಮುಂದೆ ನಿನ್ನನ್ನು ನೋಡ್ಕೋಳೋಕೆ ಒಳ್ಳೆ ಹೆಂಡ್ತಿ ಬರ್ತಾಳೆ.''

ಆಲೋಕ್ ಮೌನವಾಗಿ ಕುಳಿತುಬಿಟ್ಟ.

ವಾಸಂತಿ ಅವನ ಬಳಿ ಬಂದು,

''ನೀನು ಕೊಟ್ಟ ಮಾತಿಗೆ ತಪ್ಪಿದ್ರೆ ನಾನೇ ಕೈಯಾರೆ ವಿಷ ಕುಡಿದು ಪ್ರಾಣ ಬಿಟ್ಟುಬಿಡ್ತೀನಿ. ಇಲ್ಲಾಂದ್ರೆ ನಿನ್ನ ಕೈಗೆ ಸಿಗದೇ ಇರೋ ಹಾಗೆ ಎಲ್ಲಾದ್ರೂ ದೇಶಾಂತರ ಹೊರಟುಹೋಗ್ತೀನಿ ಅಷ್ಟೆ'' ಎಂದಾಗ ಆಲೋಕ್ ತತ್‌ಕ್ಷಣ ಮಾತನಾಡಲಿಲ್ಲ

ಅನಂತರ ನಿಧಾನವಾಗಿ ಕಣ್ಣೊರೆಸಿಕೊಂಡು,

''ಮಮ್ಮಿ, ನಾನು ಆಸೆಪಟ್ಟ ಹಾಗೆ ಯಾವುದೂ ನಡೆಯಲಿಲ್ಲ ನನ್ನ ಕನಸುಗಳೆಲ್ಲ ಸುಟ್ಟುಹೋಗಿವೆ. ನಿನ್ನ ಆಸೆ, ನಿನ್ನ ಕನಸುಗಳಾದ್ರೂ ನೆರವೇರಲಿ. ನಾನು ಅದಕ್ಕೆ ಅಡ್ಡಿ ಬರಲ್ಲ. ನೀನು ಪ್ರಾಂಜಲಿನ್ನ ಹೇಗೆ ಒಪ್ಕೊಂಡಿದ್ದೀಯೋ ಹಾಗೇ ನಾನೂ ಅಷ್ಟೆ. ನೀನೇನು ನಿರ್ಧಾರ ತೊಗೊಂಡ್ರೂ ಒಪ್ಕೋತೀನಿ. ಐ ಪ್ರಾಮಿಸ್'' ಎಂದು ಅವರ ಕೈಹಿಡಿದು ಅದುಮಿದ.

ವಾಸಂತಿಯ ಕಣ್ಣುಗಳಲ್ಲಿ ಆನಂದಬಾಷ್ಪ ತುಂಬಿತು.

★ ★ ★

ಪ್ರಾಂಜಲಿಯ ಎದುರಿಗೆ ಕುಳಿತಿದ್ದ ಕೆವಿನ್‌ನ ಮುಖದಲ್ಲಿ ದುಗುಡ ತುಂಬಿತ್ತು. ಆಲೋಕನಿಗೆ ಎಲ್ಲಿ ಸತ್ಯ ತಿಳಿದುಬಿಡುವುದೋ ಎಂಬ ಆತಂಕದಿಂದ ಪ್ರಾಂಜಲಿ ಹೆಚ್ಚಾಗಿ ಹೊರಗೆ ಕಾಣಿಸಿಕೊಳ್ಳುತ್ತಿರಲಿಲ್ಲ. ಇಂದು ಅಪರೂಪವಾಗಿ ಇಬ್ಬರೂ ಮಾಲ್ ನಲ್ಲಿದ್ದ ಕೆಫೆಯಲ್ಲಿ ಭೇಟಿಯಾಗಿ ಕುಳಿತು ಮಾತನಾಡುತ್ತಿದ್ದರು.

''ಪ್ರಾಂಜಲಿ, ನೀನು ಮಂಗಳೂರಿಗೇ ಹೋಗಿಬಿಡ್ಬೇಕೂಂತ ಡಿಸೈಡ್ ಮಾಡಿದ್ದೀಯಾ?''

''ಹೌದು ಕೆವಿನ್, ಅಲ್ಲಿ ನಮ್ಮ ಪಪ್ಪ, ಅಮ್ಮ ಬಿಟ್ಟು ಹೋದ ಮನೆ ಇದೆ. ನನ್ನ ಚಿಕ್ಕಂದಿನ ಮೆಮೊರೀಸ್ ಇದೆ. ಇಲ್ಲಿನ ಜಂಜಾಟ ಎಲ್ಲ ಬಿಟ್ಟು ನನ್ನ ಊರಿಗೆ ಹೊರಟುಹೋಗ್ತೀನಿ. ಅಲ್ಲೇ ನನಗೆ ನೆಮ್ಮದಿ ಇರುತ್ತೆ.'' ಪ್ರಾಂಜಲಿಯ ಮಾತು ಕೇಳಿ ಕೆವಿನ್‌ನ ಮನಸ್ಸಿಗೆ ಮುಳ್ಳುಚುಚ್ಚಿದಂತಾಯಿತು.

''ಅಲ್ಲಿ ಒಂಟಿಯಾಗಿ ಬಿಡ್ತೀಯಲ್ಲ ಪ್ರಾಂಜಲಿ...''

''ಒಂಟಿ ಅಂತ ಯಾರು ಹೇಳಿದ್ದು? ಪಪ್ಪ ಬೇಕಾದಷ್ಟು ಆಸ್ತಿ ಬಿಟ್ಟು ಹೋಗಿದ್ದಾರೆ. ಅದ್ರಲ್ಲಿ ನಾನು ಆಶ್ರಮ ಕಟ್ಟಿಸ್ಬೇಕೂಂತ ಇದ್ದೀನಿ. ಜೊತೆಗೆ ಮಕ್ಕಳ್ನ ನೋಡ್ಕೋಳೋಕೆ ಡೇ ಕೇರ್ ಓಪನ್ ಮಾಡ್ತೀನಿ! ಇದೆಲ್ಲ ನನ್ನೊಬ್ಬಳ ಕೈಲೇ ಆಗದೇ ಇರಬಹುದು. ಆದ್ರೆ ಅಲ್ಲಿ ನನಗೆ ಒಳ್ಳೆ ಫ್ರೆಂಡ್ಸ್ ಇದ್ದಾರೆ. ಫ್ಯಾಮಿಲಿ ಕಾಂಟಾಕ್ಟ್ಸ್ ಇದೆ. ಅವರೆಲ್ಲ ನನಗೆ ಸಪೋರ್ಟ್ ಮಾಡ್ತಾರೆ. ಒಟ್ನಲ್ಲಿ ನನ್ನಿಂದ ಜನರಿಗೆ ಉಪಯೋಗ ಆಗ್ಬೇಕು. ನಾನು ಬೇರೆಯವರಿಗೆ ಭಾರವಾಗೋಕ್ಕಿಂತ ನಾಲ್ಕು ಜನಕ್ಕೆ ಉಪಕಾರ ಮಾಡೋ ಹಾಗೆ ಬದುಕ್ತೀನಿ.''

ಪ್ರಾಂಜಲಿ ಹೇಳಿದಾಗ ಕೆವಿನ್ ಅವಳ ಕಡೆ ನೋಡಿದ,

''ಮತ್ತೆ, ನಿನ್ನ ಟ್ರೀಟ್‌ಮೆಂಟ್?''

ಪ್ರಾಂಜಲಿ ನಗುತ್ತಾ,

''ನಾನೇನು ಕಾಡಿಗಾ ಹೋಗ್ತಿದ್ದೀನಿ? ಮಂಗಳೂರಿನಲ್ಲಿ ಡಾಕ್ಟರ್ಸ್ ಇರಲ್ವಾ? ಭಕ್ತವತ್ಸಲಂ ಅಂಕಲ್ ಅವರಿಗೆ ಪರಿಚಯ ಇರೋ ಡಾಕ್ಟರ್‌ಗೆ ನನ್ನನ್ನು ರೆಫರ್ ಮಾಡಿದ್ದಾರೆ. ಇನ್ಮೇಲೆ ಅಲ್ಲೇ ಟ್ರೀಟ್‌ಮೆಂಟ್ ಮುಂದುವರಿಸ್ತೀನಿ. ಮತ್ತೆ ನಾನು ಇಲ್ಲಿಗೆ ಮುಖ ಹಾಕಬಾರದು ಅಂತ ಡಿಸೈಡ್ ಮಾಡಿದ್ದೀನಿ ಕೆವಿನ್'' ಎನ್ನುವಾಗ ಅದರ ಹಿಂದೆ ಅಡಗಿದ ಸತ್ಯ ನೆನೆದು ಅವಳ ಮುಖ ಗಂಭೀರವಾಯಿತು.

''ತುಂಬಾ ನೋವನ್ನು ನುಂಗಿಕೊಂಡು ಬದುಕ್ತಿದ್ದೀಯ ಪ್ರಾಂಜಲಿ... ಅದು ಒಳ್ಳೇದಲ್ಲ..'' ಎನ್ನುವಷ್ಟರಲ್ಲಿ ಅವನ ಕೊರಳು ಬಿಗಿಯಿತು.

''ಇಲ್ಲ ಕಣೋ, ನಾನು ತುಂಬಾ ನಿರಾಳವಾಗಿ ನೆಮ್ಮದಿಯಿಂದ ಹೋಗ್ತಾ ಇದ್ದೀನಿ. ಇನ್ಯಾರ ಬಗ್ಗೇನೂ ನನಗೆ ವ್ಯಾಮೋಹ ಇಲ್ಲ. ನಾನೀಗ ನನಗೆ ಮಾತ್ರ ಸೇರಿದವಳು. ನಾನೇ ನನ್ನ ಪ್ರಪಂಚ, ಬೇರೆ ಯಾರಿಗೂ ನನ್ನಿಂದ ಇನ್ಮುಂದೆ ನೋವು, ನಿರಾಶೆ ಆಗಲ್ಲ. ಅದೇ ನನಗೆ ದೊಡ್ಡ ಸಮಾಧಾನ.''

''ಯೂ ಆರ್ ರಿಯಲೀ ಗ್ರೇಟ್ ಪ್ರಾಂಜಲಿ.''

ಪ್ರಾಂಜಲಿ ದನಿ ತಗ್ಗಿಸಿ.

''ಇಲ್ಲ ಕೆವಿನ್, ಎಲ್ಲರ ಬದುಕ್ಲಲ್ಲೂ ನನಗೆ ಬೇಕಾದ ಹಾಗೆ ಆಟ ಆಡಿಬಿಟ್ಟಿದ್ದೀನಿ. ನನಗೆ ನೆಮ್ಮದಿ ಬೇಕೂಂತ ಬೇರೆಯವರ ಮನಸ್ಸಿಗೆ ತುಂಬಾ ನೋವು ಕೊಟ್ಟಿದ್ದೀನಿ. ಅವರ ಬದುಕಿನಲ್ಲಿ ಬಿರುಗಾಳಿ ಎಬ್ಬಿಸಿಬಿಟ್ಟಿದ್ದೀನಿ. ಆ ಗಿಲ್ಟ್ ಇನ್ನೂ ನನ್ನಲ್ಲಿ ಉಳ್ಕೊಂಡಿದೆ'' ಎಂದಾಗ ಕೆವಿನ್ ಅವಳ ಕೈ ಹಿಡಿದುಕೊಂಡ.

''ಇಲ್ಲ ಪ್ರಾಂಜಲಿ, ನಾವು ಚರ್ಚ್‌ನಲ್ಲಿ ಕ್ಯಾಂಡಲ್ ಹಚ್ತೀವಿ. ಆ ಕ್ಯಾಂಡಲ್ ತಾನು ಕರಗಿ ಬೇರೆಯವರಿಗೆ ಬೆಳಕು ಕೊಡುತ್ತೆ. ಅದ್ರಿಂದ ದೂರ ಇರೋವವರಿಗೆ ಬರೀ ಕತ್ತಲೆ ಕಾಣಿಸುತ್ತೆ. ಆದ್ರೆ ಆ ಕ್ಯಾಂಡಲ್‌ನ ಹತ್ರ ಇರೋರಿಗೆ ಮಾತ್ರ ಗೊತ್ತು. ಅದು ತಾನು ಉರಿದು ಬೆಳಕು ಕೊಡ್ತಿದೆ ಅಂತ.''

ಪ್ರಾಂಜಲಿಯ ಕಣ್ಣಿನಿಂದ ಹನಿಯೊಂದು ಅವನ ಕೈ ಮೇಲೆ ಬಿತ್ತು.

''ಥ್ಯಾಂಕ್ಸ್... ತುಂಬಾ ಥ್ಯಾಂಕ್ಸ್ ಕೆವಿನ್. ಆದ್ರೆ ನಿನ್ನ ಉನ್ನತ ಭಾವನೆಗಳಿಗೂ ನಾನು ಮೋಸ ಮಾಡಿದ್ದೀನಿ.''

''ವಾಟ್? ನೀನೇನು ಮೋಸ ಮಾಡಿದ್ದೀಯ?''

''ನನ್ನ ಅಂತರಂಗ ಅರ್ಥ ಮಾಡ್ಕೊಂಡೋನು ನೀನೊಬ್ನೇ. ಅದನ್ನು ನಾನೆಷ್ಟು ದುರುಪಯೋಗ ಪಡಿಸ್ಕೊಂಡಿದ್ದೀನಿ ಕೆವಿನ್! ಸ್ವಚ್ಛವಾದ ನಿನ್ನ ಸ್ನೇಹಕ್ಕೆ ಕಲ್ಮಶ ಹಚ್ಚಿ ನೀನು ನನ್ನ ಪ್ರೇಮಿ ಅಂತ ಹೇಳ್ಕೊಂಡೆ. ಜನ ನಮ್ಮ ಬಗ್ಗೆ ಕೇವಲವಾಗಿ ಮಾತಾಡ್ದೂ ನಾನು ಅದನ್ನು ತಡೆಯಲಿಲ್ಲ. ಅದನ್ನು ಅಸ್ತ್ರವಾಗಿ ಬಳಸ್ಕೊಂಡು ಲೋಕಿಯಿಂದ ಡಿವೋರ್ಸ್ ತೊಗೊಂಡೆ. ನಿನ್ನ ಪರ್ಮಿಶನ್ ಕೂಡ ಕೇಳದೇ ನಮ್ಮಿಬ್ಬರ ಹೆಸರ್ನಲ್ಲಿ ಲಗ್ನಪತ್ರಿಕೆ ಮಾಡಿ ನನ್ನ ಗಂಡನಿಗೆ ಕಳಿಸ್ದೆ. ಯಾವುದಕ್ಕೂ ನೀನು ನನ್ನನ್ನ ಪ್ರಶ್ನೆ ಮಾಡಿಲ್ಲ! ಎಷ್ಟೋ ಸಲ ನನಗೆ ಅನ್ಸುತ್ತೆ. 'ನನ್ನ ಮಕ್ಕಳ್ಗಾ, ಕೆವಿನ್ ಬಗ್ಗೆ ಚೀಪಾಗಿ ಮಾತಾಡೋ ಯೋಗ್ಯತೆ ನಿಮಗ್ಯಾರಿಗೂ ಇಲ್ಲ ಕಣ್ರೋ! ಅವನೊಬ್ಬ ಅಪರಂಜಿ. ಅವನ್ನ ವಿಲನ್ ಆಗಿ ಮಾಡ್ತಿರೋಳು ನಾನು!' ಅಂತ ಆಫೀಸಿನೋರ್ಗೆಲ್ಲ ಹೇಳಿಬಿಡೋಣ ಅಂತ! ಆದ್ರೆ...'' ಎಂದು ಮಾತು ನಿಲ್ಲಿಸಿದಾಗ ಅವಳ ಭಾವೋದ್ವೇಗದಿಂದ ಕಣ್ಣಂಚಿನಲ್ಲಿ ಕೆಂಪು ಹರಡಿತ್ತು. ತುಟಿಗಳು ತುಸುವಾಗಿ ನಡುಗುತ್ತಿದ್ದವು.

ಕೆವಿನ್ ಮೃದುವಾಗಿ,

''ಪ್ರಾಂಜಲಿ, ನಾನು ಹೆಚ್ಚು ದಿನ ಈ ಆಫೀಸ್

ನಲ್ಲಿರುವುದಿಲ್ಲ! ಯು.ಎಸ್.ಎ.ಗೆ ಹೋಗಬೇಕೂಂತ ಟೈ ಮಾಡ್ತಿದ್ದೆ. ಈಗ ನ್ಯಾಷ್‌ವೆಲ್‌ನಲ್ಲಿ ನನಗೆ ಕೆಲ್ಸ ಸಿಕ್ಕಿದೆ. ನನ್ನ ಬಗ್ಗೆ ನೀನಾಗ್ಲಿ, ನಾನಾಗ್ಲಿ ಸಮರ್ಥನೆ ಕೊಡ್ಬೇಕಾಗಿಲ್ಲ ನೀನೇನು ಅಂತ ನನಗೆ ಗೊತ್ತು. ನೀನ್ಯಾಕೆ ಹೀಗೆಲ್ಲ ಮಾಡಿದ್ದೀಯಾ ಅಂತಾನೂ ನನಗೆ ಗೊತ್ತು. ಪ್ಲೀಸ್, ಅದರ ಬಗ್ಗೆ ಗಿಲ್ಟ್ ಇಟ್ಕೋಬೇಡ. ನಿನ್ನ ಸ್ನೇಹಿತ ಆಗಿ ನಾನು ಇಷ್ಟಾದ್ರೂ ಹೆಲ್ಪ್ ಮಾಡ್ದೆ ಅನ್ನೋ ಸಮಾಧಾನ ತೃಪ್ತಿ ನನಗಿದೆ'' ಎಂದಾಗ ಪ್ರಾಂಜಲಿ ಅವನ ಕೈಯನ್ನು ತನ್ನ ಕಣ್ಣಿಗೊತ್ತಿಕೊಂಡಳು.

''ನೀನು ಸ್ನೇಹಿತ, ಅಥವಾ ನನ್ನ ಸಹೋದರ ಅನ್ನೋದು ತುಂಬಾ ಚಿಕ್ಕ ಪದಗಳು. ನೀನು ನನಗೆ ಹೊಸ ಜೀವನ ಕೊಟ್ಟಿದ್ದೀಯ ಕೆವಿನ್. ನನ್ನ ತಂದೆಯ ಸ್ಥಾನಕ್ಕೆ ಬಂದುಬಿಟ್ಟಿದ್ದೀಯ ನೀನು.''

ಕೆವಿನ್ ಅವಳ ತಲೆ ಸವರಿದ,

''ಥ್ಯಾಂಕ್ಯೂ! ಇದಕ್ಕಿಂತ ದೊಡ್ಡದು ಬೇರೆ ಏನಿದೆ? ಯೂ ಹ್ಯಾವ್ ಗಿವನ್ ಮಿ ದಿ ಅಲ್ಟಿಮೇಟ್! ಮುಂದಿನ ತಿಂಗಳು ನಾನು ಹೊರಡ್ತಾ ಇದ್ದೀನಿ. ನಾವು ಮತ್ತೆ ಭೇಟಿಯಾಗದೇ ಇರಬಹುದು. ಆದ್ರೆ ನಾನು ಯಾವಾಗ್ಲೂ ನಿಂಗೋಸ್ಕರ ಇದ್ದೇ ಇರ್ತೀನಿ. ಜಸ್ಟ್ ಎ ಫೋನ್‌ಕಾಲ್ ಅವೇ!''

ಅವಳ ಕಣ್ಣೀರಿನ ಪರದೆಯ ಮೇಲೆ ಸಣ್ಣ ಬೆಳಕೊಂದು ಇಣುಕಿತು.

ಪ್ರೀತಿ, ವಿಶ್ವಾಸ, ನಂಬಿಕೆ, ಕೃತಜ್ಞತೆ!

ಎಲ್ಲ ಭಾವನೆಗಳು ಉಕ್ಕಿ ಬಂದಿದ್ದವು.

★ ★ ★

ಆಲೋಕನ ಮದುವೆ ಸೌಜನ್ಯಳ ಜೊತೆ ನಿಶ್ಚಯವಾಗಿತ್ತು. ಮೊದಮೊದಲು ತಾಯಿಯ ಬಲವಂತಕ್ಕೆ ಮಣಿದಿದ್ದರೂ ಕ್ರಮೇಣ ಸೌಜನ್ಯಳ ಗುಣ, ಸ್ವಭಾವಕ್ಕೆ ಅವನು ಸೋಲತೊಡಗಿದ. ಬಿರುಗಾಳಿಗೆ ಸಿಕ್ಕಿ ಪ್ರಕ್ಷುಬ್ಧಗೊಂಡ ಅವನ ಮನಸ್ಸು ಸೌಜನ್ಯಳ ಮಾತು, ಸಾನ್ನಿಧ್ಯ ತಂಗಾಳಿಯ ತಂಪನ್ನೆರೆಯುತ್ತಿತ್ತು.

''ನೀವು ನಿಮ್ಮ ಹೆಂಡ್ತಿ ಪ್ರಾಂಜಲಿನ್ನ ತುಂಬಾ ಪ್ರೀತಿಸ್ತಿದ್ರಿ ಅಂತ ಕೇಳಿದ್ದೀನಿ. ನೀವು ಅವರ ಬಗ್ಗೆ ನನ್ನ ಹತ್ರ ಏನು ಬೇಕಾದ್ರೂ ಡಿಸ್ಕಸ್ ಮಾಡಬಹುದು. ನಾನು ನಿಮ್ಮ ಹೆಂಡತಿಯಾಗಷ್ಟೇ ಅಲ್ಲ, ನಿಮ್ಮ ಆಪ್ತ ಗೆಳತಿಯಾಗಿ ನಿಮ್ಮ ಲೈಫ್‌ಗೆ ಬರ್ತಾ ಇದ್ದೀನಿ. ನಾವು ಫ್ರೆಂಡ್ಸ್ ತರಹ ಎಲ್ಲ ವಿಷಯ ಶೇರ್ ಮಾಡ್ಕೋಳೋದ್ರಲ್ಲಿ ತಪ್ಪೇನೂ ಇಲ್ಲ'' ಎಂದು ಅವನಿಗೆ ಹೇಳಿದ್ದಳು. ತನ್ನ ಪ್ರೀತಿಗೆ ಬೆಂಕಿ ಸೋಕಿಸಿ ಅಶಾಂತಿಯ ಉರಿಯಲ್ಲಿ ಬೇಯುತ್ತಿದ್ದಾಗ ತನ್ನನ್ನು ತೊರೆದು ಹೋದ ಪ್ರಾಂಜಲಿಯ ಬಗ್ಗೆ ಯಾರ ಬಳಿಯೂ ಚರ್ಚೆ ಮಾಡಲು ಆಲೋಕನಿಗೆ ಇಷ್ಟವಿರಲಿಲ್ಲ.

''ಅದೆಲ್ಲ! ಒಂದು ದುಃಸ್ವಪ್ನ ಅಂದ್ಕೊಂಡಿದ್ದೀನಿ ಸೌಜನ್ಯಾ. ನಾವಿಬ್ರೂ ನಮ್ಮ ಪಾಸ್ಟ್‌ಗಳನ್ನು ಮರೆತು ಹೊಸದಾಗಿ ಲೈಫ್ ಆರಂಭಿಸ್ಬೇಕೂಂತ ನನಗಾಸೆ. ಅಲ್ಲಿ ನಾನು, ನೀವು ಇಬ್ಬರೇ. ಬೇರೆ ಯಾರಿಗೂ ಜಾಗ ಇಲ್ಲ'' ಎಂದು ಅವಳ ಕೈ ಮೇಲೆ ಕೈ ಹಾಕಿದಾಗ ಸೌಜನ್ಯಳ ಮುಖದಲ್ಲಿ ತಿಳಿನಗು ಮೂಡಿತು.

ವಾಸಂತಿಯಂತೂ ಸಂತೋಷ ಸಂಭ್ರಮದ ತುತ್ತತುದಿಯಲ್ಲಿದ್ದರು. ಮಗ ಈಗೀಗ ಸೌಜನ್ಯಳಿಗೆ ಹತ್ತಿರವಾಗುತ್ತಿದ್ದು ಕಂಡು ಅವರಿಗೆ ಸ್ವರ್ಗವೇ ಕೈಗೆಟುಕಿದಷ್ಟು ಹಿಗ್ಗಾಗಿತ್ತು. ತಮಗೆ ಮೊದಲಿಂದಲೂ ಆಸೆಯಿದ್ದಂತೆ ನೆಂಟರಿಷ್ಟರು, ಸ್ನೇಹಿತರನ್ನು ಆಹ್ವಾನಿಸಿ ಶಾಸ್ತ್ರೋಕ್ತವಾಗಿ ಮದುವೆ ಮಾಡಲು ಸಿದ್ಧತೆ ನಡೆಸಿದ್ದರು. ಆಗಲೇ ಆಮಂತ್ರಣ ಪತ್ರಿಕೆಗಳು ಅಚ್ಚಾಗಿ ಬಂದಿದ್ದವು.

ಆವರು ಅವುಗಳನ್ನು ಜೋಡಿಸುತ್ತ ಯಾರು ಯಾರಿಗೆ ಕಳುಹಿಸಬೇಕು ಎಂದು ಚಂದ್ರಶೇಖರಯ್ಯ ಹಾಗೂ ಶಶಿಕಲಾ ಜೊತೆ ಕುಳಿತು ಚರ್ಚಿಸುತ್ತಿದ್ದಾಗ ಅವರ ಮೊಬೈಲ್ ಸದ್ದು ಮಾಡಿತು.

ನೋಡಿದಾಗ ಯಾವುದೋ ಅಪರಿಚಿತ ನಂಬರ್! ಅನುಮಾನದಿಂದಲೇ ತೆಗೆದುಕೊಂಡರು.

''ಹಲೋ.''

''ಹಲೋ ಅತ್ತೆ, ನಾನು.''

ಥಟ್ಟನೇ ಪ್ರಾಂಜಲಿಯ ದನಿಯನ್ನು ಗುರುತಿಸಿ ಸ್ತಬ್ಧರಾದರು. ಇಂಥ ಸಂದರ್ಭದಲ್ಲಿ ಅವಳು ಫೋನ್ ಮಾಡಿದ್ದು ಅವರಿಗೆ ಸಹನೀಯವೆನಿಸಲಿಲ್ಲ.

''ಒಂದು ನಿಮಿಷ '' ಎಂದು ಯಾರಿಗೂ ಅನುಮಾನ ಬಾರದ ಹಾಗೆ ತತ್‌ಕ್ಷಣ ಎದ್ದು ಅಲ್ಲಿಂದ ದೂರ ಬಂದು ಬಾಲ್ಕನಿಯಲ್ಲಿ ನಿಂತರು. ಅನಂತರ ದನಿ ತಗ್ಗಿಸಿ,

''ಹಲೋ, ಯಾಕೆ ಫೋನ್ ಮಾಡಿದ್ದೀಯ?'' ಎಂದು ಮೆಲ್ಲನೆ ಕೇಳಿದರು.

''ಇದು ನನ್ನ ಹೊಸ ನಂಬರ್, ನನ್ನ ಹಳೇ ಫೋನ್ ನಂಬರ್ ಎಲ್ಲಾ ಕ್ಯಾನ್ಸಲ್ ಮಾಡ್ಕೊಂಡಿದ್ದೀನಿ. ನಾನೆಲ್ಲಿದ್ದೀನಿ, ಹೇಗಿದ್ದೀನಿ ಅಂತ ಗೊತ್ತಾಗ್ಬಾರ್ದು ಅಂತ.''

''ಮತ್ತೆ, ಇನ್ನೇನು ವಿಷ್ಯ? ಯಾಕೆ ಫೋನ್ ಮಾಡ್ದೆ?'' ಎನ್ನುವಾಗ ಅವರ ಮಾತು ಪಿಸುದನಿಗಿಳಿದಿತ್ತು.

''ಕಂಗ್ರಾಜುಲೇಷನ್ಸ್ ಅತ್ತೆ, ನಿಮ್ಮನೆಗೆ ಹೊಸ ಸೊಸೆ ಬರ್ತಿದ್ದಾಳೆ ಅಂತ ಗೊತ್ತಾಯ್ತು.'' ಪ್ರಾಂಜಲಿಯ ಸ್ವರದಲ್ಲಿ ತೆಳುವಾದ ನಗೆಯ ಲೇಪನವಿತ್ತು. ವಾಸಂತಿ ತಬ್ಬಿಬ್ಬಾದರು. ಈ ಶುಭಸಮಾಚಾರ ಅವಳಿಗೆ ಹೇಗೆ ತಿಳಿಯಿತೋ.

ಬೇಕೆಂದೇ ಅವರು ಅವಳಿಂದ ಎಲ್ಲ ವಿಷಯಗಳನ್ನು ದೂರವಾಗಿ ಇಟ್ಟಿದ್ದರು.

ಈಗ ಮದುವೆಯ ದಿನ ಸಮೀಪಿಸುತ್ತಿರುವಾಗ ಪ್ರಾಂಜಲಿ ಫೋನ್ ಮಾಡಿದ್ದಾಳೆಂದರೆ...!

''ನನಗೆ ಹೇಗೆ ಗೊತ್ತಾಯ್ತು ಅಂತ ಆಶ್ಚರ್ಯಾನಾ ಅತ್ತೆ? ನಾನು ಕಣ್ಮರೆಯಾಗಿದ್ರೂ ಆಲೋಕ್ ಬಗ್ಗೆ ಪ್ರತಿಯೊಂದು ಡೀಟೈಲ್ಸ್ ತಿಳ್ಕೊಂಡಿರ್ತೀನಿ. ಈ ವಿಷಯ ನನಗೆ ಹಿಂದೇನೇ ಗೊತ್ತಾಗಿತ್ತು. ನೀವು ತಿಳಿಸ್ತೀರಿ ಅಂತ ಕಾದೆ. ಕೊನೆಗೆ ನಾನೇ ಫೋನ್ ಮಾಡಬೇಕಾಯ್ತು.''

ಪ್ರಾಂಜಲಿ ಹೇಳುತ್ತಿದ್ದಂತೆ ಆತಂಕದ ಅಲೆಯೊಂದು ಅವರ ಮನಸ್ಸಿಗೆ ಅಪ್ಪಳಿಸಿತು.

''ಅದು... ಅದು... ಏನಾಗಬೇಕಾಗಿತ್ತು?''

''ಏನಿಲ್ಲ, ನಾನು ಮಂಗಳೂರಿಗೆ ಹೋಗ್ತಾ ಇದ್ದೀನಿ. ಆದಕ್ಕೆ ಮುಂಚೆ ನಿಮ್ಮನ್ನು ಒಂದ್ಸಲ ಪರ್ಸನಲ್ ಆಗಿ ಭೇಟಿಯಾಗ್ಬೇಕಾಗಿತ್ತು. ನಾಳೆ ನೀವು ನಮ್ಮನೆಗೆ ಬರೋಕ್ಕಾಗುತ್ತಾ?''

''ನಾಳೆ... ನಾನು...'' ವಾಸಂತಿ ಅನುಮಾನಿಸಿದರು.

ಪ್ರಾಂಜಲಿ ನಯವಾದ ದನಿಯಲ್ಲಿ,

''ನಾನು ಅಲ್ಲಿ ಬರೋಕ್ಕಾಗಲ್ವಲ್ಲ, ಆದಕ್ಕೆ ನಿಮ್ಮನ್ನ ಕರೀತಾ ಇದ್ದೀನಿ'' ಎಂದಾಗ ವಾಸಂತಿ ಥಟ್ಟನೆ,

''ಬೇಡ, ನಾನೇ ಬರ್ತೀನಿ'' ಎಂದು ಒಪ್ಪಿದರು.

ಅವಳು ಸಣ್ಣನೆ ನಕ್ಕದ್ದು ಅವರಿಗೆ ಕೇಳಿಸಿತು.

''ಬೆಳಿಗ್ಗೆ ಹತ್ತು ಗಂಟೆಗೆ ಬನ್ನಿ, ಕಾಯ್ತಾ ಇರ್ತೀನಿ.''

ಅವಳು ಫೋನಿಟ್ಟಮೇಲೆ ಅವರಿಗೆ ಅವಳ ಮಾತುಗಳೇ ಕಿವಿಯಲ್ಲಿ ಗುಂಯ್ಗುಡುತ್ತಿದ್ದವು.

ಅವರ ಸಂಭ್ರಮ, ಉಲ್ಲಾಸ ಯಾವುದೂ ಮೊದಲಿನಂತೆ ಉಳಿಯಲಿಲ್ಲ. ಮನದ ತುಂಬಾ ಆತಂಕ, ಏನೋ ಭಯ, ಏನೋ ಕಳವಳ.

ಎಲ್ಲಾ ಸುಗಮವಾಗಿ ನಡೆಯುತ್ತಿರಬೇಕಾದರೆ ಇದೆಂಥ ಅಪಶ್ರುತಿ?

ತಮ್ಮ ಮಗನ ಬಾಳಿನಲ್ಲಿ ಮತ್ತೆ ಅಪಸ್ವರ ಮೂಡುವುದೇ?

ಇದ್ದಕ್ಕಿದ್ದಂತೆ ಪ್ರಾಂಜಲಿಗೆ ತಮ್ಮನ್ನು ಭೇಟಿಯಾಗುವ ಆವಶ್ಯಕತೆಯೇನು? ಅವಳು ಮಂಗಳೂರಿಗೆ ಹೊರಡುತ್ತಿದ್ದಾಳೆಂದರೆ. ಜೊತೆಗೆ ಆಲೋಕನನ್ನು ಕರೆದೊಯ್ಯುವ ಉದ್ದೇಶವಿರಬಹುದೇ?

ರಾತ್ರಿಯಿಡೀ ಚಿಂತಾಗ್ನಿಯಲ್ಲಿ ಬೆಂದು ಬಸವಳಿದಿದ್ದ ವಾಸಂತಿಗೆ ಬೆಳಿಗ್ಗೆ ಎದ್ದಾಗ ತಲೆ ಸಿಡಿದುಹೋಗುವಷ್ಟು ನೋಯುತ್ತಿತ್ತು. ಕಾಫಿಯ ಜೊತೆ ಅವರು ತಲೆನೋವಿನ ಮಾತ್ರೆ ತೆಗೆದುಕೊಂಡಾಗ ಆಲೋಕ್ ಆತಂಕಗೊಂಡ.

''ಮಮ್ಮಿ ಏನಾಯ್ತು? ಹುಷಾರಾಗಿದ್ದೀಯ ತಾನೇ?''

''ಏನಿಲ್ಲ, ಸ್ವಲ್ಪ ತಲೆನೋವು.''

''ಆಯಾಸ ಮಾಡ್ಕೋಬೇಡ ಅಂದ್ರೆ ಕೇಳಲ್ಲ ನೀನು! ಎಲ್ಲಕ್ಕೂ ನೀನೇ ಓಡಾಡ್ತೀಯ. ಇವತ್ತು ಆರಾಮವಾಗಿ ರೆಸ್ಟ್ ತೊಗೋ.''

ಆಲೋಕ್ ಹೇಳಿದಾಗ ವಾಸಂತಿಗೆ ಹೃದಯವೇ ಬಾಯಿಗೆ ಬಂದಂತಾಯಿತು.

''ಇಲ್ಲಪ್ಪ, ಇವತ್ತೊಂದು ಅರ್ಜೆಂಟ್ ಕೆಲ್ಸ ಇದೆ. ನಾನು ಹೋಗ್ಲೇಬೇಕು,''

''ಹಾಗಾದ್ರೆ ಬಾ, ನಾನೇ ಕರ್ಕೊಂಡು ಹೋಗ್ತಿನಿ.''

ಮಗನ ಮಾತು ಕೇಳಿ ಹೌಹಾರಿದರು.

''ಅಯ್ಯೋ, ಬೇಡ! ಡ್ರೈವರ್ ಜೊತೆ ಹೋಗಿ ಬರ್ತೀನಿ.''

''ಏನು ಅಂಥಾ ಅರ್ಜೆಂಟ್ ಕೆಲ್ಸ? ನನಗೆ ಹೇಳು, ನಾನೇ ಮಾಡ್ತೀನಿ.''

ಆಲೋಕ್ ಹೇಳುತ್ತಿದ್ದಂತೆ ಅವರ ಸಹನೆಯ ಕಟ್ಟೆಯೊಡೆಯಿತು.

''ಬೇಡಾಂತ ಹೇಳಿದ್ನಲ್ಲ, ಅರ್ಥ ಆಗ್ಲಿಲ್ವ ನಿಂಗೆ? ಯಾಕೆ ಸುಮ್ನೆ ನನ್ನ ಪ್ರಾಣ ತಿಂತಿದ್ದೀಯ? ನನ್ನ ಪಾಡಿಗೆ ನನ್ನನ್ನ ಬಿಟ್ಬಿಡು'' ಎಂದು ರೇಗಿದಾಗ ಆಲೋಕ್ ತಬ್ಬಿಬ್ಬಾದ.

''ಮಮ್ಮಿ, ಅಷ್ಟಕ್ಕೆಲ್ಲ ಯಾಕೆ ರೇಗ್ತಿದ್ದೀಯ? ಏನಾಯ್ತು?''

ವಾಸಂತಿಗೆ ತಮ್ಮ ತಪ್ಪಿನ ಅರಿವಾಯಿತು. ತಮ್ಮ ಮನಸ್ಸಿನಲ್ಲಿ ತುಂಬಿದ್ದ ಆತಂಕ, ಒತ್ತಡವನ್ನು ಮಗನ ಮೇಲೆ ಕಾರಿದ್ದು ಅವರಿಗೇ ಬೇಸರ ಎನಿಸಿತು.

''ಸಾರಿ ರಾಜ, ತುಂಬ ಮುಖ್ಯವಾದ ಕೆಲ್ಸ. ನಾನೇ ಹೋಗ್ಬೇಕು. ಅದಕ್ಕೆ ಸ್ವಲ್ಪ ಟೆನ್ಷನ್ ಆಗಿಬಿಡ್ತು. ಇವತ್ತೊಂದಿನ ನನ್ನನ್ನು ಬಿಟ್ಬಿಡು. ನಾಳೆಯಿಂದ ನೀನು ಹೇಳಿದ್ಹಾಗೆ ಮನೇಲೇ ಇರ್ತೀನಿ.'' ಅವರ ದನಿಯಲ್ಲಿ ಆರ್ತತೆ ತುಂಬಿದ್ದು ಕಂಡು ಅವನಿಗೆ ಆಶ್ಚರ್ಯವಾಯಿತು.

''ಅಯ್ಯೋ ಮಮ್ಮಿ, ಅಷ್ಟಕ್ಕೆಲ್ಲ ಯಾಕೆ ಅಪ್ಸೆಟ್ ಆಗಿದ್ದೀಯ? ಹೋಗಿ ಬಾ, ಹುಷಾರು'' ಎಂದು ಕಳುಹಿಸಿಕೊಟ್ಟ.

ವಾಸಂತಿ ಕಾರಿನಲ್ಲಿ ಕುಳಿತಾಗ ಆಲೋಕ್ ನಗುತ್ತ ನಿಂತಿದ್ದ.

ಈ ನಗೆಯೇ ಮಗನ ಮುಖದಲ್ಲಿ ಚಿರಂತನವಾಗಿರಲಿ ಎಂದು ತಾಯಿ ಹೃದಯ ಹಾರೈಸಿತು.

''ನಡೆಯಪ್ಪ'' ಎಂದು ಭಾರವಾದ ಮನಸ್ಸಿನಿಂದಲೇ ಡ್ರೈವರ್‌ಗೆ ನಿರ್ದೇಶಿಸಿದರು.

(ಮುಂದುವರಿಯುವುದು)

❑ದಿಯಾ

ದೃಶ್ಯಂ 3 ಭರ್ಜರಿ ಗಳಿಕೆ

ಚಿತ್ರರಂಗದ ಯಶಸ್ವಿ ಸಸ್ಪೆನ್ಸ್ ಥ್ರಿಲ್ಲರ್ ಸರಣಿಗಳಲ್ಲಿ ಒಂದಾದ 'ದೃಶ್ಯಂ' ಚಿತ್ರದ ಮೂರನೆಯ ಭಾಗ ಬಾಕ್ಸಾಫೀಸ್ ಉಡೀಸ್ ಮಾಡಿದೆ. ಜೀತು ಜೋಸೆಫ್ ನಿರ್ದೇಶನದಲ್ಲಿ ಮೋಹನ್‌ಲಾಲ್ ಅಭಿನಯಿಸಿರುವ ಈ ಚಿತ್ರ ಮಲೆಯಾಳ ಚಿತ್ರರಂಗದಲ್ಲಿ ಹೊಸ ಇತಿಹಾಸ ಬರೆದಿದೆ. ನೂರು ಕೋಟಿ ರೂ. ವೆಚ್ಚದಲ್ಲಿ ತಯಾರಾದ ಈ ಚಿತ್ರ, ತೆರೆಕಂಡ ಮೂರೇ ದಿನದಲ್ಲಿ ಅದನ್ನು ಮರಳಿ ಪಡೆದಿದೆ. ಜೊತೆಗೆ ಅತಿ ವೇಗವಾಗಿ ರೂ. ನೂರು ಕೋಟಿ ಕ್ಲಬ್ ಸೇರಿದ ಮೊದಲ ಸಿನೆಮಾ ಎಂಬ ದಾಖಲೆಯನ್ನೂ ಬರೆದಿದೆ.

ಚಿತ್ರ ತೆರೆಕಂಡ ಮೊದಲೆರಡು ದಿನಗಳಲ್ಲಿ ವಿಮರ್ಶಕರಿಂದ ಮಿಶ್ರ ಪ್ರತಿಕ್ರಿಯೆ ಪಡೆದರೂ 'ದೃಶ್ಯಂ 3' ಚಿತ್ರಕ್ಕೆ ಅಭೂತಪೂರ್ವ ಗೆಲುವು ದೊರೆತಿದೆ. 'ಜಾರ್ಜ್ ಕುಟ್ಟಿ' ಯ ಮೇಲಿನ ಅಭಿಮಾನಿಗಳ ಒಲವು ಪ್ರೇಕ್ಷಕರನ್ನು ಚಿತ್ರಮಂದಿರಕ್ಕೆ ಕರೆತಂದಿದೆ. ಕೇವಲ ಕೇರಳ ಮಾತ್ರವಲ್ಲದೆ, ಕರ್ನಾಟಕ, ತಮಿಳುನಾಡು, ಆಂಧ್ರಪ್ರದೇಶ, ತೆಲಂಗಾಣದಲ್ಲಿಯೂ ಚಿತ್ರ ಭರ್ಜರಿ ಪ್ರದರ್ಶನ ಕಾಣುತ್ತಿದೆ. ಅಮೆರಿಕಾ, ಗಲ್ಫ್ ದೇಶಗಳು ಸೇರಿದಂತೆ ವಿದೇಶಗಳಲ್ಲೂ ಚಿತ್ರಕ್ಕೆ ಉತ್ತಮ ಪ್ರತಿಕ್ರಿಯೆ ದೊರೆತಿದೆ.

ಎಂದಿನಂತೆ ಮೋಹನ್‌ಲಾಲ್ ಜಾರ್ಜ್‌ಕುಟ್ಟಿ ಪಾತ್ರದಲ್ಲಿ ಮಿಂಚಿದ್ದಾರೆ. ಉಳಿದಂತೆ ಮೀನಾ, ಅನ್ಸಿಬಾ ಹಸನ್, ಎಸ್ತರ್ ಅನಿಲ್ ಪ್ರಮುಖ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಮುರಳಿ ಗೋಪಿ, ಬಿಜು ಮೆನನ್, ಸಿದ್ದಿಕ್, ಕಲಾಭವನ್ ಶಾಜೋನ್ ಮತ್ತಿತರರು ತಾರಾಗಣದಲ್ಲಿದ್ದಾರೆ. ಸಿನೆಮಾ ಹಿಂದಿಯಲ್ಲಿ ರಿಮೇಕ್ ಆಗುವ ಸಾಧ್ಯತೆ ಇರುವುದರಿಂದ ಇದೀಗ ಹಿಂದಿ ಆವೃತ್ತಿ ತೆರೆಕಂಡಿಲ್ಲ. ಆದರೂ ಇದು ಗಳಿಕೆ ಮೇಲೆ ಹೆಚ್ಚಿನ ಪ್ರಭಾವ ಬೀರಿಲ್ಲ ಅನ್ನುವುದು ವಿಶೇಷ.

ಪೆದ್ದಿ ಯಲ್ಲಿ ಮಿಂಚಿದ ಜಾಹ್ನವಿ!

ಮೆಗಾ ಪವರ್ ಸ್ಟಾರ್ ರಾಮ್‌ಚರಣ್ ಹಾಗೂ ಹ್ಯಾಟ್ರಿಕ್ ಹೀರೋ ಶಿವರಾಜ್ ಕುಮಾರ್ ಅಭಿನಯದ ಬಿಗ್ ಬಜೆಟ್ ಚಿತ್ರ 'ಪೆದ್ದಿ' ಜೂ. 4ರಂದು ತೆರೆಕಾಣುತ್ತಿದೆ. ಬುಚ್ಚಿ ಬಾಬು ಸನಾ ನಿರ್ದೇಶನದ ಈ ಚಿತ್ರ ಈಗಾಗಲೇ ಎಲ್ಲೆಡೆ ಭಾರೀ ನಿರೀಕ್ಷೆ ಹುಟ್ಟುಹಾಕಿದೆ. ನಾಯಕಿ ಜಾಹ್ನವಿ ಕಪೂರ್ ಪ್ರಚಾರಕ್ಕಾಗಿ ಬೆಂಗಳೂರಿಗೆ ಆಗಮಿಸಿದ್ದ ಸಂದರ್ಭದಲ್ಲಿ ಕನ್ನಡದಲ್ಲೇ ಮಾತನಾಡಿದ್ದು ವಿಶೇಷವಾಗಿತ್ತು.

'ನಮಸ್ಕಾರ ಬೆಂಗಳೂರು! ಚೆನ್ನಾಗಿದ್ದೀರಾ? ನಿಮ್ಮನ್ನು ನೋಡಿ ನನಗೆ ಸಂತೋಷವಾಯಿತು' ಎಂದು ಉದ್ಘೋಷಿಸಿ ಕನ್ನಡಾಭಿಮಾನಿಗಳ ಮನಗೆದ್ದರು ಜಾಹ್ನವಿ. 'ರಾಮ್ ಚರಣ್ ಜೊತೆ ಕೆಲಸ ಮಾಡಿದ್ದು ಒಳ್ಳೆಯ ಅನುಭವ ನೀಡಿದೆ. ಅದರಲ್ಲೂ ಶಿವರಾಜ್ ಕುಮಾರ್ ಅವರ ಕಣ್ಣುಗಳಿಗೆ ಅದ್ಭುತ ಶಕ್ತಿ ಇದೆ. ಮುಂದೊಂದು ದಿನ ಅವಕಾಶ ಸಿಕ್ಕರೆ ಅವರೊಂದಿಗೆ ಅಭಿನಯಿಸುವ

ಬಯಕೆ ಇದೆ' ಎಂದಿದ್ದಾರೆ ಜಾಹ್ನವಿ. ಶಿವಣ್ಣ ಕೂಡ ಜಾಹ್ನವಿ 'ಅಮ್ಮ ಶ್ರೀದೇವಿಯಂತೆ ಈಕೆ ಎತ್ತರಕ್ಕೆ ಬೆಳೆಯಲಿ' ಎಂದು ಶುಭ ಹಾರೈಸಿದ್ದಾರೆ.

ಶಿವರಾಜ್‌ಕುಮಾರ್ ಹಾಗೂ ರಾಮಚರಣ್ ಚಿತ್ರದಲ್ಲಿ ಗುರು-ಶಿಷ್ಯರ ಪಾತ್ರ ಹಂಚಿಕೊಂಡಿದ್ದಾರೆ. 'ನನ್ನ ತಮ್ಮ ಪುನೀತ್ ಹೇಗೋ ರಾಮ್‌ಚರಣ್ ಕೂಡ ಹಾಗೇ. ಈ ಚಿತ್ರದಲ್ಲಿ ಅವರ ಅಭಿನಯಕ್ಕೆ ರಾಷ್ಟ್ರಪ್ರಶಸ್ತಿ ಸಿಗಲಿ' ಎಂದು ಶುಭ ಕೋರಿದ್ದಾರೆ. ಇದೊಂದು ಕುಸ್ತಿಪಟುವಿನ ಕಥೆಯಾಗಿದ್ದು ರಾಮ್ ಚರಣ್ ಪೈಲ್ವಾನ್ ಪಾತ್ರದಲ್ಲಿಯೂ ಶಿವಣ್ಣ ಅವರು ಗೌರ್ ನಾಯ್ಡು ಪಾತ್ರದಲ್ಲಿಯೂ ಅಭಿನಯಿಸಿದ್ದಾರೆ. ಜಗಪತಿ ಬಾಬು, ಬೊಮನ್ ಇರಾನಿ, ದಿವ್ಯೇಂದು ಶರ್ಮಾ ಮತ್ತಿತರರ ತಾರಾಗಣವಿದೆ. ಅತಿಥಿ ಪಾತ್ರದಲ್ಲಿ ಶ್ರುತಿ ಹಾಸನ್ ಕಾಣಿಸಿಕೊಂಡಿದ್ದಾರೆ. ಆಸ್ಕರ್ ವಿಜೇತ ಎ.ಆರ್.ರೆಹಮಾನ್ ಸಂಗೀತ ಸಂಯೋಜನೆ ಚಿತ್ರಕ್ಕಿದೆ.

ಭವಿಷ್ಯದರ್ಪಣ

4-6-2026ರಿಂದ 10-6-2026ರವರೆಗೆ)

(ಜನ್ಮರಾಶಿಗನುಗುಣವಾಗಿ)

❐ ಎಸ್. ವಿಶ್ವಮೂರ್ತಿ ಬಡಿಕಿಲ್ಲಾಯ

ಮೇಷ

ವೃತ್ತಿ ರಂಗದಲ್ಲಿ ಮಿತ್ರರ ನೆರವಿನಿಂದ ಕಾರ್ಯಾನುಕೂಲ. ಬುದ್ಧಿಜೀವಿಗಳಿಗೆ, ಕಲಾವಿದರಿಗೆ ಹಿನ್ನಡೆಗಳಿವೆ. ದೂರ ಪ್ರವಾಸಗಳಿಂದ ನೆಮ್ಮದಿ, ಸಂತೃಪ್ತಿ. ಸಂಸಾರದಲ್ಲಿ ತುಸು ನೆಮ್ಮದಿ ಕಂಡುಬರಲಿದೆ. ತಾಳ್ಮೆ, ಸಮಾಧಾನವಿರಲಿ. ದೈವಬಲವು ಹೆಚ್ಚಿನ ವಿಚಾರಗಳಲ್ಲಿ ಅಭಿವೃದ್ಧಿ ತರಲಿದೆ.

ವೃಷಭ

ದೈವಾನುಗ್ರಹವು ಕಡಿಮೆಯಾಗಿ ಕಾರ್ಯಪೂರೈಸಲು ಅಧಿಕ ಶ್ರಮ ಬೇಕು. ಮುಂಗೋಪ, ಅಸಹನೆಗಳನ್ನು ನಿಯಂತ್ರಿಸಿ. ಖರ್ಚು-ವೆಚ್ಚಗಳ ಮೇಲೆ ಹಿಡಿತವಿರಲಿ. ಅವಿವಾಹಿತರಿಗೆ ವಿವಾಹ ಪ್ರಸ್ತಾಪಗಳು ಸಂಭ್ರಮ ತರುತ್ತವೆ. ನಿಂತು ಹೋದ ಕಾರ್ಯಗಳು ಪುನರಾರಂಭಗೊಂಡು ಮುಂದುವರಿಯಲಿವೆ.

ಮಿಥುನ

ಪರಿವರ್ತನೆಯ ಕಾಲಚಕ್ರದಲ್ಲಿ ಸವಾಲುಗಳು ಎದುರಾಗಲಿವೆ. ವಿವೇಚನೆಯಿಂದ ಕ್ಲಿಷ್ಟಕರವಾದ ಕಾರ್ಯಗಳನ್ನು ಸಾಧಿಸುತ್ತೀರಿ. ದೈವಾನುಗ್ರಹದಿಂದ ಮಂಗಳ ಫಲವನ್ನು ಕಾಣುತ್ತೀರಿ. ಪತಿಯ ಸಹಕಾರ-ಪ್ರೀತಿ-ವಿಶ್ವಾಸ ನಿಮ್ಮ ಯಶಸ್ಸಿನ ಬೆನ್ನೆಲುಬಾಗಲಿದೆ. ಧನಾಗಮನದಿಂದ ಋಣ ಮುಕ್ತರಾಗುತ್ತೀರಿ. ಆರೋಗ್ಯದಲ್ಲಿ ಪಿತ್ತೋಷ್ಣ ಪ್ರಕೋಪಗಳಿಂದ ತೊಂದರೆ ಬಂದೀತು.

ಕರ್ಕಾಟಕ

ವೃತ್ತಿಪರ ಕೌಶಲವನ್ನು ಹೆಚ್ಚಿಸಿಕೊಳ್ಳಲಿದ್ದೀರಿ. ಷೇರುಗಳಿಂದ ಅಥವಾ ಜೀವ ವಿಮೆ ವಿಭಾಗದಲ್ಲಿ ಮಾಡುವ ಹೂಡಿಕೆಗಳಿಂದ ಲಾಭ ಹೆಚ್ಚು. ಮಕ್ಕಳೊಡನೆ ವಿರಸ ಮಾಡಿಕೊಂಡರೆ, ಮಾನಸಿಕ ನೆಮ್ಮದಿ ಹಾಳಾಗುತ್ತದೆ. ನಿಮ್ಮ ಆತ್ಮಶಕ್ತಿಯ ಬಗ್ಗೆ ನಿಮಗೇ ಅಚ್ಚರಿಯಾಗಲಿದೆ. ವಿದ್ಯಾರ್ಥಿಗಳಿಗೆ ಯಶಸ್ಸು ಸಿಗಲಿದೆ. ನಿರುದ್ಯೋಗಿಗಳಿಗೆ ಅಚ್ಚರಿಯ ವಾರ್ತೆ ಲಭ್ಯವಾದೀತು.

ಸಿಂಹ

ಯಾರದೇ ವಿರೋಧ, ಅಪಸ್ವರಗಳು ಬಂದರೂ ಮಡದಿ ಆಸರೆಯಾಗಿ ನಿಲ್ಲುತ್ತಾಳೆ. ಕೆಲವೊಂದು ಘಟನೆಗಳಿಂದ ಧನಾದಾಯಕ್ಕೆ ವಿಳಂಬವಿದೆ. ಸ್ವತಂತ್ರ ವ್ಯವಹಾರವನ್ನು ಆರಂಭಿಸಲು ಇದು ಸಮಯವಲ್ಲ. ಮಕ್ಕಳಿಗೆ ಅಧ್ಯಯನಕ್ಕಾಗಿ ಹೆಚ್ಚು ಉತ್ತೇಜಿಸಿ. ಧಾರ್ಮಿಕ ಚಿಂತನೆಗಳಲ್ಲಿ ತೊಡಗುವುದರಿಂದ ಸಾಮಾಜಿಕ ಕ್ಷೇತ್ರದಲ್ಲಿ ಯಶಸ್ಸನ್ನು ಸಾಧಿಸುತ್ತೀರಿ.

ಕನ್ಯಾ

ನ್ಯಾಯಾಲಯದ ಕಾರ್ಯಗಳಲ್ಲಿ ಮುನ್ನಡೆ ಸಾಧಿಸಲಿದ್ದೀರಿ. ವಿದ್ಯಾರ್ಥಿಗಳಿಗೆ ಉನ್ನತ ವ್ಯಾಸಂಗಕ್ಕೆ ಆರ್ಥಿಕ ನೆರವು ದೊರಕುತ್ತದೆ. ನಿಯಮಿತ ಜೀವನ ಶೈಲಿಯಿಂದ ಆರೋಗ್ಯ ಚೇತರಿಸುತ್ತದೆ. ಗೃಹಾಲಂಕಾರ ವಸ್ತುಗಳ ಕೊಳ್ಳುವಿಕೆಯಿಂದ ಹರ್ಷ, ಉತ್ಸಾಹ ಹೆಚ್ಚುತ್ತದೆ. ನಿಮ್ಮ ಕಠಿಣ ಪರಿಶ್ರಮಕ್ಕೆ ತಕ್ಕ ಪ್ರತಿಫಲ ಪಡೆಯುತ್ತೀರಿ. ಸಕಾರಾತ್ಮಕ ಬದಲಾವಣೆಗಳಿಗೆ ಹೊಂದಿಕೊಳ್ಳಿ.

ತುಲಾ

ವೃತ್ತಿ ಕ್ಷೇತ್ರದ ಕಾರ್ಯಸಾಧನೆಗಳಿಗೆ ಜನಮೆಚ್ಚುಗೆ ಸಿಗಲಿದೆ. ಕೆಲವೊಮ್ಮೆ ಆತ್ಮೀಯರೇ ನಿಮ್ಮ ಹೆಸರಿಗೆ ಕೆಸರೆರಚುವ ಪ್ರಯತ್ನ ಮಾಡುತ್ತಾರೆ. ಕಲೆ-ಸಂಗೀತ-ಚಿತ್ರ ಜಗತ್ತುಗಳು ಆರ್ಥಿಕವಾಗಿ ಲಾಭದಾಯಕವಾಗುತ್ತವೆ. ಸರಕಾರಿ ಕೆಲಸ ಕಾರ್ಯಗಳಿಗೆ ಎದುರಾದ ವಿಘ್ನ ನಿವಾರಣೆಯಾಗುತ್ತದೆ. ಒಡವೆ-ವಸ್ತ್ರಗಳಿಗೆ ಧನವಿನಿಯೋಗ ಮಾಡಬಹುದು. ಸ್ಥಿರ ಉದ್ಯೋಗಿಗಳಿಗೆ ಮುಂಭಡ್ತಿ ಇದೆ.

ವೃಶ್ಚಿಕ

ಮಾಡುವ ಕೆಲಸಗಳಲ್ಲಿ ಪ್ರಾಮಾಣಿಕತೆ ಇದ್ದರೆ ಫಲಸಿಗುತ್ತದೆ. ಚಿಕ್ಕ-ಪುಟ್ಟ ಬಂಡವಾಳದವರಿಗೆ ಲಾಭವಿದೆ. ಗಂಭೀರ ಸ್ವಭಾವ, ಸ್ವಾಭಿಮಾನಿಗಳಾದ ನಿಮಗೆ ಕಾರ್ಯಕ್ಷೇತ್ರದಲ್ಲಿ ವಿರೋಧಗಳು ಬರಬಹುದು. ಕೌಟುಂಬಿಕ ವಿಷಯಗಳಲ್ಲಿ ಖರ್ಚು-ವೆಚ್ಚಗಳು ಅಧಿಕವಾಗಬಹುದು. ಅವಿವಾಹಿತರ ಮಂಗಲಕಾರ್ಯಕ್ಕೆ ಹೆಚ್ಚು ಪ್ರಯತ್ನಬೇಕು. ಹೊಸ ಉದ್ಯೋಗಿಗಳಿಗೆ ಪ್ರಯತ್ನಬಲದಿಂದ ಅಭಿವೃದ್ಧಿ ಇದೆ.

ಧನು

ನಿಮ್ಮಿಷ್ಟದಂತೆ ಸಫಲತೆ ಕಾಣುತ್ತೀರಿ. ಋಣಭಾರದ ಚಿಂತೆ ಬೇಗನೆ ಪರಿಹಾರವಾಗುತ್ತದೆ. ತೀರ್ಥಯಾತ್ರೆ, ದೇವತಾ ಕಾರ್ಯಗಳಿಂದ ಯಶಸ್ಸು ಹೆಚ್ಚು. ಅನಾವಶ್ಯಕ ಚಿಂತೆಯಿಂದ ಅಭಿಮಾನ ಭಂಗವಾಗಬಹುದು. ನೂತನ ಮಿತ್ರರ ಆಗಮನದಿಂದ ಕಾರ್ಯ ಸಾಧನೆ ಸಾಧ್ಯ. ರಾಜಕೀಯ, ಸಾಮಾಜಿಕ ಕ್ಷೇತ್ರಗಳಲ್ಲಿ ಗೌರವ ಸಿಗಲಿದೆ.

ಮಕರ

ಕೌಟುಂಬಿಕ ವಿಷಯದಲ್ಲಿ ಹಿರಿಯರೊಂದಿಗೆ ಸಮಾಲೋಚನೆ ಒಳಿತು. ವ್ಯಾಪಾರವಹಿವಾಟುಗಳಲ್ಲಿ ಲಾಭ ಗಳಿಸುತ್ತೀರಿ. ಖರ್ಚು-ವೆಚ್ಚಗಳನ್ನು ನಿಯಂತ್ರಿಸಿ. ಗೃಹ ಬದಲಾವಣೆ ಅಥವಾ ಕಟ್ಟಡ ನಿರ್ಮಾಣ ಕಾರ್ಯಗಳ ಬಗ್ಗೆ ಚಿಂತಿಸಬಹುದು. ದೇಹಾರೋಗ್ಯ ಕಾಪಾಡಿಕೊಳ್ಳಿ. ಕುಟುಂಬದಲ್ಲಿ ಸಂತೋಷ ತರುವ ಘಟನೆಗಳು ಮರುಕಳಿಸುತ್ತವೆ.

ಕುಂಭ

ರಾಜಕೀಯ ಕ್ಷೇತ್ರದಲ್ಲಿರುವವರಿಗೆ ಪರಿಸ್ಥಿತಿ ತಿಳಿಯಾಗಿ ಪರಸ್ಪರ ವಿಶ್ವಾಸ ವೃದ್ಧಿಯಾಗುತ್ತದೆ. ಮಕ್ಕಳು ಶೈಕ್ಷಣಿಕ ಪ್ರಗತಿ ಸಾಧಿಸುತ್ತಾರೆ. ಉದ್ಯಮ ಕ್ಷೇತ್ರದಲ್ಲಿ ಆದಾಯಕ್ಕೆ ಚ್ಯುತಿಯಿಲ್ಲ. ನೌಕರವರ್ಗದವರಿಗೆ ಹೆಚ್ಚಿನ ಸಂತೋಷ ಸಿಗುವ ಸಮಯ. ವಿಲಾಸಿ ಸಾಮಗ್ರಿಗಳ ಖರೀದಿಗೆ ಮನಸ್ಸು ಮಾಡಬಹುದು. ಧಾರ್ಮಿಕ ಕಾರ್ಯಗಳಲ್ಲಿ ಭಾಗವಹಿಸಿದರೆ ಮಾನಸಿಕ ನೆಮ್ಮದಿ.

ಮೀನ

'ಯಾರದೋ ತಪ್ಪಿಗೆ ಯಾರೋ ಹೊಣೆ' ಎಂಬಂಥ ಪರಿಸ್ಥಿತಿ ಬರಬಹುದು. ಹಲವು ಅಡೆತಡೆಗಳಿಂದ ನಿರಾಸೆಯಾದರೂ ಪ್ರಯತ್ನಕ್ಕೆ ಹೊಸ ಆಯಾಮ ಸಿಗುತ್ತದೆ. ರಾಜಕಾರಣಿಗಳಿಗೆ ಪರಿವರ್ತನೆಗಳಿವೆ. ದೂರ ಸಂಚಾರದಿಂದ ವ್ಯರ್ಥಶ್ರಮ. ಮಹತ್ವದ ವಿಚಾರದಲ್ಲಿ ಹಿರಿಯರ ಸಲಹೆ ಪಡೆಯಿರಿ. ಆತ್ಮೀಯರೊಡನೆ ವೃಥಾ ವಿರಸಗಳು ಬರಬಹುದು.

ವಾರದ ವಿಶೇಷ: ಜೂನ್ 5 - ವಿಶ್ವಪರಿಸರ ದಿನ.



ಮುಖಪುಟ

'ತರಂಗ' ಮೇ 21, 2026ರ ಸಂಚಿಕೆಯಲ್ಲಿ ಪ್ರಕಟವಾದ ಶ್ರೀನಿವಾಸ ಸಿರನೂರಕರ್ ಅವರ 'ಪಂಚರಾಜ್ಯ ಮತ ಫಲಿತಾಂಶ ಪ್ರಜಾಪ್ರಭುವಿನ ಕ್ರಾಂತಿ' ಲೇಖನ ಅತ್ಯುತ್ತಮವಾಗಿ ಮೂಡಿಬಂದಿದೆ. ಅಸ್ಸಾಂ, ಪುದುಚೇರಿ ಹೊರತುಪಡಿಸಿ ಪಶ್ಚಿಮ ಬಂಗಾಳ, ತಮಿಳುನಾಡು, ಕೇರಳ ರಾಜ್ಯಗಳಲ್ಲಿ ಹೊಸ ಸರಕಾರಗಳು ಅಸ್ತಿತ್ವಕ್ಕೆ ಬಂದಿವೆ. ಬದಲಾವಣೆಯ ಗಾಳಿ ಬೀಸುತ್ತಿದೆ ಎಂಬುದಕ್ಕಿದು ಜ್ವಲಂತ ಸಾಕ್ಷಿ. 2028ರಲ್ಲಿ ಬರುವ ಕರ್ನಾಟಕ ಚುನಾವಣೆಗೂ ಇದು ಪಾಠವಾಗಲಿದೆ.

ರಾ. ರಾಮಾರಾಧ್ಯ, ಮೈಸೂರು

ಸಂದರ್ಭೋಚಿತ ಲೇಖನ. ಬದಲಾವಣೆ ಪ್ರಕೃತಿ ನಿಯಮ. ಅದು ಸಕಾರಾತ್ಮಕವಾದರೆ ಎಲ್ಲರಿಗೂ ಒಳ್ಳೆಯದು. ಸಾರ್ವಭೌಮತ್ವಕ್ಕೂ ಒಂದು ಮಿತಿ ಇದೆ. ಸೋಲು ಎನ್ನುವುದು ತಪ್ಪು-ಸರಿಗಳ ವಿಶ್ಲೇಷಣೆಗೆ ಸರಿಯಾದ ಸಮಯ. ಕೆಡುಕುಗಳಿಗೆ ಪ್ರಜಾಪ್ರಭುತ್ವದಲ್ಲಿ ಹೆಚ್ಚು ಬಾಳಿಕೆ ಇಲ್ಲ. ಅಧಿಕಾರ ಎಂದರೆ ಮಾಡಿದ್ದೆಲ್ಲಾ ಸರಿ ಎಂದರ್ಥವಲ್ಲ. ಪ್ರಜಾಪ್ರಭುವಿನ ಕ್ರಾಂತಿಗೆ ತಲೆಬಾಗಲೇ ಬೇಕು.

ಪ್ರೊ. ಮಧೂರು ಮೋಹನ ಕಲ್ಲೂರಾಯ, ಬೆಳ್ತಂಗಡಿ

ಆಳುವವರು ಸಾತ್ವಿಕರಾಗಿರಬೇಕು. ಇಲ್ಲವಾದರೆ ಜನ ಅವರನ್ನು ನಿರ್ದಾಕ್ಷಿಣ್ಯವಾಗಿ ಎಸೆಯುತ್ತಾರೆ ಎಂಬುದಕ್ಕೆ ಪಶ್ಚಿಮ ಬಂಗಾಳವೇ ಸಾಕ್ಷಿ. ಪ್ರಜೆಗಳು ಧೈರ್ಯದಿಂದ ಮತಚಲಾಯಿಸಿ ರಾಜಕೀಯದ ಭವಿಷ್ಯವನ್ನೇ ಬದಲಾಯಿಸಿದ್ದಾರೆ. ಅಲ್ಲಿನಡೆದ ಈ ಬಾರಿಯ ಪ್ರಚಾರವೂ ಅದ್ದೂರಿಯಾಗಿತ್ತು. ಸ್ವಾತಂತ್ರ್ಯಾ ನಂತರದ ಭಾರತದಲ್ಲಿ ಇಂಥ ಪ್ರಚಾರವನ್ನು ನೋಡಿದ್ದು ಇದೇ ಮೊದಲು.

ಜಿ. ಟಿ. ಸಂಪತ್ಕುಮಾರಾಚಾರ್, ಮೈಸೂರು

ಪಂಚರಾಜ್ಯ ಚುನಾವಣಾ ಫಲಿತಾಂಶದ ಪೈಕಿ ತಮಿಳುನಾಡಿನಲ್ಲಿನಟ ದಳಪತಿ ವಿಜಯ್ ಗೆದ್ದು ಬಂದದ್ದು ಅಚ್ಚರಿಯೆನಿಸಿತು. ರಾಜಕೀಯ ಹಿನ್ನೆಲೆಯಿಲ್ಲದೆ ಕೇವಲ ಸಿನೆಮಾ ಖ್ಯಾತಿಯನ್ನೇ ಬಂಡವಾಳವಾಗಿ ಮಾಡಿಕೊಂಡ ವಿಜಯ್ ಮೊದಲ ಪ್ರಯತ್ನದಲ್ಲೇ ಮುಖ್ಯಮಂತ್ರಿ ಗಾದಿಗೇರಿದ್ದಾರೆ. ಅಭಿಮಾನಿಗಳ ಬೆಂಬಲದೊಂದಿಗೆ ಪಟ್ಟಕ್ಕೇರಿರುವ ಅವರು ರಾಜ್ಯದ ಅಭಿವೃದ್ಧಿಗೆ ಹೇಗೆ ಶ್ರಮಿಸಲಿದ್ದಾರೆ ಎಂಬುದನ್ನು ಕಾದು ನೋಡಬೇಕಿದೆ.

ಸರಸ್ವತಿ ಕೆ. ಜೆ., ಮಂಡ್ಯ

ಪ್ರಿಯ ಓದುಗರೇ

ಡಾ।। ಸಂಧ್ಯಾ ಪೈ ಅವರ 'ಸಹವಾಸ ದೋಷ ಎಂಬ ವಿಷ!' ಸಂಪಾದಕೀಯ ಚೆನ್ನಾಗಿತ್ತು. ಇಂದು ಸಹವಾಸ ದೋಷದಿಂದ ಯುವ ಸಮೂಹ ಹಾಳಾಗುತ್ತಿದೆ. ಹಿರಿಯರು ಸಂಸ್ಕಾರ ಹೇಳಿಕೊಟ್ಟರೆ ಅದು ಮೂಢನಂಬಿಕೆ ಎನಿಸಿಕೊಳ್ಳುತ್ತದೆ. ಹಿರಿಯರ ಅನುಭವದ ಮಾತಿನ ನಿರ್ಲಕ್ಷ್ಯ ಆರೋಗ್ಯಕರವಲ್ಲ. ಸಿಂಹದ ಮರಿ, ತಂದೆಯ ಮಾತನ್ನು ಕೇಳುತ್ತಿದ್ದರೆ ಇನ್ನೂ ಕೆಲವು ಕಾಲ ಸುಖವಾಗಿ ಬದುಕಬಹುದಿತ್ತು.

ಕೆ. ಆರ್. ಸುವರ್ಣಕುಮಾರಿ, ಸಂತೆಕಟ್ಟೆ

ನಮ್ಮ ಹೆಚ್ಚುಗಾರಿಕೆಯಿಂದ ಅಪಾಯವನ್ನು ಆಹ್ವಾನಿಸುತ್ತೇವೆ. ಪ್ರತಿ ಸಲ ಮಾಡಿದ ತಪ್ಪನ್ನೇ ಮತ್ತೆ ಮಾಡುತ್ತೇವೆ. ಅನುಭವಸ್ಥರ ಮಾತನ್ನು ತಿರಸ್ಕರಿಸುತ್ತೇವೆ. ನಮ್ಮ ಆತ್ಮೀಯರು ದುರ್ಜನರು ಎಂಬುದನ್ನು ಅರಿತ ಬಳಿಕವಾದರೂ ಪರಿವರ್ತನೆಯ ದಾರಿ ಹುಡುಕಬೇಕು. ಇಲ್ಲವಾದಲ್ಲಿ ಬದುಕು ದುರಂತವಾಗಬಹುದು. ಸಹವಾಸ ದೋಷ ಬಹುದೊಡ್ಡ ಅನಾಹುತಕ್ಕೆ ಕಾರಣವಾಗಬಹುದು.

ಶ್ರುತಿ ರಿಗ್ರೆಟ್ ಅಯ್ಯರ್, ಅಮೆರಿಕಾ

ಅವಳಿ ಉಪಚುನಾವಣೆ ಫಲಿತಾಂಶ

ಫಲ್ಗುಣಿ ಅವರ 'ಅವಳಿ ಉಪಚುನಾವಣೆ ಫಲಿತಾಂಶ... ಆಡಳಿತಪಕ್ಷ, ಪ್ರತಿಪಕ್ಷಗಳಿಗೆ ಪ್ರತ್ಯಪ್ರತ್ಯೇಕ ಸಂದೇಶ' ಲೇಖನ ವಿಶ್ಲೇಷಣಾತ್ಮಕವಾಗಿತ್ತು. ಎರಡೂ ಕ್ಷೇತ್ರಗಳಲ್ಲಿ ಕಾಂಗ್ರೆಸ್‌ಗೆ ಸಿಕ್ಕ ಗೆಲುವು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ನಾಯಕತ್ವಕ್ಕೆ ಸಿಕ್ಕ ಯಶಸ್ಸು ಎಂದೇ ಬಿಂಬಿತವಾಗಿದೆ.

ಪ್ರಭಾಕರ ವಿ. ಎನ್., ಹುಬ್ಬಳ್ಳಿ

ಜನಮನ

ಪ್ಯಾರಾನಾರ್ಮಲ್ ಜಗತ್ತು!

ಚಂದ್ರ ಬಾರ್ಕೂರ್ ಅವರ 'ಪ್ಯಾರಾನಾರ್ಮಲ್ ಜಗತ್ತು! ಅತೀಂದ್ರಿಯ ಅನ್ವೇಷಣೆಯ ಅಪರೂಪದ ಲೋಕ' ಲೇಖನ ಕುತೂಹಲಕಾರಿಯಾಗಿತ್ತು. ದೆವ್ವ-ಪಿಶಾಚಿಗಳು ಇವೆ-ಇಲ್ಲ ಎನ್ನುವುದು ಉತ್ತರ ಸಿಗದ ಚರ್ಚೆ. ಆದರೆ ಈ ಕುರಿತಾಗಿ ನಡೆಯುವ ಸಂಶೋಧನೆಗಳು ಒಂದಿಲ್ಲೊಂದು ಕುತೂಹಲಕಾರಿ ಅಂಶಗಳನ್ನು ಹೊರಹಾಕುತ್ತಿರುತ್ತವೆ. ನಂಬಿಕೆ ಹಾಗೂ ಅಪರೂಪದ ಅನುಭವಗಳಿಗೆ ಹೆಚ್ಚಿನ ಅಂತರವಿಲ್ಲ ಎಂಬುದಂತೂ ಸತ್ಯ.

ಧನುಷ್ ಎಸ್. ಆಚಾರ್, ಬಾಗಲಕೋಟೆ

'ಸೂಪರ್ ಎಲ್ ನಿನೋ'

ಡಾ। ಎಚ್.ಆರ್. ಕೃಷ್ಣಮೂರ್ತಿ ಅವರ 'ಭಾರತದ ಬಾಗಿಲಲ್ಲಿ ಸೂಪರ್ ಎಲ್ ನಿನೋ' ಲೇಖನ ಎಲ್ಲಾ ದೇಶಗಳಿಗೆ ಎಚ್ಚರಿಕೆಯ ಘಂಟೆಯಂತಿತ್ತು. ತಾಪಮಾನ ವೈಪರೀತ್ಯದ ಬಗ್ಗೆ ಈಗಲೇ ಎಚ್ಚೆತ್ತು ಮುನ್ನೆಚ್ಚರಿಕೆಯ ಹಾಗೂ ಅದನ್ನು ಎದುರಿಸುವ ಕ್ರಮದ ಕುರಿತು ಸಿದ್ಧತೆ ನಡೆಸುವುದು ಒಳ್ಳೆಯದು.

ವೈಷ್ಣವಿ ಎಂ., ಸುಳ್ಯ

ಡೋಡೋ ಮರಕ್ಕೆ ಮರುಜನ್ಮ

ಅರುಂಧತಿ ಅವರ 'ಡೋಡೋ ಮರಕ್ಕೆ ಮರುಜನ್ಮ ಸಾಧ್ಯವೇ?' ಲೇಖನ ಸುಮಾರು 300 ವರ್ಷ ಬಾಳುವ ಅಪರೂಪದ ಮರವೊಂದನ್ನು ಪರಿಚಯಿಸಿತು. ಇದೊಂದು ಪಕ್ಷಿಯ ಹೆಸರು, ಆ ಪಕ್ಷಿಂದ ಹಣ್ಣಿನ ಬೀಜದಿಂದ ವೃಕ್ಷಗಳ ಪ್ರಸಾರವಾಗುತ್ತಿರುವುದನ್ನು ತಿಳಿದು ಅಚ್ಚರಿಯಾಯಿತು. ಆದರೆ ಈ ಪಕ್ಷಿಗಳ ನಾಶದಿಂದ ಬೀಜ ಪ್ರಸರಣದ ಕಾರ್ಯಕ್ಕೂ ವಿಘ್ನವಾಗಿರುವುದು ದುರಂತ.

ಸವಿತಾ ಶಂಕರ ಪುರಾಣಿಕ, ಕುಮಟಾ

...ಪೂರಕ ಆಹಾರ!

ಡಾ. ರಮಾ ನಾಯಕ್ ಅವರ 'ಪುಟ್ಟ ಮಗುವಿಗೆ ಕೊಡಿ ಪೂರಕ ಆಹಾರ!' ಲೇಖನ ಮಾಹಿತಿಪೂರ್ಣವಾಗಿತ್ತು. ಮಗುವಿನ ಬೆಳವಣಿಗೆಗೆ ಪೂರಕವಾದ ಪೌಷ್ಟಿಕ ಆಹಾರಗಳನ್ನು ಸುಲಭ ವಿಧಾನದಲ್ಲಿ ಮನೆಯಲ್ಲೇ ಹೇಗೆ ತಯಾರಿಸಬಹುದು ಹಾಗೂ ಅದನ್ನು ಯಾವ ಹೊತ್ತಿಗೆ ನೀಡಬಹುದು ಎಂಬ ಬಗ್ಗೆ ತಾಯಂದಿರಿಗೆ ಉಪಯುಕ್ತ ಮಾಹಿತಿ ನೀಡಿತು.

ಪಿ. ಜಯವಂತ ಪೈ, ಕುಂದಾಪುರ

ಡಾ।। ಸಂಧ್ಯಾ ಎಸ್. ಪೈ ಅವರ ಮಧುರ ಧ್ವನಿಯಲ್ಲಿ...
ದಶಕಗಳಿಂದ ನಾಡಿನ ಮನೆಮಾತಾಗಿರುವ 'ತರಂಗ' ವಾರಪತ್ರಿಕೆಯ ಜನಪ್ರಿಯ ಅಂಕಣ
ಪ್ರಿಯ ಓದುಗರೆ...
ಮುದ್ದು ಮಕ್ಕಳ ನೆಚ್ಚಿನ 'ಸಂಧ್ಯಾಮಾಮಿ'ಹೇಳಿದ ಮನೋಜ್ಞ ರಾಮಾಯಣ
ಸಂಧ್ಯಾವಾಣಿ
ಕೇಳಲು ಕ್ಯೂ ಆರ್ ಕೋಡ್ ಸ್ಕ್ಯಾನ್ ಮಾಡಿ .
ಲಿಂಕ್: https://www.udayavani.com/sandhyavani

❑ ಡಾ|| ಸಂಧ್ಯಾ ಪೈ

● *ಪ್ರಶ್ನೆ: ಜಗತ್ತು ಬದಲಾಗಿದೆ, ಆಧುನಿಕತೆ ಬಂದಿದೆ. ಹೆಣ್ಣು-ಗಂಡು ಸಮಾನರು ಎಂಬ ಭಾವನೆ ಬಲವಾಗಿ ಬೇರೂರಿದೆ. ಆದರೆ ಮದುವೆಯ ಸಂದರ್ಭದಲ್ಲಿ ಹೆಣ್ಣಿಗೆ ಎಷ್ಟು ಚಿನ್ನ ಹಾಕ್ತೀರಿ, ಮದುವೆಗೆ ಯಾವ ಮೆನು ಮಾಡ್ತೀರಿ ಎಂಬ ಪ್ರಶ್ನೆಗಳು ಸಹಜವೆಂಬಂತೆ ಕೇಳಿಬರುತ್ತದೆ. ಆಕೆ ಕಲಿತು ಉದ್ಯೋಗದಲ್ಲಿದ್ದರೂ ಇದು ಬದಲಾಗುವುದಿಲ್ಲ. ಇನ್ನು ವಿವಾಹವಾದ ಬಳಿಕ ಅವಳ ಅಪ್ಪ-ಅಮ್ಮನಿಗೆ ಮಡ್ಡು ಕೊಡುತ್ತಾಳೆ ಎಂದಾದರೆ, ಅವಳು ಜೋರಿನ ಸೊಸೆ ಎಂಬ ಮಾತು ಕೇಳಬೇಕು. ಹೆಣ್ಣು ಹೆತ್ತವರ ಈ ಅಳಲು ಕಡಿಮೆಯಾಗುವುದು ಹೇಗೆ?*

ಗಿರಿಜಾ, ಮೈಸೂರು

ಉತ್ತರ: ಗಿರಿಜಮ್ಮ , ಯಾವುದು ಬದಲಾಗಿದೆ? ಜಗತ್ತು ಎನ್ನುತ್ತೀರಿ ಸರಿ, ಯಾರ ಜಗತ್ತು ಎಂದು ಯೋಚಿಸಿ. ನಿಮ್ಮ ಜಗತ್ತನ್ನು ನೀವೇ ಬದಲಾಯಿಸಬೇಕು. ಅಷ್ಟಾದರೆ ಸಮಸ್ಯೆಯೇ ಇರದು. ಇಂದು ಯೋಗ್ಯ ಜೀವನ ಸಂಗಾತಿ ಸಿಕ್ಕುವುದೇ ಒಂದು ಭಾಗ್ಯ ಎನ್ನುವಷ್ಟಾಗಿದೆ. ಆದುದರಿಂದ ಹೆತ್ತವರು ಮೂಗು ತೂರಿಸುವುದು ತುಂಬಾ ಕಡಿಮೆ. ಹೆಣ್ಣು ತನಗೇನು ಬೇಕು ಎನ್ನುವುದನ್ನು ಮೊದಲೇ ನಿರ್ಧರಿಸಿರುತ್ತಾಳೆ. ದುಡಿಯುವ ಹೆಣ್ಣಿನ ಹಕ್ಕು ಇದು. ದುಡಿಯದವಳೂ ಮನೆಯಲ್ಲಿ ದುಡಿಯುತ್ತಾಳೆ ಎನ್ನುವುದನ್ನು ಮರೆಯಬೇಡಿ. ಮನೆವಾರ್ತೆಯಲ್ಲಿ ಅವಳದ್ದು ಸಮಪಾಲಿದೆ. ನಮ್ಮ ಬದುಕನ್ನು ರೂಪಿಸುವವರು ನಾವೇ. ಗಂಡು-ಹೆಣ್ಣು ಸಮಾನರು. ಕೆಲವು ವಿಚಾರಗಳಲ್ಲಿ ಗಂಡು ಮೇಲು, ಕೆಲವದರಲ್ಲಿ ಹೆಣ್ಣು ಮೇಲು. ಇಬ್ಬರೂ ''ಮೇಲೇ''!

● *ಪ್ರಶ್ನೆ: ನನ್ನ ಭಾವೀ ಪತಿ ವಿದೇಶದಲ್ಲಿದ್ದರು. ಮೊಬೈಲ್‌ನಲ್ಲಿ ನೋಡಿ ಮಾತನಾಡಿ ಮದುವೆ ನಿಶ್ಚಯವಾಯಿತು. ಮದುವೆಗೆ ಒಂದು ವಾರ ಮೊದಲು ಅವರನ್ನು ಭೇಟಿಯಾದೆ. ನೋಡಿದರೆ ಅವರು ನನಗಿಂತ ಎರಡು ಇಂಚು ಗಿಡ್ಡ! ನಾನು ಮನೆಯಲ್ಲಿ ಮದುವೆಗೆ ಒಲ್ಲೆ ಎಂದೆ. ಆದರೆ ಎಲ್ಲಾ ತಯಾರಿ ನಡೆದಿದೆ ಎಂದು ಗದರಿ ನನ್ನ ಬಾಯಿ ಮುಚ್ಚಿಸಿ ವಿವಾಹವಾಯಿತು. ಅವರು ಒಳ್ಳೆಯವರು. ನನ್ನನ್ನು ಚೆನ್ನಾಗಿ ನೋಡಿಕೊಳ್ಳುತ್ತಾರೆ. ಆದರೆ ಈಗಲೂ ಮನಸ್ಸಿನ ಮೂಲೆಯಲ್ಲಿ ಅವರು ನನಗಿಂತ ಗಿಡ್ಡ ಎಂಬ ಭಾವ ಉಳಿದುಹೋಗಿದೆ. ಇದರಿಂದ ಹೇಗೆ ಹೊರಬರಲಿ?*

ಸ್ವಪ್ನಾ, ಐಹೊಳೆ

ಉತ್ತರ: ಸ್ವಪ್ನಾ, ಸ್ವಪ್ನಗಳು ಕಣ್ಣುತೆರೆದ ಕೂಡಲೇ ಮಾಯವಾಗುವ, ಸುಪ್ತ ಪ್ರಜ್ಞೆಯ ತುಣುಕುಗಳು. ನೀವೊಂದು ಕನಸುಕಂಡಿರಿ. ಮದುವೆಯ ವಿಷಯವನ್ನು ತೆಗೆದುಕೊಂಡರೆ, ಪ್ರತಿಯೊಂದು ಹೆಣ್ಣು ಒಂದಲ್ಲ ಒಂದು 'ಕನಸು' ಕಾಣುತ್ತಾಳೆ. ಸುಂದರ, ಸುಶೀಲ, ತನ್ನನ್ನು ಪ್ರೀತಿಯಿಂದ ಕಾಣುವವ, ಶ್ರೀಮಂತ... ಹೀಗೆ ಹಲವು ಕಲ್ಪನೆಗಳಿರುತ್ತವೆ. ಆದರೆ ಅವುಗಳಲ್ಲಿ ಬಹುತೇಕ ಕೈಗೆಟುಕುವಂಥವಲ್ಲ ಎಂಬುದೇ ಸತ್ಯ! 'ಕೈಯಲ್ಲಿರುವ ಒಂದು ಹಕ್ಕಿ, ಆಗಸದಲ್ಲಿರುವ ಹತ್ತು ಹಕ್ಕಿಗಳಿಗಿಂತ ಮೇಲು' ಎಂಬ ಆಡುಮಾತಿದೆ. ನಿಮ್ಮ ಪತಿಯ ಧನಾತ್ಮಕ ಗುಣಗಳನ್ನು, ಅವರ ಮನಸ್ಸಿನ ಎತ್ತರವನ್ನು ಮೆಚ್ಚಿದ್ದೀರಿ. ರೂಪ ಮುಖ್ಯವಲ್ಲ, ಗುಣಮುಖ್ಯ. ಅವರು ನಿಮಗಿಂತ ಎತ್ತರದಲ್ಲಿದ್ದಾರೆ ಎನ್ನುವುದೇ ಮುಖ್ಯ. ಮನಸ್ಸು ನೀವು ಕುಣಿಸಿದಂತೆ ಕುಣಿಯುತ್ತದೆ. ಇನ್ನು ಉಳಿದದ್ದು ನಿಮ್ಮ ನಿರ್ಧಾರ.

● *ಪ್ರಶ್ನೆ: ನಮ್ಮದು ಅನ್ಯ ಜಾತಿಯ ವಿವಾಹ. ಮಕ್ಕಳಾದ ಬಳಿಕ ನಮ್ಮ ಮನೆಯವರು ಒಪ್ಪಿಕೊಂಡರೂ ಪತಿಯ ಮನೆಯವರು ಇನ್ನೂ ನಮ್ಮನ್ನು ದೂರವೇ ಇಟ್ಟಿದ್ದಾರೆ. ಹೆಚ್ಚಿನ ಸಂಪ್ರದಾಯಗಳ ಅರಿವಿಲ್ಲದ ನಾವು ಮಕ್ಕಳಿಗೆ ಹೇಗೆ ಹೇಳಿಕೊಡುವುದು ಎಂಬ ಗೊಂದಲದಲ್ಲಿದ್ದೇವೆ. ನನ್ನ ತವರು ಮನೆಯ ಸಂಪ್ರದಾಯವನ್ನು ಕಲಿತ ಮಕ್ಕಳನ್ನು ಮುಂದೊಂದು ದಿನ ಪತಿಯ ಮನೆಯವರು ಒಪ್ಪದೇ ಹೋದರೆ ಏನು ಮಾಡುವುದು?*

ಅನನ್ಯಾ ಕೆ., ಪುತ್ತೂರು

ಉತ್ತರ: ಸಂಪ್ರದಾಯ ಎಂದರೇನು? ಪೂಜೆ, ಪುನಸ್ಕಾರ, ದೇವಾಲಯಗಳಿಗೆ ಭೇಟಿ, ಶ್ರಾದ್ಧ ಇತ್ಯಾದಿಗಳೇ? ಮಕ್ಕಳಿಗೆ ಹೇಳಿಕೊಡುವುದೆಂದರೇನು? ಅವರು ಒಂದು ವೇಳೆ ಕಲಿತರೂ ಮುಂದುವರಿಸಿಕೊಂಡು ಹೋಗುವ ಸಾಧ್ಯತೆ ಇದೆಯೇ? ಈ ಸಂಪ್ರದಾಯ – ಆಚರಣೆಗಳಲ್ಲಿ ಶೇ. 75 ಪೊಳ್ಳು ಎನ್ನುವುದು ಬೇರೆಮಾತು. ಇಷ್ಟು ವರ್ಷಗಳ ಅನಂತರ ಒಪ್ಪದ ನಿಮ್ಮ ಪತಿಯ ಮನೆಯವರು, ಮುಂದೆ ಒಪ್ಪಿದರೇನು, ಬಿಟ್ಟರೇನು? ನಾಳೆಗಳನ್ನು ಕಂಡವರಿಲ್ಲ. ಇಂದು ಈ ಕ್ಷಣ ನಮ್ಮ ಕೈಯಲ್ಲಿದೆ. ಮಾನವತೆಯೇ ಧರ್ಮ, ಈ ಧರ್ಮದ ಹಾದಿಯಲ್ಲಿ ನಡೆಯುವ ಸಂಪ್ರದಾಯವೇ ಅತ್ಯುತ್ತಮ. ಅಷ್ಟು ಸಾಕು.

● *ಪ್ರಶ್ನೆ: ಹಗಲಿಡೀ ಕೆಲಸ ಮಾಡುತ್ತೇನೆ. ಆದರೆ ರಾತ್ರಿ ವೇಳೆ ನಿದ್ರೆಯೇ ಬರುವುದಿಲ್ಲ. ಸಣ್ಣ ಮಟ್ಟಿನ ಯೋಗ ಧ್ಯಾನ ಮಾಡಿದ್ದಾಯಿತು. ಪ್ರಯೋಜನವಿಲ್ಲ. ವೈದ್ಯರ ಬಳಿ ಹೋದಾಗ ನಿದ್ದೆ ಮಾತ್ರೆ ತಿನ್ನುವ ಸಲಹೆ ನೀಡಿದರು. ಅದು ನನಗೆ ಇಷ್ಟವಿಲ್ಲ. ಸುಸ್ತಾದ ದೇಹವೂ ನಿದ್ದೆಯನ್ನು ಅಪ್ಪಿಕೊಳ್ಳದಿರಲು ಕಾರಣವೇನಿರಬಹುದು?*

ಪ್ರಭಾಕರ, ಕಾಸರಗೋಡು

ಉತ್ತರ: ನಿಮ್ಮ ವಯಸ್ಸು ಎಷ್ಟು ತಿಳಿಸಿಲ್ಲ. ಒಂದು ವಯಸ್ಸಿನ ಅನಂತರ ದೇಹಕ್ಕೆ ಎಂಟು-ಹತ್ತು ಗಂಟೆ ನಿದ್ರೆಯ ಅಗತ್ಯ ಇರುವುದಿಲ್ಲ. ಗಾಢವಾದ ನಾಲ್ಕುಗಂಟೆ ಸಿಕ್ಕಿದರೆ ಸಾಕು. ಮಧ್ಯಾಹ್ನ ನಿದ್ರೆ ಮಾಡುತ್ತೀರೋ? ಹೌದು ಎಂದಾದರೆ ಅರ್ಧಗಂಟೆಯ 'ಪವರ್ ನ್ಯಾಪ್' ಸಾಕು. ಕೆಲಸ ಮಾಡುತ್ತೇನೆ ಎಂದಿರುವಿರಿ. ಯಾವ ತರಹದ ಕೆಲಸ? ಶ್ರಮದ್ದು ಎಂದಾದರೆ ದಣಿದ ದೇಹ ಬಹುಬೇಗ ನಿದ್ರೆಗೆ ಶರಣು ಹೋಗುತ್ತದೆ. ಮಾನಸಿಕ ಶ್ರಮ, ದೈಹಿಕ ಶ್ರಮಕ್ಕಿಂತ ಹೆಚ್ಚು ಶ್ರಮದಾಯಕ. ಒಂದು ಒಳ್ಳೆಯ ಅಂದರೆ ನಿಮಗೆ ಆಸಕ್ತಿ ಇರುವ ಪುಸ್ತಕ ಓದಿ, ಅದರ ಬಗ್ಗೆ ಚಿಂತಿಸಿ. ನನಗೂ ಕೆಲವೊಮ್ಮೆ ಈ ಸಮಸ್ಯೆ ಇದೆ. ಏನಾದರೂ ಒಂದು ವಿಷಯದ ಚಿಂತನೆ ಶುರುವಾಯಿತೋ, ಆಗ ನಿದ್ರೆ ಓಡಿ ಹೋಯಿತು ಎಂದೇ ಲೆಕ್ಕ. ಈಗ ಇದಕ್ಕೊಂದು 'ಪರಿಹಾರ' ಕಂಡುಕೊಂಡಿದ್ದೇನೆ. ಸಂಜೆ ಕಾಫಿ, ಟೀ ಕುಡಿಯುವುದಿಲ್ಲ. ಟಿವಿ, ಮೊಬೈಲ್ ನೋಡುವುದಿಲ್ಲ. ಚಿಂತನೆಗೆ ಇಂಬುಕೊಡುವ ವಿಚಾರದಿಂದ ದೂರ ಇರಲು ಪ್ರಯತ್ನಿಸುತ್ತೇನೆ. ನನ್ನ ಮನಸ್ಸಿನೊಂದಿಗೆ ಮಾತನಾಡುತ್ತೇನೆ. 'ಮನಸ್ಸೇ, ನಿದ್ರೆ ಆರೋಗ್ಯದ ಮೂಲ. ನನಗೆ ಅನಾಯಾಸದ ಮರಣ, ದೈನ್ಯರಹಿತ ಜೀವನದ ಕಾಂಕ್ಷೆ'. ಆದುದರಿಂದ ''ಯಾದೇವಿ ಸರ್ವಭೂತೇಷು, ನಿದ್ರಾ ರೂಪೇಣ ಸಂಸ್ಥಿತಾ, ನಿನಗೆ ನಮಸ್ಕರಿಸುತ್ತೇನೆ. ನಿದ್ರೆಯಾಗಿ ನನ್ನಲ್ಲಿ ನಿಂತು, ಅನುಗ್ರಹಿಸು'' ಎನ್ನುತ್ತೇನೆ. ಇದು ನನ್ನ ದಿನದ ಕೊನೆಯ ನಿತ್ಯ ಪ್ರಾರ್ಥನೆ.

● *ಪ್ರಶ್ನೆ: ನನ್ನಿಬ್ಬರು ಮಕ್ಕಳು ಪುಸ್ತಕ ಓದುವುದಿಲ್ಲ ಎಂಬುದೇ ನನ್ನ ಸಮಸ್ಯೆ. ಅವರನ್ನು ಪುಸ್ತಕದೆಡೆಗೆ ಹೇಗೆ ಆಕರ್ಷಿಸಲಿ?*

ಸ್ವಾತಿ, ಕಡಬ

ಉತ್ತರ: ರೋಗಕ್ಕೆ ಒಂದು ಮೂಲ ಇದೆ. ಸಮಸ್ಯೆಗೂ ಮೂಲ ಇದೆ. ಅದು ಹೆತ್ತವರು. ಮಕ್ಕಳು ಹಸಿಮಣ್ಣಿನ ಮುದ್ದೆಗಳಂತೆ. ಗಣಪನೂ ಆಗಬಹುದು, ರಾಕ್ಷಸನೂ ಆಗಬಹುದು. ನೀವು ಅವರ ಮುಂದೆ ಅಥವಾ ಅವರೊಂದಿಗೆ ಪುಸ್ತಕ ಓದುತ್ತೀರಾ? ಇಲ್ಲ ಎಂದರೆ ರೋಗ ಮೂಲಕ್ಕೆ ಚಿಕಿತ್ಸೆ ಆಗಬೇಕು. ಹೌದು ಎಂದಾದರೆ, ನೀವೇ ಸಮಸ್ಯೆ. ನಿಮ್ಮ ಈ ಸುಂದರ ಅಭ್ಯಾಸವನ್ನು ಅವರೊಂದಿಗೆ ಹಂಚಿಕೊಂಡಿಲ್ಲ. ಇದರ ಪರಿಹಾರ ನಿಮ್ಮ ಕೈಯಲ್ಲೇ ಇದೆ.

■

Published by Dr T. Satish U. Pai For Manipal Media Network Limited from Udayavani Building, Press Corner, Manipal – 576 104
and Printed by Mr. B. Narahari at Manipal Technologies Limited, Old Pharmacy College Building, Manipal – 576 104. Editor: Dr U.B.Rajalakshmi

SIRI®

ULTRA STRIKE
Toilet Cleaner

ಕಠಿಣ ಕಲೆಗೂ... ಕಠಿಣ ಉತ್ತರ..!

ANTIBACTERIAL FORMULA

Anti- Bacterial I Removes Tough Stains | Fresh Hygiene formula

Available at 15+ Locations Across Karnataka

Dharmasthala | Belthangady | Dharwad | Hassan | Rayapura | Puttur | Moodabidri
Parika Udupi | Kumbalagodu | Bangalore | Bejai | Amruthavarshini and More

Our Products

Pickles | Millets & Value Added Products | Nutritional Food | Kokum Squash | Savouries
Agarbatti | Floor Cleaners | Toilet Cleaners | Handwash | Dishwash | Detergent Powder & Liquid
Apparels - Mens Ethnic and formal Wear | Women Ethnic and formal Wear | Kids Wear and Uniforms

SIRI SHRI DHARMASTHALA
SIRI GRAMODYOGA SAMSTHE

Toll Free : 18001026711
www.siridharmasthala.com

TARANGA Illustrated Family Kannada Weekly Member ABC and INS/RNI/36661/83REGD. No.UDP/1256/2024-2026. 11-6-2026
Posted at Manipal Post Office on every Thursday

BHARATH INFRATECH

bharathinfratech.co

BUILT
DIFFERENT

STRENGTH YOU
CAN **BUILD ON.**

Sheffield, ground floor, BharathInfratech, Mangalore, 575002

+91 86186 59620